UNIVERSAL LIBRARY

OU_198590

UNIVERSAL LIBRARY

ಬಾಲಕಬೋಧಕ ಗ್ರಂಥಮಾಲೆ—ಪುಷ್ಪ ೧.

# ಮಹಾರಾಣಾ ಪ್ರತಾಪಸಿಂಹ.

ಲೇಖಕ,

ಎಸ್. ಎ. [illegible]

923.2
1.52K

[illegible]

ಭಾರತಬಂಧು-ಗ್ರಂಥಮಾಲೆಯ
ಪ್ರಥಮ ಪುಷ್ಪ.

# ಮಹಾರಾಣಾ ಪ್ರತಾಪಸಿಂಹ.

ಲೇಖಕ,
**ಎಸ್. ಎ. ಕುಲಕರ್ಣಿ,**
ಅಸಿ ಮಾಸ್ತರ ಕನ್ನಡಶಾಳಾ ಗಜೇಂದ್ರಗಡ

೧ನೇ ಆವೃತ್ತಿ, ೧೫೦೦ ಪ್ರತಿಗಳು

**೧೯೧೯.**

( ಈ ಪುಸ್ತಕದ ಯಾವತ್ತು ಹಕ್ಕು ಗ್ರಂಥಮಾಲೆಯ ಆಧೀನದಲ್ಲಿವೆ )

**ಕ್ರಯ ೧ ರೂ. ೪ ಆಣೆ**

ಬೆಳಗಾವಿಯೊಳಗೆ ದೇವೇಂದ್ರ ಫಡೆಪ್ಪಾ ಚೌಗುಲೆ ಇವರು ತಮ್ಮ

**ಶ್ರೀಮಹಾವೀರ ಮುದ್ರಣಾಲಯದಲ್ಲಿ**

ಮುದ್ರಿಸಿದರು

ಬಾಗಲಕೋಟಿಯೊಳಗೆ ವೆಂಕಟೇಶ ಪಿತಾಂಬರ ಹೊನ್ನತ್ತಿ

ಇವರು ವಂಕಟಪೇಟಿಯಲ್ಲಿ

**ಭಾರತಬಂಧು ಗ್ರಂಥಮಾಲೆಯ**

ಆಫೀಸದಲ್ಲಿ ಪ್ರಕಟಿಸಿದರು.

DEDICATED

To

R. B. V. B. Joshi B. A.

Retired Educational Inspector southern division

***DHARWAR***

By

His Obedient Pupil

The Author.

# ಪ್ರಸ್ತಾವನೆಯು.

ಹಿಂದುಸ್ಥಾನದಲ್ಲಿಯ ಬೇರೆ ಬೇರೆ ಜಾತಿಯ ಜನರ ಇತಿಹಾಸಗಳಲ್ಲಿ ರಜಪೂತರ ಇತಿಹಾಸವು ಅತ್ಯಂತ ಗೌರವವುಳ್ಳದ್ದೂ, ಮಹತ್ವದ್ದೂ ಆಗಿದೆ. ಕೇವಲ ಹಿಂದುಸ್ಥಾನವೊಂದೇ ಏಕೆ? ಜಗತ್ತಿನಲ್ಲಿರುವ ನಾನಾದೇಶಗಳ ಇತಿಹಾಸಗಳಲ್ಲಿಯೂ, ರಾಜಸ್ಥಾನದ ಇತಿಹಾಸಕ್ಕೆ ಶ್ರೇಷ್ಠತೆಯನ್ನು ಕೊಡಬಹುದು. ಯಾಕಂದರೆ ರಜಪೂತರು ಮಾನವೀ ಜೀವಿತದ ಆದರ್ಶಗುಣಗಳ ಪರಾಕಾಷ್ಠತೆಯನ್ನು ತೋರಿಸುವದರಲ್ಲಿ ಹೆಸರಾಗಿದ್ದಾರೆ ರಾಜಸ್ಥಾನದಲ್ಲಿ ಅಪ್ರತಿಮ ಸ್ವದೇಶಭಕ್ತರಿಗೆ ಕೊರತೆಯಿಲ್ಲ, ಅಸಾಮಾನ್ಯ ಆತ್ಮಯಜ್ಞ ಮಾಡಿದವರ ಕೊರತೆಯಿಲ್ಲ, ಅಲೌಕಿಕ ಪಿತೃಭಕ್ತಿಯನ್ನು ತೋರಿಸಿದವರ ಕೊರತೆಯಿಲ್ಲ, ಅಸಮ ರಾಜನಿಷ್ಠೆಯನ್ನು ತೋರಿಸಿದವರ ಕೊರತೆಯಿಲ್ಲ, ಸ್ಥಿರಪ್ರತಿಜ್ಞೆಯುಳ್ಳವರಿಲ್ಲದಿಲ್ಲ, ಶೂರರ ಕೊರತೆಯಿಲ್ಲ ಈ ಮೊದಲಾದ ಆದರ್ಶಗುಣಗಳ ಅತ್ಯುಚ್ಚ ಸ್ವರೂಪವನ್ನು ಅವಲೋಕಿಸಬೇಕಾದಲ್ಲಿ ನಾವು ರಾಜಸ್ಥಾನದ ಇತಿಹಾಸದ ಕಡೆಗೆ ತಿರುಗಬೇಕಾಗುವದು ಈ ರಾಜಪುತ್ರ-ಜನಾಂಗದವರ ಶ್ರೇಷ್ಠತೆಯಿಂದ, ಒಂದು ಕಾಲದಲ್ಲಿ ಹಿಂದುಸ್ಥಾನವು ಅತ್ಯಂತ ಮಹತ್ವವನ್ನು ಪಡೆದಿದ್ದಿತು ಈ ತರದ ಉದಾತ್ತ ಜನರ ನಿರ್ಮಾಣ ಮಾಡಿದ ಭಾರತ-ಮಾತೆಯಲ್ಲಿ ಜನ್ಮಹೊಂದಿದ ಬಗ್ಗೆ ನಾವು ಈಗಲೂ ಅಭಿಮಾನವನ್ನು ವಹಿಸಬಹುದಾಗಿದ, ಆದರೆ ಕೇವಲ ಅಭಿಮಾನದಿಂದ ಹೆಚ್ಚು ಉಪಯೋಗವಿಲ್ಲ, ಸದ್ಯಃಕಾಲದ ಸುಧಾರಣೆಯ ಯುಗದಲ್ಲಿ ನಷ್ಟವಾದ ನಮ್ಮ ಗೌರವವನ್ನು ಸಂಪಾದಿಸಿಕೊಳ್ಳಲು ಯತ್ನಿಸುವದು ಪೂರ್ವಿಕರ ಚರಿತ್ರೆಗಳನ್ನು ಆದರ್ಶವಾಗಿಟ್ಟುಕೊಂಡು, ಆಚರಿಸಲು ಪ್ರಯತ್ನಿಸುವದು ಪ್ರತಿಯೊಬ್ಬ ಭಾರತೀಯನ ಆದ್ಯಕರ್ತವ್ಯವಾಗಿದೆ

ಉದಾತ್ತಗುಣಮಂಡಿತರಾದ ರಜಪೂತರಲ್ಲಿ ಮಹಾರಾಣಾ ಪ್ರತಾಪಸಿಂಹನು ಶ್ರೇಷ್ಠತಮನಾಗಿದ್ದಾನೆ ಈ ಮಹನೀಯನ ಜೀವನಚರಿತೆಯನ್ನು, ನಾವು ಕೆಲವು ಬಂಗಾಲಿ ಪುಸ್ತಕಳ ಆಧಾರದಿಂದ ಬರೆದಿದ್ದೇವೆ. ಭಾರತೀಯರಲ್ಲಿ ಹಿಂದುಳಿದ

ಕನ್ನಡಿಗರು ಇದಕ್ಕೆ ಆಶ್ರಯನಿತ್ತು, ಇದರ ಲಾಭವನ್ನು ತೆಗೆದುಕೊಳ್ಳುವರಾದಲ್ಲಿ ನಮ್ಮ ಪ್ರಯತ್ನವು ಸಫಲವಾದಂತಾಗುವದು.

ಸದ್ಯಃಕಾಲದಲ್ಲಿ ಪುಸ್ತಕಗಳನ್ನು ಪ್ರಸಿದ್ಧಪಡಿಸುವ ಕಾರ್ಯವು ಕಠಿಣತರವಾಗಿರುವದು. ಆದರೂ ... ಹೊಸ್ಕತ್ತಿಯವರು ಈ ಕಾರ್ಯವನ್ನು ಕೈಕೊಂಡು, ನಮ್ಮ ಪ್ರಯತ್ನವು ಬಯಲಿಗೆ ಬರುವಂತೆ ಮಾಡಿದ್ದಕ್ಕಾಗಿ ನಾನು ತುಂಬಾ ಉಪಕೃತನಾಗಿರುವೆನು. ಮತ್ತು ಈ ಪುಸ್ತಕವನ್ನು ಬರೆಯುವದಕ್ಕೆ ಸಹಾಯಮಾಡಿದ ಎಸ್. ಆರ್. ಕರಡಿಯವರ ಉಪಕಾರವನ್ನು ಸ್ಮರಿಸುವೆನು.

ಈ ಪ್ರಸಂಗದಲ್ಲಿ ನಾನು ಗುರುವರ್ಯ ರಾವಸಾಹೇಬ ಶ್ರೀ [illegible] ಜೋಶಿ ಬಿ. ಎ. ಇವರನ್ನು ಸ್ಮರಿಸದಿರಲಾರೆನು. ಇವರು ನನ್ನಲ್ಲಿ ಈ ತರದ ಯೋಗ್ಯತೆಯುಂಟಾಗುವದಕ್ಕೆ ಕಾರಣೀಭೂತರಾಗಿರುವರಲ್ಲದೆ, ನನ್ನ ಕೆಲವು ಲೇಖಗಳನ್ನು ಪ್ರಸಿದ್ಧಿಸಿ, ಉತ್ತೇಜನ ಕೊಟ್ಟಿದ್ದಾರೆ. ಕಾರಣ ಅತೀವ ಕೃತಜ್ಞತೆಯಿಂದ ನಾನೀ ಗ್ರಂಥವನ್ನು ಗುರುವರ್ಯರ ಚರಣಕ್ಕೆ ಸಮರ್ಪಿಸಿದ್ದೇನೆ.

**ಗಜೇಂದ್ರಗಡ,**

ಕನ್ನಡಿಗರ ಸೇವಕ,
**ಎಸ್. ಎ. ಕುಲಕರ್ಣಿ.**

# ಪ್ರಕಾಶಕರ ನಿವೇದನ.

ಯಾವದೊಂದು ವಾಙ್ಮಯದ ಊರ್ಜಿತಾವಸ್ಥೆಯು ಆ ಭಾಷೆಯಲ್ಲಿರುವ ಉದ್ಗ್ರಂಥಗಳನ್ನವಲಂಬಿಸಿರುವದು ಈ ದೃಷ್ಟಿಯಿಂದ ವಿಚಾರಿಸಲು ನಮ್ಮ ಕನ್ನಡ ಭಾಷೆಯು ಬಹಳ ಹಿಂದ ಬಿದ್ದಿರುವದೆಂದು ಹೇಳಬಹುದು; ಯಾಕೆಂದರೆ ಕನ್ನಡಕ್ಕೆ ಉದ್ಗ್ರಂಥಗಳ ಕೊರತೆಯು ಬಹಳವಾಗಿರುವದು ನಮ್ಮ ಇತರ ಬಂಧುಗಳಾದ ಮಹಾರಾಷ್ಟ್ರ, ಬಂಗಾಲ, ಗುಜರಾಥ ಮೊದಲಾದ ಪ್ರಾಂತಗಳ ಜನರು ತಮ್ಮ ಮಾತೃಭಾಷೆಯ ಬೆಳವಣಿಗೆಗಾಗಿ, ಸದಾ ಯತ್ನಿಸುತ್ತಿದ್ದಾರ ಕಾರಣ ಈ ಭಾಷೆಗಳಲ್ಲಿ ಗ್ರಂಥಗಳು ಹೆಚ್ಚಾಗಿದ್ದು, ದಿನಾಲು ಬೆಳೆಯುತ್ತ ನಡೆದಿವೆ ಈ ಜನರ ಅವಿಶ್ರಾಂತ ಪರಿಶ್ರಮದಿಂದ ಇವರ ಭಾಷೆಗಳಲ್ಲಿ ಮಾಸಿಕ ಪುಸ್ತಕಗಳೂ, ಗ್ರಂಥಮಾಲೆಗಳೂ ಹೆಚ್ಚಾಗಿದ್ದು, ಇವು ಉತ್ತಮ ಸ್ಥಿತಿಯಲ್ಲಿ ಮುಂದಡಿಯನ್ನಿಡತೊಡಗಿವೆ ಆದರೆ ನಮ್ಮ ಕನ್ನಡದ ಪರಿಸ್ಥಿತಿಯು ಹೀಗಿಲ್ಲ ನಮ್ಮಲ್ಲಿ ಗ್ರಂಥಮಾಲೆಗಳ ಸಂಖ್ಯೆಯು ತೀರ ಕಡಿಮೆಯಾಗಿದ್ದು, ಅವೂ ಸರಿಯಾಗಿ ನಡೆಯಲೊಲ್ಲವು ಹೀಗಾಗುವದಕ್ಕೆ ಸದ್ಯಃಕಾಲದ ಮಹರ್ಘತೆಯು ಒಂದು ಕಾರಣವಾಗಿದೆ ಆದರೂ ಇತರ ಭಾಷಾಬಂಧುಗಳಂತೆ ವಿಶೇಷ ಪರಿಶ್ರಮ ಬಟ್ಟಲ್ಲಿ ನಾವಾದರೂ ಗ್ರಂಥಮಾಲೆಯ ಕಾರ್ಯವನ್ನು ಸರಿಯಾಗಿ ಸಾಗಿಸಬಹುದೆಂಬ ವಿಶ್ವಾಸದಿಂದ ಈ ಕೆಲಸವನ್ನು ಕೈಕೊಂಡಿದ್ದೇವೆ ಈ ಕಾರ್ಯವು ಉತ್ತಮ ರೀತಿಯಿಂದ ನೆರವೇರಬೇಕಾದಲ್ಲಿ ಉದಾರಹೃದಯದ ಕನ್ನಡಿಗರ ಸಹಾನುಭೂತಿಯೂ, ಸಹಾಯವೂ ಅವಶ್ಯವಾಗಿ ಬೇಕೆಂಬುದನ್ನು ನಾವು ಮರೆಯಲಾರೆವು ಕಾರಣ ಭಾಷಾಭಿಮಾನಿಗಳು ಈ ಕಾರ್ಯಕ್ಕೆ ಉದಾರಹಸ್ತದಿಂದ ಸಹಾಯಮಾಡಬೇಕಲ್ಲದ, ಹೆಚ್ಚು ಚಂದಾದಾರರನ್ನು ಕೂಡಿಸಿಕೊಡುವ ಕ್ರಮವನ್ನು ವಹಿಸಬೇಕೆಂದು ವಿನಂತಿ ಮಾಡಿಕೊಳ್ಳುವೆವು

ಕನ್ನಡ ಭಾಷೆಯಲ್ಲಿ ಗ್ರಂಥಗಳ ನಿರ್ಮಾಣ ಮಾಡುವದಕ್ಕಾಗಿ, ನಾವು ಈ ಮಾಲೆಯಲ್ಲಿ ಉತ್ತಮ ಪುಸ್ತಕಗಳನ್ನು ಪ್ರಕಟಿಸುತ್ತ ಹೋಗುವೆವು ಉತ್ತಮವಾದ ಗ್ರಂಥಗಳಿಗೆ ಈ ಮಾಲೆಯಲ್ಲಿ ಆಶ್ರಯವು ದೊರೆಯುತ್ತಿರುವದರಿಂದ,

ಚಲೋ ಲೇಖಕರು ತಮ್ಮ ಪುಸ್ತಕಗಳನ್ನು ಕಳಿಸಬಹುದಾಗಿದೆ. ಗ್ರಂಥಪ್ರಕಟನೆಯ ಕಾರ್ಯವಲ್ಲದೆ, ಕನ್ನಡದ ಅಕ್ಷರಗಳ ಸುಧಾರಣೆಗಾಗಿ ಪ್ರಯತ್ನಮಾಡುವ ಇಚ್ಛೆಯೂ ನಮ್ಮಲ್ಲಿರುವದು. ಅನೇಕ ವಿದ್ವಾಂಸರ ಅಭಿಪ್ರಾಯಗಳನ್ನು ತೆಗೆದುಕೊಂಡು, ಮುಂದೆ ಈ ವಿಷಯದ ಕಾರ್ಯವನ್ನು ಕೈಕೊಳ್ಳತಕ್ಕವರಿರುವೆವು.

ಗ್ರಂಥಮಾಲೆಯ ಪ್ರಥಮ ಪುಷ್ಪರೂಪವಾಗಿ ಈ ಪುಸ್ತಕವನ್ನು ಹೊರಡಿಸಿದ್ದೇವೆ. ಮುಂದಿನ ಸಾರೆ ರಹಸ್ಯಮಯವೂ, ಮನೋಹರವೂ ಆಗ ಐತಿಹಾಸಿಕ ಕಾದಂಬರಿಯನ್ನು ಪ್ರಕಟಿಸುವೆವು.

ಮ್ಯಾನೇಜರ ಭಾರತಬಂಧು ಪುಸ್ತಕಮಾಲಾ





ಶ್ರೀಭುಜಂಗಸ್ವಾಮಿ ಲೋಕಾಪೂರ.

ಭಾರತಬಂಧು ಬಾಗಲಕೋಟ.

C. S. P.

# ಮಹಾರಾಣಾ
# ಪ್ರತಾಪಸಿಂಹ.

## ಪ್ರಥಮ ಪರಿಚ್ಛೇದ.

### ರಜಪೂತಸ್ತಾನ.

ಪ್ರಾಕೃತಿಕ ಕಾರಣಗಳಿಂ | ಸ್ವೀಕರಿಪವು ತದನುರೂಪಗುಣಮಂಜನಗಳ್ ||
ಪ್ರಾಕೃತಿಕನುಕೂಲತೆಯಿಂ | ಸ್ವೀಕೃತರಾದರಸಮಗುಣದಿಂ ರಜಪೂತರ್ || ೧ ||

ಹಿಂದುಸ್ತಾನದ ನಕಾಶದ ಕಡೆಗೆ ದೃಷ್ಟಿಯನ್ನು ಚಲ್ಲಿದರೆ, ಮಧ್ಯದಲ್ಲಿ ರಜಪೂತಸ್ತಾನವೆಂಬ ವಿಸ್ತಾರವಾದುದೊಂದು ಪ್ರದೇಶವು ಕಾಣಬರುವದು. ಇದರ ಉತ್ತರಕ್ಕೆ ಪಂಜಾಬ, ಪೂರ್ವಕ್ಕೆ ಮಧ್ಯಪ್ರಾಂತ, ದಕ್ಷಿಣಕ್ಕೆ ಮಧ್ಯಪ್ರಾಂತ ಮತ್ತು ಮುಂಬೈ ಇಲಾಖೆ, ಪಶ್ಚಿಮಕ್ಕೆ ಸಿಂಧಪ್ರಾಂತ. ಈ ಪ್ರದೇಶದಲ್ಲಿ ಮುಖ್ಯವಾಗಿ ಕ್ಷತ್ರಿಯ ಜಾತಿಯ ರಜಪೂತರು ವಾಸಿಸುತ್ತಿರುವರು. ಕಾರಣ ಇದಕ್ಕೆ ರಜಪೂತಸ್ತಾನ ಅಥವಾ ರಾಜಸ್ತಾನವೆಂದೆನ್ನುವರು.

ರಜಪೂತಸ್ತಾನವು ಹಿಂದುಸ್ತಾನದ ಹೃದಯವಾಗಿದೆಯೆಂದು ಹೇಳಬಹುದು. ಮನುಷ್ಯಹೃದಯವು ಶರೀರಮಧ್ಯದಲ್ಲಿರುವಂತೆ, ಇದು ಬಹು ರಾಜ್ಯಗಳಿಂದ ಸುತ್ತುಗಟ್ಟಲ್ಪಟ್ಟದ್ದಾಗಿ, ಹಿಂದುಸ್ತಾನದ ಮಧ್ಯದಲ್ಲಿರುವದು. ಮನುಜನ ಹೃದಯವು ಅಸ್ಥಿಪಂಜರಗಳ ಒಳಭಾಗದಲ್ಲಿರುವಂತೆ, ಇದು ಪರ್ವತಾವಳಿ ಮತ್ತು ಮರುಭೂಮಿಗಳಲ್ಲಿದೆ. ಮಾನವೀಬಲವು ಹೃದಯದಲ್ಲಿರುವಂತೆ, ಭಾರತಭೂಮಿಯ ಮುಖ್ಯ ಶಕ್ತಿಯು ಒಂದುಕಾಲದಲ್ಲಿ ಇದರಲ್ಲಿತ್ತು. ಹೃದಯಬಲದಿಂದ ನರನು ಶ್ರೇಷ್ಠತ್ವವನ್ನು ಪಡೆಯುವಂತೆ, ಒಂದು ಸಮಯದಲ್ಲಿ ಇದರ ಮಹಾಶಕ್ತಿಯಿಂದ ಭಾರತವು ಬಹಳ ಗೌರವವನ್ನು ಹೊಂದಿತ್ತು.

ರಜಪೂತರ ರಾಜ್ಯವು ಪೂರ್ವಕಾಲದಲ್ಲಿ ವಿಸ್ತಾರವಾಗಿದ್ದಷ್ಟು ಈಗ ಇಲ್ಲ. ಮುಸಲ್ಮಾನರ ವಿಜಯದ ಪೂರ್ವದಲ್ಲಿ ರಜಪೂತರ ಅಧಿಕಾರವು ಉತ್ತರದಲ್ಲಿ ಗಂಗಾಯಮುನೆಗಳ ಎರಡನೆಯ ಧಡದಲ್ಲಿ ಪಂಜಾಬದವರೆಗೆ, ಮತ್ತು ಪೂರ್ವ ಭಾಗದಲ್ಲಿ ಬಿಹಾರ-ಬಂಗಾಲಗಳ ವರೆಗೆ ನಡೆಯುತ್ತಿದ್ದಿತು. ಮುಂದೆ ದುರ್ದೈವ ದಿಂದಲೂ, ದಾಳಿಗಾರರ ಹಾವಳಿಯಿಂದಲೂ ವೀರಭೂಮಿಯಾದ ರಾಜಸ್ಥಾನವು, ಛಿನ್ನವಿಚ್ಛಿನ್ನವಾಗಿ ಹೋಯಿತು. ಈಗ ಇದರ ಮಧ್ಯಭಾಗದಲ್ಲಿರುವ ಅಜ ಮೀರ, ಮೈರಬಾರ ಸಂಸ್ಥಾನಗಳಲ್ಲಿ ಬ್ರಿಟಿಶರ ಅಧಿಕಾರವು ನಡೆಯುವದು. ಪೂರ್ವಭಾಗದಲ್ಲಿರುವ ಟೋಂಕ ಸಂಸ್ಥಾನವು ಒಬ್ಬ ಮುಸಲ್ಮಾನ ಅರಸನ ಆಧೀನ ಕ್ಕೊಳಪಟ್ಟಿದೆ. ಉಳಿದ ಭಾಗವು ಸಣ್ಣ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದ್ದು, ಇವು ರಜಪೂತರ ಆಧೀನದಲ್ಲಿರುವವು. ಆದರೆ ಇವರೆಲ್ಲರು ಬ್ರಿಟಿಶ ಸರಕಾರದ ಸಾಮಂತರಾಜರು ಸದ್ಯದಲ್ಲಿರುವ ರಜಪೂತಸ್ಥಾನದ ಒಟ್ಟು ಕ್ಷೇತ್ರಫಲವು ೧೩೦,೯೩೪ ಚೌರಸ ಮೈಲು ಇರುವದು

ಅರವಲೀ ಎಂಬೊಂದು ಬಹು ಉದ್ದವಾದ ಪರ್ವತಾವಳಿಯು, ರಾಜ ಸ್ಥಾನದ ಆಗ್ನೇಯ ದಿಕ್ಕಿನಲ್ಲಿ ಪ್ರಾರಂಭವಾಗಿ, ನೈರುತ್ಯಮಾರ್ಗವಾಗಿ ವಿಸ್ತಾರ ವಾಗುತ್ತ ಹೋಗಿ, ರಜಪೂತಸ್ಥಾನವನ್ನು ಎರಡು ಸಮಭಾಗಗಳಾಗಿ ವಿಭಾಗಿಸಿದೆ. ಈ ಎರಡು ಭಾಗಗಳಲ್ಲಿ ಒಂದಕ್ಕೆ ಪೂರ್ವಭಾಗವೆಂದೂ, ಬೇರೊಂದಕ್ಕೆ ಪಶ್ಚಿಮ ಭಾಗವೆಂದೂ ಹೆಸರು ಕೊಡಬಹುದು. ಪಶ್ಚಿಮಭಾಗದಲ್ಲಿ ಮಾರವಾಡ ಅಥವಾ ಜೋಧಪುರ, ಜಸಲ್ಮೀರ, ಬಿಕಾನೇರಗಳೆಂಬ ಮುಖ್ಯ ಸಂಸ್ಥಾನಗಳುಂಟು. ಪೂರ್ವಭಾಗದಲ್ಲಿ ಮೇವಾಡ, ಕೋಟಾ, ಬುಂದಿ ಸಂಸ್ಥಾನಗಳಿವೆ. ಮಧ್ಯಭಾಗ ದಲ್ಲಿ—ಅರವಲೀ ಪರ್ವತದ ಮೇಲ್ಭಾಗದಲ್ಲಿಯೂ, ಪಾರ್ಶ್ವಗಳಲ್ಲಿಯೂ ಇಂಗ್ಲೀ ಷರ ಆಧೀನದಲ್ಲಿರುವ ಅಜಮೀರ-ಮೈರಬಾರ ಸಂಸ್ಥಾನಗಳುಂಟು. ಪೂರ್ವ ಮತ್ತು ದಕ್ಷಿಣ ದಿಕ್ಕಿನಲ್ಲಿ ಟೋಲಪುರ, ಭರತಪೂರ, ಟೋಂಕ, ನಿಮಚ, ಡೊಂಗಾ ರಪುರ ಮೊದಲಾದ ಇನ್ನು ಕೆಲವು ಸಣ್ಣ ಸಂಸ್ಥಾನಗಳಿವೆ. ಇಲ್ಲಿ ಅವುಗಳನ್ನು ಉಲ್ಲೇಖಿಸುವದು ನಿಷ್ಪ್ರಯೋಜನವು.

ಅರವಲೀ ಪರ್ವತವು ರಾಜಸ್ಥಾನದ ಸರ್ವಸ್ವವಾಗಿದೆ. ರಾಜಸ್ಥಾನಕ್ಕಿರುವ ಪ್ರಾಕೃತಿಕ ಅನುಕೂಲತೆಗಳಿಗೆ ಈ ಪರ್ವತವು ಮೂಲಕಾರಣವಾಗಿದೆ. ಇದು ಮಳೆಗಾಳಿಯನ್ನು ತಡೆಯುವದು; ಅದರಿಂದ ಮಳೆಗಾಳಿಯು (ಮನ್ಸೂನ) ಈ

ಪರ್ವತವನ್ನು ದಾಟಿ ಹೋಗುವದಿಲ್ಲ; ಕಾರಣ ಪೂರ್ವಭಾಗದಲ್ಲಿ ನಾಕಷ್ಟು ಮಳೆಯಾಗುವದು. ಅದರಿಂದ ಈ ಭಾಗದಲ್ಲಿ ಎತ್ತರವಾದ ಮತ್ತು ವಿಸ್ತಾರವಾದ ಗಿಡಗಳಿರುವವು. ಈ ದಿಕ್ಕಿನಲ್ಲಿ ಪರ್ವತವು ಸವೆಯುತ್ತ ನಡೆದು, ಕ್ರಮವಾಗಿ ಭೂಮಿಯು ತಗ್ಗಾಗುತ್ತ ಹೋಗಿದೆ. ಅದರಿಂದ ಅದು ಮನುಷ್ಯರ ವಾಸಸ್ಥಳಕ್ಕೆ ಯೋಗ್ಯವಾಗಿದೆ. ಪರ್ವತದ ಕೆಳಭಾಗದಲ್ಲಿ ಗಿರಿನದಿಗಳ ದಂಡೆಗಳಲ್ಲಿ ಬೆಳೆಯು ಚನ್ನಾಗಿ ಬರುವದು. ಅರವಲಿಯ ಎರಡನೆಯ ಭಾಗದಲ್ಲಿ (ಪಶ್ಚಿಮಭಾಗದಲ್ಲಿ) ಮಳೆಯು ಬಹಳ ಕಡಿಮೆ, ಅದರಿಂದ ಪರ್ವತಾವಳಿಯಿಂದ ಸಿಂಧುನದದ ವರೆಗಿನ ವಿಸ್ತಾರವಾದ ಪ್ರದೇಶವು ಮರುಭೂಮಿಯಾಗಿದೆ ಈ ಭಾಗದಲ್ಲಿ ಪರ್ವತವು ಬಹಳ ವಿಸ್ತಾರವಾಗಿದ್ದು, ಪಶ್ಚಿಮ ದಿಕ್ಕಿನಿಂದ ಅದನ್ನು ಸಹಜವಾಗಿ ಏರಿಹೋಗ ಲಿಕ್ಕೆ ಬರುವಂತಿಲ್ಲ. ಕೇವಲ ಸಿಂಧುನದವೇ ಪಶ್ಚಿಮದಿಕ್ಕಿನಿಂದ ಬರುವ ವಿದೇಶೀಯ ದಾಳಿಗಾರರನ್ನು ತಡೆದಿರುವದೆಂಬಂತಿಲ್ಲ, ರಾಜಸ್ಥಾನದ ಮರುಪ್ರಾಂತವು ಪಶ್ಚಿಮದಿಕ್ಕಿನಿಂದ ಬರತಕ್ಕ ದಾಳಿಗಾರರ ಹಾವಳಿಯನ್ನು ಪ್ರತಿಬಂಧಿಸಿದೆ ಪೂರ್ವ ಭಾಗದಲ್ಲಿ ಬನಾಸವು ಮುಖ್ಯ ನದಿಯು ಇದು ಅರವಲೀ ಪರ್ವತದಲ್ಲಿ ಹುಟ್ಟಿ, ಆಗ್ನೇಯ ದಿಕ್ಕಿಗೆ ಹರಿದು, ಚಂಬಳನದಿಗೆ ಕೂಡುತ್ತದೆ ಚಂಬಳನದಿಯು ಯಮುನಾನದಿಗೆ ಕೂಡುತ್ತದೆ ಅದರಿಂದ ಗಂಗಾನದಿಯ ಪ್ರವಾಹವು ಅರವಲೀ ಪರ್ವತದ ವರೆಗೆ ಬಂದಿದೆಯೆಂದು ಹೇಳಬಹುದು, ಕಾರಣ ರಾಜಸ್ಥಾನದ ಪೂರ್ವ ಭಾಗವು ಅನುಗಂಗಾಪ್ರದೇಶದಲ್ಲಿದೆಯೆಂದು ಹೇಳಲಿಕ್ಕೆ ಬರುವಂತಿದೆ ಪಶ್ಚಿಮ ಭಾಗದಲ್ಲಿ ಥರವೆಂಬ ಮರುಭೂಮಿಯುದೆ ಇಲ್ಲಿ ಕೇವಲ ಉಸುಕಿನ ರಾಶಿಯು ತುಂಬಿರುವದು. ಇದರಲ್ಲಿ ಸಂಬರವೆಂಬ ಉಪ್ಪುನೀರಿನ ಸರೋವರವಿದೆ. ಲೂನಿ ಯೆಂಬ ನದಿಯು ಉಪ್ಪುನೀರನ್ನು ತೆಗೆದುಕೊಂಡು ಸಮುದ್ರಕ್ಕೆ ಕೂಡುವದು

ಪೂರ್ವಭಾಗದಲ್ಲಿ ಸೃಷ್ಟಿದೇವಿಯ ವಿಚಿತ್ರ ಸೌಂದರ್ಯವನ್ನು ನೋಡಬಹುದು. ಎತ್ತನೋಡಿದತ್ತ ಎತ್ತರವಾದ ಪರ್ವತದ ಸಾಲುಗಳೂ, ಅವುಗಳ ಕೆಳ ಭಾಗದಲ್ಲಿ ಕಂದರಗಳೂ, ಅಲ್ಲಲ್ಲಿ ಸಂಕೀರ್ಣವಾದ ಪರ್ವತದ ದಾರಿಗಳೂ ಅವೆ. ಪರ್ವತದ ಇಳಿಜಾರಾದ ಭೂಮಿಯಲ್ಲಿ, ಎಷ್ಟೋ ನದಿಗಳು, ಅಂಕಡೊಂಕಾಗಿ ತೀರ ವೇಗದಿಂದ ಹರಿಯುತ್ತಿರುವವು. ಕ್ಷಣಕ್ಷಣಕ್ಕೆ ಬದಲಾಗುತ್ತಿರುವ ಅವುಗಳ ಗತಿಗಳು, ನೋಡುವವರಿಗೆ ನೂತನ ದೃಶ್ಯವನ್ನುಂಟುಮಾಡುತ್ತಿರುವವು. ಈ ಪ್ರದೇಶದಲ್ಲಿ ಮನುಷ್ಯನು ಯಾವ ದಿಕ್ಕಿನಿಂದ ನೋಡಿದರೂ, ಪರ್ವತಮಾಲೆಯು ಕಂಡು

ಬರುವದು, ಅದರ ಬೇರೆ ಬೇರೆ ಸಾಲುಗಳು ದೂರದಲ್ಲಿ ಆಕಾಶದಲ್ಲಿ ಕೂಡಿ ಹೋದಂತೆ ಕಾಣುವವು. ಯಾವನಾದರೂ ಅಪರಿಚಿತ ದಾರಿಕಾರನು ಹಾದಿಯನ್ನು ತಪ್ಪಿದರೆ ತಾನೆಲ್ಲಿರುವೆನೆಂಬದನ್ನು ಸಹ ಗೊತ್ತುಹಿಡಿಯಲಾರನು. ಬಹುಕಾಲ ಇಲ್ಲಿಯೇ ವಾಸಮಾಡಿ, ಮಾರ್ಗಗಳ ಪರಿಚಯವನ್ನುಂಟುಮಾಡಿಕೊಂಡ ಜನರು ಮಾತ್ರ ಇಲ್ಲಿ ಪ್ರವಾಸಮಾಡಬಹುದಾಗಿದೆ. ಶತ್ರುಗಳು ಈ ಪರ್ವತಪ್ರದೇಶವನ್ನು ಸಹಜವಾಗಿ ಜಯಿಸಿಕೊಳ್ಳಲಾರರು. ತನ್ನ ರಂಗಭೂಮಿಯಲ್ಲಿ ವಾಸಮಾಡುವ ಮನುಷ್ಯರು ಸ್ವಾತಂತ್ರ್ಯಪ್ರಿಯರೂ ಅದಕ್ಕಾಗಿ ಪ್ರಾಣಬಿಡುವದಕ್ಕೆ ಲೇಶಮಾತ್ರವು ಹಿಂದೆಗೆಯದವರೂ ಆಗುವಂತೆ ಮಾಡುವ ಮೋಹಿನೀಶಕ್ತಿಯು ಈ ಪರ್ವತದಲ್ಲಿದೆ. ಇಲ್ಲಿ ವಾಸಮಾಡುವ ಜನರು ತಮ್ಮ ಸ್ವಾತಂತ್ರ್ಯದ ರಕ್ಷಣೆಗಾಗಿ ಬೇಕಾಗುವ ಶರೀರಬಲ, ಮಾನಸಿಕಶಕ್ತಿ, ಕಷ್ಟಸಹಿಷ್ಣುತೆ ಮೊದಲಾದವುಗಳನ್ನು ಸ್ವಾಭಾವಿಕವಾಗಿ ಹೊಂದಿರುತ್ತಾರೆ. ಕುದುರೆಯು ಈ ದೇಶದ ಏಕ ಮಾತ್ರ ವಾಹನದ ಸಾಧನವು. ಅಶ್ವಾರೋಹಿಗಳಾದ ರಜಪೂತರು ವೀರತ್ವದಲ್ಲಿ ಅದ್ವಿತೀಯರು; ಮತ್ತು ಸ್ವದೇಶದ ಗೌರವಸ್ವರೂಪರು.

ಆದರೆ ಪಶ್ಚಿಮಭಾಗದಲ್ಲಿ ಕೇವಲ ಮರುಭೂಮಿ. ಬಹು ದೂರದ ವರೆಗೆ ಹಬ್ಬಿದ ಉಸಬಿನ ರಾಶಿಯು ಪ್ರಖರವಾದ ರವಿಯ ಕಿರಣಗಳಿಂದ ಬೆಂಕಿಯಂತೆ ಸುಡುತ್ತಿರುವದು. ಸರಿಯಾದ ದಾರಿಗಳಿಲ್ಲ, ಹಾದಿಕಾರರಿಗೆ ವಿಶ್ರಾಂತಿಯ ಸ್ಥಳಗಳಿಲ್ಲ; ಮೇಲಾಗಿ ಈ ಮಾರ್ಗಗಳಲ್ಲಿ ಕಳ್ಳರ ಭಯವೂ ಬಹಳ. ಸಣ್ಣ ಸಣ್ಣ ಮುಳ್ಳುಕಂಟಿಗಳ ಮಧ್ಯದಲ್ಲಿ ಹಾದುಹೋಗುತ್ತಿರುವಾಗ, ಉಸುಬಿನ ಮೈದಾನಗಳು ಸಮಾಂತರದಿಂದ ಸಾಲಾಗಿ ನಿಂತಿರುವಂತೆ ಕಂಡುಬರುವವು. ಅದರಿಂದ ಕಳ್ಳರು ಎಲ್ಲಿ ಅಡಗಿರುವರೆಂಬದನ್ನು ತಿಳಿಯಲಿಕ್ಕೆ ಬರುವಂತಿಲ್ಲ. ಈ ಉಸಬಿನ ಮೈದಾನಗಳು ೫೦ ರಿಂದ ೧೦೦ ಫೂಟಿನ ವರೆಗೆ ಎತ್ತರವಿದ್ದು, ಕೆಲಕೆಲವು ಕಡೆಯಲ್ಲಿ ಎರಡು ಮೈಲುಗಳ ವರೆಗೆ ಉದ್ದವಾಗಿರುವವು. ಮರುಭೂಮಿಯ ಮೇಲಿರುವ ಈ ಉಸಬಿನ ಮೈದಾನಗಳು, ದೂರದಿಂದ ನೋಡುವವರಿಗೆ, ವಿಸ್ತೀರ್ಣವಾದ ಸಾಗರದಲ್ಲಿಯ ಅನುಚ್ಚತರಂಗಭಂಗದಂತೆ ಕಾಣುತ್ತಿರುವವು. ಇಡೀ ರಜಪೂತಸ್ಥಾನದಲ್ಲಿ ಭಾರವನ್ನು ಹೊತ್ತುಕೊಂಡು ಹೋಗುವ ಕೆಲಸವನ್ನು ಮಾಡುವ ಪ್ರಾಣಿಯೆಂದರೆ ಒಂಟೆಯು.

ಮಧ್ಯಭಾಗದಲ್ಲಿರುವ ಅರವಲೀ ಪರ್ವತಾವಳಿಯು, ಕೇವಲ ಮಳೆಯ ಗಾಳಿ (ವನ್ಸೂನ)ಗಳನ್ನು ತಡೆದು ಮಳೆಸುರಿಸಿ ಉಪಕಾರ ಮಾಡುತ್ತದೆಂಬದಿಷ್ಟೇ ಅಲ್ಲ; ಪಶ್ಚಿಮದಿಕ್ಕಿನಿಂದ ಬರುವ ವಾಯುತಾಡಿತ ಉಸಬಿನ ರಾಶಿಯನ್ನು ಮೇವಾಡ ಮೊದಲಾದ ರಾಜ್ಯಗಳಲ್ಲಿ ಬರುಗೊಡುವದಿಲ್ಲ. ಅರವಲಿಯು ರಜಪೂತಸ್ಥಾನದ ಉತ್ತರ ಪೂರ್ವ ಮೇರೆಯಲ್ಲಿರುವ ಜಯಪೂರ ರಾಜ್ಯದೊಳಗಿನ ಕ್ಷೇತ್ರಿ ಎಂಬ ಸ್ಥಳದಿಂದ ಪ್ರಾರಂಭವಾಗಿದೆ. ಮೊದಲು ಭಿನ್ನ-ಭಿನ್ನವಾದ ಪರ್ವತದ ಸಾಲುಗಳು, ಕ್ರಮವಾಗಿ ಎತ್ತರವಾಗುತ್ತ ಹೋಗಿ, ಅಜಮೀರದ ಹತ್ತರ ಬಹು ಎತ್ತರವಾಗಿವೆ. ಅಜಮೀರವು ಹಿಂದುಸ್ಥಾನದಲ್ಲಿ ಉನ್ನತವಾದ ಸುಂದರ ಪಟ್ಟಣವು. ಇಲ್ಲಿಂದ ಮುಂದೆ ಅರವಲೀ ಪರ್ವತದ ಸಾಲುಗಳೆಲ್ಲ ಏಕಾಗಿ, ಅವಿಚ್ಛಿನ್ನ ಗೋಡೆಯಂತೆ ಮುಂದಕ್ಕೆ ಸಾಗಿದೆ. ಈ ಉನ್ನತವಾದ ಪರ್ವತದ ಮೇಲ್ಭಾಗದಲ್ಲಿ ಮೈರಬಾರ ರಾಜ್ಯವಿರುವದು. ಈ ಸಂಸ್ಥಾನದ ನಿವಾಸಿಗಳಾದ ಮೈರಜಾತಿಯ ಜನರು ಭಿಲ್ಲರಂತೆ ಕಾಡುಜನರಾಗಿರುವರು. ಈ ಭಿಲ್ಲ ಮತ್ತು ಮೈರಜನರು ಸುಧಾರಿಸಿದ ರಜಪೂತರಿಂದ ಓಡಿಸಲ್ಪಟ್ಟು, ಪರ್ವತಪ್ರದೇಶಗಳಲ್ಲಿ ಆಶ್ರಯ ಹೊಂದಿದರು ಅದರಿಂದ ಮೈರಬಾರ, ಭಿಲ್ಲಬಾರ ಮೊದಲಾದ ಗುಡ್ಡದ ಮೇಲಿನ ಪ್ರದೇಶಗಳುಂಟಾಗಿವೆ.

ಉತ್ತರ ದಿಕ್ಕಿನಿಂದ ರಜಪೂತಸ್ಥಾನದ ಮೇಲೆ ಸಾಗಿಬರುವ ದಾಳಿಗಾರರ ಪ್ರಥಮ ದೃಷ್ಟಿಯು ಅಜಮೀರದ ಮೇಲೆ ಬೀಳುವದು. ಯಾಕಂದರೆ ಅಜಮೀರವು ರಾಜಸ್ಥಾನದ ಬಾಗಿಲಿದಂತಿದೆ. ಮೊದಲು ಯಾವದೊಂದು ರೀತಿಯಿಂದ ದುರ್ಭೇದ್ಯವಾದ ಈ ಅಜಮೀರದ ಕೋಟೆಯನ್ನು ಜಯಿಸಿದನಂತರ ಶತ್ರುಗಳಿಗೆ ರಜಪೂತಸ್ಥಾನದ ಕಡೆಗೆ ಲೋಲುಪದೃಷ್ಟಿಯನ್ನು ಚಲ್ಲುವ ಸಾಹಸವುಂಟಾಗುವದು.

ಅಜಮೀರದಿಂದ ಸುಮಾರು ೭೦ ಮೈಲುಗಳ ವರೆಗಿರುವ ಅರವಲೀ ಪರ್ವತವು ಅಜಮೀರ ಮೈರಬಾರ ಸಂಸ್ಥಾನಗಳಲ್ಲಿರುವದು. ಈ ಭಾಗದಲ್ಲಿಯ ಪರ್ವತದ ಪಶ್ಚಿಮಭಾಗವು ಬಹಳ ಎತ್ತರವಾಗಿದೆ, ಮತ್ತು ನಾನಾತರದ ಘಟ್ಟದ ಮಾರ್ಗಗಳಿಂದ ತುಂಬಿದೆ. ಮೈರಬಾರದ ಕಡೆಯ ಭಾಗದಲ್ಲಿ ದೇವಿರವೆಂಬ ಘಟ್ಟದ ಮಾರ್ಗವಿರುವದು. ಅದರಾಚೆಯಲ್ಲಿ ಪರ್ವತದ ಪೂರ್ವಭಾಗದಿಂದ ಮೇವಾಡ ರಾಜ್ಯವು ಆರಂಭವಾಗುವದು. ದೇವಿರದಿಂದ ಪರ್ವತವು ಹೆಚ್ಚು

ಹೆಚ್ಚು ಎತ್ತರವಾಗುತ್ತ ಹೋಗಿದೆ. ಮತ್ತು ನಾನಾ ಸಾಲುಗಳಾಗಿ ಕ್ರಮವಾಗಿ ಪಶ್ಚಿಮದಿಕ್ಕಿಗೆ ೫೦ ಮೈಲುಗಳ ವರೆಗೆ ವಿಸ್ತಾರವಾಗುತ್ತ ಹೋಗಿದೆ. ಈ ಸಾಲುಗಳ ಮೇಲೆ ಅನೇಕ ಉನ್ನತವಾದ ಶಿಖರಗಳು ಆಕಾಶವನ್ನು ಮುಟ್ಟುವಂತೆ ನಿಂತುಕೊಂಡಿರುವವು. ಮೇವಾಡ ರಾಜ್ಯದಲ್ಲಿರುವ ಪರ್ವತದ ಈ ಭಾಗವು ದುರ್ಗಮವೂ ಭಯಂಕರ ಅಡವಿಗಳಿಂದ ತುಂಬಿದ್ದೂ ಆಗಿದೆ. ಈಗ ಮಾರವಾಡದ ಸಮಪ್ರದೇಶದಲ್ಲಿ ದೇಸುರಿಯೆಂಬ ಒಂದು ಸಣ್ಣ ಮಾರ್ಗವಾಗಿದೆ. ಈ ಮಾರ್ಗದಲ್ಲಿ ಚಕ್ಕಡಿಗಳು ನಡೆಯುತ್ತವೆ. ಆದರೆ ನಮ್ಮ ಕಥಾನಕ ಕಾಲದಲ್ಲಿ ಈ ಮಾರ್ಗವಿರಲಿಲ್ಲ. ಆ ಕಾಲದಲ್ಲಿ ಇಲ್ಲಿ ಭಯಂಕರವಾದ ಅನೇಕ ಅಂಕುಡೊಂಕಾದ ಘಟ್ಟದ ಮಾರ್ಗಗಳು ಇದ್ದವು ಅದರಿಂದ ಒಂದು ಕುದುರೆಯಾಗಲಿ, ಒಂಟೆಯಾಗಲಿ, ಬಹು ಕಷ್ಟದಿಂದ ಈ ಮಾರ್ಗವನ್ನು ನಡೆದು ಹೋಗಬಹುದಾಗಿತ್ತು. ಈ ದಾರಿಯ ಎರಡೂ ಬದಿಗಳಲ್ಲಿ ಉನ್ನತವಾದ ಪರ್ವತದ ಸಾಲುಗಳು ಇದ್ದವು. ಸಾಮಾನ್ಯ ಮನುಷ್ಯರು ಸಹ ಇವುಗಳ ಶಿಖರಗಳ ಮೇಲೆ ನಿಂತಾಗಲಿ, ಗವಿಗಳಲ್ಲಿ ಅಡಗಿಯಾಗಲಿ ಕಲ್ಲನ್ನೆಸೆದು ದೊಡ್ಡ ಶತ್ರು ಸೈನ್ಯವನ್ನು ನಾಶಮಾಡಬಹುದಾಗಿದ್ದಿತು.

ದೇವಿರದ ತರುವಾಯ ಪರ್ವತವನ್ನು ದಾಟಿಹೋಗುವದಕ್ಕಿರುವ ಮಾರ್ಗಗಳಲ್ಲಿ, ಸೋಮೇಶ್ವರದ ದಾರಿಯು ಮೊದಲನೆಯದು, ಇದರ ಮುಂದೆ ಇದ್ದ ಮೊದಲಿನ ಘಟ್ಟದ ಹಾದಿಯು ಈಗ ದೇಸುರಿಯ ಮಾರ್ಗವಾಗಿದೆ. ಇದರ ತರುವಾಯ ಹಾತಿಗಡ ಘಟ್ಟದ ಮಾರ್ಗವಿರುವದು ಇದರಲ್ಲಿ ಕೈಲಬಾರ ನಗರವೂ ಕಮಲಮೀರ ದುರ್ಗವೂ ಇರುವವು. ಒಂದು ಕಾಲದಲ್ಲಿ ಕೈಲಬಾರ ಪಟ್ಟಣವು, ಮೇವಾಡದ ರಾಜಧಾನಿಯಾಗಿದ್ದಿತು; ಮೊಗಲರು ಕಮಲಮೀರದುರ್ಗವನ್ನು ಕೈವಶಮಾಡಿಕೊಳ್ಳುವದಕ್ಕೆ ತಮ್ಮ ಯಾವಚ್ಛಕ್ತಿಯನ್ನು ಉಪಯೋಗಿಸಿದರು. ಇದರ ದಕ್ಷಿಣದಲ್ಲಿ ಆರು ಮೈಲಿನ ಮೇಲೆ ಸದ್ರಿಘಟ್ಟದ ಮಾರ್ಗವಿರುವದು. ಇದರಲ್ಲಿರುವ ರಾಮಪುರದ ವಿಖ್ಯಾತ ಜೈನಮಂದಿರಗಳು, ಭಯಂಕರ ಅಡವಿಗಳೊಳಗಿಂದ ತಲೆಯನ್ನೆತ್ತಿ ಒಂದು ಪುರಾತನ ಪಟ್ಟಣದ ಗೌರವವನ್ನು ಸಾರಿ ಹೇಳುತ್ತಿರುವವು. ಸದ್ರಿಯ ದಕ್ಷಿಣಕ್ಕೆ ಹೇಳತಕ್ಕಂಥ ದೊಡ್ಡ ಘಟ್ಟದ ಮಾರ್ಗಗಳಿಲ್ಲ. ಈ ಸ್ಥಳದಿಂದ ದುರಾರೋಹವಾದ ಪರ್ವತಾವಳಿಯು ಅಬೂಶಿಖರದವರೆಗೆ ವಿಸ್ತಾರವಾಗಿದೆ. ಅಬೂಶಿಖರದ ಜೈನಮಂದಿರಗಳು ಜಗತ್ತಿನ ಜನರಲ್ಲಿ ಆಶ್ಚ

ರ್ಯವನ್ನು ಉಂಟುಮಾಡುತ್ತಿರುವವು. ಇದರ ಪೂರ್ವಕ್ಕೆ ಸ್ವಲ್ಪ ದೂರದಲ್ಲಿ ಅರವಲೀ ಪರ್ವತದ ಮೇಲ್ಭಾಗದಲ್ಲಿ ಗೋಗುಂಡದ ಕೋಟೆಯಿರುವದು. ಇದರಷ್ಟು ಎತ್ತರವಾದ ಕೋಟೆಯು ಹಿಂದುಸ್ತಾನದಲ್ಲಿ ಬೇರೆ ಯಾವದೂ ಇಲ್ಲ. ಗೋಗುಂಡದಿಂದ ಪೂರ್ವಕ್ಕೆ ಕೆಳಭಾಗದಲ್ಲಿ ಇಳಿದರೆ ಚಿರಮನೋರಮ್ಯವಾದ ಉದಯಪೂರ ಪಟ್ಟಣಕ್ಕೆ ಬರುವೆವು. ಪ್ರತಾಪಸಿಂಹನ ಕಾಲದಲ್ಲಿ ಇದೇ ಪಟ್ಟಣವು ಮೇವಾಡದ ರಾಜಧಾನಿಯಾಗಿದ್ದಿತು. ಈಗಲೂ ಅವನ ವಂಶದ ಮೇವಾಡದ ಮಹಾರಾಣಾನು ಇದೇ ಪಟ್ಟಣದಲ್ಲಿ ರಾಜ್ಯಕಾರಭಾರ ಸಾಗಿಸುತ್ತಿರುವನು.

ಉಧ್ಧಯಪುರದಿಂದ ಪೂರ್ವಕ್ಕೆ ತುಸು ದೂರ ಇಳಿದು ಹೋದರೆ, ಅರವಲೀ ಪರ್ವತವು ಮುಗಿದು ಹೋಗುವದು. ಈ ಸ್ಥಳದಿಂದ ಮೇವಾಡದ ಭೂಮಿಯು ಆರಂಭವಾಗುವದು.

ಈ ಭೂಮಿಯಲ್ಲಿ ಸುಮಾರು ೩೦ ಹರದಾರಿಯ ಮೇಲೆ ಉತ್ತರ ಪೂರ್ವ ಮೇರೆಯಲ್ಲಿ ಒಂದು ಪರ್ವತದ ಸಾಲಿನ ಮೇಲೆ, ಚಿತೋಡದುರ್ಗವಿರುವದು. ಇದರಂತಹ ಸುಂದರ, ಸುವಿಶಾಲ, ದುರ್ಭೇದ್ಯ ಕೋಟೆಯು ಅತಿ ವಿರಳವೆಂದು ಹೇಳಬಹುದು. ಚಿತೋಡವು ಮೇವಾಡದ ಮೊದಲಿನ ರಾಜಧಾನಿಯಾಗಿದ್ದಿತು. ಮೊಗಲರ ಅತ್ಯಾಚಾರದಿಂದ ಮುಂದೆ ಉದಯಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಳ ಬೇಕಾಯಿತು.

---

# ದ್ವಿತೀಯ ಪರಿಚ್ಛೇದ.

## ರಜಪೂತರು.

ತನ್ನ ದೇಶವ ತನ್ನ ಧರ್ಮವ । ತನ್ನ ಜಾತಿಯು ಬಿಡದೆ ಸೇವಿಸಿ ।
ನನ್ನಿಯಿಂದೀ ಮೂರು ದೇವತೆಗಳನ್ನು ನಂಬಿದ ॥
ಉನ್ನತಗುಣದಿ ಸಲೆ ವಿಭೂಷಿತ । ಸನ್ನುತ ರಾಜಪುತ್ರಜನಾಂಗ ।
ದುನ್ನತಿಯನೊರ್ಣಿಸುವದಾರಿಗೆ ಸಾಧ್ಯವೀಜಗದೀ ॥ ೧ ॥

ರಜಪೂತರು ತಾವು ಕ್ಷತ್ರಿಯ ಜಾತಿಯವರೆಂದು ಹೇಳಿಕೊಳ್ಳುತ್ತಿರುವರು; ಆದರೆ ಆಧುನಿಕ ಇತಿಹಾಸ ಶೋಧಕರು, ಇವರು ಪ್ರಾಚೀನ ಭಾರತದ ಕ್ಷತ್ರಿಯ

ವಂಶದವರಲ್ಲೆಂದು ಸ್ಥಿರಪಡಿಸಿದ್ದಾರೆ. ಕ್ರಿಸ್ತಶಕದ ಒಂದನೇ ಶತಮಾನದಿಂದ ಆರನೇ ಶತಮಾನದ ವರೆಗೆ, ಶಾಕದ್ವೀಪದಿಂದ ಶಕಜನರು ಬೇರೆ ಬೇರೆ ಕಾಲಕ್ಕೆ ಹಿಂದುಸ್ತಾನದಲ್ಲಿ ಬಂದು ನಿಂತು, ರಾಜ್ಯಸ್ಥಾಪನೆ ಮಾಡಿದರು. ಕಾಸ್ಪಿಯನ್ ಸರೋವರದ ಪೂರ್ವಭಾಗದಿಂದ ಕಾಶ್ಮೀರದ ಪಶ್ಚಿಮದ ವರೆಗಿರುವ, ಇರಾಣದ ಉತ್ತರ ಮೇರೆಯಲ್ಲಿಯ ಮಧ್ಯಏಶಿಯದ ಪ್ರದೇಶಕ್ಕೆ ಪ್ರಾಚೀನ ಕಾಲದಲ್ಲಿ ಶಾಕ ದ್ವೀಪವೆಂಬ ಹೆಸರಿತ್ತು.* ಈ ಶಾಕದ್ವೀಪದ ಸಂಗಡ ಪ್ರಾಚೀನ ಹಿಂದೂಜನರ ನಿಕಟಸಂಬಂಧವಿತ್ತು, ಮತ್ತು ಅಲ್ಲಿ ಪ್ರಾಚೀನಕಾಲದಲ್ಲಿ ಬ್ರಾಹ್ಮಣ, ಕ್ಷತ್ರಿಯ ಮೊದಲಾದ ನಾಲ್ಕು ವರ್ಣದ ಜನರು ವಾಸಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಅತಿ ಪ್ರಾಚೀನಕಾಲದಲ್ಲಿ ಶಾಕದ್ವೀಪದ ಬ್ರಾಹ್ಮಣರು ಹಿಂದುಸ್ತಾನಕ್ಕೆ ಬಂದು, ವಾಸಿಸಹತ್ತಿದರು. ತರುವಾಯ ಶಾಕದ್ವೀಪದಲ್ಲಿ ಬ್ರಾಹ್ಮಣರಿಲ್ಲದಂತಾದಕಾರಣ, ಕ್ಷತ್ರಿಯರು ಅನಾಚಾರಿಗಳಾದರು. ಇವರು ಶಕ, ಕೂಷಣ, ಜಾಟ ಮೊದಲಾದ ಜಾತಿಭೇದಗಳುಳ್ಳವರಾಗಿದ್ದರು; ಆದರೆ ಇವರೆಲ್ಲರು ಸಾಧಾರಣವಾಗಿ ಶಕರೆಂದು ಕರೆಯಲ್ಪಡುತ್ತಿದ್ದರು. ಈ ಶಕರು ಬಹುಕಾಲದವರೆಗೆ, ಭಾರತೀಯ ಅರಸರೊಡನೆ ಯುದ್ಧಮಾಡಿದರು. ಈ ಶಕರನ್ನು ಜಯಿಸಿದ್ದರಿಂದಲೇ ವಿಕ್ರಮಾದಿತ್ಯನಿಗೆ ಶಕಾರಿ ಎಂಬ ಬೇರೊಂದು ಹೆಸರು ದೊರೆಯಿತು. ಈಗಲೂ ನಮ್ಮ ದೇಶದಲ್ಲಿ ಶಕಜಾತಿಯ ಅರಸನಾದ ಕನಿಷ್ಕನಿಂದ ಸ್ಥಾಪಿಸಲ್ಪಟ್ಟ ಶಕವು ನಡೆಯುತ್ತಿರುವದು. ಶಕಜನರು ಹಿಂದುಸ್ತಾನದ ಬೇರೆ ಬೇರೆ ಭಾಗಗಳಲ್ಲಿ ಅಧಿಕಾರಪಡೆದು, ವಾಸಿಸಹತ್ತಿ, ಈ ದೇಶದ ಆರ್ಯಸಾಮ್ರಾಜ್ಯದಲ್ಲಿ ಸೇರಿ, ಕ್ಷತ್ರಿಯರೆಂಬ ಹೆಸರನ್ನು ಧರಿಸಿದರು ರಜಪೂತರು ಈ ಶಕಜಾತಿಯವರೆಂದು, ಇತಿಹಾಸಶೋಧಕರು ಗೊತ್ತುಮಾಡಿದ್ದಾರೆ. ಕರ್ನಲ್ ಟಾಡ್ ಸಾಹೇಬರು ಇನ್ನೂವರೆಗೂ ರಜಪೂತರ ಆಚಾರ-ವ್ಯವಹಾರ, ಪೂಜಾಪದ್ಧತಿ, ಉತ್ಸವಗಳಲ್ಲಿ ಅನೇಕ ಶಕಜಾತೀಯ ನಡೆವಳಿಗಳು ಸೇರಿಕೊಂಡಿವೆಯೆಂಬದನ್ನು, ವಿಸ್ತಾರವಾಗಿ ತೋರಿಸಿ ಕೊಟ್ಟಿದ್ದಾರೆ.* ಅತಿ ಪ್ರಾಚೀನಕಾಲದಲ್ಲಿ ಎಷ್ಟೋ ರಾಜರ ಉಪಾಧಿಯು ರಾಜ

---

* ಈ ಶಾಕದ್ವೀಪ ( Scythia ) ದಿಂದ ಶಕವೀರರು ಹೊರಬಿದ್ದು, ಕಪ್ಪುಸಮುದ್ರವನ್ನು ದಾಟಿ, ಯುರೋಪದ ಬೇರೆ ಬೇರೆ ಭಾಗಗಳಲ್ಲಿ ವಾಸಿಸತೊಡಗಿದರು ಈ ಪರಾಕ್ರಮಿಗಳಾದ ಶಕರೊಡನೆ ಇರಾಣ ಮೊದಲಾದ ದೇಶಗಳ ಜನರು ಬಹುಕಾಲ ಯುದ್ಧಮಾಡಿದರು

* ಎಲ್ಲಕ್ಕೂ ಮೊದಲು ಕರ್ನಲ್ ಟಾಡ್ ಸಾಹೇಬರು ಶಕಜಾತಿಯಿಂದ ರಜಪೂತರ ಉತ್ಪತ್ತಿಯಾಯಿತೆಂದು ಸಿದ್ಧಮಾಡಿಕೊಟ್ಟರು ತರುವಾಯದ ಇತಿಹಾಸಕಾರರು ಬಹು ಪ್ರಮಾಣಗ-

ಪುತ್ರವೆಂಬದಾಗಿತ್ತು. ಬಹಳ ಮಾಡಿ, ಇದರಿಂದಲೇ ರಜಪೂತ ಶಬ್ದವು ಹುಟ್ಟಿರ ಬಹುದು ಈ ರಜಪೂತರು ವಿಶೇಷವಾಗಿ ರಾಜ್ಯಸ್ಥಾಪನೆ ಮಾಡಿದ ಪ್ರದೇಶಕ್ಕೆ ರಜಪೂತಸ್ತಾನವೆಂಬ ಹೆಸರು ಬಂದಿದೆ.

ರಾಜಸ್ತಾನದ ಕ್ಷತ್ರಿಯ ರಜಪೂತರು ನಾನಾ ವಶಂದವರಾಗಿದ್ದಾರೆ. ರಾಜಸ್ತಾನದ ಇತಿಹಾಸದಲ್ಲಿ ಇವರ ೩೬ ರಾಜವಂಶಗಳ ಹೆಸರನ್ನು ನೋಡಬಹುದಾಗಿದೆ ಇವುಗಳಲ್ಲಿ ಸೂರ್ಯವಂಶ, ಚಂದ್ರವಂಶ, ಅಗ್ನಿವಂಶಗಳೆಂಬ ಮೂರು ಮುಖ್ಯವಾಗಿವೆ ಈ ಸ್ಥಳದಲ್ಲಿ ಇವುಗಳನ್ನು ವಿಸ್ತಾರವಾಗಿ ಹೇಳುವ ಅವಶ್ಯಕತೆ ಇಲ್ಲ ನಾವು ಸಾಮಾನ್ಯವಾಗಿ ಇವುಗಳ ಪರಿಚಯವನ್ನು ಮಾಡಿಕೊಡುವೆವು.

ಸೂರ್ಯವಂಶದ ರಜಪೂತರು ತಾವು ಅಯೋಧ್ಯಾಧಿಪತಿಯಾದ ಶ್ರೀರಾಮಚಂದ್ರನ ವಂಶಜರೆಂದು ಹೇಳಿಕೊಳ್ಳುತ್ತಾರೆ ಈ ವಂಶದಲ್ಲಿ ಅನೇಕ ಶಾಖೆಗಳುಂಟು ಅವುಗಳಲ್ಲಿ ಗುಹಿಲೋಟ್, ರಾಠೋರ ಮತ್ತು ಕಚ್ಛವಾಹ ಅಥವಾ ಕೂಶ್ವಾಹ ಶಾಖೆಗಳು ಮುಖ್ಯವಾದವುಗಳು ಗುಹಿಲೋಟರು ರಾಮಚಂದ್ರನ ಮಗನಾದ ಲವನ ವಂಶಜರು, ಮತ್ತು ರಾಠೋರ-ಕಚ್ಛವಾಹರು ಶ್ರೀರಾಮಚಂದ್ರನ ಎರಡನೆಯ ಮಗನಾದ ಕುಶನ ವಂಶಜರು ಗುಹಿಲೋಟವಂಶವು ಸೂರ್ಯಕುಲದಲ್ಲಿ ಎಲ್ಲಕ್ಕೂ ಶ್ರೇಷ್ಠವಾದದ್ದು ಈ ಗುಹಿಲೋಟವಂಶದಲ್ಲಿ ೨೪ ಒಳಭೇದಗಳುಂಟು ಅವುಗಳಲ್ಲೊಂದರ ಹೆಸರು ಶಿಶೋದಿಯಾ ಎಂದಿರುವದು ಮೇವಾಡದ ಮಹಾರಾಣಾರು ಸೂರ್ಯವಂಶದ ರಜಪೂತರಲ್ಲಿ ಗುಹಿಲೋಟ್ ಶಾಖೆಯ ಶಿಶೋದಿಯಾ ವಂಶದಲ್ಲಿ ಹುಟ್ಟಿದವರು ಈ ವಂಶದಲ್ಲಿ ಮಹಾರಾಣಾ ಪ್ರತಾಪಸಿಂಹನು ಜನ್ಮಗ್ರಹಣ ಮಾಡಿದನು.

ರಾಠೋರರು ಮೊದಲು ಕನೋಜದಲ್ಲಿ ವಾಸಮಾಡುತ್ತಿದ್ದರು ಇವರಲ್ಲಿಯ ಕೆಲವರು ಜೋಧಪುರದಲ್ಲಿ ರಾಜ್ಯವನ್ನು ಸ್ಥಾಪಿಸಿದರು. ಅದರಿಂದ ಜೋಧಪುರದ ರಾಣಾರು ರಾಠೋರ ವಂಶದವರು ಜಯಪುರ ಅಥವಾ ಅಂಬರದ ರಾಜರು ಕಚ್ಛವಾಹ ಕುಲದವರು.

---

ಳಿಂದ ಈ ಮತವನ್ನು ಪೋಷಿಸಿದ್ದಾರೆ See Tod s Rajasthan, Vol I, Chap I to IV, V A Smith's Early history of India, Edition, 1d3 Edition, PP. 322, 407 409

ಚಂದ್ರವಂಶಕ್ಕೆ ಯದು ಎಂಬವನು ಆದಿಪುರುಷನಾದ್ದರಿಂದ ಈ ವಂಶಕ್ಕೆ ಯದುವಂಶವೆಂಬ ಬೇರೊಂದು ಹೆಸರುಂಟು. ಈ ವಂಶಕ್ಕೆ ಭಟ್ಟಿ, ತೋಮರ ಮೊದಲಾದ ಶಾಖೆಗಳುಂಟು ಜಸಲ್ಮೀರದ ರಾಜರು ಭಟ್ಟಿವಂಶದವರು, ಮತ್ತು ದಿಲ್ಲೀಶ್ವರನಾದ ಅನಂಗಪಾಲನು ತೋಮರವಂಶದವನು. ಅಗ್ನಿವಂಶದಲ್ಲಿ ಪ್ರಮಾರ, ಪರಿಹಾರ, ಚಾಲುಕ್ಯ, ಮತ್ತು ಚೌಹಾಣಗಳೆಂಬ ನಾಲ್ಕು ಮುಖ್ಯ ಶಾಖೆಗಳುಂಟು. ಅಜಮೀರಾಧಿಪತಿಯಾದ ಪೃಥ್ವಿರಾಜನು ಚೌಹಾಣ ವಂಶದವನಾಗಿದ್ದನು, ಇವನಿಂದಲೇ ಮುಸಲ್ಮಾನರು ಮೊದಲು ಹಿಂದೂರಾಜ್ಯವನ್ನು ಪಡೆದರು.

ಹೀಗೆ ರಜಪೂತರು ನಾನಾ ಶಾಖೆಗಳುಳ್ಳವರಾಗಿದ್ದರೂ, ಹಿಂದುಸ್ತಾನದ ಬೇರೆ ಯಾವತ್ತು ಜಾತಿಗಳಿಂದ ಬೇರೆಯಾಗಿದ್ದಾರೆ ಇತರ ಮಹಾಜಾತಿಯವರಂತೆ ಇವರಲ್ಲಿಯೂ ಕೆಲವು ವಿಶೇಷ ಸಂಗತಿಗಳುಂಟು ಇವುಗಳಲ್ಲಿಯ ಮೊದಲನೆಯ ಭೇದವು ರಜಪೂತರ ಶರೀರರಚನೆಯಾಗಿರುವದು. ಕ್ಷತ್ರಿಯೋಚಿತ ವೀರ್ಯಪ್ರತಿಭೆಯು, ಇವರ ಸರ್ವಾಂಗಗಳಲ್ಲಿ ಒಡೆದು ಕಾಣುತ್ತಿರುವದು. ಇವರ ದೇಹವು ಉನ್ನತವೂ, ಬಲಿಷ್ಠವೂ, ಸದೃಢವೂ ಇರುವದು ರಜಪೂತರಲ್ಲನೇಕರು ಕಪ್ಪು ಬಣ್ಣದವರಾಗಿದ್ದರೂ ಸಾಧಾರಣವಾಗಿ, ಇವರು ಗೌರವರ್ಣದವರೆಂದು ಹೇಳಬಹುದು. ಕಪ್ಪುಕೂದಲು, ವಿಸ್ತಾರವಾದ ಎದೆಯು, ವಿಸ್ತೃತವಾದ ಕಣ್ಣುಗಳು ರಜಪೂತರ ವಿಶಿಷ್ಟ ಚಿನ್ಹಗಳಾಗಿವೆ ಇವರು ಅತ್ಯಂತ ಸಾಹಸಿಗಳೂ, ಅಸಾಧಾರಣ ವಿಕ್ರಮಶಾಲಿಗಳೂ, ಬಹಳ ಕಷ್ಟ ಸಹಿಸಿಕೊಳ್ಳುವವರೂ ಆಗಿದ್ದಾರೆ ಇವರು ವಿಪತ್ತಿಗಾಗಲಿ, ಮೃತ್ಯುವಿಗಾಗಲಿ ಎಷ್ಟುಮಾತ್ರವೂ ಹೆದರುವದಿಲ್ಲ. ಅನಾಹಾರ, ಅನಿದ್ರೆಗಳು ಇವರನ್ನು ಕ್ಲೇಶಪಡಿಸಲಾರವು. ವಿಲಾಸಿತ್ವವು ಅಥವಾ ನಿರುಪಯುಕ್ತ ಆಡಂಬರವು ಇವರಲ್ಲಿಲ್ಲ. ರಜಪೂತರು ಸಬಲರೂ, ಸಮರ್ಥರೂ ಇದ್ದಂತೆ ಕರ್ಮಠರೂ ಆಗಿದ್ದರು. ಇವರ ದೇಶವು ಸಮಭೂಮಿಯುಳ್ಳದ್ದಿರದಂತೆ ಇವರ ಕಾರ್ಯತತ್ಪರತೆಯೂ, ಸದಾ ಒಂದೇ ವಿಧವಾಗಿರಲಿಲ್ಲ. ಒಂದೊಂದು ಸಮಯದಲ್ಲಿ ಇವರು ಆಲಸ್ಯ, ಉತ್ಸವಗಳಲ್ಲಿ ಆಸಕ್ತರಾಗಿಹೋಗುತ್ತಿದ್ದರು; ಆದರೆ ಕೆಲಸದ ವೇಳೆಯಲ್ಲಿ ಪ್ರಾಣವಿರುವ ವರೆಗೂ ಹಿಂದೆಗೆಯುತ್ತಿದ್ದಿಲ್ಲ. ಮಹಾರಾಷ್ಟ್ರರಂತೆ ಇವರು ಚಪಲರೂ, ಕೂಟ ರಾಜನೀತಿಯನ್ನು ಬಲ್ಲವರೂ ಆಗಿರದಿದ್ದರೂ, ಯಾವದೊಂದು ಕಾರ್ಯವನ್ನು ಕೈಕೊಂಡ ಬಳಿಕ, ಅದನ್ನು ಕಡೆಹಾಯಿಸದೆ ಬಿಡುತ್ತಿದ್ದಿಲ್ಲ. ಪ್ರತಿಯೊಂದು ಕೆಲಸದಲ್ಲಿ ಇವರು ಹೆಜ್ಜೆಹೆಜ್ಜೆಗೆ ತಮ್ಮ ದೃಢತ್ವವನ್ನೂ,

ಸಾಹಸವನ್ನೂ ತೋರ್ಪಡಿಸಿದ್ದಾರೆ. ಈ ತರದ ಉದಾಹರಣೆಗಳು ಬೇರೆ ಜಾತಿಯ ಇತಿಹಾಸದಲ್ಲಿ ವಿರಳವಾಗಿವೆಯೆಂದು ಹೇಳಬಹುದು.

ರಜಪೂತರು ಸ್ವದೇಶ, ಸ್ವಜಾತಿ, ಮತ್ತು ಸ್ವಧರ್ಮ ಈ ತ್ರಿಮೂರ್ತಿಗಳ ಉಪಾಸಕರು. ಸ್ವದೇಶದ ಸ್ವಾತಂತ್ರ್ಯದ ಸಲುವಾಗಿ, ಸ್ವಜಾತಿಯ ಮಾನರಕ್ಷಣೆಯ ಸಲುವಾಗಿ, ಸ್ವಧರ್ಮದ ಗೌರವವೃದ್ಧಿಗಾಗಿ ಇವರು ಸದಾ ಪ್ರಾಣವಿಸರ್ಜನೆ ಮಾಡುವದಕ್ಕೆ ತತ್ಪರರಾಗಿರುತ್ತಿದ್ದರು ವಿಶೇಷವಾಗಿ ಸ್ತ್ರೀಯರ ಮಾನ-ಧರ್ಮಗಳನ್ನು ಸಂರಕ್ಷಿಸುವದಕ್ಕೆ ಹಿಂದೆಗೆದ ರಜಪೂತನು ದೊರೆಯುವಂತಿಲ್ಲ ಇವರು ಸ್ತ್ರೀಯರ ಮೇಲೆ ಅತ್ಯಾಚಾರ ಮಾಡುವದನ್ನು ನೋಡಿ, ಎಂದೂ ಸಹಿಸುತ್ತಿದ್ದಿಲ್ಲ. ಇವರು ಯಾವತ್ತನ್ನು ಬಿಡಲಿಕ್ಕೆ ಸಿದ್ಧರಾಗುತ್ತಿದ್ದರು ಆದರೆ ಸ್ತ್ರೀಯರ ಧರ್ಮವಿಕ್ರಯಕ್ಕೆ ಎಂದೂ ಮನಸ್ಸು ಮಾಡುತ್ತಿದ್ದಿಲ್ಲ ಸ್ವದೇಶದ ಸಲುವಾಗಿ, ಅಥವಾ ಸ್ವಧರ್ಮದ ಸಲುವಾಗಿ ಯುದ್ಧಮಾಡುತ್ತಿರುವಾಗ ತಮಗೆ ಅಪಜಯ ಬರುವದೆಂಬದನ್ನು ತಿಳಿದ ಕೂಡಲೇ, ಇವರು ತಮ್ಮ ಯಾವತ್ತು ಸ್ತ್ರೀಯರನ್ನು ಪ್ರಜ್ವಲಿತ ಚಿತೆಗೆ ಆಹುತಿಯಾಗಿ ಕೊಟ್ಟುಬಿಡುತ್ತಿದ್ದರು, ಮತ್ತು ತಾವು ರುದ್ರಮೂರ್ತಿಯನ್ನು ಧಾರಣಮಾಡಿ, ಶತ್ರುಗಳನ್ನು ಸಂಹರಿಸುತ್ತ ವೀರಸ್ವರ್ಗವನ್ನು ಪಡೆಯುತ್ತಿದ್ದರು. ಎಷ್ಟೋ ಸಾರೆ ರಾಜಸ್ಥಾನದ ಮೇಲೆ ಭೀಷಣ ದಾಳಿಗಳು ಸಾಗಿಬಂದವು. ಎಷ್ಟೋ ಸಾರೆ ಯವನರಿಂದ ರಾಜಸ್ಥಾನವು ಸುಲಿಗೆ ಮಾಡಲ್ಪಟ್ಟಿತು, ಆದರೆ ರಜಪೂತ ರಮಣಿಯರು ಧರ್ಮಕ್ಕೆ—ತಮ್ಮ ಸತೀತ್ವರಕ್ಷಣೆಗೆ—ಜಲಾಂಜಲಿಯನ್ನು ಕೊಡಲಿಲ್ಲ. ರಜಪೂತರ ಈ ವಿಶೇಷಗುಣವು ಅವರ ಕೀರ್ತಿಯನ್ನು ಅಕ್ಷಯ ಅಕ್ಷರಗಳಿಂದ ರಕ್ಷಿಸುತ್ತಿರುವದು.

ರಜಪೂತರಂತೆ ಸತ್ಯನಿಷ್ಠ ಮನಷ್ಯರು ವಿರಳವೆಂದು ಹೇಳಬಹುದು. ರಜಪೂತರ ಸ್ವಾಭಾವಿಕವಾಗಿ ಆಡಿದ ಮಾತೂ, ಪ್ರತಿಜ್ಞೆಯೂ ಸರಿಯಾಗಿದ್ದಿತು. ರಜಪೂತ ವೀರರು ಸತ್ಯಭಂಗವನ್ನೆಂದೂ ಮಾಡಿಲ್ಲ; ಅದರಿಂದ ಅವರು ಯಾವದಾದರೊಂದು ಕಾರ್ಯವನ್ನು ಮಾಡುತ್ತೇವೆಂದು ಹೇಳಿದ ಬಳಿಕ, ಅದನ್ನವರು ಮಾಡಲಿಕ್ಕಿಲ್ಲವೆಂಬ ಸಂದೇಹ ತೆಗೆದುಕೊಳ್ಳುವ ಕಾರಣವೇ ಇದ್ದಿಲ್ಲ. ತಮ್ಮ ಬಾಯಿಂದ ಹೊರಟ ಮಾತನ್ನು ಕಡೆಗಾಣಿಸುವದಕ್ಕೆ, ರಜಪೂತರು ತಮ್ಮ ಯಾವತ್ತನ್ನು ಕಳೆದುಕೊಳ್ಳುವದಕ್ಕೆ ಹಿಂದೆಗೆಯುತ್ತಿದ್ದಿಲ್ಲ. ರಜಪೂತರ ಇತಿಹಾಸವನ್ನು ಮೊದಲಿ

ನಿಂದ ಕಡೆಯವರೆಗೆ ಓದಿದರೂ, ಮೋಸ, ಅಸತ್ಯ, ಕೃತಘ್ನತೆಗಳೆಲ್ಲಿಯೂ ದೊರೆಯುವಂತಿಲ್ಲ. ರಜಪೂತರ ನೀತಿಶಾಸ್ತ್ರದಲ್ಲಿ "ಗುಣಚೋರ" (ಕೃತಘ್ನ) ಮತ್ತು "ಸತ್‌ಚೋರ" (ವಿಶ್ವಾಸಘಾತಕ) ರಂತಹ ಪಾತಕಿಗಳು ಬೇರೆ ಯಾರೂ ಇಲ್ಲ

ರಜಪೂತರ ಚರಿತ್ರೆಯಲ್ಲಿ ನೀಚತೆಯು ಲೇಶಮಾತ್ರವೂ ದೊರೆಯುವಂತಿಲ್ಲ. ಸದ್ಯದ ಹಿಂದೂ ಜನರಂತೆ ರಜಪೂತರು, ಅತಿಥಿಸೇವೆಯೂ, ಆಶ್ರಿತಪಾಲನವೂ ಮುಖ್ಯ ಧರ್ಮವೆಂದು ತಿಳಿಯುತ್ತಿದ್ದರು ಇವರು ಅತಿಥಿಯನ್ನು ತಪ್ಪದೆ ಸತ್ಕರಿಸುತ್ತಿದ್ದರು, ಶರಣುಬಂದವರಿಗೆ ಆಶ್ರಯ ಕೊಡದೆ ತಿರುಗಿ ಕಳಿಸಿಕೊಡುತ್ತಿದ್ದಿಲ್ಲ. ಶರಣುಬಂದ ಮನುಷ್ಯರ ಪೂರ್ವಾಪರಾಧವು ಎಷ್ಟೇ ಇರಲಿ, ಅದನ್ನು ರಜಪೂತರು ಎಣಿಸುತ್ತಿದ್ದಿಲ್ಲ, ಅವನ ರಕ್ಷಣೆಗೆ ಬೇಕಾದಷ್ಟು ಆಪತ್ತುಗಳು ಬರುತ್ತಿರಲಿ, ಅದನ್ನು ರಜಪೂತರು ಚಿಂತಿಸುತ್ತಿದ್ದಿಲ್ಲ, ಶರಣುಬಂದವನಿಗೆ ಆಶ್ರಯಕೊಡುವದು ಅವಶ್ಯವಾದದ್ದೆಂದು ಅವರು ಭಾವಿಸುತ್ತಿದ್ದರು ಅದರಿಂದ ಬೇಕಾದ ಮನುಷ್ಯನು ಹೋದರೂ ಅವರಲ್ಲಿ ತಪ್ಪದೆ ಆಶ್ರಯವನ್ನು ಹೊಂದುತ್ತಿದ್ದನು. ಕ್ಷಮಿಸುವದಕ್ಕೆ ತತ್ಪರರಾಗಿದ್ದ ಇವರಂತಹ ಉದಾರರನ್ನು ನೋಡುವದು ವಿರಳ ಶತ್ರುವಿನ ಅತ್ಯಾಚಾರದಿಂದ ಬೇಕಾದಷ್ಟು ದುಃಖ ಹೊಂದಿರಲಿ, ಆ ಶತ್ರುವು ಸೋಲಲಾಗಿ, ಇಲ್ಲವೆ ಶರಣುಬರಲಾಗಿ ರಜಪೂತರು ಕ್ಷಮಿಸುವದಕ್ಕೆ ತತ್ಪರರು ರಜಪೂತರು ಅನೇಕ ಯುದ್ಧಮಾಡಿದ್ದಾರೆ, ದೇಶಗಳನ್ನು ಜಯಿಸಿದ್ದಾರೆ, ಸುಲಿಗೆ ಮಾಡಿದ್ದಾರೆ, ಆದರೆ ಸ್ತ್ರೀಯರ ಮೇಲ ಅತ್ಯಾಚಾರವನ್ನೆಂದೂ ಮಾಡಿಲ್ಲ ಅಧರ್ಮಯುದ್ಧ ಮಾಡುವದಕ್ಕೂ ದುರ್ಬಲರನ್ನು ಕೊಲ್ಲುವದಕ್ಕೂ ರಜಪೂತರು ಎಂದೂ ಮನಸ್ಸು ಮಾಡಲಿಲ್ಲ

ರಜಪೂತರ ಇತಿಹಾಸವು ಮೊದಲಿನಿಂದ ಕಡೆಯವರೆಗೆ, ಅವರ ಆತ್ಮಯಜ್ಞದ ಕಥೆಯನ್ನು ಹೇಳುತ್ತದೆ. ಸ್ವಾರ್ಥತ್ಯಾಗದ ಉತ್ತಮ ಉದಾಹರಣೆಯನ್ನು ತೋರಿಸಿದವರಲ್ಲಿ ಇವರಿಗೆ ಸಮಾನರಾದವರಾರೂ ಇಲ್ಲ ಇವರು ಸ್ವದೇಶದ ರಾಜನನ್ನು ದೇವರಂತೆ ತಿಳಿಯುತ್ತಿದ್ದರು, ಜನ್ಮಭೂಮಿಯನ್ನು ತಾಯಿಗಿಂತಲೂ ಹೆಚ್ಚಾಗಿ ಭಾವಿಸುತ್ತಿದ್ದರು. ರಾಜನ ಸಲುವಾಗಿ-ದೇಶದ ಸಲುವಾಗಿ-ಜನಾಂಗದ ಸಲುವಾಗಿ ಆತ್ಮವಿಸರ್ಜನೆಮಾಡಿದ ಉದಾಹರಣೆಗಳು, ರಜಪೂತ ಇತಿಹಾಸದ ಪ್ರತಿ ಪುಟಗಳಲ್ಲಿ ಒಡೆದು ಕಾಣುತ್ತಿರುವವು. "ಕಾರ್ಯಸಾಧನೆ,

ಇಲ್ಲವೆ ದೇಹತ್ಯಾಗ" ವೆಂಬ ನೀತಿಯ ಸತ್ಯತೆಯು ರಜಪೂತರ ಚರಿತ್ರೆಯ ಪ್ರತಿಯೊಂದು ಅಕ್ಷರದಲ್ಲಿ ಕಾಣುತ್ತಿರುವದು ಧರ್ಮಾಪುಲಿಯ ವಿಖ್ಯಾತ ಘಟ್ಟದ ಮಾರ್ಗದಲ್ಲಿ ಸ್ವದೇಶದ ಸಲುವಾಗಿ ಆತ್ಮತ್ಯಾಗಮಾಡಿ ಗ್ರೀಕವೀರನಾದ ಲಿವನಿಡಸನು ಜಗದ್ವಿಖ್ಯಾತನಾಗಿದ್ದಾನೆ, ಆದರೆ ರಾಜಸ್ತಾನದಲ್ಲಿ ಧರ್ಮಾಪುಲಿಯಂತಹ ಯುದ್ಧಗಳಾಗದ ಪ್ರದೇಶವೊಂದೂ ಇಲ್ಲ, ಮತ್ತು ಲಿವನಿಡಸನಂತಹ ವೀರರು ಹುಟ್ಟದ ಹಳ್ಳಿಗಳೂ ಕೂಡ ಇಲ್ಲ. ಒಬ್ಬ ಲಿವನಿಡಸನ ವೀರತ್ವಸಾಹಸಗಳಿಂದ ಜಗತ್ತು ಮುಗ್ಧವಾಗಿದೆ, ಆದರೆ ರಾಜಸ್ತಾನದ ಗಿರಿಕಂದರಗಳಲ್ಲಿಯೂ, ಮರುಭೂಮಿಯಲ್ಲಿಯೂ ಆದ, ಇಂತಹ ನೂರಾರು ಲಿವನಿಡಸರ ಕೀರ್ತಿಕಥೆಗಳು ಜನರ ಕಣ್ಣಿಗೆ ಸಹ ಬೀಳದೆ, ಹೋಗಿವೆಯೆಂಬದಕ್ಕೆ ಸಂದೇಹವಿಲ್ಲ* ಗ್ರೀಕರಂತೆ ರಜಪೂತರ ಐತಿಹಾಸಿಕ ಸಾಗ್ರ ವಿವರಣೆಯು ಇಲ್ಲದಿರುವದು ರಜಪೂತರ ದುರ್ದೈವವಾಗಿದೆ.

---

# ತೃತೀಯ ಪರಿಚ್ಛೇದ.

## ಪೂರ್ವಪುರುಷರು.

ಕ್ಷೀರೋದಧಿ ಮಥನದಿ ಬಹು । ಸಾರಪದಾರ್ಥಂಗಳೊಗೆದ ತೆರದಿಂದಲಿ ಮೇ ॥
ವಾರದ ರಾಣಾವಂಶದಿ । ಸಾರಗುಣಿಗಳಾದನೇಕ ಜನರುದಯಿಸಿದರ್ ॥ ೧ ॥

ಸೂರ್ಯವಂಶೀಯ ಶ್ರೀರಾಮಚಂದ್ರನ ಹಿರಿಯ ಮಗನಾದ ಲವನು ತನ್ನ ಹೆಸರಿನಿಂದ ಲವಕೋಟ ಅಥವಾ ಲಾಹೋರವನ್ನು ಸ್ಥಾಪಿಸಿದನು. ಅಲ್ಲಿಂದ ಅವನ ವಂಶಜರಲ್ಲಿ ಕೆಲವರು ಹಿಂದುಸ್ತಾನದ ದಕ್ಷಿಣಕ್ಕೆ ಹೋಗಿ, ಸೌರಾಷ್ಟ್ರ, ವಲ್ಲಭೀಪುರ ಮೊದಲಾದ ರಾಜ್ಯಗಳನ್ನು ಸ್ಥಾಪಿಸಿದರು. ಇವರಲ್ಲಿ ಕನಕಸೇನ

---

* "There is not a petty state in Rajasthan that has not had its Thermspyloe, and scarcely a city that has not produced its Leonidas. But the mantle of ages has shrouded from view what the magic pen of the historian might have consecrated to endless admiration." Tod's Rajasthan Vol. I, P. 8.

ನೆಂಬವನು ಮೊದಲು ಜನ್ಮಭೂಮಿಯನ್ನು ಬಿಟ್ಟು, ದಕ್ಷಿಣಕ್ಕೆ ಹೊರಟನೆಂದು ಹೇಳುತ್ತಿರುವರು. ಇವನ ವಂಶದೊಳಗಿನ ಶಿಲಾದಿತ್ಯನೆಂಬ ಹೆಸರಿನ ಅರಸನು ವಲ್ಲಭೀಪುರದ ಅರಸನಾಗಿದ್ದನು. ಈ ಸಮಯದಲ್ಲಿ ಮಧ್ಯಏಶಿಯದಿಂದ ಹೂಣ ಮೊದಲಾದ ಜನಾಂಗದವರು ಬಂದು, ಹಿಂದುಸ್ತಾನವನ್ನು ಪ್ರವೇಶಿಸಿ, ಕೆಲವು ರಾಜ್ಯಗಳನ್ನು ತೆಗೆದುಕೊಂಡು, ಅಧಿಕಾರ ನಡಿಸತೊಡಗಿದರು. ಇವರು ಶಿಲಾದಿತ್ಯನನ್ನು ಸೋಲಿಸಿ ಕೊಂದರು, ಮತ್ತು ರಾಜಧಾನಿಯಾದ ವಲ್ಲಭೀಪುರವನ್ನು ಸಂಪೂರ್ಣವಾಗಿ ನಾಶಮಾಡಿದರು ಈ ಸಮಯದಲ್ಲಿ ಶಿಲಾದಿತ್ಯನ ಹೆಂಡತಿಯಾದ ಪುಷ್ಪವತಿಯು ಗರ್ಭವತಿಯಾಗಿದ್ದಳು. ಅವಳು ದೂರದಲ್ಲಿರುವದೊಂದು ಭವಾನೀ ಗುಡಿಗೆ ದೇವತಾದರ್ಶನಕ್ಕಾಗಿ ಹೋದ್ದರಿಂದ, ಶತ್ರುಗಳ ಕೈಯಿಂದ ಪಾರಾದಳು. ಅವಳು ತಿರುಗಿ ಬರುವಾಗ, ಹಾದಿಯಲ್ಲಿಯೇ ಹೂಣರ ಅತ್ಯಾಚಾರಗಳನ್ನು ಕೇಳಿ, ಅಧೀರಳಾದಳು ಅವಳು ಪರ್ವತದ ಒಂದು ಗುಹೆಯನ್ನಾಶ್ರಯಿಸಿ, ಅಲ್ಲಿ ಒಂದು ಗಂಡುಕೂಸನ್ನು ಹಡೆದಳು ಆ ಹುಡುಗನು ಗುಹೆಯಲ್ಲಿ ಹುಟ್ಟಿದ್ದರಿಂದ ಅವನಿಗೆ ಗುಹಾದಿತ್ಯ, ಅಥವಾ ಗೋಹನೆಂಬ ಹೆಸರು ಬಂದಿತು ಮೇವಾಡದ ರಜಪೂತರು ಈ ಗುಹಾದಿತ್ಯನ ವಂಶದವರಾದ್ದರಿಂದ ಅವರು ಗುಹಿಲೋಟ್ ವಂಶಜರೆಂದು ಪರಿಚಿತರಾದರು.

ಪುಷ್ಪವತೀ ರಾಣಿಯು ಸದ್ಯಃ ಪ್ರಸೂತ ಕೂಸನ್ನು ಕಮಲಾವತಿಯೆಂಬ ಒಬ್ಬ ಬ್ರಾಹ್ಮಣಿಯ ಕೈಯಲ್ಲಿ ಕೊಟ್ಟು, ಚಿತಾರೋಹಣಮಾಡಿ ಪ್ರಾಣಬಿಟ್ಟಳು. ಮುಂದೆ ಗುಹಾದಿತ್ಯನು ಆ ಬ್ರಾಹ್ಮಣನ ಮನೆಯಲ್ಲಿ ಬ್ರಾಹ್ಮಣರ ಮಕ್ಕಳಂತೆ ಪಾಲಿತನಾಗತೊಡಗಿದನು. ಸಾಧಾರಣ ಜನರು ಅವನನ್ನು ಬ್ರಾಹ್ಮಣನೆಂದು ತಿಳಿಯುತ್ತಿದ್ದರು. ಆ ಗುಹಾದಿತ್ಯನ ಮಗನು ಬಾಪ್ಪಾದಿತ್ಯ, ಅಥವಾ ಬಾಪ್ಪಾರಾವಳನು § ಚಿತೋಡದ ಶಿಲಾಲಿಪಿಯಿಂದ ಈ ಬಾಪ್ಪಾರಾವಳನು ಬ್ರಾಹ್ಮಣನಿದ್ದ

§ ಗುಹಾದಿತ್ಯನಿಗೆ ಗುಹಿಲನೆಂಬ ಹೆಸರಿದ್ದಂತೆಯೂ ಕಂಡುಬರುವದು ಇವನ ವಂಶಜರು ಗುಹಿಲಪುತ್ರ, ಗೋಹಿಲಪುತ್ರ ಮೊದಲಾದ ಹೆಸರುಗಳಿಂದಲೂ ಪರಿಚಿತರಾಗಿದ್ದಾರೆ ರಾಣಾ ಕುಂಭನ ಕಾಲದಲ್ಲಿಯ ಏಕಲಿಂಗ ದೇವಸ್ಥಾನದಲ್ಲಿರುವದೊಂದು ಶಿಲಾಲಿಪಿಯಲ್ಲಿ ಬರೆದದ್ದೇನಂದರೆ— "ಜಯತಿ ಶ್ರೀಗುಹದತ್ತಃ ಪ್ರಭವಃ ಶ್ರೀಗುಹಿಲವಂಶಸ್ಯ"

J A S. B. 1909 P P. 172, 180.

ಈ ಗುಹಾದಿತ್ಯನ ತರುವಾಯ ಈ ವಂಶದ ಎಂಟು ಜನರು ಈದರ ಪ್ರದೇಶದಲ್ಲಿ ಅಜ್ಞಾತವಾಸದಿಂದ ಕಾಲಕಳೆದರೆಂದು ಟಾಡ್‌ಸಾಹೇಬರು ಹೇಳಿದ್ದಾರೆ. ಇವರಲ್ಲಿಯ ಕಡೆಯವನ

ನೆಂದು ತಿಳಿದುಬರುವದು. ಜನರು ಗುಹಾದಿತ್ಯನನ್ನು ಬ್ರಾಹ್ಮಣನೆಂದು ತಿಳಿಯುತ್ತಿದ್ದದರಿಂದ, ಅವನ ಮಗನಾದ ಬಾಪ್ಪಾರಾವಳನನ್ನೂ ಬ್ರಾಹ್ಮಣನೆಂದು ಹೇಳಿರಬಹುದು.*

ಬಾಪ್ಪಾರಾವಳನು ದೈವಬಲದಿಂದ ಚಿಕ್ಕ ವಯಸ್ಸಿನಲ್ಲಿಯೇ ಮಹಾ ಶೂರನಾಗಿದ್ದನು. ಬಾಪ್ಪಾನ ತಾಯಿಯ ತವರುಮನೆಯವರು ಪ್ರಮಾರವಂಶೀಯರು. ಈ ವಂಶದ ಒಂದು ಶಾಖೆಯ ಅರಸನು ಆ ಸಮಯದಲ್ಲಿ ಚಿತೋಡದಲ್ಲಿ ರಾಜ್ಯಾಳುತ್ತಿದ್ದನು. ಬಾಪ್ಪಾನು ಬಾಲ್ಯಕಾಲದಲ್ಲಿ ಈದರವೆಂಬ ಅಜ್ಞಾತ ಗುಡ್ಡಗಾಡು ಪ್ರದೇಶದಲ್ಲಿ ವಾಸಮಾಡುತ್ತಿದ್ದನು. ಭಾಗ್ಯವಾನ ಪುರುಷರು ತಮ್ಮ ಭವಿಷ್ಯತ್ ಜೀವನಮಾರ್ಗವನ್ನು ತಾವೇ ಹುಡುಕಿಟ್ಟುಕೊಂಡಿರುವರು, ಅದರಂತೆ ಮಹತ್ವಾಕಾಂಕ್ಷಿಯಾದ ಬಾಪ್ಪಾನು ಗುಡ್ಡಗಾಡುಪ್ರದೇಶವನ್ನು ಬಿಟ್ಟು, ಮೇವಾಡಕ್ಕೆ ಬಂದು, ಚಿತೋಡದ ರಾಜವಂಶದೊಡನೆ ಶರೀರಸಂಬಂಧವನ್ನು ಮಾಡಿದನು ಚಿತೋಡದ ಉತ್ತರ ಪಶ್ಚಿಮ ದಿಕ್ಕಿಗೆ ಶಿಶೋದಿಯವೆಂಬ ಒಂದು ಸಣ್ಣ ಹಳ್ಳಿಯು ಈಗಲೂ ಅದೆ ಬಾಪ್ಪಾರಾವಳನು ಮೊದಲು ಈ ಹಳ್ಳಿಯಲ್ಲಿ ಬಂದು ನಿಂತು, ಒಂದು ರಾಜ್ಯವನ್ನು ಸ್ಥಾಪಿಸಿದನು. ಕಾರಣ ಇವನ ವಂಶಜರು ಶಿಶೋದಿಯಾ ರಜಪೂತರೆಂದು ಗೌರವಿತರಾದರು § ಅಲ್ಪ ಕಾಲದಲ್ಲಿಯೇ ಬಾಪ್ಪಾರಾವಳನು

---

ಹೆಸರು ನಗಾದಿತ್ಯ ಈ ನಗಾದಿತ್ಯನ ಮಗನು ಬಾಪ್ಪಾರಾವಳನು ಆದರೆ ಭಾಂಡಾರಕರರವರು ಜೋಧಪುರದಲ್ಲಿಯ ಆಖ್ಯಾಯಿಕೆಯ ಆಧಾರದಿಂದ ಬಾಪ್ಪಾರಾವಳನು ಗುಹಾದಿತ್ಯನ ಮಗನೆಂದು ಸಿದ್ಧಮಾಡಿದ್ದಾರೆ ಮುನ್ಶೀಕರೀಮ ಉದ್ದೀನನಿಂದ ಬರೆಯಲ್ಪಟ್ಟ ತಾರೀಖ ಇ ಮಾಳವಾದಲ್ಲಿಯೂ ಈ ಸಂಗತಿಯು ನಿಜತ್ವವನ್ನು ಕಾಣಬಹುದಾಗಿದೆ Tod, Vol I P. 186, J A. S B 1902P P. 167-- 187, Article on " Guhilots ,,

*ಚಿತೋಡನಗರದ ಶಿಲಾಲಿಪಿಯು ಈಗ ಉದಯಪುರದ ವಿಕ್ಟೋರಿಯಾ ಹಾಲಿನಲ್ಲಿ ಕಾದಿಡಲ್ಪಟ್ಟಿದೆ ಇದರಲ್ಲಿ ಬಾಪ್ಪಾರಾವಳನ ವಿಷಯವಾಗಿ ಬರೆದದೇನಂದರೆ— ,, ಆನಂದಪುರ ಸಮಾಗತಃ ವಿಪ್ರಕುಲಾನಂದನೋ ಮಹೀದೇವಃ "

§ ಉದಯಪುರದ ಮಹಾರಾಣಾರು ಪೂರ್ವಪುರುಷರ ಈ ಕೀರ್ತಿಸ್ಥಾನವನ್ನು ತಮ್ಮ ಕೈಯಲ್ಲಿಟ್ಟುಕೊಳ್ಳದಿರುವದು ದುರ್ದೈವದ ಸಂಗತಿಯಾಗಿದೆ ಒಬ್ಬ ಚಾರಣನ ಸಂಗೀತದಿಂದ ಮುಗ್ಧರಾಗಿ ಮಹಾರಾಣಾರು ಈ ಹಳ್ಳಿಯನ್ನು ಅವನಿಗೆ ದಾನವಾಗಿ ಕೊಟ್ಟುಬಿಟ್ಟರು Tod's Rajasthan, Personal Narratives Vol 1 P. 521

ಮಹಾಪರಾಕ್ರಮಿಶಾಲಿಯೆಂದೆನಿಸಿಕೊಂಡು, ಚಿತೋಡವನ್ನು ಆಕ್ರಮಿಸಿದನು; ಮತ್ತೂ ಕ್ರಿ ಶಕದ ೭೨೮ನೇ ವರ್ಷ ಸಿಂಹಾಸನವನ್ನೇರಿ, ಹಿಂದೂ ಸೂರ್ಯನೆಂಬ ಉಪಾಧಿಯನ್ನು ಧರಿಸಿದನು

ಬಾಪ್ಪಾರಾವಳನು ಚಿತೋಡ ರಾಜಪುರುಷರಲ್ಲಿ ಮೊದಲನೆಯವನಾದ್ದರಿಂದ ರಜಪೂತರಿಗೆಲ್ಲ ಅವನು ವಂದ್ಯನಾದನು ತನ್ನ ಉದಾಹರಣೆಯಿಂದಲೂ, ತಿದ್ದುಪಾಟುಗಳಿಂದಲೂ ಅವನು ತುಸು ದಿವಸಗಳಲ್ಲಿ ತನ್ನ ವಂಶಜರನ್ನು ಯುದ್ಧಪ್ರಿಯ ವೀರಜನಾಂಗವನ್ನಾಗಿ ಮಾಡಿದನು. ಇವನು ನೂರುವರ್ಷ ಬಾಳಿದನೆಂದೂ, ತನ್ನ ರಾಜ್ಯವನ್ನು ಬಹು ವಿಸ್ತಾರ ಮಾಡಿದನೆಂದೂ ಹೇಳುತ್ತಿರುವರು.

ಇವನಿಗೆ ಬಹಳ ಮಂದಿ ಮಕ್ಕಳಿದ್ದರು. ಆದರಿಂದ, ಉತ್ತರೋತ್ತರ ಶಿಶೋದಿಯಾ ರಜಪೂತರ ಸಂಖ್ಯೆಯು ಬೆಳೆಯುತ್ತ ನಡೆಯಿತು.

ಸನ್ ೧೦೫೦ರಲ್ಲಿ ಈ ವಶಂದಲ್ಲಿ ಸಮರಸಿಂಹನೆಂಬ ಪರಾಕ್ರಮಿಯು ಹುಟ್ಟಿದನು. ಇವನು ದಿಲ್ಲಿಯ ಅರಸನಾದ ಪೃಥ್ವೀರಾಜನ ತಂಗಿಯಾದ ಕರ್ಮದೇವಿಯನ್ನು ಲಗ್ನಮಾಡಿಕೊಂಡಿದ್ದನು ಪೃಥ್ವೀರಾಜನು ಸರಸ್ವತೀ ನದಿಯ ತಟದಲ್ಲಿ ಶಹಬುದ್ದೀನ ಘೋರಿಯಿಂದ ಪರಾಜಿತನಾದ ದಿವಸವೇ, ಸಮರಸಿಂಹನು ದಿಲ್ಲೀಶ್ವರನ ಪಾರ್ಶ್ವದಲ್ಲಿ ಮಡಿದು, ವೀರಸ್ವರ್ಗವನ್ನೈದಿದನು (೧೧೯೩) ಮುಂದೆ ರಜಪೂತರು ಸಮರಸಿಂಹನ ಚಿಕ್ಕವಯಸ್ಸಿನ ಮಗನಾದ ಕರ್ಣಸಿಂಹನನ್ನು ಪಟ್ಟಕ್ಕೆ ಕುಳ್ಳಿರಿಸಿದರು. ಈ ಸಮಯದಲ್ಲಿ ದಿಲ್ಲಿಯ ಅರಸನಾದ ಕುತುಬುದ್ದೀನನು ಮೇವಾಡದ ಮೇಲೆ ದಂಡೆತ್ತಿ ಬಂದನು. ಕರ್ಮದೇವಿಯು ರಜಪೂತ ಸೈನಿಕರೊಡನೆ ಯುದ್ಧಭೂಮಿಯಲ್ಲಿ ಬಂದು, ಕುತುಬುದ್ದೀನನನ್ನು ಸೋಲಿಸಿದಳು.

ಕರ್ಣಸಿಂಹನ ತರುವಾಯ, ಇವನ ಸಹೋದರನ ಮಗನಾದ ಬಾಹುಪನು ಅರಸನಾದನು. ಇವನ ಆಳಿಕೆಯಲ್ಲಿ ಎರಡು ಮುಖ್ಯ ಸಂಗತಿಗಳು ವರ್ತಿಸಿದವು —ಈ ಕಾಲದಿಂದ ಮುಂದೆ ಮೇವಾಡದ ಗುಹಿಲೋಟವಂಶದ ರಜಪೂತರು ಶಿಶೋದಿಯಾ ರಜಪೂತರೆಂಬ ಹೆಸರನ್ನು ಧರಿಸಿದರು, ಮತ್ತು ಚಿತೋಡೇಶ್ವರನು ಈವರೆಗಿರುವ ರಾವಳ ಎಂಬ ಬಿರುದನ್ನು ಬಿಟ್ಟು ರಾಣಾ ಎಂಬ ಉಪಾಧಿಯನ್ನು ಧರಿಸಿದನು.

ಬಾಹುಪನ ತರುವಾಯ ಈ ವಂಶದಲ್ಲಿ ಭೀಮಸಿಂಹನು ಹೆಸರಾದನು. ಇವನು ತನ್ನ ಅಣ್ಣನ ಅಲ್ಪವಯಸ್ಸಿನ ಬಾಲಕನನ್ನು ಪಟ್ಟಕ್ಕೆ ಕುಳ್ಳಿರಿಸಿ, ತಾನೇ ರಾಜ್ಯಕಾರಭಾರ ಸಾಗಿಸುತ್ತಿದ್ದನು. ಈ ಸಮಯದಲ್ಲಿ ದಿಲ್ಲೀಶ್ವರನಾದ ಅಲ್ಲಾವುದ್ದೀನನು ಚಿತೋಡದ ಮೇಲೆ ಮೊದಲನೆಯ ಸಾರೆ ದಂಡೆತ್ತಿ ಬಂದನು. ಈ ಸಾರೆ ಪಠಾಣರು ಭೀಮಸಿಂಹನ ಹೆಂಡತಿಯಾದ ಸತೀ ಪದ್ಮಿನಿಯ ಕೌಶಲ್ಯದಿಂದ ಅಪಮಾನಿತರಾಗಿ ಯಾವ ಲಾಭವನ್ನು ಹೊಂದದೆ, ಹಿಂದಿರುಗಿ ಹೋಗಬೇಕಾಯಿತು, ಆದರೆ ತುಸು ದಿವಸಗಳಲ್ಲಿ ಅಲ್ಲಾವುದ್ದೀನನು ಬಹು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಬಂದು, ಪುನಃ ಚಿತೋಡವನ್ನಾಕ್ರಮಿಸಿದನು. ಈ ಸಾರೆ ರಾಣಾ ಲಕ್ಷ್ಮಣಸಿಂಹನು ತನ್ನ ಮಕ್ಕಳೊಡನೆ ರಣಭೂಮಿಯಲ್ಲಿ ಪ್ರಾಣಬಿಟ್ಟನು. ಆದರೂ ಚಿತೋಡದ ರಕ್ಷಣೆಯಾಗಲಿಲ್ಲ; ಅಲ್ಲಾವುದ್ದೀನನು ಕೋಟೆಯನ್ನು ಕೈವಶ ಮಾಡಿಕೊಂಡು, ಅಮಾನುಷಕ ಅತ್ಯಾಚಾರಗಳನ್ನು ಮಾಡಿದನು. ರಾಣಾನ ಒಬ್ಬ ಮಗನು ತನ್ನ ಪರಿವಾರದೊಡನೆ ಓಡಿಹೋಗಿದ್ದನು. ಮುಂದೆ ಕೆಲವು ದಿವಸಗಳಾದ ಮೇಲೆ ರಾಣಾನ ಮೊಮ್ಮಗನಾದ ಹಮೀರನು ಚಿತೋಡದ ಪುನರುದ್ಧಾರ ಮಾಡಿದನು. ಹಮೀರನ ವೀರತ್ವದ ಕತೆಯು, ರಾಜಸ್ಥಾನದ ಇತಿಹಾಸದಲ್ಲಿ ಬಹು ಗೌರವವನ್ನು ಪಡೆದಿದೆ

ಮುಂದೆ ಸುಮಾರು ನೂರು ವರುಷಗಳಾದ ಮೇಲೆ, ಸಿಂಹಾಸನಕ್ಕೆ ಬಂದ ರಾಣಾ ಕುಂಭನು, ಚಿತೋಡದ ರಾಜರಲ್ಲಿ ಹೆಸರಾಗಿ ಹೋದನು. ಇವನ ಆಳಿಕೆಯಲ್ಲಿ ಮಾಳವ-ಗುಜರಾಥಗಳ ಅರಸನು ಬಹು ಸೈನ್ಯದೊಡನೆ ಮೇವಾಡದ ಮೇಲೆ ದಂಡೆತ್ತಿ ಬಂದನು. ರಾಣಾನು ಇವನನ್ನು ಸಂಪೂರ್ಣವಾಗಿ ಸೋಲಿಸಿ, ಬಂದಿಯನ್ನಾಗಿ ಮಾಡಿದನು. ಈ ಸಂಗತಿಯ ಸ್ಮಾರಕಕ್ಕಾಗಿ ರಾಣಾನು ಚಿತೋಡದಲ್ಲಿ ಬಹು ಕೌಶಲ್ಯದಿಂದ ನಿರ್ಮಿತವಾದ ಒಂದು ಜಯಸ್ತಂಭವನ್ನು ಕಟ್ಟಿಸಿದ್ದಾನೆ. ಇದು ಈ ವರೆಗೂ ಅದೆ. ಇದರ ಹೊರತು ಇವನ ಸಮಯದ ಇನ್ನು ಅನೇಕ ಕೀರ್ತಿಮಂದಿರಗಳಿವೆ. ಮೇವಾಡದ ರಕ್ಷಣೆಗಾಗಿರುವ ೮೪ ಕೋಟೆಗಳಲ್ಲಿ ೩೨ ಕೋಟೆಗಳನ್ನು ಇವನು ಕಟ್ಟಿಸಿದನೆಂದು ಹೇಳುತ್ತಿರುವರು. ಪ್ರಖ್ಯಾತವಾದ ಕುಂಭಮೇರು ಅಥವಾ ಕಮಲಮೀರ ದುರ್ಗವು ಇವನ ಕೀರ್ತಿಯನ್ನು ಈ ವರೆಗೂ ಸಾರಿ ಹೇಳುತ್ತಲಿದೆ. ಈ ಕಮಲಮೀರ ಕೋಟೆಯ ವಿಷಯವಾಗಿ ನಾವು ಮುಂದೆ ಹೇಳುವೆವು.

ಕುಂಭನ ಮೊಮ್ಮಗನಾದ ಸಂಗ ಅಥವಾ ಸಂಗ್ರಾಮಸಿಂಹನ ಕಾಲದಲ್ಲಿ ರಜಪೂತರ ಗೌರವವು ಪರಮಾವಧಿ ಘನತೆಗೇರಿತು. ಇವನ ಕಾಲದಲ್ಲಿಯೇ ಯಾವತ್ತು ಸಾಮಂತ ಸರದಾರರು ರಾಣಾನ ಅಧೀನಕ್ಕೊಳಪಟ್ಟರು. ಬಹು ದಿವಸಗಳಿಂದ ದಿಲ್ಲಿಯಲ್ಲಿ ತೊಗಲಕ, ಸೈಯದ, ಲೋಡಿ ವಂಶಗಳ ಪಠಾಣರು ರಾಜ್ಯವಾಳುತ್ತ ಬಂದಿದ್ದರು ಈ ವರೆಗೆ ಆಳಿದ ರಾಣಾರು ದಿಲ್ಲಿಯ ರಾಜ್ಯಕಾರಭಾರದಲ್ಲಿ ಕೈ ಹಾಕುತ್ತಿರಲಿಲ್ಲ ಇವರು ಸ್ವದೇಶ, ಸ್ವಜಾತಿಗಳ ವಿಷಯದಲ್ಲೂ, ಆತ್ಮ ಕಲಹದಲ್ಲಿಯೂ ಕಾಲಯಾಪನೆ ಮಾಡುತ್ತಿದ್ದರು. ಕ್ರಿ. ಶಕದ ಹದಿನಾರನೇ ಶತಾಬ್ಧಿಯ ಪ್ರಾರಂಭದಲ್ಲಿ ಸಂಗನು ಸಿಂಹಾಸನವನ್ನೇರಿದ ಕಾಲದಲ್ಲಿ, ಇಬ್ರಾಹಿಮ ಲೋಡಿಯು ದಿಲ್ಲಿಯ ಅರಸನಾಗಿದ್ದನು ಈ ಸಮಯದಲ್ಲಿ ಮೊಗಲವಂಶದ ಬಾಬರನು ಹಿಂದುಸ್ತಾನದ ಮೇಲೆ ದಂಡೆತ್ತಿ ಬಂದನು.

ಮಧ್ಯಏಶಿಯಾದಿಂದ ಬಹಳ ಮಂದಿ ದಾಳಿಗಾರರು, ಹಿಂದುಸ್ತಾನದ ಮೇಲೆ ಅನೇಕ ಸಾರ ದಂಡೆತ್ತಿ ಬಂದಿದ್ದಾರೆ. ಇವರಲ್ಲಿ ಬಹುಜನರ ಲಕ್ಷವು ರಾಜ್ಯಗಳಿಸುವದರ ಕಡೆಗಿರಲಿಲ್ಲ ಇವರು ಕೇವಲ ಧನ-ರತ್ನಗಳನ್ನು ಸುಲಿಗೆ ಮಾಡಿಕೊಂಡು ಹೋಗುವದಕ್ಕೆ ಬಂದವರಾಗಿದ್ದರು, ಆದರೆ ಬಾಬರನ ಉದ್ದೇಶವು ಬೇರೆಯಾಗಿದ್ದಿತು ಇವನು ಪಾಣಿಪತ್ತದ ಯುದ್ಧದಲ್ಲಿ ಇಬ್ರಾಹಿಮ ಲೋಡಿಯನ್ನು ಸೋಲಿಸಿ, ದಿಲ್ಲಿಯ ಸಿಂಹಾಸನವನ್ನೇರಿದನು (೧೫೨೬), ಮತ್ತು ತನ್ನ ಜಯಶಾಲಿಗಳಾದ ಸೈನಿಕರ ಸಹಾಯದಿಂದ ರಾಜ್ಯಬೆಳೆಸುವ ಪ್ರಯತ್ನವನ್ನು ಮಾಡತೊಡಗಿದನು. ಈ ಸಮಯದಲ್ಲಿ ಸಂಗ್ರಾಮಸಿಂಹನು ತಾನು ಸುಮ್ಮನೆ ಕುಳಿತುಕೊಳ್ಳುವದು ಸರಿಯಲ್ಲವೆಂದು ಭಾವಿಸಿದನು, ಯಾಕಂದರೆ ಸುಮ್ಮನೆ ಬಿಟ್ಟಲ್ಲಿ ಯಾವತ್ತು ಹಿಂದೂ ರಾಜ್ಯಗಳು ಒಂದರ ಹಿಂದೊಂದು ಯವನರ ಅಧೀನಕ್ಕೊಳಗಾಗುವವೆಂದು ಅವನು ಆಲೋಚಿಸಿದನು, ಕಾರಣ ಅವನು ಬಾಬರನ ವಿರುದ್ಧವಾಗಿ ಯುದ್ಧಮಾಡುವದಕ್ಕಾಗಿ ಸೈನ್ಯಸಂಗ್ರಹ ಮಾಡತೊಡಗಿದನು ಇವರಿಬ್ಬರ ನಡುವೆ ಆದ ಕಾನೂಯವೆಂಬ ಸ್ಥಳದ ಮೊದಲನೇ ಯುದ್ಧದಲ್ಲಿ ಬಾಬರನ ಬಹು ಸೈನಿಕರು ಮರಣಹೊಂದಿದರು. ಇದರಿಂದ ಬಾಬರನು ಹೆದರಿ, ಒಪ್ಪಂದದ ಸಂಧಾನವನ್ನು ನಡೆಸಿದನು; ಆದರೆ ಸಂಗ್ರಾಮಸಿಂಹನು ಒಪ್ಪಂದಕ್ಕೆ ಒಪ್ಪಿಕೊಳ್ಳಲಿಲ್ಲ. ಮುಂದೆ ತುಸು ದಿವಸಗಳಲ್ಲಿ ಶಿಕ್ರಿಯ ಹತ್ತರ ಬಿಯಾನಾನದಿಯ ದಂಡೆಯಲ್ಲಿ ಘೋರ ಕಾಳಗವಾಯಿತು (೧೫೨೭). ಬಾಬರನು

ಎರಡೂ ಕಡೆಗೆ ಅಶ್ವಾರೋಹಿಗಳನ್ನೂ, ನಡುವೆ ತೋಫುಗಳನ್ನೂ ಇರಿಸಿ, ರಜಪೂತರ ಮೇಲೆ ಸಾಗಿ ಬಂದನು. ರಜಪೂತರಿಗೆ ಈ ತರದ ಯುದ್ಧದ ಅಭ್ಯಾಸವಿರಲಿಲ್ಲ. ಅವರು ಈ ವರೆಗೆ ತೋಫುಗಳನ್ನು ಉಪಯೋಗಿಸಿರಲಿಲ್ಲ. ತೋಫಿನ ಗುಂಡುಗಳು ರಜಪೂತ ಸೈನ್ಯದಲ್ಲಿಯ ಬಹು ವೀರರನ್ನು ನಾಶಮಾಡತೊಡಗಿದವು. ಈ ಸಮಯದಲ್ಲಿ ಮುಂದಿರುವ ಒಬ್ಬ ರಜಪೂತ ಸೇನಾಪತಿಯು ವಿಶ್ವಾಸಘಾತ ಮಾಡಿ, ಓಡಿಹೋಗತೊಡಗಿದನು ಮೊಗಲರು ಜೀವದ ಹಂಗುದೊರೆದು ಬಹು ಕಾಲ ಯುದ್ಧಮಾಡಿದರು ಕಡೆಗೆ ಸಂಗನು ಪರಾಜಿತನಾದನು ವಿಧಿಯ ವಿಧಾನವು ಜನರಿಗೆ ತಿಳಿಯದಂತಹದಿರುವದು! ಈ ಯುದ್ಧದಲ್ಲಿ ಮೊಗಲರು ಪರಾಜಿತರಾಗಿದ್ದರೆ, ಭಾರತದ ಇತಿಹಾಸವು ಯಾವ ಭಾವದಿಂದ ಪರಿವರ್ತಿತವಾಗುತ್ತಿತ್ತೆಂಬದನ್ನು ಯಾರು ಹೇಳಬಲ್ಲರು?

ಪರಾಜಿತನಾದ ಸಂಗನು ಮೊಗಲರನ್ನು ಸೋಲಿಸದೆ, ರಾಜಧಾನಿಯನ್ನು ಪ್ರವೇಶಿಸಲಿಕ್ಕಿಲ್ಲವೆಂದು ಪ್ರತಿಜ್ಞೆಮಾಡಿದನು. ಆದರೆ ತುಸು ದಿವಸಗಳಲ್ಲಿಯೇ ಇವನು ತೀರಿಕೊಂಡನು (೧೫೨೮) ರಜಪೂತರ ಆಶೆಯು—ಭಾವೀ ವಿಜಯ ಸಂಪಾದನೆಯ ಮಹತ್ವಾಕಾಂಕ್ಷೆಯು- ನಾಶವಾಯಿತು. ರಾಣಾ ಸಂಗನು ಸಾಯುವ ವರೆಗೆ ವೀರಧರ್ಮವನ್ನು ತಪ್ಪದೆ ಪಾಲಿಸಿದನು ಇವನು ಅನೇಕ ಕಡೆಯಲ್ಲಿ ಮುಸಲ್ಮಾನರೊಡನೆ ಯುದ್ಧಮಾಡಿ, ಹದಿನೆಂಟುಸಾರೆ ಜಯ ಪಡೆದಿದ್ದನು. ಯುದ್ಧದಲ್ಲಿ ಇವನ ಒಂದು ಕೈ, ಒಂದು ಕಾಲು, ಒಂದು ಕಣ್ಣು ನಾಶವಾಗಿದ್ದವು. ಇವನ ಶರೀರದ ಮುಂಭಾಗದಲ್ಲಿ ಎಂಭತ್ತು ಶಸ್ತ್ರದ ಗಾಯಗಳಿದ್ದವು ವೀರ ಕೇಸರಿಯಾದ ಸಂಗ ರಾಣಾನ ಆಕಸ್ಮಿಕ ಮೃತ್ಯುವಿನಿಂದ ಕೇವಲ ರಾಜಸ್ಥಾನದ್ದೇ ಏಕೆ, ಇಡೀ ಹಿಂದುಸ್ಥಾನದ ಭಯಂಕರ ಹಾನಿಯಾಯಿತು. ರಜಪೂತರಿಗೆ ಯೋಗ್ಯವಾದ ಗುಣಗಳ ವಿಷಯದಲ್ಲಿ ಸಂಗ್ರಾಮಸಿಂಹನಿಗೆ ಸರಿಯಾದವರು, ಇವನ ಮೊಮ್ಮಗನಾದ ಮಹಾರಾಣಾ ಪ್ರತಾಪಸಿಂಹನ ಹೊರತು ಬೇರೆ ಯಾರೂ ಇಲ್ಲ.

ಸಂಗ್ರಾಮಸಿಂಹನ ಮರಣದ ತರುವಾಯ ಬಾಬರನು ಇವನ ಮಗನಾದ ವಿಕ್ರಮಜಿತುವಿನೊಡನೆ ಒಪ್ಪಂದ ಮಾಡಿಕೊಂಡನು (೧೫೨೮). ವಿಕ್ರಮಜಿತುವಿನ ಆಳಿಕೆಯ ದೋಷದಿಂದ ಬೇರೆ ಬೇರೆ ಪಂಥದ ರಜಪೂತರಲ್ಲಿ ಆತ್ಮಕಲಹ

ಗಳುಂಟಾದವು ಇದೊಳ್ಳೆ ಸಮಯವೆಂದು ಭಾವಿಸಿ, ಗುಜರಾಥದ ಮುಸಲ್ಮಾನ ಅರಸನು ಮೇವಾಡದ ಮೇಲೆ ದಂಡೆತ್ತಿ ಬಂದು, ಎರಡನೆಯ ಸಾರೆ ಚಿತೋಡ ವನ್ನು ಧ್ವಂಸಮಾಡಿದನು. ತುಸು ದಿವಸಗಳಲ್ಲಿ ಸಂಗ್ರಾಮಸಿಂಹನ ತಮ್ಮನ ಮಗ ನಾದ ಬಿನಬೀರನು ಸರದಾರರ ಸಹಾಯದಿಂದ ಸಿಂಹಾಸನವನ್ನೇರಿದನು; ಯಾ ಕಂದರೆ ರಾಣಾ ವಿಕ್ರಮಜಿತನು ಬಹಳ ಕೆಟ್ಟ ಅರಸನಾಗಿದ್ದನು. ಈ ಸಮಯದಲ್ಲಿ ಸಂಗ್ರಾಮಸಿಂಹನ ಆರು ವರ್ಷದ ಮಗನೊಬ್ಬನಿದ್ದನು. ಇವನ ಹೆಸರು ಉದಯ ಸಿಂಹನೆಂಬದಾಗಿತ್ತು. ಇವನು ದೊಡ್ಡವನಾಗುವ ವರೆಗೆ ಬನಬೀರನು ರಾಜ್ಯ ಕಾರಭಾರ ಸಾಗಿಸಬೇಕೆಂದು ಸರದಾರರು ಗೊತ್ತುಮಾಡಿದ್ದರು; ಆದರೆ ದುಷ್ಟ ನಾದ ಬನಬೀರನು ಸಂಗ್ರಾಮಸಿಂಹನ ವಂಶವನ್ನು ನಾಶಮಾಡಿ, ಶಾಶ್ವತವಾದ ಸಿಂಹಾಸನವನ್ನು ಪಡೆಯಬೇಕೆಂದು ಇಚ್ಛಿಸಿದನು. ಅದಕ್ಕಾಗಿ ಅವನು ರಾಣಾ ವಿಕ್ರಮಜಿತನನ್ನು ಕೊಂದು, ರಕ್ತದಿಂದ ಕೂಡಿದ ಕೈಗಳಿಂದ ಉದಯಸಿಂಹನ ಶಯನಗೃಹವನ್ನು ಹೊಕ್ಕನು. ಉದಯಸಿಂಹನ ರಕ್ಷಣೆಯ ಭಾರವನ್ನು ಪನ್ನಾ ಎಂಬ ದಾಸಿಯು ವಹಿಸಿದ್ದಳು. ಈ ಉದಾರಹೃದಯಳಾದ ದಾಸಿಯ ಅಸಾ ಮಾನ್ಯ ಸ್ವಾರ್ಥತ್ಯಾಗದಿಂದ ಉದಯಸಿಂಹನು ಜೀವಿಸಿದನು. ಪನ್ನಾದಾಸಿಗೆ ಒಬ್ಬ ಮಗನಿದ್ದನು ಇವನು ಉದಯಸಿಂಹನ ಓರಿಗೆಯವನಾಗಿದ್ದನು ಇವರಿ ಬ್ಬರೂ ಮಲಗಿದ್ದರು ಪನ್ನಾದಾಸಿಯು ಬನಬೀರನು ಬರುವದಕ್ಕಿಂತ ಮೊದಲೇ, ತನ್ನ ಮಗನನ್ನು ಉದಯಸಿಂಹನ ಹಾಸುಗೆಯ ಮೇಲೆ ಮಲಗಿಸಿ, ಉದಯಸಿಂಹ ನನ್ನು ಎರಡನೆಯ ಕಡೆಗೆ ಕಳುಹಿಸಿದಳು. ನೀಚ ಬನಬೀರನು ದಾಸಿಯ ಮಗ ನನ್ನು ಕೊಂದನು. ಉದಯಸಿಂಹನು ರಕ್ಷಣೆಯನ್ನು ಹೊಂದಿದನು.

ದೈವೀ-ಸ್ವಭಾವದ ಪನ್ನಾದಾಸಿಯು ಉದಯಸಿಂಹನನ್ನು ತೆಗೆದುಕೊಂಡು ಓಡಿಹೋದಳು. ಪನ್ನಾದಾಸಿಯಂಥ ಅಲೌಕಿಕ ಗುಣಗಳುಳ್ಳ ಸ್ತ್ರೀರತ್ನವನ್ನು ಹುಟ್ಟಿಸಿದ ರಜಪೂತಜಾತಿಯ ಹೃದಯಬಲದ ಉನ್ನತಿಯನ್ನು ವರ್ಣಿಸಲು ಭಾಷೆ ಯಲ್ಲಿ ಶಬ್ದಗಳಿಲ್ಲ ರಾಜನ ಸಲುವಾಗಿ ಪ್ರಜೆಗಳ ಕರ್ತವ್ಯವೇನು? ಒಡೆಯನ ಸಲುವಾಗಿ ಸೇವಕನ ಕೆಲಸವೇನು? ಎಂಬದನ್ನು ಪನ್ನಾದಾಸಿಯು ತನ್ನ ಕೃತಿ ಯಿಂದ ಸಾರಿಹೇಳಿದ್ದಾಳೆ. ಉದಯಸಿಂಹನ ರಕ್ಷಣೆಯಾಗದಿದ್ದಲ್ಲಿ ಮಹಾರಾಣಾನ ಪವಿತ್ರ ವಂಶವು ಅಳಿದು ಹೋಗುತ್ತಿದ್ದಿತು. ಪನ್ನಾದಾಸಿಯು ಕುಲರಕ್ಷಣೆಯನ್ನು ಮಾಡಿ, ಪ್ರತಾಪಸಿಂಹನಂತಹ ಮಹಾ ಪರಾಕ್ರಮಿಯನ್ನು ಹುಟ್ಟಿಸುವದಕ್ಕೆ ಕಾರ

ಣೀಭೂತಳಾದಳು. ಕಾರಣ ರಾಜಸ್ಥಾನದ ಇತಿಹಾಸದಲ್ಲಿ ಇವಳಿಗೆ ಬಹಳ ಮಹತ್ವ ಬಂದಿದೆ ಇವಳು ಪುತ್ರಶೋಕವನ್ನು ಮರೆತು, ಉದಯಸಿಂಹನ ರಕ್ಷಣೆಗಾಗಿ ಮೇವಾಡದ ಗುಡ್ಡಗಾಡು ಪ್ರದೇಶದಲ್ಲಿ ಅಲೆದು, ಬಹು ಸ್ಥಳಗಳಲ್ಲಿ ಆಶ್ರಯಭಿಕ್ಷೆಯನ್ನು ಬೇಡಿದಳು, ಆದರೆ ದುಷ್ಟನಾದ ಬನಬೀರನಿಗೆ ಹೆದರಿ, ಯಾರೂ ಆಶ್ರಯವನ್ನು ಕೊಡಲಿಲ್ಲ. ಕಡೆಯಲ್ಲಿವಳು ದುರಾರೋಹವಾದ ಪರ್ವತಾವಳಿಯನ್ನು ದಾಟಿ, ಕಮಲಮೀರಕ್ಕೆ ಹೋದಳು ಅಲ್ಲಿಯ ಅಧಿಪತಿಯಾದ ಆಶ್ವಶಹನನ್ನು ಮರೆಹೊಕ್ಕಳು ಇವನು ತನ್ನ ತಾಯಿಯ ಅಪ್ಪಣೆಯಂತೆ, ಉದಯಸಿಂಹನಿಗೆ ಆಶ್ರಯಗೊಟ್ಟು, ಬಹು ಆದರದಿಂದ ಜೋಪಾನಮಾಡಹತ್ತಿದನು.

ಅಗ್ನಿಯನ್ನು ಅರಿವೆಯಲ್ಲಿ ಮುಚ್ಚಿಡುವದು ಅಸಾಧ್ಯವಿರುವಂತೆ ಸಂಗ್ರಾಮಸಿಂಹನ ವಂಶಜನಾದ ಉದಯಸಿಂಹನನ್ನು ಗುಪ್ತರೀತಿಯಿಂದಿರಿಸುವದು ಸಾಧ್ಯವಾಗಲಿಲ್ಲ. ಅದರಿಂದುದಯಸಿಂಹನು ಬಹುಕಾಲ ಕಮಲಮೀರದುರ್ಗದಲ್ಲಿ ಅಡಗಿಕೊಂಡಿರುವ ಪ್ರಸಂಗ ಬರಲಿಲ್ಲ ಉದಯಸಿಂಹನ ತೇಜಸ್ವಿತೆಯೂ, ವೀರತ್ವವೂ ಇವನು ಮೇವಾಡದ ರಾಜಕುಮಾರನೆಂಬದನ್ನು ಜನರಿಗೆ ಸಾರಿಹೇಳಿದವು ಕಡೆಯಲ್ಲಿ ಈ ಸುದ್ದಿಯು ಹೊರಬಿದ್ದ ಬಳಿಕ, ಮೇವಾಡದ ಸರದಾರರು ಸಂತೋಷದಿಂದ ಬಂದು, ಉದಯಸಿಂಹನ ದರ್ಶನ ತಕ್ಕೊಂಡರು ಅಶ್ವಶಹನು ಈ ಸರದಾರರ ಕೈಯಲ್ಲಿ ರಾಜಪುತ್ರನನ್ನೊಪ್ಪಿಸಿ, ತನ್ನ ಭಾರವನ್ನಿಳಿಸಿಕೊಂಡನು ಸರದಾರರು ಕಮಲಮೀರದುರ್ಗದಲ್ಲಿಯೇ ಉದಯಸಿಂಹನ ತಲೆಯ ಮೇಲೆ ರಾಜಮುಕುಟವನ್ನಿಟ್ಟರು ಅತ್ಯಾಚಾರಿಯಾದ ಬನಬೀರನ ಸರ್ವನಾಶವಾಗುವ ಸಮಯವು ಸಮೀಪಿಸಿತು

ಬನಬೀರನು ಶೀತಲಾ ಎಂಬ ದಾಸಿಯ ಹೊಟ್ಟೆಯಲ್ಲಿ, ಸಂಗ್ರಾಮಸಿಂಹನ ತಮ್ಮನಾದ ಪೃಥ್ವೀರಾಜನಿಂದ ಹುಟ್ಟಿದವನು ಕಾರಣ ಬನಬೀರನು ಹೀನಜಾತಿಯವನೆಂದು, ರಜಪೂತರು ಇವನನ್ನು ಗೌರವದೃಷ್ಟಿಯಿಂದ ನೋಡಲಿಲ್ಲ; ಮೇಲಾಗಿ ದುಷ್ಟ ಬನಬೀರನ ಅನ್ಯಾಯದ ಕೃತ್ಯಗಳು ಯಾವತ್ತು ಸರದಾರರಲ್ಲಿ ಕ್ರೋಧವನ್ನುಂಟುಮಾಡಿದವು. ಅದರಿಂದ ಸರದಾರರು ಒಕ್ಕಟ್ಟಾಗಿ, ಬನಬೀರನನ್ನು ಸಿಂಹಾಸನದಿಂದ ತಳ್ಳಿ, ವಯಸ್ಸಿನಲ್ಲಿ ಬಂದ ಉದಯಸಿಂಹನನ್ನು ಪಟ್ಟಕ್ಕೆ ಕುಳ್ಳಿರಿಸಬೇಕೆಂದು ಮನಸ್ಸು ಮಾಡಿದರು ಮುಂದೆ ತುಸು ದಿವಸಗಳಲ್ಲಿ ಈ

ಎರಡು ಬಣಗಳಲ್ಲಿ ಘೋರ ಕಾಳಗವಾಯಿತು. ರಜಪೂತ ಸರದಾರರ ಒಕ್ಕಟ್ಟಿನ ಶಕ್ತಿಯ ಮುಂದೆ, ಬನಬೀರನ ಆಟವೇನೂ ನಡೆಯಲಿಲ್ಲ. ಕಾರಣ ಚಿತೋಡ ದುರ್ಗವು ಸರದಾರರ ಕೈವಶವಾಯಿತು, ಕೋಟೆಯ ಮೇಲೆ ಉದಯಸಿಂಹನ ಜಯ-ಪತಾಕೆಯು ಹಾರಾಡಹತ್ತಿತು. ಪರಾಜಿತನಾದ ಬನಬೀರನು ತನ್ನ ಜನ ರೊಡನೆ ದಕ್ಷಿಣಕ್ಕೆ ಓಡಿಹೋದನು. ಮಹೋತ್ಸವದಿಂದ ಸಂಗ್ರಾಮಸಿಂಹನ ವಂಶಜನು ಚಿತೋಡದ ಸಿಂಹಾಸನವನ್ನೇರಿದನು (೧೫೪೨).

---

# ಚತುರ್ಥ ಪರಿಚ್ಛೇದ.

## ಜನ್ಮವೂ, ಬಾಲ್ಯವೂ.

ಸಗರ ನರಪತಿಯ ವಂಶದಿ । ಭಗೀರಥಂಕುಲಪುನೀತನೊಗೆದ ತೆರದೊಳುಂ ||
ಮಗನುದಯಂಗುದಯಿಸಿದಂ । ಭಗೀರಥೋದ್ಯೋಗಿ ಸುಪ್ರತಾಪಂ ಧೀರಂ || ೧ ||

ಝಾಲೋರದ ಶೋಣಿಗುರು ಸರದಾರನು ಉದಯಸಿಂಹನನ್ನು ಪಟ್ಟಕ್ಕೆ ಕುಳ್ಳಿರಿಸಲಿಕ್ಕೆ ಸಾಹಸಮಾಡಿದ ಸರದಾರರಲ್ಲೊಬ್ಬನು ‡ ಇವನು ಕುಲೀನನೂ ಮಹಾಪರಾಕ್ರಮಿಯೂ ಆಗಿದ್ದನು. ಇವನು ಉದಯಸಿಂಹನೊಡನೆ ತನ್ನ ಮಗಳ ವಿವಾಹವನ್ನು ಮಾಡುವ ಪ್ರಸ್ತಾಪವನ್ನೆತ್ತಿದನು. ಇದಕ್ಕೆ ಉಳಿದ ಸರದಾರರೆಲ್ಲರು ಸಮ್ಮತಿಸಿದರು ಅದರಿಂದ ವಿವಾಹದ ತಯಾರಿಯು ಪ್ರಾರಂಭವಾಯಿತು. ಈ ಸಮಯದಲ್ಲಿ ಕೆಲವು ಜನ ಸಾಮಂತ ಸರದಾರರು ಕಮಲಮೀರ ದುರ್ಗಕ್ಕೆ ಬರುತ್ತಿದ್ದರು. ಇವರು ಹಾದಿಯಲ್ಲಿ ಸಾವಿರ ರಜಪೂತ ಸೈನಿಕರನ್ನು ನೋಡಿದರು. ಈ ಸೈನಿಕರು ಹತ್ತುಸಾವಿರ ಎತ್ತು, ಐನೂರು ಕುದುರೆಗಳ ಮೇಲೆ ಬನಬೀರನ ಹಣವನ್ನು ಹೇರಿಕೊಂಡು, ಕಚ್ಛದಿಂದ ಚಿತೋಡಕ್ಕೆ ಬರುತ್ತಿದ್ದರು. ಸಾಮಂತರು ಅಕಸ್ಮಾತ್ ಇವರ ಮೇಲೆ ಬಿದ್ದು, ಧನವೆಲ್ಲವನ್ನು ಸುಲಿದುಕೊಂಡರು, ಮತ್ತು

---

‡ ಶೋಣಿಗುರು ಎಂಬದು ಚೌಹಾಣವಂಶದ ಒಂದು ಶಾಖೆಯು ಸಾಧಾರಣವಾಗಿ ಸ್ವರ್ಣಾಂಗ, ಸೋನಾಂಗ ಶಬ್ದಗಳಿಂದ, ಈ ಶಬ್ದವು ಹುಟ್ಟಿರಬಹುದು. ಶೋಣಿಗುರು ಎಂಬದು ಯಾರ ಹೆಸರೂ ಅಲ್ಲ.

ಈ ಹಣದಿಂದ ಉದಯಸಿಂಹನ ವಿವಾಹಸಮಾರಂಭವನ್ನು ಕಮಲಮೀರ ದುರ್ಗ ದಲ್ಲಿ ಬಹು ಸಂಭ್ರಮದಿಂದ ಜರಗಿಸಿದರು. ಉದಯಸಿಂಹನು ರಾಣಾನಾದ ಮೇಲೆ ಕೆಲವು ವರುಷಗಳ ತರುವಾಯ ಈ ಶೋಣಿಗುರುವಂಶದ ರಾಣಿಯ ಗರ್ಭದಲ್ಲಿ ಒಬ್ಬ ಮಗನು ಹುಟ್ಟಿದನು. ಅವನೇ ಪ್ರತಾಪಸಿಂಹನು. ಪ್ರತಾಪನು ಮುಂದಿನ ಆಯುಷ್ಯದಲ್ಲಿ ತೋರಿಸಿದ ಅಪ್ರತಿಮ ಪ್ರತಾಪದಿಂದ ತನ್ನ ಹೆಸರನ್ನು ಸಾರ್ಥಕ ಮಾಡಿಕೊಂಡನು.

ಉದಯಸಿಂಹನಿಗೆ ಒಟ್ಟಿಗೆ ೨೪ ಮಂದಿ ಗಂಡುಮಕ್ಕಳಿದ್ದರು ಇವರಲ್ಲಿ ಪ್ರತಾಪಸಿಂಹನು ಎಲ್ಲಕ್ಕೂ ಹಿರಿಯನು. ಶಕ್ತಸಿಂಹನು ಎರಡನೆಯವನು. ಬಾಲ್ಯ ಕಾಲದಿಂದ ಇವರಿಬ್ಬರು ಆಹಾರ-ವಿಹಾರ-ಶಯನ-ಪ್ರಮೋದಗಳಲ್ಲಿ ಏಕತ್ರರಾಗಿ ರುತ್ತಿದ್ದರು. ಈ ಕಾಲದಲ್ಲಿ ಇವರೀರ್ವರಲ್ಲಿ ಒಂದು ತರದ ದ್ವೇಷಭಾವವುದಯಿ ಸಿತು; ಯಾಕಂದರೆ ಇವರೀರ್ವರು ಭಿನ್ನ ಭಿನ್ನ ಸ್ವಭಾವದವರಾಗಿದ್ದರು. ಹೀಗಿ ದ್ದರೂ ಯಾವದೊಂದು ಕಾರ್ಯಕ್ಕೆ ಹೊರಡುವ ಮೊದಲು ಪ್ರತಾಪನು ಶಕ್ತ ನನ್ನು ಕರೆಯುತ್ತಿದ್ದನು. ಶಕ್ತನು ಬಾಡಿದ ಮುಖದಿಂದ ಅಣ್ಣನನ್ನು ಹಿಂಬಾಲಿಸು ತ್ತಿದ್ದನು ಒಂದೊಂದು ಸಮಯದಲ್ಲಿ ಸಾಮಾನ್ಯವಾದುದೊಂದು ಕಾರಣಕ್ಕಾಗಿ ಇವರೀರ್ವರಲ್ಲಿ ಭಯಂಕರವಾದ ವಾದ-ವಿವಾದವುಂಟಾಗುತ್ತಿದ್ದಿತು. ಈ ವಾಗ್ಯು ದ್ಧದ ಭೀಷಣ ಪರಿಣಾಮವನ್ನು ಚಿಂತಿಸಿ, ಆತ್ಮೀಯ ಜನರು ಕಳವಳ ಹೊಂದು ತ್ತಿದ್ದರು. ತುಸು ದಿವಸಗಳಲ್ಲಿ ಈ ಇಬ್ಬರಲ್ಲಿ ಚಿರಶತ್ರುತ್ವವುಂಟಾಯಿತು. ಇವರ ಲ್ಲೊಬ್ಬನು ರಜಪೂತಕುಲಪ್ರದೀಪನು—ಇನ್ನೊಬ್ಬನು ರಜಪೂತಕುಲಕಲಂಕ ಸ್ವರೂಪನು.

ಈ ಇಬ್ಬರು ವೀರಬಾಲಕರ ಬಾಲ್ಯದ ಆಟಗಳಿಂದ, ಇವರ ಭವಿಷ್ಯತ್ಕಾ ಲದ ಜೀವನದ ಕಾರ್ಯಗಳು ಸೂಚಿತವಾಗುತ್ತಲಿದ್ದವು. ಇವರು ಸಾಮಾನ್ಯ ವಿದ್ಯಾರ್ಥಿಗಳಂತೆ ಪಾಠಶಾಲೆಯಲ್ಲಿ ಗುರುಮಹಾಶಯರು ಹೇಳುತ್ತಿರುವ ಅಭ್ಯಾ ಸದಲ್ಲಿ ಅನುರಕ್ತರಾಗಿರಲಿಲ್ಲ. ಬರ್ಚಿಯನ್ನೆಸೆಯುವದು, ಕುದುರೆಯನ್ನು ಹತ್ತು ವದು, ಗಹನವನದಲ್ಲಿ ಮೃಗಗಳ ಬೇಟೆಯನ್ನಾಡುವದು ಇವೇ ಮೊದಲಾದ ಕಾರ್ಯಗಳು ಇವರ ಪ್ರೀತಿಯ ವಿಷಯಗಳಾಗಿದ್ದವು. ಭವಿಷತ್ಕಾಲದ ಕಾರ್ಯ ಭೂಮಿಯಲ್ಲಿ ಬೇಕಾಗುತ್ತಿರುವ ವಸ್ತುಗಳಿಗನುರೂಪವಾದ ಪದಾರ್ಥಗಳು ಅವರ

ಬಾಲ್ಯಕಾಲದ ಆಟದ ಒಡವೆಗಳಾಗುವವು. ಮಸಿಯಿಂದ ಜೀವಿಸುವ ಬಂಗಾಲದ ಹುಡುಗರು ದೌತಿಯನ್ನು ತೆಗೆದುಕೊಂಡು ಆಡುವರು. ನಮ್ಮಲ್ಲಿಯ ಹುಡಿಗೆಯರು ಕಸಬರಿಗೆ, ಕಲಗಡಿಗೆ ಮೊದಲಾದವುಗಳನ್ನು ತೆಗೆದುಕೊಂಡು ಆಡುತ್ತಿರುವದನ್ನು ನಾವು ನೋಡುತ್ತಿರುವೆವು ಅದರಂತೆಯೇ ನಮ್ಮ ಬಾಲಕರು ತಮ್ಮ ಬಲವಿಗನುರೂಪವಾಗಿ—ಭವಿಷ್ಯತ್ಕಾಲದ ಕಾರ್ಯಗಳಿಗನುರೂಪವಾಗಿ ಆಟವಾಡುತ್ತಿರುವರು ಅಂತೆಯೇ ಅಸಿಜೀವಿಗಳಾದ ಪ್ರಾಚೀನ ರಜಪೂತ ಬಾಲಕರು ಕತ್ತಿ ಮೊದಲಾದ ಆಯುಧಗಳನ್ನು ತೆಗೆದುಕೊಂಡು ಆಟವಾಡುತ್ತಿದ್ದರು ನಾವು ಶಿಶುವಿನ ಕೈಯಲ್ಲಿ ಕ್ಷುದ್ರವಾದುದೊಂದು ಚೂರಿಯನ್ನು ನೋಡಿದರೆ, ತಸ್ತರಾಗಿ ಅದನ್ನು ಕಸಿದುಕೊಂಡು ಬಿಡುವೆವು, ಆದರೆ ರಜಪೂತರು ಬಾಲಕನ ಕೈಯಲ್ಲಿ ಸಣ್ಣ ಆಯುಧವನ್ನು ಕೊಟ್ಟು, ಆನಂದಾನುಭವವನ್ನು ಪಡೆಯುತ್ತಿದ್ದರು ನಾವು ಶಿಶುವಿನ ಶರೀರದಲ್ಲಿ ಸಾಮಾನ್ಯವಾದುದೊಂದು ಗಾಯವನ್ನು ನೋಡಿದರೆ, ಭಯವಿಹ್ವಲರಾಗಿ, ಹುಡುಗರಲ್ಲಿ ಹೆಚ್ಚು ಭಯವನ್ನುಂಟು ಮಾಡುವೆವು, ಆದರೆ ರಜಪೂತ ಮಾತೆಯರು ಶಿಶುವಿನ ರಕ್ತದಿಂದ ಕೂಡಿದ ದೇಹವನ್ನು ನೋಡಿ, ಬಾಲಕನ ವೀರತ್ವವನ್ನು ಚಿಂತಿಸಿ, ಆನಂದದಿಂದ ಬಾಲಕನ ಮುಖವನ್ನು ಚುಂಬಿಸುತ್ತಿದ್ದರು ಈ ತರದ ಅನುಕೂಲ ಪರಿಸ್ಥಿತಿಯಲ್ಲಿ ಬಳೆದ ಬಾಲಕರು ಮುಂದೆ ವೀರತ್ವದಲ್ಲಿ ಹೆಸರು ಪಡೆಯುವದರಲ್ಲಿ ಸಂದೇಹವಿಲ್ಲ. ಈ ತರದ ಆಜನ್ಮ ವೀರಮಹಾನುಭವರ ಜಾತಿಯು ಜಗತ್ತಿನ ಇತಿಹಾಸದಲ್ಲಿ ತೀರ ವಿರಳವೆಂದು ಹೇಳಬಹುದು

ಪ್ರತಾಪ-ಶಕ್ತರೀರ್ವರೂ ವೀರಧರ್ಮಕ್ಕನುಸಾರವಾಗಿ ಉಪಯುಕ್ತ ಶಿಕ್ಷಣವನ್ನು ಹೊಂದಿದ್ದರು. ಅದರಿಂದಿವರು ಮಹಾವೀರರೂ, ಪರಮಸಾಹಸಿಗಳೂ ಆಗಿದ್ದರು ಕಾರಣ ಇವರು ವಿಪತ್ತನ್ನು ಲಕ್ಷಿಸುತ್ತಿರಲಿಲ್ಲ. ಪ್ರತಾಪನು ಗಂಭೀರನೂ, ಉದಾರನೂ ಆಗಿದ್ದನು, ಶಕ್ತನು ಕಠೋರನೂ, ಉಚ್ಛೃಂಖಲನೂ ಆಗಿದ್ದನು ಪ್ರತಾಪನ ಸ್ವದೇಶಭಕ್ತಿಯು ಅಪರಿಚಿತವಾಗಿದ್ದಿತು, ಮತ್ತು ಇವನ ಪ್ರತಿಜ್ಞೆಯು ದೃಢವಾಗಿದ್ದಿತು ಇವನ ವಿಸ್ತಾರವಾದ ಹಣೆಯಲ್ಲಿಯೂ, ವಿಶಾಲ ಕಣ್ಣುಗಳಲ್ಲಿಯೂ ಈ ಗುಣಗಳು ಒಡೆದುಕಾಣುತ್ತಿದ್ದವು ಉಗ್ರಸ್ವಭಾವದವನಾದ ಶಕ್ತನಲ್ಲಿ ಜೀವಿತದ ವಿಶೇಷ ಉದ್ದೇಶವಾವುದೂ ಇದ್ದಿಲ್ಲವೆಂದು ಬೋಧೆಯಾಗುತ್ತಿದ್ದಿತು.

ಶಕ್ತನು ಮೇವಾಡಕ್ಕೆ ಕಲಂಕಸ್ವರೂಪನಾಗುವನೆಂದು, ಅವನ ಜನ್ಮಪತ್ರಿಕೆಯಲ್ಲಿ ನಿರ್ಧರಿಸಲ್ಪಟ್ಟಿತ್ತು. ಉದಯಸಿಂಹನು ಈ ಕಾರಣದಿಂದ ಶಕ್ತಸಿಂಹನ ವಿಷಯವಾಗಿ ವಿರಕ್ತನಾಗಿದ್ದನು. ಶಕ್ತನು ಐದು ವರ್ಷದವನಿದ್ದಾಗ ಒಂದು ಹೊಸ ಕತ್ತಿಯು ತಯಾರಾಗಿ ಬಂದಿತು. ಇದರ ತೀಕ್ಷ್ಣಧಾರೆಯನ್ನು ಪರೀಕ್ಷೆಮಾಡುವದಿತ್ತು. ಈ ಸಮಯದಲ್ಲಿ ಶಕ್ತನು, ಶಸ್ತ್ರಕಾರನಿಂದ ಕತ್ತಿಯನ್ನು ಕಿತ್ತುಕೊಂಡು, ತಂದೆಯನ್ನು ಕೇಳಿದ್ದೇನಂದರೆ—"ಶರೀರವನ್ನು ಕೊಯ್ದಲ್ಲವೇ ಶಸ್ತ್ರದ ಧಾರೆಯನ್ನು ಪರೀಕ್ಷೆಮಾಡುವದು?" ಕೂಡಲೇ ಶಕ್ತನು ತನ್ನ ಅಂಗುಲಿಯ ಮೇಲೆ ಆ ಆಯುಧವನ್ನು ಪ್ರಯೋಗಿಸಿಕೊಂಡನು. ಗಾಯವಾದ ಸ್ಥಳದಿಂದ ರಕ್ತವು ಹೊರಚಿಮ್ಮಹತ್ತಿತು; ಆದರೆ ಬಾಲಕನ ಮುಖದಲ್ಲಿ ವೇದನೆಯ ದುಃಖದ ಲೇಶಮಾತ್ರ ಚಿನ್ಹವೂ ಕಾಣಬರಲಿಲ್ಲ ಎಲ್ಲರೂ ಸ್ತಬ್ಧರಾಗಿ ಕುಳಿತುಬಿಟ್ಟರು; ಆದರೆ ಉದಯಸಿಂಹನಿಗೆ ಸಿಟ್ಟುಬಂದಿತು ಅವನು ಜಾತಕಪತ್ರದ ವಿಷಯವಾಗಿ ವಿಚಾರಿಸಿಯಾಗಲಿ, ಅಥವಾ ಬೇರೆ ಕಾರಣಗಳಿಂದಾಗಲಿ ಮಗನ ತಲೆ ಕಡೆಯುವ ಅಪ್ಪಣೆ ಮಾಡಿದನು; ಆದರೆ ಸಾಲುಂಬ್ರದ ಸರದಾರನು ಇದು ಸರಿಯಲ್ಲವೆಂದು ಉದಯಸಿಂಹನಿಗೆ ಹೇಳಿ, ಬಾಲಕ ಶಕ್ತನ ಪ್ರಾಣವನ್ನು ಬದುಕಿಸಿದನು.

ಪ್ರತಿವರುಷ ವಸಂತಾಗಮನದ ಪ್ರಾರಂಭದಲ್ಲಿ ರಾಜಸ್ಥಾನದಲ್ಲಿ 'ಆಹೇರಿಯಾ' ಎಂಬೊಂದು ಮಹೋತ್ಸವವಾಗುತ್ತಿರುವದು. ಈ ದಿವಸದ ಬೇಟೆಯ ಪರಿಣಾಮದಿಂದ ಆ ಸಂವತ್ಸರದ ಯುದ್ಧ ಮೊದಲಾದವುಗಳ ಪರಿಣಾಮವನ್ನೂ ದೇಶದ ಶುಭಾಶುಭಗಳನ್ನೂ ಗೊತ್ತುಮಾಡುತ್ತಿದ್ದರು. ಅದರಿಂದ ಈ ದಿವಸ ಪ್ರತಿಯೊಬ್ಬ ರಜಪೂತವೀರನು ಬೇಟೆಯಲ್ಲಿ ತನ್ನ ಯಾವಚ್ಛಕ್ತಿಯನ್ನು ಪಯೋಗಿಸಲಿಕ್ಕೆ ಉತ್ಸುಕನಾಗಿರುತ್ತಿದ್ದನು ಪ್ರತಾಪ-ಶಕ್ತರೂ, ಇವರ ತಮ್ಮಂದಿರೂ ಪ್ರತಿವರುಷ ಮಹೋತ್ಸಾಹದಿಂದ ಈ ವೀರೋತ್ಸವದಲ್ಲಿ ಕೂಡುತ್ತಿದ್ದರು; ಮತ್ತು ವೀರಶ್ರೇಷ್ಠರಾರೆಂಬದನ್ನು ನಿರ್ಧರಿಸುವದಕ್ಕೆ ತಮ್ಮ ಯಾವತ್ತು ಬಲವನ್ನು ಪಯೋಗಿಸುತ್ತಿದ್ದರು.

ರಜಪೂತರನ್ನು ವೀರಧರ್ಮದಲ್ಲಿ ಉತ್ಸಾಹಿತರನ್ನಾಗಿ ಮಾಡುವದಕ್ಕಾಗಿ, ಪೂರ್ವದ ವೀರರ ಕೀರ್ತಿಯನ್ನು ಹೊಗಳುತ್ತ ಮನೆಮನೆ ಅಡ್ಡಾಡುತ್ತಿರುವವರಿಗೆ ಚಾರಣರೆಂದು ಹೆಸರು. ಈಗಲೂ ಈ ಚಾರಣರುಂಟು. ಶತ್ರುಗಳು ದಂಡೆತ್ತಿ ಬಂದಾಗ—ಯುದ್ಧವು ಸಮೀಪಿಸಿದಾಗ ಈ ಚಾರಣರ ವೀರರಸಪದ್ಯಗಳು ರಜ

ಪೂತರನ್ನು ಉತ್ಸಾಹಗೊಳಿಸುತ್ತಿದ್ದವು ಬಾಲ್ಯಕಾಲದಿಂದಲೂ ಪ್ರತಾಪನು ಚಾರಣರ ಗಾಯನವನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ರಾಜಸ್ಥಾನದ ಆಬಾಲ-ವೃದ್ಧ-ವನಿತೆಯರೆಲ್ಲರು ಚಾರಣರನ್ನು ಪ್ರೀತಿಸುತ್ತಿದ್ದರು; ಆದರೆ ಭಕ್ತಿವಂತನಾದ ಪ್ರತಾಪನ ತೇಜೋದೀಪ್ತ ಪವಿತ್ರಮೂರ್ತಿಯಂತೆ ಆನಂದ ಹೊಂದುವವರು ಕಡಿಮೆ.

ಪ್ರತಾಪ-ಶಕ್ತರೀರ್ವರೂ ಶಸ್ತ್ರಕುಶಲರಿದ್ದರೆಂದು ಮೇಲೆ ಹೇಳಿದ್ದೇವೆ. ಕತ್ತಿಯನ್ನು ತಿರವುದರಲ್ಲಿ, ಬರ್ಚಿಯನ್ನೆಸೆಯುವದರಲ್ಲಿ ಇವರಿಗೆ ಸಮಾನರಾದವರು ಆ ಕಾಲದಲ್ಲಿ ಯಾರೂ ಇರಲಿಲ್ಲ. ಒಂದು ದಿವಸ ಬೇಟೆಗೆ ಹೋದಾಗ್ಗೆ, ಗುರಿಹೊಡೆಯುವದರ ವಿಷಯವಾಗಿ ಇವರಿಬ್ಬರ ನಡುವೆ ತರ್ಕವಿತರ್ಕವು ನಡೆಯಿತು ಈ ಸಮಯದಲ್ಲಿ ಪ್ರತಾಪನು ತನ್ನ ಕುದುರೆಯನ್ನು ಚಕ್ರಾಕಾರವಾಗಿ ತಿರುಗಿಸುತ್ತಿದ್ದನು ಇವನ ಕೈಯಲ್ಲಿಯ ಬರ್ಚಿಯು ಹೊಳೆಯುತ್ತಿದ್ದಿತು. ಈ ವೇಳೆಯಲ್ಲಿ ಇಬ್ಬರಲ್ಲಿಯು ದ್ವೇಷವು ಪ್ರಕಾಶವಾಗುವ ಸಮಯ ಬಂದಿತು. ಪ್ರತಾಪನು ಗಟ್ಟಿಯಾಗಿ ಹೇಳಿದನು —“ ನೋಡು, ಹಿಂದಿರುಗಬೇಡ; ಬಾ, ಯುದ್ಧವನ್ನಾರಂಭಿಸು ” ಇಬ್ಬರಿಗೂ ಭಯಂಕರವಾದ ಯುದ್ಧವು ಪ್ರಾರಂಭವಾಯಿತು. ರಾಜಪುರೋಹಿತನು ದೂರದಿಂದ ಈ ದೃಶ್ಯವನ್ನು ನೋಡುತ್ತಿದ್ದನು ಅವನು ಅಣ್ಣತಮ್ಮಂದಿರರ ಈ ಕಲಹವನ್ನು ನೋಡಿ, ಶಿಶೋದಿಯಾವಂಶದ ಸರ್ವನಾಶವಾಗುವದೆಂದು ಭಾವಿಸಿದನು. ಕಾರಣ ಅವನು ಸುಮ್ಮನಿರಲಿಕ್ಕೆ ಮನಸು ಮಾಡಲಿಲ್ಲ; ತೀವ್ರವೇ ಓಡಿಬಂದು ಇಬ್ಬರ ನಡುವೆ ನಿಂತುಕೊಂಡನು, ಮತ್ತು ಯುದ್ಧವನ್ನು ನಿಲ್ಲಿಸುವದಕ್ಕೆ ಹೇಳಿದನು ಆದರೆ ಕ್ರೋಧವಶರಾದ ಅವರು ಪುರೋಹಿತನ ಮಾತಿಗೆ ಕಿವಿಗೊಡಲಿಲ್ಲ. ಆಗ ಪುರೋಹಿತನು ಕೆಲಹೊತ್ತು ಸ್ತಂಭಿತನಾಗಿ ನಿಂತುಕೊಂಡನು; ತರುವಾಯ ತನ್ನ ವಸ್ತ್ರದಲ್ಲಿರುವ ಸಣ್ಣ ಆಯುಧವನ್ನು ಕಡೆಗೆ ತೆಗೆದು, ಇರಿದುಕೊಂಡು ಸತ್ತುಬಿದ್ದನು. ಅವನ ರಕ್ತದಿಂದ ಭೂಮಿಯು ಪವಿತ್ರವಾಯಿತು. ರಜಪೂತಕುಲಪುರೋಹಿತನು ರಾಜಪುತ್ರರೀರ್ವರ ರಕ್ಷಣೆಗಾಗಿ ಆತ್ಮವಿಸರ್ಜನೆ ಮಾಡಿದನು; ಮತ್ತು ಅಸಾಧಾರಣ ಆತ್ಮಯಜ್ಞದಿಂದ ಲೋಕದಲ್ಲಿ ಅಮರನಾಗಿ ಉಳಿದನು.

ಎದುರಿನಲ್ಲಾದ ಬ್ರಹ್ಮಹತ್ಯೆಯನ್ನು ನೋಡಿ, ಧಾರ್ಮಿಕನಾದ ಪ್ರತಾಪನು ಭೀತನೂ, ಸ್ತಂಭಿತನೂ ಆದನು. ತನ್ನ ಉದ್ಧಟತನಕ್ಕಾಗಿಯೂ, ಭ್ರಾತೃದ್ವೇಷ

ಕ್ಕಾಗಿಯೂ ಪಶ್ಚಾತ್ತಾಪಪಟ್ಟನು. ಅವನು ಶಕ್ತನಿಗೆ ಮೇವಾಡವನ್ನು ಬಿಟ್ಟು ಹೋಗಲಿಕ್ಕೆ ಅಪ್ಪಣೆಮಾಡಿದನು. ಅಣ್ಣನ ಅಪ್ಪಣೆಯಂತೆ ಶಕ್ತನು ಹೋಗಲೊಡಂಬಟ್ಟನು. ಅದರಿಂದ ಈರ್ವರು ಬಂಧುಗಳು ಅಗಲಿದರು. ಶಕ್ತಸಿಂಹನು ಸೇಡಿಗಾಗಿ, ರಜಪೂತರ ಚಿರಶತ್ರುಗಳಾದ ಮೊಗಲರನ್ನು ಶರಣುಹೊಕ್ಕನು (೧೫೬೭).

ಪ್ರತಾಪನು ಪುರೋಹಿತನ ಅಂತ್ಯೇಷ್ಟಿಕ್ರಿಯೆಯನ್ನು ಯಥಾವಿಧಿಯಾಗಿ ಮಾಡಿಸಿದನು, ಮತ್ತು ಅವನ ಮಕ್ಕಳಿಗೆ ಸಾಕಷ್ಟು ಭೂಮಿಯನ್ನು ಇನಾಮಾಗಿ ಹಾಕಿಕೊಟ್ಟನು.

---

# ಪಂಚಮ ಪರಿಚ್ಛೇದ.

## ಅಕಬರ ಬಾದಶಹ.

ಕಾಕಃ ಕೃಷ್ಣಃ ಪಿಕಃ ಕೃಷ್ಣಃ ಕೋ ಭೇದಃ ಪಿಕಕಾಕಯೋಃ ।
ವಸಂತಾಗಮೇ ಪ್ರಾಪ್ತೇ ಕಾಕಃ ಕಾಕಃ ಪಿಕಃ ಪಿಕಃ ॥ ೧ ॥

ಸುಭಾಷಿತ

ರಾಣಾ ಸಂಗನ ಮೃತ್ಯುವಿನ ತರುವಾಯ ತುಸು ದಿವಸಗಳಲ್ಲಿ ಅವನ ಪ್ರತಿಸ್ಪರ್ಧಿಯೂ, ಮೊಗಲರ ರಾಜ್ಯವನ್ನು ಸ್ಥಾಪಿಸಿದವನೂ ಆದ ಬಾಬರನು ತೀರಿಕೊಂಡನು (೧೫೩೦). ಇವನ ತರುವಾಯ ಇವನ ಮಗನಾದ ಹುಮಾಯುನನು ಪಟ್ಟಕ್ಕೆ ಕೂತನು. ಹುಮಾಯುನನು ಸುಮಾರು ೯ ವರ್ಷ ರಾಜ್ಯಕಾರಭಾರ ಮಾಡಿದ ಮೇಲೆ, ಬಂಗಾಲದ ನವಾಬನಾದ ಶೇರಶಹನಿಂದ ಕನೋಜದ ಯುದ್ಧದಲ್ಲಿ ಪರಾಜಿತನಾದನು (೧೫೪೦ನೇ ಮೇ); ಮತ್ತು ರಾಜ್ಯಬಿಟ್ಟು ಓಡಿಹೋದನು. ತರುವಾಯ ಶೇರಶಹನ ಜಯಶಾಲಿಗಳಾದ ಸೈನಿಕರು ದಿಲ್ಲಿಯನ್ನು ಆಕ್ರಮಿಸಿ, ಹುಮಾಯುನನನ್ನು ಬೆನ್ನಟ್ಟಿದರು. ಹುಮಾಯುನನು ನಾನಾ ಸ್ಥಳಗಳಲ್ಲಿ ತಿರುಗಾಡಿ ಕಡೆಯಲ್ಲಿ ತನ್ನ ತುಸು ಸೈನಿಕರೊಡನೆ ಆಶ್ರಯದ ಆಶೆಯಿಂದ ಮಾರವಾಡಕ್ಕೆ ಬಂದನು; ಆದರೆ ಅಲ್ಲಿ ಆಶ್ರಯವು ದೊರೆಯಲಿಲ್ಲ; ಯಾಕಂದರೆ ಮಾರವಾಡದ ಅರಸನಾದ ಮಲ್ಲದೇವನು ಶಿಕ್ರಿಯ ಕಾಳಗದಲ್ಲಿ ತನ್ನ ಹಿರಿಯ ಮಗನಾದ ರಾಯ

ಮಲ್ಲನನ್ನು ಕಳಕೊಂಡಿದ್ದನು; ಅದರಿಂದ ಅವನು ಮೊಗಲರ ಮೇಲೆ ಅತಿಶಯ ಸಿಟ್ಟಾಗಿದ್ದನು; ಕಾರಣ ಅವನು ರಜಪೂತರ ಚಿರಧರ್ಮನ್ನು ಮೀರಿ, ಶರಣುಬಂದವನಿಗೆ ಆಶ್ರಯ ಕೊಡಲಿಲ್ಲ. ಇಷ್ಟೇ ಅಲ್ಲ, ಅವನು ಹುಮಾಯುನನನ್ನು ಶೆರೆಯುಲ್ಲಿ ಹಿಡಿಯುವದಕ್ಕೆ ಯತ್ನಿಸಿದನು ಹುಮಾಯುನನು ಮಲ್ಲದೇವನ ಈ ದುಷ್ಟ ಆಚರಣೆಯನ್ನೆಂದೂ ಮರೆಯಲಿಲ್ಲ ಮಲ್ಲದೇವನ ಈ ಹೀನಕೃತ್ಯದ ಸಲುವಾಗಿ ಇಡೀ ರಜಪೂತಸ್ತಾನವೇ ಪ್ರಾಯಶ್ಚಿತ್ತವನ್ನು ಅನುಭವಿಸಬೇಕಾಯಿತು

ಹುಮಾಯುನನು ಮಾರವಾಡದಲ್ಲಿ ಆಶ್ರಯಹೊಂದದೆ ಅತಿ ಕಷ್ಟದಿಂದ ಮರುಭೂಮಿಯನ್ನು ದಾಟಿ, ಅಮರಕೋಟಕ್ಕೆ ಮುಟ್ಟಿದನು. ಅಲ್ಲಿಯ ಅರಸನಾದ ರಾಣಾ ಪ್ರಸಾದನು ಅವನಿಗೆ ಆಶ್ರಯಕೊಟ್ಟನು. ಈ ಸ್ಥಳದಲ್ಲಿ ಹುಮಾಯುನನ ಪೂರ್ಣ ಗರ್ಭಿಣಿ ಹೆಂಡಿತಿಯಾದ ಹಮಿದಾಬಾನು ಬೇಗಮಳು ಒಂದು ಗಂಡು ಕೂಸನ್ನು ಹೆತ್ತಳು (೧೫೪೨). ಈ ಹುಡುಗನ ಹೆಸರು ಜಲಾಲ-ಉದ್ದೀನ—ಮಹಮ್ಮದ ಅಕಬರ. ಉದಯಸಿಂಹನು ಚಿತೋಡದ ಸಿಂಹಾಸನವನ್ನು ಹೊಂದಿದ ದಿವಸವೇ ಅಕಬರನು ಹುಟ್ಟಿದನು.

ಹುಮಾಯುನನು ಅಮರಕೋಟದಿಂದ ಅಫಗಾಣಿಸ್ತಾನದಲ್ಲಿ ಅಲೆದು ಆಶ್ರಯ ಹೊಂದದೆ, ತರುವಾಯ ಇರಾಣಕ್ಕೆ ಓಡಿಹೋದನು ಅಲ್ಲಿ ಹದಿಮೂರು ವರ್ಷಗಳವರೆಗೆ ನಾನಾ ವಿಧವಾದ ಸಂಕಟಗಳನ್ನು ಅನುಭವಿಸಿ, ಒಂದು ದಳ ಸೈನಿಕರೊಡನೆ ಹಿಂದುಸ್ತಾನಕ್ಕೆ ತಿರುಗಿಬಂದನು. ಈ ಸಮಯದಲ್ಲಿ ಶೇರಶಹನ ಮನೆತನದ ಒಬ್ಬ ನಿರ್ಬಲ ಅರಸನು ಸೂತ್ರದ ಗೊಂಬೆಯಂತೆ ಸಿಂಹಾಸನದ ಮೇಲೆ ಕೂತಿದ್ದನು ಮತ್ತು ಚಿತೋಡದಲ್ಲಿ ರಾಣಾ ಉದಯಸಿಂಹನು ಬಹಳ ಅವ್ಯವಸ್ಥೆಯಿಂದ ರಾಜ್ಯಕಾರಭಾರ ಸಾಗಿಸುತ್ತಿದ್ದನು. ಉದಯಸಿಂಹನು ಒಬ್ಬ ವಾರವಿಲಾಸಿನಿಗೆ ಮರುಳಾಗಿ, ರಜಪೂತಧರ್ಮವನ್ನು ಮರೆತುಬಿಟ್ಟಿದ್ದನು. ಒಂದು ವೇಳೆ, ಈ ವೇಳೆಯಲ್ಲಿ ಸಂಗ್ರಾಮಸಿಂಹನಂತಹ ಪರಾಕ್ರಮಿಯಾದ ರಾಣಾನು ಚಿತೋಡದ ರಾಜಶಾಸನವನ್ನು ವಹಿಸಿದ್ದರೆ, ಶೇರ-ಶಹನ ವಂಶಜರು ದಿಲ್ಲಿಯನ್ನಾಳಲಿಕ್ಕೆಂದೂ ಸಮರ್ಥರಾಗುತ್ತಿದ್ದಿಲ್ಲ ಮತ್ತು ಹುಮಾಯುನನು ಪುನಃ ರಾಜ್ಯಗಳಿಸುವ ಕಲ್ಪನೆಯನ್ನು ತೆಗೆದುಕೊಂಡು ಭಾರತಕ್ಕೆಂದೂ ಬರುತ್ತಿದ್ದಿಲ್ಲ.

ಅದು ಹೇಗೇ ಇರಲಿ; ಹುಮಾಯುನನು ಬಂದು, ತಂದೆಯ ರಾಜ್ಯವನ್ನು ದೊರಕಿಸಿದನು; ಆದರೆ ಬಹುಕಾಲ ರಾಜ್ಯಭೋಗಮಾಡುವದು ಅವನ ದೈವದ

ಲ್ಲಿರಲಿಲ್ಲ, ಅದರಿಂದ ಅವನು ತೀವ್ರವೇ ಮರಣಹೊಂದಿದನು. ಅವನ ತರುವಾಯ ಅವನ ಮಗನಾದ ಅಲ್ಪ ವಯಸ್ಸಿನ ಅಕಬರನು ಸಿಂಹಾಸನವನ್ನೇರಿದನು (೧೫೫೬); ಮತ್ತು ಮುಂದೆ ತುಸು ದಿವಸಗಳಲ್ಲಿ ಯಾವತ್ತೂ ರಾಜ್ಯಸೂತ್ರಗಳನ್ನು ತನ್ನ ಕೈಯಲ್ಲಿಟ್ಟುಕೊಂಡು, ದೇಶದಲ್ಲಿ ಸುವ್ಯವಸ್ಥೆಯನ್ನುಂಟುಮಾಡಿದನು. ಹುಮಾಯುನನು ಮಲ್ಲದೇವನ ನೀಚತನವನ್ನು ಮರೆತಿರಲಿಲ್ಲ; ಆದರೆ ಸೇಡು ತೀರಿಸಿಕೊಳ್ಳುವದರ ಮೊದಲೇ ಅವನು ತೀರಿಕೊಂಡನು. ಈಗ ಅವನ ಬಲಶಾಲಿಯಾದ ಮಗನು ತನ್ನ ತಂದೆಯ ವೈರಿಯನ್ನು, ಶಿಕ್ಷಿಸುವ ಉದ್ಯೋಗಕ್ಕೆ ತೊಡಗಿದನು. ರಾಠೋರ ಜಾತಿಯ ಅರಸನಾದ ಮಲ್ಲದೇವನಿಗೆ ಯೋಗ್ಯ ಶಿಕ್ಷೆಯನ್ನು ವಿಧಿಸುವದಕ್ಕಾಗಿ ಅಕಬರನ ತಾಯಿಯು ಮಗನಿಗೆ ಉತ್ತೇಜನಕೊಟ್ಟಳು. ಅಕಬರನು ಬಹು ಸೈನ್ಯದೊಡನೆ, ಮಾರವಾಡದ ಮೇಲೆ ದಂಡೆತ್ತಿಬಂದನು.

ಅಕಬರನು ತನ್ನ ಸೇನಾನಿವಾಸವನ್ನು ಅಜಮೀರದಲ್ಲಿ ಸ್ಥಾಪಿಸಿದನು. ಅವನು ಮೊದಲು ಮೈರ್ತಾದುರ್ಗವನ್ನು ಆಕ್ರಮಿಸಿದನು (೧೫೬೨). ಈ ಸಮಯದಲ್ಲಿ ಅಂಬರದ ರಾಜನಾದ ಬಿಹಾರಿಮಲ್ಲನೂ, ಅವನ ಮಗನಾದ ಭಗವಾನದಾಸನೂ ಅಕಬರನ ಸ್ವಾಮಿತ್ವವನ್ನೊಪ್ಪಿಕೊಂಡರು. ಅಕಬರನು ಬಿಹಾರಿಮಲ್ಲನ ಒಬ್ಬ ಮಗಳನ್ನು ಲಗ್ನಮಾಡಿಕೊಂಡನು. ರಜಪೂತರಲ್ಲಿ ಯವನರ ಸ್ವಾಮಿತ್ವವನ್ನೊಪ್ಪಿಕೊಂಡು, ಅವರಿಗೆ ಕನ್ಯದಾನಮಾಡಿ, ರಜಪೂತಕುಲವನ್ನು ಕಲಂಕಿತವನ್ನಾಗಿ ಮಾಡಿದವರಲ್ಲಿ, ಬಿಹಾರಿಮಲ್ಲನೇ ಮೊದಲಿನವನು. ಈ ವೇಳೆಯಲ್ಲಿ ರಾಜಧಾನಿಯಲ್ಲಿ ಬಂಡಾಯವೆದ್ದುದರಿಂದ, ಅಕಬರನು ತಿರುಗಿ ರಾಜಧಾನಿಗೆ ಹೋಗಬೇಕಾಯಿತು. ಮುಂದೆ ನಾಲ್ಕೈಯ್ದು ವರ್ಷಗಳಾದ ಮೇಲೆ, ಪುನಃ ರಾಜಸ್ಥಾನದ ಮೇಲೆ ದಂಡೆತ್ತಿಬಂದನು. ಈ ಸಾರೆ ನಾಗರ ಮೊದಲಾದವು, ಅಕಬರನ ಹಸ್ತಗತವಾದವು. ಅವನು ಮಾರವಾಡವನ್ನು ನಾಲ್ಕೂ ದಿಕ್ಕಿನಿಂದ ಮುತ್ತಿಗೆ ಹಾಕಿದನು. ಬಿಕಾನೇರದ ಅರಸನಾದ ರಾಯಸಿಂಹನು ಅಕಬರನ ಹಸ್ತಗತನಾದ್ದರಿಂದ, ಅಕಬರನಿಗೆ ಮೈರ್ತಾ, ನಾಗರ, ಮಲ್ಲಕೋಟ ಮೊದಲಾದ ಕೋಟೆಗಳು ಸ್ವಾಧೀನವಾದವು. ಮಲ್ಲದೇವನು ನಾನಾಕಡೆಯಲ್ಲಿ ಸೋತು, ಅಕಬರನ ಆಧೀನತ್ವವನ್ನೊಪ್ಪಿಕೊಂಡನು. ಅಕಬರನು ಮಲ್ಲದೇವನ ಮಗಳಾದ ಜೋಧಬಾಯಿಯನ್ನು ವಿವಾಹಮಾಡಿಕೊಂಡನು. ತನ್ನ ಶತ್ರುವಾದ ಮಾಳವದ ಮುಸಲ್ಮಾನ ಅರಸನು ಮಹಾರಾಣಾನ ಆಶ್ರಯದಲ್ಲಿದ್ದುದರಿಂದ, ಅಕಬರನು

ಮಹಾರಾಣಾನ ಮೇಲೆ ಸಿಟ್ಟಾಗಿ, ದೊಡ್ಡ ಸೈನ್ಯದೊಡನೆ, ಚಿತೋಡವನ್ನು ಮುತ್ತಿದನು (೧೫೬೭).

ಅಕಬರ ಮತ್ತು ಉದಯಸಿಂಹರಲ್ಲಿ ಅನೇಕ ಸಾಮ್ಯಗಳವೆ. ರಾಜ್ಯವನ್ನು ಕಳಕೊಂಡ ಹುಮಾಯನನ ಪಲಾಯನಕಾಲದಲ್ಲಿ ಅನೇಕ ಕಷ್ಟ-ವಿಪತ್ತುಗಳ ಮಧ್ಯದಲ್ಲಿ ಅಕಬರನು ಜನಿಸಿದನು ಅವನ ಬಾಲ್ಯವು ಶತ್ರುಗಳ ದೇಶದಲ್ಲಿ—ಅರಣ್ಯದಲ್ಲಿ ಕಳೆದುಹೋಯಿತು ಅದರಂತೆ ಉದಯಸಿಂಹನು ದಾಸಿಯ ಕೃಪೆಯಿಂದ ಜೀವರಕ್ಷಣೆಹೊಂದಿದನು; ಮತ್ತು ನಾನಾ ಸ್ಥಾನಗಳಲ್ಲಿ ಅನೇಕ ವಿಪತ್ತುಗಳಿಂದ ಪಾರಾಗಿ, ಕಡೆಯಲ್ಲಿ ಪರ್ವತಪ್ರದೇಶದಲ್ಲಿ ಅಜ್ಞಾತವಾಸದಿಂದ ಕಾಲ ಕಳೆದನು ಅಕಬರನು ಹದಿನೈದು ವರುಷದ ವಯಸ್ಸಿನಲ್ಲಿ ತಂದೆಯ ಸಿಂಹಾಸನವನ್ನೇರಿದನು, ಅದರಂತೆ ಉದಯಸಿಂಹನು ಸುಮಾರು ಅಷ್ಟೇ ವಯಸ್ಸಿನಲ್ಲಿ ರಾಜ್ಯಾಭಿಷೇಕ ಹೊಂದಿದನು. ಆದರೆ ಉದಯಸಿಂಹನ ಜೀವನಗತಿಯು ಭಿನ್ನ ಭಾವದಿಂದ ಪರಿವರ್ತಿತವಾಯಿತು.

ಅಕಬರನು ತಂದೆಯ ಸಿಂಹಾಸನವನ್ನು ಏರುವದಕ್ಕೆ ಯೋಗ್ಯಮನುಷ್ಯನಾಗಿದ್ದನು, ಯಾಕಂದರೆ ತುಸು ದಿವಸಗಳಲ್ಲಿಯೇ ಅವನು ತನ್ನ ಕೃತಿಗಳಿಂದ ಇದನ್ನು ತೋರಿಸಿಕೊಟ್ಟನು; ಆದರೆ ಉದಯಸಿಂಹನು ಇದಕ್ಕೆ ವಿಪರೀತನಾಗಿದ್ದನು. ರಜಪೂತ ಸರದಾರರು ತಮ್ಮ ಯಾವತ್ತು ಶಕ್ತಿಯನ್ನುಪಯೋಗಿಸಿ, ಉದಯಸಿಂಹನಿಗೆ ತಂದೆಯ ರಾಜ್ಯವನ್ನು ಕೊಡಿಸಿದರು, ಆದರೆ ಈ ಪದಕ್ಕೆ ಅವನು ಉಪಯುಕ್ತನಿರಲಿಲ್ಲ. ಅಕಬರನು ಸಿಂಹಾಸನಕ್ಕೆ ಕೂತ ತರುವಾಯ, ಭುಜಬಲದಿಂದಲೂ, ಬುದ್ಧಿಬಲದಿಂದಲೂ ಒಂದರಹಿಂದೊಂದು ದೇಶಗಳನ್ನು ಜಯಿಸಿ, ಉತ್ತರಹಿಂದುಸ್ತಾನದಲ್ಲಿ ಮೊಗಲರ ಶಕ್ತಿಯನ್ನು ಬೆಳಿಸಿದನು; ಮತ್ತು ಕುಶಲತೆಯಿಂದ ಪರರ ಪ್ರೀತಿಯನ್ನುಂಟುಮಾಡಿಕೊಂಡು ಜನರಲ್ಲಿ ಶ್ರೇಷ್ಠನೆನ್ನಿಸಿಕೊಂಡನು. ಆದರೆ ಉದಯಸಿಂಹನು ದುರ್ಭೇದ್ಯ ಚಿತೋಡದುರ್ಗದಲ್ಲಿದ್ದರೂ, ರಾಜನಿಷ್ಠರಾದ ಅನೇಕ ಸರದಾರರ ಸಹಾಯವಿದ್ದರೂ ಯಾವ ಉತ್ತಮಕಾರ್ಯ ಮಾಡಲಿಕ್ಕೂ ಸಮರ್ಥನಾಗಲಿಲ್ಲ. ಮತ್ತು ಇವನು ವಿಲಾಸಕ್ಕೆ ಮೆಚ್ಚಿ, ರಾಣಾ ಸಂಗ್ರಾಮಸಿಂಹನ ರಾಜ್ಯವನ್ನು ದುರ್ಬಲಮಾಡಿ, ಕಡೆಯಲ್ಲಿ ಚಿತೋಡ ರಾಜಧಾನಿಯಿಂದ ಓಡಿಹೋಗಿ, ಅತಿ ಕಷ್ಟದಿಂದ ಏನೂ ಮಾಡದೆ ಕಡೆಯ ಆಯು

ಷ್ಯವನ್ನು ಮುಗಿಸಿದನು. ಅಕಬರನ ಪ್ರತಿಭೆಯಿಂದ ಅನೇಕ ಹೊಸರಾಜ್ಯಗಳೂ, ರಾಜಧಾನಿಗಳೂ ಕೈವಶವಾದವು; ಆದರೆ ಉದಯಸಿಂಹನ ದೋಷದಿಂದ, ಬಹುಕಾಲದಿಂದ ನಡೆದುಬಂದ ರಜಪೂತರ ರಾಜಧಾನಿಯು ಕೈಯಿಂದ ಜಾರಿ ಹೋಯಿತು.

---

# ಷಷ್ಠಮ ಪರಿಚ್ಛೇದ.

## ಚಿತೋಡ ನಗರ.

ವರಗಿರಿಯುಲ್ಲಿ ವಾಸಿಸಿ ಸಮುಂತುಪೆಸರ್ವಡೆದಿರ್ಪಕೋಟೆಯಿಂ |
ನೆರೆಪರಿವೇಷ್ಟಿತಂ, ಸಕಲಸಂಪದಪೂರಿತಮಾಗಿ ಶೋಭೆಯಿಂ ||
ದಿರದೆ ಸಮುಸ್ತಭಾರತದಿ ವೀರರಭೂಮಿಯಿದೆಂಬ ಪೇರ್ವೆಯಿಂ |
ಮೆರೆದ ಚಿತೋಡವಿಂದು ಸಲೆಶೂನ್ಯಮಾದಾಗಿದೆ ದೇವಲೀಲೆಯಿಂ || ೧ ||

ಚಿತೋಡವು ಮೇವಾಡದ ಪೂರ್ವಭಾಗದಲ್ಲಿರುವ ಒಂದು ದೊಡ್ಡ ಪಟ್ಟಣವಾಗಿದೆ. ಬಾಪ್ಪಾರಾವಳನು ಇದನ್ನು ಮೊದಲು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು (೭೨೮). ಈ ಸಮಯದಿಂದ ಅಕಬರಬಾದಶಹನ ಕಾಲದವರೆಗೆ, ಅಂದರೆ ಸುಮಾರು ಎಂಟುನೂರು ವರುಷಗಳವರೆಗೆ ಇದು ಮೇವಾಡದ ರಾಜಧಾನಿಯಾಗಿದ್ದಿತು. ಬಾಪ್ಪಾರಾವಳನ ಪೂರ್ವದಲ್ಲಿ ಇದು ಜೈನಧರ್ಮದ ಒಂದು ಮುಖ್ಯ ದೇವಸ್ಥಾನವಾಗಿದ್ದಿತು. ಇದರ ಪ್ರಾಚೀನ ಕುರುಹುಗಳೂ, ಶಿಲಾಲಿಪಿಗಳೂ ಈಗಲೂ ಅವೆ.*

ಚಿತೋಡವು ಅರವಲೀ ಪರ್ವತಾವಳಿಯಿಂದ ದೂರದಲ್ಲಿರುವದೊಂದು ಸಣ್ಣ ಗುಡ್ಡದ ಮೇಲಿರುವದು‡ ಈ ಗುಡ್ಡದ ಮೇಲಿನ ಪ್ರದೇಶವು ಸುಮಾರು

---

*Garrick's Tour in the Punjab and Rajputana P. 103, Tod's Rajasthan Vol II Personal narratives, P. 647. ಇಲ್ಲಿ ೭೫ಪೂಟು ಎತ್ತರವಾದುದೊಂದು ಜೈನರ ಸ್ತಂಭವು ಈಗಲೂ ಅದೆ. ಫರ್ಗ್ಯುಸನ್‌ಸಾಹೇಬರು ಇದರ ವರ್ಣನೆಯನ್ನು ಮಾಡಿದ್ದಾರೆ. Rajaputána Gazetteer, Vol III P. 51.

‡ನಿಮಚದಿಂದ ನಸಿರಾಬಾದಕ್ಕೆ ಹೋಗುತ್ತಿರುವ ರಾಜಮಾರ್ಗದ ಪಾರ್ಶ್ವದಲ್ಲಿ ಚಿತೋಡದ ಗುಡ್ಡವಿರುವದು ಚಿತೋಡವು ಬಾಂಬೆ ಬಡೋದಾ ಮತ್ತು ಮಧ್ಯಹಿಂದುಸ್ತಾನ ರೇಲ್ವೆಯ ಒಂದು ಮುಖ್ಯ ಸ್ಟೇಶನವು.

ನಾಲ್ಕು ಮೈಲು ಉದ್ದ, ಅರ್ಧ ಮೈಲು ಅಗಲವಿರುವದು. ಇದರ ಕೆಳಗಿನ ಸುತ್ತಳತೆಯು ಸುಮಾರು ಎಂಟು ಮೈಲಿರುವದು. ಚಿತೋಡಕೋಟೆಯ ಕೆಳಗಿನ ಭೂಮಿಯು ಸಮುದ್ರಸಪಾಟಿಯಿಂದ ೧೯೦೦ ಫೂಟು ಎತ್ತರದಲ್ಲಿದೆ; ಮತ್ತು ಸಮಭೂಮಿಯಿಂದ ಚಿತೋಡದ ಎತ್ತರವು ೪೫೦ ಫೂಟ ಅದೆ. ಪರ್ವತದ ಎಡಬಲಭಾಗಗಳಲ್ಲೆಲ್ಲ ಕಡೆಯಲ್ಲಿಯೂ ಭಯಂಕರವಾದ ಅಡವಿಗಳು ಹಬ್ಬಿವೆ; ಮತ್ತು ದುರಾರೋಹವಾದ ಚಿತೋಡನಗರವು ಸುಮಾರು ಐದು ಹರದಾರಿಯನ್ನು ವ್ಯಾಪಿಸಿದ ದುರ್ಭೇದ್ಯ ಗೋಡೆಗಳಿಂದ ಸುತ್ತುಗತ್ತಲ್ಪಟ್ಟಿದೆ. ಈ ಮೇರೆಗೆ ಈ ಪಟ್ಟಣವು ಸ್ವಾಭಾವಿಕ ಅನುಕೂಲತೆಗಳಿಂದಲೂ, ಮನುಷ್ಯಕೌಶಲದಿಂದಲೂ ರಕ್ಷಿಸಲ್ಪಟ್ಟಿದ್ದರಿಂದ, ಇದು ಬಹು-ದಿವಸಗಳವರೆಗೆ ಶತ್ರುಗಳ ಕೈಯಿಂದ ಪಾರಾಯಿತು

ದುರ್ಗವನ್ನು ಪ್ರವೇಶಮಾಡುವದಕ್ಕಾಗಿ ಮೂರು ತೋರಣದ್ವಾರಗಳುಂಟು. ಉತ್ತರ ದಿಕ್ಕಿನಲ್ಲಿ ಲಕ್ಷಪೋಲವಿರುವದು. ಇದೊಂದು ಕಿರಿ ಅಗಲವಾದ ಎತ್ತರದ ಹಾದಿಯಿಂದ ಕೋಟೆಯನ್ನು ಪ್ರವೇಶಿಸುವ ಬಾಗಿಲವು. ಈ ಬಾಗಿಲವು ಯಾವಾಗಲೂ ಮುಚ್ಚಲ್ಪಟ್ಟಿರುವದು ಪೂರ್ವದಿಕ್ಕಿನಲ್ಲಿ ಪರ್ವತದ ಮೇಲ್ಭಾಗದಲ್ಲಿ ಒಂದು ದ್ವಾರವಿರುವದು. ಇದಕ್ಕೆ ಸೂರ್ಯಪೋಲವೆಂದು ಹೆಸರು. ಈ ಬಾಗಿಲಕ್ಕೆ ಬಂದುಮುಟ್ಟುವ ಮಾರ್ಗವಾದರೂ ದುರಾರೋಹವೂ, ಕಡಿಮೆ ಅಗಲಾದದ್ದೂ ಅದೆ. ಆದರೂ ಸಾಹಸದಿಂದ ಈ ಮಾರ್ಗವಾಗಿ ಕೋಟೆಯಲ್ಲಿ ಪ್ರವೇಶಮಾಡಬಹುದಾಗಿದೆ. ಕಾರಣ ಈ ಮಾಗದಿಂದ ಶತ್ರುಗಳು ಕೋಟೆಯನ್ನೇರಿ ಬರಬಹುದಾಗಿದೆ. ಅದರಿಂದ ವೈರಿಗಳು ಸಾಗಿಬಂದ ಕಾಲದಲ್ಲಿ, ವೀರಶ್ರೇಷ್ಠನೋರ್ವನು ತನ್ನ ಅನುಚರರೊಡನೆ ಈ ಬಾಗಿಲ ಕಾಯುವ ಕೆಲಸವನ್ನು ಕೈಕೊಳ್ಳುತ್ತಿದ್ದನು· ಚಿತೋಡದ ಮುಖ್ಯದ್ವಾರವು ಪಶ್ಚಿಮದಿಕ್ಕಿನಲ್ಲಿರುವದು. ಈ ಬಾಗಿಲಕ್ಕೆ ಬಂದುಮುಟ್ಟುವ ದಾರಿಯು ವಿಸ್ತಾರವಾದದ್ದೂ, ಕ್ರಮದಿಂದ ಏರುತ್ತಹೋಗುವದೂ, ಸುಂದರವೂ ಇದೆ. ಈ ರಾಜಮಾರ್ಗದಿಂದ ಸಾಮಾನುಗಳು, ಚಕ್ಕಡಿಗಳು, ಕುದುರೆಗಳು, ಜನರು ಕೋಟೆಯಲ್ಲಿ ಪ್ರವೇಶಿಸಬಹುದಾಗಿದ್ದಿತು. ಆದರೆ ಶತ್ರುಗಳ ಹಾವಳಿಯಿಂದ ಚಿತೋಡವನ್ನು ರಕ್ಷಿಸುವದಕ್ಕಾಗಿ—ವೈರಿಗಳು ಈ ಮಾರ್ಗದಿಂದ ಏರಿಬರಲಿಕ್ಕೆ ತೊಂದರೆಯಾಗಬೇಕೆಂದು, ಕೆಳಗಿನಿಂದ ಮೇಲಿನವರೆಗೆ ಈ ಮಾರ್ಗದಲ್ಲಿ ಮತ್ತೆ ಏಳು ಬಾಗಿಲಗಳಿವೆ. ಈ ದ್ವಾರಗಳಲ್ಲಿ ಪಾಯದಲಪೋಲವೆಂಬದು ಎಲ್ಲಕ್ಕೂ ಕೆಳಗಿನದು. ಇಲ್ಲಿಂದ ಹಾದಿಯು ಕ್ರಮವಾಗಿ ಎತ್ತರವಾಗುತ್ತಹೋಗಿ

ದ್ದು, ಉತ್ತರಮುಖವಾಗಿ ಸಾಗಿದೆ. ಈ ದಿಕ್ಕಿನಿಂದ ಮುಂದಕ್ಕೆ ಹೋದರೆ, ಭೈರವ ಪೋಲನ್ನು ದಾಟಿ, ಹನುಮಾನ್‌ಪೋಲಿಗೆ ಮುಟ್ಟುವೆವು. ಈ ಹನುಮಾನ್‌ಪೋಲವು ಮುಖ್ಯಸ್ಥಳವು. ಶತ್ರುಗಳ ಆಕ್ರಮಣವನ್ನು ತಡೆಯುವದಕ್ಕಾಗಿ ಈ ಸ್ಥಳದಲ್ಲಿ ಅನೇಕ ಭೀಷಣ ಯುದ್ಧಗಳಾಗಿವೆ. ಹನುಮಾನ್‌ಪೋಲಿನಿಂದ ದಾರಿಯು ದಕ್ಷಿಣಕ್ಕೆ ಸಾಗಿದೆ. ಈ ಮಾರ್ಗವಾಗಿ ಮುಂದೆ ಸಾಗಿದರೆ, ಗಣೇಶಪೋಲ, ಝುರಣಾಪೋಲ ಹತ್ತುವವು. ಮುಂದೆ ಹಾದಿಯು ಮತ್ತೆ ಉತ್ತರಾಭಿಮುಖವಾಗಿರುವದು. ಈ ಹಾದಿಯ ಮಧ್ಯದಲ್ಲಿ ಲಕ್ಷ್ಮಣಪೋಲ, ಕಡೆಯಲ್ಲಿ ರಾಮಪೋಲವುಂಟು. ಪ್ರತಿಯೊಂದು ಬಾಗಿಲದ ಎಡಬಲಗಳಲ್ಲಿ ಸೈನಿಕರು ಇರುವದಕ್ಕಾಗಿ ಕೆಲವು ಸುರಕ್ಷಿತ ಮನೆಗಳಿದ್ದವು. ರಾಮಪೋಲನ್ನು ದಾಟಿದ ಬಳಿಕ ಕೋಟೆಯೊಳಗೆ ಪ್ರವೇಶವಾಗುವದು.

ಚಿತ್ತೋಡದ ಕೋಟೆಯು ಯಾವತ್ತು ಪಟ್ಟಣವನ್ನೊಳಕೊಂಡಿದೆ. ಚಿತ್ತೋಡವು ಜನಭರಿತವಾಗಿದ್ದಾಗ—ಇದರ ಸುದಿವಸದ ಸಮಯದಲ್ಲಿ ಕೋಟೆಯಲ್ಲಿ ಸಾಕಷ್ಟು ಆಹಾರ್ಯಪದಾರ್ಥಗಳ ಸಂಚಯವಿರುತ್ತಿತ್ತು. ಕೆಲವು ಯಾವಾಗಲೂ ಹರಿಯುವ ಝರಿಗಳೂ, ಬಾವಿಗಳೂ ದುರ್ಗವಾಸಿಗಳಿಗೆ ನೀರಿನ ಪೂರೈಕೆಯನ್ನುಂಟುಮಾಡುತ್ತಿದ್ದವು. ಇದರಿಂದ ಶತ್ರುಗಳು ಕೋಟೆಯನ್ನು ಬಹುಕಾಲದವರೆಗೆ ಮುತ್ತಿದರೂ, ಒಳಗಿನ ಜನರಿಗೆ ಅನ್ನ-ನೀರುಗಳ ಕೊರತೆಯುಂಟಾಗುತ್ತಿರಲಿಲ್ಲ. ಪರ್ವತಾವಳಿಯ ಮೇಲೆ ನಿರ್ಮಿತವಾದ ಪಟ್ಟಣಗಳಲ್ಲಿ ಅತಿವೃಷ್ಟಿ, ಶೀತಾಧಿಕ್ಯ ಮೊದಲಾದ ಅಡಚಣಿಗಳಿರುವ ಸಂಭವವುಂಟು, ಆದರೆ ಬೈಲಿನಲ್ಲಿರುವದೊಂದು ಗುಡ್ಡದ ಮೇಲೆ ಇರುತ್ತಿರುವದರಿಂದ ಚಿತ್ತೋಡದಲ್ಲಿ ಈ ತರದ ತೊಂದರೆಗಳಿರಲಿಲ್ಲ. ಕಾರಣ ಸಮಶೀತೋಷ್ಣಹವೆಯುಳ್ಳ ಈ ಪಟ್ಟಣದಲ್ಲಿ ಜನರು ಆರೋಗ್ಯವಂತರಾಗಿ ಸುಖದಿಂದಿದ್ದರು; ಮತ್ತು ಸುತ್ತಲೂ ಇರುವ ನಯನ ಮನೋಹರ ಪ್ರಕೃತಿಯ ಸೌಂದರ್ಯವನ್ನು ನೋಡಿ, ಪರಮಾನಂದಭರಿತರಾಗುತ್ತಿದ್ದರು.

ಈ ಘನವನಗಳುಳ್ಳ ಇಳಿಜಾರಾದ ಭೂಮಿಯು—ಸಸಿಗಳಿಂದ ಹಸರುಬಣ್ಣದಿಂದೊಪ್ಪುವ ಸಮನೆಲದ ಕೇಂದ್ರಸ್ಥಾನವಾದ ಚಿತ್ತೋಡದಲ್ಲಿ ನೂರಾರು ವರುಷಗಳಿಂದ ನಿರ್ಮಿತವಾದ ಅರಮನೆ, ದೇವಮಂದಿರ, ಜಯಸ್ತಂಭಾದಿಗಳ ಸೌಂದರ್ಯವು ಅತೀವ ಮನೋಹರವಾಗಿದ್ದಿತು. ಈಗ ಆ ಚಿತ್ತೋಡವು ಸ್ಮಶಾನ

ಭೂಮಿಯಾಗಿದೆ. ಕಾಲನ ಕಠೋರ ಕೈಯಿಂದಲೂ ಶತ್ರುಗಳ ಅಮಾನುಷಿಕ ಅತ್ಯಾಚಾರಗಳಿಂದಲೂ ನಾಶವಾದ ಈ ಪಟ್ಟಣದ ಉಪ್ಪರಿಗೆಗಳ ಎಣಿಕೆಯನ್ನು ಮಾಡಲಿಕ್ಕೆ ಬರುವಂತಿಲ್ಲ ಉಲ್ಲಾವುದ್ದೀನನೂ, ಬಹದ್ದೂರಶಹನೂ ಚಿತೋಡ ವನ್ನಾಕ್ರಮಿಸಿ, ಇದರ ಬಹು ಸೌಂದರ್ಯವನ್ನು ನಾಶಮಾಡಿದ್ದಾರೆ ಅಕಬರ ಬಾದಶಹನ ಅತ್ಯಾಚಾರದ ಕಥೆಯನ್ನು ನಾವು ಮುಂದೆ ಹೇಳುವೆವು. ಸಾಮ್ರಾಟ ಔರಂಗಜೇಬನು ಇದನ್ನು ನೋಡಲಿಕ್ಕೆ ಬಂದಾಗ, ಇವನ ಅಪ್ಪಣೆಯಿಂದ ಚಿತೋಡದ ೬೩ ಸುಂದರ ಮಂದಿರಗಳು ನಾಶವಾದವು * ಈ ಯಾವತ್ತು ಕಾರಣಗಳಿಂದ ಈ ಸಮಯದಲ್ಲಿ ಚಿತೋಡವನ್ನು ನೋಡಿದ್ದಾದರೆ, ಅತ್ತಿತ್ತ ಬಿದ್ದ ಕಲ್ಲುರಾಶಿಗಳೂ, ಅಸಂಖ್ಯ ಭಗ್ನಗೃಹಗಳೂ ಕಣ್ಣಿಗೆ ಬೀಳುವವು. ಇಂದು ಚಿತೋಡವು ನಿರಾಭರಣಳಾದ ವಿಧವೆಯ ಅವಸ್ಥೆಯನ್ನು ಹೊಂದಿದೆ. ಇದರ ಸುದಿವಸಗಳಲ್ಲಿ ಇದರಲ್ಲಿಯ ಅಪೂರ್ವನೋಟವನ್ನು ಅವಲೋಕಿಸಿದ್ದಾದರೆ, ಇಂತಹ ಸುಂದರವೂ ದುರ್ಭೇದ್ಯವೂ ಆದ ರಾಜಧಾನಿಯು ಹಿಂದುಸ್ತಾನದಲ್ಲಿ ಬೇರೊಂದಿಲ್ಲವೆಂದು ಹೇಳಬಹುದಾಗಿದ್ದಿತು ‡

ಭಗ್ನಾವಸ್ಥೆಯಲ್ಲಿರುವ ಚಿತೋಡದಲ್ಲಿ ಈಗಲೂ ಕಲ್ಲಿನಿಂದ ಕಟ್ಟಿದ ಎಷ್ಟೋ ಮನೆಗಳು ಕಣ್ಣಿಗೆ ಬೀಳುತ್ತಿರುವವು. ಈ ಪಟ್ಟಣದಲ್ಲಿ ಸದ್ಯಃ ಪ್ರೇಕ್ಷಣೀಯವಾದ ಸ್ಥಳಗಳಲ್ಲಿ ಕುಂಭರಾಣಾನ ವಿಜಯಸ್ತಂಭವೂ, ಮುಕುಲಜೀಯ ಮಂದಿರವೂ, ಶಿಂಗಾರಚೌರಿಯೂ ಮುಖ್ಯವಾಗಿವೆ ವಿಜಯಸ್ತಂಭದ ವಿಷಯವಾಗಿ ನಾವು ಹಿಂದೆ ಹೇಳಿದ್ದೇವೆ. ಈ ಕಲ್ಲಿನಿಂದ ಕಟ್ಟಿದ ಕಂಬವು ಒಂಬತ್ತು ಅಂತಸ್ತುಗಳುಳ್ಳದ್ದಾಗಿ, ೧೨೨ ಫೂಟು ಎತ್ತರವಾಗಿದೆ. ಇದು ದಿಲ್ಲಿಯ ಕುತುಬಮಿನಾರಕ್ಕೆ ಸರಿ

---

* Masir-i-Alamgiri P. 189, quoted by Professor J. N. Sarkar " History of Aurangzeb " Vol III P. 323

‡ ಟಾಡ್‌ಸಾಹೇಬರ ಓರ್ವ ಚಾರಣಕವಿಯು ಒಂಭತ್ತನೇ ಶತಮಾನದಲ್ಲಿ ರಚಿತವಾದ ‹ ಖೋಮಾನರಾಸಾ › ಎಂಬ ಗಾಥೆಯ ಆಧಾರದಿಂದ ತೋರಿಸಿಕೊಟ್ಟದ್ದೇನಂದರೆ—" of all the royal abodes of India none could compete with chitor before she became a ' widow " Rajasthan, Personal narratives Vol. II P. 642. " Travellers do not speak of any fortress like this in the whole habitable world "—Tarikh-i-Alfi, Elliot Vol. V P. 170

ಯಾಗದಿದ್ದರೂ, ಇದರ ಸೌಂದರ್ಯವು ಅತುಲನೀಯವಾಗಿರುವದರಲ್ಲಿ ಸಂದೇಹವಿಲ್ಲ § ಕುಂಭನ ತಂದೆಯಾದ ರಾಣಾ ಮುಕುಲನು ಮುಕುಲಜಿಯ ಮಂದಿರವನ್ನು ಕಟ್ಟಿಸಿದ್ದಾನೆ. ಮತ್ತು ಕುಂಭನ ಜೈನಧರ್ಮಾವಲಂಬಿಯಾದ ಕೋಶಾಧ್ಯಕ್ಷನು ಶಿಂಗಾರಚೌರಿಯೆಂಬ ಮಂದಿರವನ್ನು ಕಟ್ಟಿಸಿದ್ದಾನೆ. ಇವನ್ನುಳಿದು ಚಿತೋಡದ ಶೋಭೆಯನ್ನು ಬಳೆಸಿದ ಮಂದಿರಗಳು ಸದ್ಯಃಕಾಲದಲ್ಲಿ ಇಲ್ಲವಾಗಿವೆ. ಚಿತೋಡದಲ್ಲಿ ಇರುವ ವಸ್ತುಗಳಿಗಿಂತಲೂ, ಇದ್ದ ವಸ್ತುಗಳ ಸ್ಮೃತಿಯು ದರ್ಶಕಮಾತ್ರರನ್ನು ಮುಗ್ಧಗೊಳಿಸುತ್ತಿರುವದು.

ಪರಾಕ್ರಮಿಗಳಾದ ಶತ್ರುಗಳು ಚಿತೋಡವನ್ನು ಬಹುಸಾರೆ ಆಕ್ರಮಿಸಿ ಧ್ವಂಸಮಾಡಿದ್ದಾರೆ ಚಿತೋಡದ ರಕ್ಷಣೆಗಾಗಿ ಮಾಡಲ್ಪಟ್ಟ ದೊಡ್ಡ ಯುದ್ಧದ ಸಿದ್ಧತೆ, ಭಯಂಕರವಾದ ಯುದ್ಧ, ರೋಮಾಂಚವನ್ನುಂಟುಮಾಡತಕ್ಕ ಹತ್ಯಾಕಾಂಡ, ಅಮಾನುಷಿಕ ಆತ್ಮಯಜ್ಞಗಳು, ಜಗತ್ತಿನ ಯಾವ ದೇಶದ ರಾಜಧಾನಿಯ ಸಂರಕ್ಷಣೆಯ ಸಲುವಾಗಿಯೂ ಮಾಡಲ್ಪಟ್ಟಿಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು ಚಿತೋಡದಲ್ಲಿ, ದೇಶಕ್ಕಾಗಿ ಪ್ರಾಣತ್ಯಾಗಮಾಡಿ ಹೋದ ಮನುಷ್ಯರಿಲ್ಲದ ಮನೆಗಳಿಲ್ಲ, ಸ್ವದೇಶರಕ್ಷಣೆಯ ಸಲುವಾಗಿ ಯುದ್ಧಭೂಮಿಗಳಾಗದ ಘಟ್ಟದ ಮಾರ್ಗಗಳಿಲ್ಲ; ಸ್ವದೇಶಪ್ರೇಮಿಯ ಉಷ್ಣರಕ್ತದಿಂದ ರಂಜಿತವಾಗದ ಅಂಗುಲಿಪ್ರಾಯವಾದ ಪರ್ವತಪ್ರದೇಶವಿಲ್ಲ. ಕಲ್ಲುಗಳಿಂದ ನಿರ್ಮಿತವಾದ ಅಸಂಖ್ಯ ಭಗ್ನಸ್ತಂಭಗಳು ಈಗಲೂ ಇದ್ದು, ಸಾವಿರಾರು ವೀರಪುರುಷರ ಕೀರ್ತಿ-ಕಥೆಯನ್ನು ಸಾರಿ ಹೇಳುತ್ತಿರುವವು, ಆದರೆ ಈ ಅಲ್ಪಸಂಖ್ಯಾಕವಾದ ಕಂಬಗಳು ರಜಪೂತವೀರರ ಕೀರ್ತಿ-ರಕ್ಷಣೆಯ ಕೆಲಸವನ್ನು ಸಂಪೂರ್ಣವಾಗಿ ಮಾಡಲಾ

---

§ ಕೀರ್ತಿಸ್ತಂಭದ ಶಿಲಾಲಿಪಿಯಲ್ಲಿ ಬರೆದದ್ದೇನಂದರೆ —

“ ಪುಣ್ಯೇ ಪಂಚದಶೇ ಶತೇ ವ್ಯಪಗತೇ ಪಂಚಾಧಿಕೇ ವತ್ಸರೇ ।
ಮಾಘೇ ಮಾಸಿ ಬಲಕ-ಪಕ್ಷ ದಶಮೀ ದೇವೇಜ್ಯ ಪುಷ್ಯಾಗಮೇ ॥
ಕೀರ್ತಿ ಸ್ತಂಭಮಕಾರಯನ್ನರಪತಿಃ ಶ್ರೀಚಿತ್ರಕೂಟಾಚಲೈ ।
ನಾನಾ ನಿರ್ಮಿತನಿರ್ಜರಾವತರಣೈರ್ಮೇರೋರ್ಹಸಂತಂ ಶ್ರಿಯಮ್ ॥ ”

೧೫೦೫ನೇ ಸಂವತದ (ಕ್ರಿ ಶ ೧೪೪೮) ಮಾಘಮಾಸದ ಶುಕ್ಲಪಕ್ಷದ ದಶಮಿ ಗುರುವಾರ ದಿವಸ, ಪುಷ್ಯ ನಕ್ಷತ್ರದಲ್ಲಿ ಚಿತ್ರಕೂಟ ಪರ್ವತದಲ್ಲಿ ಇದು ಅರಸನಿಂದ ಸ್ಥಾಪಿತವಾಯಿತು; ಅನೇಕ ದೇವಮೂರ್ತಿಗಳ ನಿರ್ಮಾಣವಿರುವದರಿಂದಿದು, ಮೇರುಪರ್ವತದ ಶೋಭೆಯನ್ನು ಜಯಿಸಿದ್ದಾಗಿದೆ

ರವು. ಶೀರ್ಷಸ್ಥಾನದಲ್ಲಿ ಚಿತ್ತೋಡದ ವಿಶ್ವವಿಶ್ರುತ ಕೋಟೆಯನ್ನು ಹೊತ್ತು ಕೊಂಡು ನಿಂತಿರುವ ಅಕ್ಷಯವಾದ ಆ ಶ್ರೇಷ್ಠ ಪರ್ವತವು ಬಾಪ್ಪಾರಾವಳನ ಕೀರ್ತಿಶೇಷರಾದ ವಂಶಜರ ಕೀರ್ತಿಸ್ತಂಭಸ್ವರೂಪವಾಗಿ ಅನಂತಕಾಲದವರೆಗೆ ಹೀಗೆಯೇ ನಿಂತುಕೊಳ್ಳುವದರಲ್ಲಿ ಸಂದೇಹವಿಲ್ಲ.*

---

# ಸಪ್ತಮ ಪರಿಚ್ಛೇದ.

## ಭಸ್ಮೀಭೂತ ಚಿತ್ತೋಡ.

ಸುಂದರ ಪದಾರ್ಥಗಳ್ಸ್ವ | ಚ್ಛಂದದ ನೀಚರನು ಮೋಹಗೊಳಿಪುದಯೋಗ್ಯಂ ॥
ಇಂದಲ್ಲದೊಡೆ ಯುವನರಿಂ | ಸಂದಾ ಚಿತ್ತೂರದೇಕೆ ಭಸ್ಮೀಭೂತಂ || ೧ ||

ದುರ್ಭೇದ್ಯ ಚಿತ್ತೋಡದುರ್ಗವು ಬಹು ದಿಗ್ವಿಜಯವೀರರ ಲೋಲುಪ ದೃಷ್ಟಿಯನ್ನು ಆಕರ್ಷಿಸಿದೆ. ರಜಪೂತರ ವೀರತ್ವದ ಖ್ಯಾತಿಯೊಡನೆ, ಶತ್ರುಗಳ ಮನಸ್ಸಿನಲ್ಲಿ ಇದನ್ನು ಜಯಿಸಬೇಕೆಂಬ ಆಕಾಂಕ್ಷೆಯೂ ಬಳೆಯಿತು. ಆಗಿನ ಕಾಲ ದಲ್ಲಿ ಚಿತ್ತೋಡವನ್ನು ವಶಮಾಡಿಕೊಳ್ಳುವದು ಬಹು ಕಠಿಣವೆಂದೆಣಿಸಲ್ಪಡುತ್ತಿತ್ತು. ಅದರಿಂದ ಇದನ್ನು ಕೈವಶಮಾಡಿಕೊಂಡ ಅರಸನು ಭಾರತದಲ್ಲಿ ವಿಖ್ಯಾತನಾಗುವ ನೆಂಬದರಲ್ಲಿ ಸಂದೇಹವಿದ್ದಿಲ್ಲ. ಕಾರಣ ಚಿತ್ತೋಡವು ಅನೇಕ ಸಾರೆ ನಾಶವಾ ಗಿದೆ. ಅಕಬರ ಬಾದಶಹನು ಚಿತ್ತೋಡದ ನಾಶವನ್ನು ಮಾಡಿದವರಲ್ಲೊಬ್ಬನು.

---

* Who could look on this lonely, this majestic column, which tells, in language more easy of interpretation than the tablets within, of

——deeds which should not pass away,
And names that must not wither,

And with hold a sigh for its departed glories? But in vain I dipped my pen to embody my thoughts in language, for wherever the eye fell, it filled the mind with images of the past and ideas rushed too tumultuously to be recorded. "—— Tod'g Rajasthan vol II P.642.

ಚಿತೋಡವು ಮೂರುವರೆ ಸಾರೆ ನಾಶಮಾಡಲ್ಪಟ್ಟಿತೆಂದು ರಜಪೂತರು ಹೇಳುತ್ತಿರುವರು. ದಿಲ್ಲಿಯ ಅರಸನಾದ ಅಲ್ಲಾವುದ್ದೀನನು ಮೊದಲು ಚಿತೋಡದ ಮೇಲೆ ದಂಡೆತ್ತಿಬಂದನು. ಈ ಸಮಯದಲ್ಲಿ ಲಕ್ಷ್ಮಣಸಿಂಹನು ಅರಸನಾಗಿದ್ದನು. ಇವನು ಚಿಕ್ಕ ವಯಸ್ಸಿನವನಿದ್ದುದರಿಂದ, ಇವನ ಕಕ್ಕನಾದ ಭೀಮಸಿಂಹನು ರಾಜ್ಯಕಾರಭಾರ ಸಾಗಿಸುತ್ತಿದ್ದನು ಭೀಮಸಿಂಹನ ಹೆಂಡತಿಯಾದ ಪದ್ಮಿನಿಯು ಅಸಾಮಾನ್ಯ ಸುಂದರಿಯಾಗಿದ್ದಳು. ಅಲ್ಲಾವುದ್ದೀನನು ಪದ್ಮಿನಿಯನ್ನು ದೊರಕಿಸುವದಕ್ಕಾಗಿ ದಂಡೆತ್ತಿಬಂದಿದ್ದನು. ಈ ಸಮಯದಲ್ಲಿ ಕಪಟಿಯಾದ ಅಲ್ಲಾವುದ್ದೀನನ ವಿಶ್ವಾಸಘಾತಕತನದಿಂದ ಭೀಮಸಿಂಹನು ಬಂದಿಯಾದನು, ತರುವಾಯ ಸತೀ ಪದ್ಮಿನಿಯು ಸಾಹಸದ ಕೌಶಲದಿಂದ ಪಾರಾಗಿ ದಿಲ್ಲಿಗೆ ಹೋದನು. ಈ ವೇಳೆಯಲ್ಲಿ ಗೋರಾಸಿಂಹನೂ, ಹನ್ನೆರಡು ವರುಷದ ಬಾಲಕನಾದ ಬಾದಲನೂ ಬಹು ಪರಾಕ್ರಮವನ್ನು ತೋರಿಸಿದರು. ಇದು ಚಿತೋಡದ ಅರ್ಧನಾಶವು, ಯಾಕಂದರೆ ಈ ಸಾರೆ ಚಿತೋಡವು ಶತ್ರುಗಳ ವಶವಾಗದಿದ್ದರೂ, ರಜಪೂತ ಸೈನ್ಯದಲ್ಲಿಯ ಅಸಂಖ್ಯವೀರರು ಮೃತ್ಯುಮುಖದಲ್ಲಿ ಬಿದ್ದರು. ಮುಂದೆ ತುಸು ದಿವಸಗಳಲ್ಲಿ ಅಲ್ಲಾವುದ್ದೀನನು, ಹಿಂದಿನ ಅಪಜಯದ ಕಲಂಕವನ್ನು ಕಳೆದುಕೊಳ್ಳುವದಕ್ಕಾಗಿ, ಬಹು ಸೇನೆಯೊಡನೆ ಚಿತೋಡವನ್ನಾಕ್ರಮಿಸಿದನು. ಈ ಸಾರೆ ಚಿತೋಡವು ರಕ್ಷಣೆಹೊಂದಲಿಲ್ಲ ರಾಣಾ ಲಕ್ಷ್ಮಣಸಿಂಹನೂ, ಅವನ ಹನ್ನೊಂದುಮಂದಿ ಮಕ್ಕಳೂ, ಅಸಂಖ್ಯ ರಜಪೂತವೀರರೂ, ಅನೇಕ ವೀರರಮಣಿಯರೂ ಆತ್ಮಯಜ್ಞವನ್ನು ಮಾಡಿದರು; ಇದರಿಂದ ಚಿತೋಡವು ಸ್ಮಶಾನಭೂಮಿಯಾಗಿ ಪರಿಣಮಿಸಿತು (೧೩೦೩). ಇದು ಚಿತೋಡದ ಮೊದಲನೆಯ ಪೂರ್ಣನಾಶವು. ರಾಣಾ ರಾಯಮಲ್ಲನ ಕಾಲದಲ್ಲಿ ಅವನ ಮಗನಾದ ಪೃಥ್ವೀರಾಜನು ಗುಜರಾಥದ ಮುಜಫರಶಹನನ್ನು ಬಂದಿಯನ್ನಾಗಿಮಾಡಿ, ಚಿತೋಡಕ್ಕೆ ತಂದನು. ಈ ಸೇಡನ್ನು ತೀರಿಸಿಕೊಳ್ಳುವದಕ್ಕಾಗಿ, ರಾಣಾ ಸಂಗನ ಮಗನಾದ ವಿಕ್ರಮಜಿತುವಿನ ಕಾಲದಲ್ಲಿ ಗುಜರಾಥದ ಬಹದ್ದೂರಶಹನು ಚಿತೋಡವನ್ನಾಕ್ರಮಿಸಿದನು (೧೫೩೩). ಈ ಸಾರೆಯೂ ಭಯಂಕರ ಯುದ್ಧವಾಯಿತು. ಚಿತೋಡದ ಭೂಮಿಯಲ್ಲಿ ವೀರರ ರಕ್ತವು ಕಾವಲಿಯಾಗಿ ಹರಿಯಿತು. ಈ ಯುದ್ಧದಲ್ಲಿ ೩೨ ಸಾವಿರ ರಜಪೂತವೀರರು ವೀರಸ್ವರ್ಗವನ್ನೈದಿದರು. ಮತ್ತು ೧೩ ಸಾವಿರ ಲಲನೆಯರು ಜೋಹಾರ ಮಾಡಿದರು. ಇದು ಚಿತೋಡದ ಎರಡ

ನೆಯ ಪೂರ್ಣನಾಶವು ಈ ಸಮಯದಲ್ಲಿ ಹುಮಾಯನನು ದಿಲ್ಲಿಯ ಬಾದಶಹ ನಾಗಿದ್ದನು.

ಈ ಸಮಯದಲ್ಲಿ ಸಂಗನ ಪತ್ನಿಯಾದ ಕರ್ಣಾವತಿಯು ಹುಮಾಯನನನ್ನು ಸಹಾಯಕ್ಕಾಗಿ ಬೇಡಿಕೊಂಡಳೆಂದು ಆಖ್ಯಾಯಿಕೆಯದೆ. ಅವಳು ರಜಪೂತರ ಆಚರಣೆಗಳಂತೆ, ಹುಮಾಯನನನ್ನು ಸಹೋದರನೆಂದು ಸಂಬೋಧಿಸಿ, ಅವನಿಗೆ ರಾಖಿಯನ್ನು ಕಳಿಸಿಕೊಟ್ಟಳು. ಯಾವನೊಬ್ಬನು ರಜಪೂತರಮಣಿಯ ರಾಖಿ ಯನ್ನು ಸ್ವೀಕರಿಸಿದನೆಂದರೆ ಅವನು ಆ ಲಲನೆಯ ಸಹೋದರನೆಂದು ಆಗ ಕಲ್ಪನೆ ಯಿತ್ತು ಹುಮಾಯನನು ಕರ್ಣಾವತಿಯ ರಾಖಿಯನ್ನು ಸ್ವೀಕರಿಸಿ, ರಾಣಾನ ರಾಜ್ಯರಕ್ಷಣೆಯ ಸಲುವಾಗಿ ಸಸೈನ್ಯ ಹೊರಟನು. ಆದರೆ ಇವನು ಮುಟ್ಟುವ ಮೊದಲೇ ಚಿತೋಡವು ಪೂರ್ಣ ನಾಶವಾಗಿತು. ಬಹದ್ದೂರಶಹನು ಹುಮಾಯ ನನ ಭಯದಿಂದ ತಿರುಗಿ ತನ್ನ ದೇಶಕ್ಕೆ ಹೋದನು. ತರುವಾಯ ಚಿತೋಡದ ಪುನರುದ್ಧಾರವಾಯಿತು.

ಒಂದು ಕಾಲದಲ್ಲಿ ಹುಮಾಯನನಿಂದ ರಕ್ಷಿತವಾದ ಚಿತೋಡವನ್ನು, ಅಕ ಬರನು ಧ್ವಂಸಮಾಡುವ ಇಚ್ಛೆಯನ್ನು ಧರಿಸಿದನು ಅದರಿಂದ ಅಕಬರನ ಚಿತೋ ಡದ ಆಕ್ರಮಣವು ಅವನ ಚರಿತ್ರೆಯಲ್ಲಿ ಕಲಂಕಸ್ವರೂಪವಾಗಿದೆ. ರಾಖೀಬಂಧ ನದಿಂದ ಉದಯಸಿಂಹನು ಆಪ್ತನಾಗಿದ್ದನು. ಆದರೆ ಕೀರ್ತಿಯ ಅಭಿಲಾಷಿಯಾದ ಅಕಬರನು ಈ ಸಂಬಂಧವನ್ನು ಮರೆತುಬಿಟ್ಟನು. ಅಕಬರನು ಬಾಲ್ಯಕಾಲದ ಲ್ಲಿಯೇ ವೀರನೂ, ಯುದ್ಧಕುಶಲನೂ ಆಗಿದ್ದನು. ಈಗ ಅವನ ತಾರುಣ್ಯದ ಪ್ರಾರಂಭದ ಸಮಯವು. ಈ ವೇಳೆಯಲ್ಲಿ ತಮ್ಮಲ್ಲಿರುವ ಸಾಮರ್ಥ್ಯವನ್ನು ಪ್ರಕ ಟಮಾಡಿ, ಜಗತ್ತನ್ನು ಮುಗ್ಧಮಾಡುವ ಇಚ್ಛೆಯು ಸಾಹಸಿಗಳಲ್ಲಿ ಸ್ವಾಭಾವಿಕ ಹುಟ್ಟುವದು. ಅದರಂತೆ ಅಕಬರನೂ ಮಹತ್ವಾಕಾಂಕ್ಷಿಯಾದನು. ಅವನು ರಜ ಪೂತರ ವೀರತ್ವದ ಅನೇಕ ಸಂಗತಿಗಳಿಂದ ಚಿತೋಡದುರ್ಗವನ್ನು ಜಯಿಸುವದು ಅಸಾಧ್ಯವೆಂದು ಕೇಳಿದ್ದನು, ಆದರೆ ಮೈತರ್ದುರ್ಗವನ್ನು ವಶಮಾಡಿಕೊಂಡ ತರುವಾಯ ಚಿತೋಡವನ್ನು ಜಯಿಸಬಹುದೆಂದು ಭಾವಿಸಿದನು. ಅಕಬರನು ಚಿತೋಡವನ್ನಾಕ್ರಮಿಸುವದಕ್ಕೆ, ಅವನ ಕೀರ್ತಿಯ ಅಭಿಲಾಷೆಯು ಮೊದಲ ನೆಯ ಕಾರಣವಾಯಿತೆಂದು ಹೇಳಬಹುದು.

ಮಾರವಾಡ, ಗ್ವಾಲ್ಹೇರ, ಮಾಳವ, ಜೋನಪುರಗಳು ಅಕಬರನ ವಶವಾದವು. ಹಿಂದುಸ್ತಾನದೊಳಗಿನ ಅರಸರೆಲ್ಲರು ಒಬ್ಬರಹಿಂದೊಬ್ಬರು ಅಧೀನಕ್ಕೊಳಪಡತೊಡಗಿದರು. ಆದರೆ ಚಿತೋಡದ ಮಹಾರಾಣಾನು ಮಾತ್ರ ಇದಕ್ಕೊಡಂಬಡಲಿಲ್ಲ. ರಾಣಾನ ಗರ್ವವನ್ನು ಖಂಡಿಸುವದಕ್ಕಾಗಿ ಅಕಬರನು ಚಿತೋಡವನ್ನು ಜಯಿಸುವ ಪ್ರತಿಜ್ಞೆಮಾಡಿದನು. ಇದೇ ಚಿತೋಡನಾಶದ ದ್ವಿತೀಯ ಕಾರಣವಾಯಿತೆಂದು ಹೇಳಬಹುದು.

ಅಕಬರನು ಮಾಳವವನ್ನು ಜಯಿಸುವದಕ್ಕೆ ಸೇನಾಪತಿಯಾದ ಆದಮಖಾನನ್ನು ಕಳಿಸಿದ್ದನು. ಆದಮಖಾನನು ಅಕಬರನ ಧಾತ್ರಿಯ ಪುತ್ರನು. ಅದರಿಂದ ರಾಜದರಬಾರದಲ್ಲಿ ಇವನ ಪ್ರತಿಷ್ಠೆಯು ಬಹಳವಾಗಿದ್ದಿತು ಇವನು ಮಾಳವದ ಅರಸನನ್ನು ಗೆದ್ದು, ರಾಜಧಾನಿಯ ಮೇಲೂ ಅರಸನ ಪರಿವಾರದ ನಾರಿಯರ ಮೇಲೂ ಅನೇಕ ಅತ್ಯಾಚಾರಗಳನ್ನು ಮಾಡಿದನು. (೧೫೬೧). ಮಾಳವದ ಅರಸನಾದ ವಾಜಬಹದ್ದುರನು ಮೇಲಿಂದ ಮೇಲೆ ಪರಾಜಿತನಾಗಿ ರಾಣಾ ಉದಯಸಿಂಹನನ್ನು ಮರೆಹೊಕ್ಕನು. ಶರಣಾಗತರಿಗೆ ಆಶ್ರಯವನ್ನೀಯುವದು ರಜಪೂತರ ಶ್ರೇಷ್ಠ ಧರ್ಮವು. ಕಾರಣ ಚಿತೋಡದ ಅವಸ್ಥೆಯು ಮುಂದೆ ಹಾಗೇ ಆಗಲಿ, ಇಂದು ಮಾಳವದ ಅರಸನು ನಿರಾಪದನಾದನು. ಅಕಬರನು ಗ್ವಾಲ್ಹೇರವನ್ನು ಜಯಿಸಿದ ತರುವಾಯು ಅಲ್ಲಿಯ ಅರಸನೂ ರಾಣಾನ ಮೊರೆಹೊಕ್ಕನು. ಈ ಸುದ್ದಿಯನ್ನು ಕೇಳಿ ಅಕಬರನು ತಪ್ತನಾದನು. ಇವನು ಚಿತೋಡದ ಮೇಲೆ ದಂಡೆತ್ತಿ ಬರುವದಕ್ಕೆ ಇದು ಮೂರನೇ ಕಾರಣವು.

ಅಕಬರನು ಅನೇಕ ಕಾರಣಗಳಿಂದ ಮಹಾರಾಣಾನ ಮೇಲೆ ಕ್ರುದ್ಧನಾಗಿದ್ದರೂ, ಚಿತೋಡದ ಮೇಲೆ ದಂಡೆತ್ತಿಹೋಗುವ ಯೋಗವು ಆಗ ಒದಗಿದ್ದಿಲ್ಲ. ವಿಜಯಿಗಳಾದ ಮೊಗಲ ಸೈನಿಕರು ಮಾಳವದ ಅನೇಕ ಸ್ಥಳಗಳನ್ನು ಕೈವಶಮಾಡಿಕೊಂಡಿದ್ದರೂ, ಅದರ ಮೇರೆಯಲ್ಲಿದ್ದ ಬಂಡಾಯಗಳನ್ನು ಮುರಿಯುವದಕ್ಕೆ ಅವರು ಸಮರ್ಥರಾಗಲಿಲ್ಲ. ಅದರಿಂದ ಅಕಬರನು ತಾನೇ ಆ ಕಡೆಗೆ ಹೊರಟನು (೧೫೬೨). ಅವನು ಮಳೆಗಾಲದ ಕಡೆಯ ಭಾಗದಲ್ಲಿ ಟೋಲಪುರಕ್ಕೆ ಬಂದನು. ಅಬಲ್‌ಫಜಲನು ಈ ಕಾಲದಲ್ಲಾದ ಒಂದು ಸಂಗತಿಯನ್ನು ಉಲ್ಲೇಖಿಸಿದ್ದಾನೆ. ಒಂದುದಿನ ಉದಯಸಿಂಹನ ಮಗನಾದ ಶಕ್ತಸಿಂಹನು, ಅಣ್ಣನ ಮೇಲೆ ಸಿಟ್ಟಾಗಿ, ಮೊಗಲರ ಆಶ್ರಯವನ್ನು ಹೊಂದುವದರ ಸಲುವಾಗಿ ಅಕಬರನ ದರ್ಶನ

ತಕ್ಕೊಂಡನು. ಶಕ್ತಸಿಂಹನ ಬರುವಿಕೆಯಿಂದ ಅಕಬರನಿಗೆ ಆನಂದವಾಯಿತು. ಅದರಿಂದ ಅವನು, ಉಳಿದ ಅರಸರಂತೆ ರಾಣಾನು ನನ್ನ ಅಧೀನನಾಗದ್ದರಿಂದ, ಚಿತೋಡವನ್ನಾಕ್ರಮಿಸಿ, ಅವನಿಗೆ ಯೋಗ್ಯ ಶಿಕ್ಷೆಯನ್ನು ವಿಧಿಸುತ್ತೇನೆಂದು ಹೇಳಿದನು. ಶಕ್ತನು ಸ್ವಜಾತಿದ್ರೋಹಿಯಾಗಿ ಬಂದುದರಿಂದ ಈ ಮಾತನ್ನು ಕೇಳಿ ಅವನು ಸಂತೋಷಿಸಬಹುದೆಂದು ಭಾವಿಸಿ ಅಕಬರನು ಈ ವಿಷಯವಾಗಿ ಇನ್ನೂ ಅನೇಕ ಸಂಗತಿಗಳನ್ನು ಸಂಕೋಚವಿಲ್ಲದೆ ಶಕ್ತನಿಗೆ ಹೇಳಿದನು. ಈ ಮಾತುಗಳನ್ನು ಕೇಳಿ ಶಕ್ತನು ಬಹಳ ಗೊಂದಲದಲ್ಲಿ ವಿಷಮಸಮಸ್ಯೆಯಲ್ಲಿ ಬಿದ್ದನು. ಯಾಕಂದರೆ ತಾನು ಮೊಗಲರೊಡನೆ ಇರುವದನ್ನು ರಜಪೂತರು ನೋಡಿದರೆ, ಶಕ್ತನು ತಾನೇ ಅಕಬರನನ್ನು ಚಿತೋಡದ ನಾಶಕ್ಕಾಗಿ ಕರೆದು ತಂದನೆಂದೆನ್ನುವರು, ಅದರಿಂದ ತನಗೆ ಚಿರಕಲಂಕವುಂಟಾಗುವದು; ಈ ಸಮಯದಲ್ಲಿ ತಾನಿಲ್ಲಿರುವದು ಯೋಗ್ಯವಲ್ಲವೆಂದು ಭಾವಿಸಿ ಮೊಗಲರ ಶಿಬಿರದಿಂದ ಚಿತೋಡಕ್ಕೆ ಓಡಿಹೋಗಿ ನಡೆದ ಯಾವತ್ತು ಸಂಗತಿಯನ್ನು ತಂದೆಗೆ ತಿಳಿಸಿದನು.—

ಇನ್ನು ಚಿತೋಡದ ಮೇಲೆ ದಂಡೆತ್ತಿ ಹೋಗುವದಕ್ಕೆ ತಡಮಾಡಿದರೆ ತನ್ನ ಕಾರ್ಯಕ್ಕೆ ವಿಘ್ನವುಂಟಾಗುವದೆಂದು ಎಣಿಸಿ ಅಕಬರನು ಮಾಳವದ ಕಡೆಗೆ ಹೋಗುವದನ್ನು ಬಿಟ್ಟು ಚಿತೋಡದ ಕಡೆಗೆ ಹೊರಟನು. ಇದರಿಂದ ಶಕ್ತನ ಆಗಮನವು, ಅಕಬರನು ದಂಡೆತ್ತಿ ಬರುವದಕ್ಕೆ ಬೇರೊಂದು ಕಾರಣವಾಯಿತೆಂದು ಹೇಳಬಹುದು.

ಬಾದಶಹನು ಚಂಬಳನದಿಯ ಎಡದಂಡೆಯ ಮಾರ್ಗವಾಗಿ ಹೊರಟು, ರತ್ನಾಂಬರ ಕೋಟೆಯನ್ನು ಮುತ್ತಿದನು. ಕೋಟೆಯೊಳಗಿನ ಜನರು ಮೊದಲೇ

– ಶಕ್ತಸಿಂಹನು ಸ್ವದೇಶದ್ರೋಹಿಯಾಗಿ ಮೊಗಲರನ್ನು ಕೂಡಿದ ಸಂಗತಿಯು ರಾಜಸ್ಥಾನದ ಆಖ್ಯಾಯಿಕೆಯಲ್ಲದೆ, ಆದರೆ ಈ ಸಮಯದಲ್ಲಿ ಅವನು ಮೊಗಲರ ಶಿಬಿರದಿಂದ ಓಡಿಹೋದ ಸಂಗತಿಯು 'ಅಕಬರನಾಮಾ' ಗ್ರಂಥದ ಹೊರತು ಬೇರೆ ಕಡೆಯಲ್ಲಿಲ್ಲ ಸಾಗರಸಿಂಹನೆಂಬ ಪ್ರತಾಪಸಿಂಹನ ಬೇರೊಬ್ಬ ತಮ್ಮನು ಹಳದಿಘಟ್ಟದ ಯುದ್ಧದ ಪೂರ್ವದಲ್ಲಿ ಮೊಗಲರ ಆಶ್ರಯ ಹೊಂದಿದ್ದನ್ನು ನೋಡಬಹುದಾಗಿದೆ ಚಿತೋಡದ ನಾಶದ ತರುವಾಯ ಸಾಗರನು ಶತ್ರುಗಳನ್ನಾಶ್ರಯಿಸಿ, ಕ್ರಮವಾಗಿ ಉನ್ನತಿಯನ್ನು ಹೊಂದುತ್ತ, ಜಹಾಂಗೀರನ ಆಳಿಕೆಯ ೧೧ನೇ ವರ್ಷ ೩೦೦೦ ದಂಡಾಳುಗಳ ಮೇಲಿನ ಸರದಾರನಾದನು. Blockmaun, Ain-i-Akbari, P. 519.

ಬಿಟ್ಟು ಹೋದದ್ದರಿಂದ, ಕೋಟೆಯು ಅನಾಯಾಸವಾಗಿ ಮೊಗಲರ ವಶವಾಯಿತು. ಅಕಬರನು ಇದರ ರಕ್ಷಣೆಯ ವ್ಯವಸ್ಥೆಯನ್ನು ಮಾಡಿ, ಕೋಟಾನಗರಕ್ಕೆ ಬಂದನು; ಇದನ್ನು ಕೈವಶಮಾಡಿಕೊಂಡು +ಗಾಗ್ರೂನ ಕೋಟೆಯ ಸಮೀಪದಲ್ಲಿ ಶಿಬಿರಬಿಟ್ಟನು. ಈ ಸ್ಥಳದಿಂದ ಚಿತೋಡವು ಪಶ್ಚಿಮಕ್ಕೆ ಸುಮಾರು ನೂರು ಮೈಲಿನ ಮೇಲೆ ಇತ್ತು.

ಅಕಬರನು ಈ ಸಮಯದಲ್ಲಿ ಮಾಳವದ ಕಡೆಗೆ ಸೈನ್ಯ ಕಳಿಸುವ ವ್ಯವಸ್ಥೆಯನ್ನು ಮಾಡುವದಕ್ಕೆ ಕೆಲವು ದಿವಸಗಳನ್ನು ಕಳೆದನು. ಈ ಅವಧಿಯಲ್ಲಿ ಅವನು ಮಂಡಲಗಡವನ್ನಾಕ್ರಮಿಸುವದಕ್ಕೆ ಅಸಫಖಾನನನ್ನೂ, ವಜೀರಖಾನನನ್ನೂ ಸಸೈನ್ಯವಾಗಿ ಕಳಿಸಿದನು. ಮಂಡಲಗಡವು ಚಿತೋಡದ ಉತ್ತರಕ್ಕೆ ೩೦ ಮೈಲುಗಳ ಮೇಲಿರುವದು. ಇದು ಮಹಾರಾಣಾನ ಸ್ವಾಧೀನದಲ್ಲಿದ್ದು, ಇದರ ರಕ್ಷಣೆಯ ಭಾರವನ್ನು ವಲ್ಲಭೀ ನಾಳೊಂಕಿ ಎಂಬವನು ವಹಿಸಿದ್ದನು. ಇವನು ಯುದ್ಧದಲ್ಲಿ ಸೋತದ್ದರಿಂದ ಕೋಟೆಯು ಮೊಗಲರ ವಶವಾಯಿತು. ಇತ್ತ ಕಡೆಯಲ್ಲಿ ಬಾದಶಹನು ಚಿತೋಡದ ಸಮೀಪಕ್ಕೆ ಬಂದಿಳಿದನು (೧೫೬೭). ಅಕಬರನು ತಾನು ಶಿಬಿರಬಿಟ್ಟ ಸ್ಥಳದಲ್ಲಿ ಒಂದು ಸಂಗಮರವರಿ ಕಲ್ಲಿನ ಸ್ತಂಭವನ್ನು ಕಟ್ಟಿಸಿದನು. ಇದಕ್ಕೆ 'ಅಕಬರಕಾ-ದಿವಾ' ಅಥವಾ ಅಕಬರನ ದೀಪಸ್ತಂಭವೆನ್ನುವರು. ಈ ಕಂಬದ ಮೇಲೊಂದು ದೊಡ್ಡ ದೀಪವಿದ್ದಿತು. ಅದರಿಂದ ದೂರದಿಂದ ಶತ್ರು-ಮಿತ್ರರು ಬಾದಶಹನ ಶಿಬಿರವನ್ನು ನೋಡಬಹುದಾಗಿದ್ದಿತು.

ಉದಯಸಿಂಹನು ಶಕ್ತನಿಂದ ಅಕಬರನು ದಂಡೆತ್ತಿಬರುವ ಸುದ್ದಿಯನ್ನು ಮೊದಲು ಕೇಳಿದನು. ತರುವಾಯ ಒಂದೂವರೆ ತಿಂಗಳ ಮೇಲೆ ಬಾದಶಹನು ಸಸೈನ್ಯನಾಗಿ ಚಿತೋಡಕ್ಕೆ ಬಂದನು. ಈ ಅವಧಿಯಲ್ಲಿ ಚಿತೋಡದ ರಕ್ಷಣೆಗಾಗಿ ಬೇಕಾದ ಸಿದ್ಧತೆಯು ಮಾಡಲ್ಪಟ್ಟಿತು. ಚಿತೋಡವು ದುರ್ಭೇದ್ಯವೂ, ದುರಾರೋಹವೂ ಇದ್ದುದರಿಂದ ಯಾವ ಶತ್ರುವೂ ಇದನ್ನು ಜಯಿಸಲಾರನೆಂದು ರಜಪೂತರ ಗ್ರಹಿಕೆಯಿತ್ತು. ರಾಣಾ ಸಂಗನ ಕಾಲದಲ್ಲಿ ಚಿತೋಡದ ಕೋಟೆಯ ಗೋಡೆಗಳ ಮತ್ತು ಬಾಗಿಲುಗಳ ಉತ್ತಮವಾದ ಸುಧಾರಣೆ (ದುರಸ್ತಿ)ಯು

+ ಗಾಗ್ರೂನವು ಕೋಟಾ ಸಂಸ್ಥಾನದಲ್ಲಿರುವ ಒಂದು ವಿಖ್ಯಾತ ಕೋಟೆಯು. ಇದು ಆಹು ಮತ್ತು ಕಾಲೀನದಿಯ ಸಂಗಮ ಸ್ಥಳದಲ್ಲಿದೆ Rajputaua Gazetteer Vol II PP. 208—4

ಆಗಿತ್ತು. ಅದರಿಂದ ರಜಪೂತರು ಈ ವಿಷಯವಾಗಿ ಚಿಂತೆಯನ್ನು ವಹಿಸುವ ಕಾರಣವಿದ್ದಿಲ್ಲ. ಮೊಗಲರು ಒಂದುವೇಳೆ ಕೋಟೆಯನ್ನು ಬಹು ದಿವಸ ಮುತ್ತಿದರೆ ಅನ್ನದ ಕೊರತೆಯು ಬೀಳುವಂತಿತ್ತು. ರಜಪೂತರು ವಿಶೇಷ ಪ್ರಯತ್ನ ಮಾಡಿ ಕೆಲವು ವರ್ಷಗಳ ವರೆಗೆ ಸಾಲುವಷ್ಟು ಆಹಾರದ ಪದಾರ್ಥಗಳನ್ನು ಸಂಗ್ರಹಿಸಿ ಕೋಟೆಯಲ್ಲಿ ತಂದಿಟ್ಟರು. ಚಿತ್ತೋಡದಲ್ಲಿ ಜಲಾಶಯಗಳು ಸಾಕಷ್ಟು ಇದ್ದುದರಿಂದ ನೀರಿನ ಕೊರತೆಯು ಬೀಳುವಂತಿರಲಿಲ್ಲ. ಉದಯಸಿಂಹನು ಮೊದಲು ಹ್ಯಾಗೇ ಇರಲಿ, ವಿಪತ್ತು ಸಮೀಪದಲ್ಲಿ ಬಂದುದನ್ನು ನೋಡಿ ಕಾರ್ಯತತ್ಪರನಾದನು. ಸಾಮಂತ ಸರದಾರರು ವೇಳೆಯ ಮಹತ್ವವನ್ನರಿತು ಯಾವತ್ತೂ ಕಾರ್ಯಗಳನ್ನು ಉತ್ಸಾಹದಿಂದ ಮಾಡಿದರು. ಶತ್ರುಗಳಿಗೆ ಆಹಾರದ ಪದಾರ್ಥಗಳು ದೊರೆಯಬಾರದೆಂದು, ದುರ್ಗದ ಕೆಳಗಿರುವ ನಾಲ್ಕೂ ಕಡೆಯ ಭೂಮಿಯನ್ನು ಜನರಿಲ್ಲದಂತೆಯೂ, ಬೆಳೆಗಳಿಲ್ಲದಂತೆಯೂ, ಹುಲ್ಲು ಸಹ ಇರದಂತೆಯೂ ಮಾಡಿದರು. * ಇಂತಹ ಪ್ರದೇಶದಲ್ಲಿ ಅಕಬರನು ತನ್ನ ಶಿಬಿರವನ್ನು ಬಿಟ್ಟನು.

ಉದಯಸಿಂಹನು ವಿಲಾಸಿಯಾಗಿ, ತನ್ನ ವೀರತ್ವಗೌರವಗಳನ್ನು ಮರೆತು ಬಿಟ್ಟಿದ್ದನು; ಆದರೆ ಮೇವಾಡವು ವೀರರಿಲ್ಲದಂತಾಗಿರಲಿಲ್ಲ. ಮಹಾರಾಣಾನು ಮನುಷ್ಯತ್ವವನ್ನು ಕಳೆದುಕೊಂಡಿದ್ದನು, ಆದರೆ ಸಾಮಂತರಾದ ಸರದಾರರು ಮನುಷ್ಯತ್ವವನ್ನು ಕಳೆದುಕೊಂಡಿರಲಿಲ್ಲ. ರಜಪೂತರು ಉದಯಸಿಂಹನ ವಿಷಯವಾಗಿ ಅನಾದರರಾಗಿರಬಹುದು; ಆದರೆ ಅವರು ಚಿತ್ತೋಡದ ವಿಷಯದಲ್ಲೆಂದಿಗೂ ಆದರವಿಲ್ಲದವರಾಗುವ ಸಂಭವವಿದ್ದಿಲ್ಲ. ಮೊಗಲ-ಸೈನ್ಯವು ಅನೇಕ ಮಾರ್ಗಗಳಿಂದ ಚಿತ್ತೋಡದ ಕಡೆಗೆ ಸಾಗಿಬರುತ್ತಲಿತ್ತು. ಚಾರಣರ ವೀಣೆಯ ಝಂಕಾರದಲ್ಲಿಯ ವೀರರಸ ಪದ್ಯಗಳು ರಜಪೂತರಲ್ಲಿ ಉತ್ಸಾಹವನ್ನುಂಟುಮಾಡುತ್ತಲಿದ್ದವು. ಅಕಬರನ ಆಕ್ರಮಣದ ಸುದ್ದಿಯನ್ನು ಕೇಳಿದ ಕೂಡಲೇ ಸಾಮಂತ ಸರದಾರರು ಚಿತ್ತೋಡದ ರಕ್ಷಣೆಯ ಸಲುವಾಗಿ ಗುಂಪು ಗುಂಪಾಗಿ ಬರಹತ್ತಿದರು. ರಾಣಾನ ಬಲಗೈಯಂತಿದ್ದ ಸಾಲುಂಬ್ರಿ ಕೋಟೆಯ ಅಧಿಪತಿಯಾದ ಸಹಿದಾಸನು, ತನ್ನ ಅಸಂಖ್ಯ ಚಂದಾಯತ್ ಸೇನೆಯೊಡನೆ, ಸೂರ್ಯತೋರಣದ ರಕ್ಷಣೆಗಾಗಿ ಬಂದನು; ಕೈಲಿಬಾರದಿಂದ 'ಜಗಾಯತ್' ಕುಲತಿಲಕನಾದ ಪುತ್ತನು ಬಂದನು;

---

* Akbarnamah, Vol. II P. 464 (Major Price's translation.)

ಮತ್ತು ಸದ್ರಿಯಿಂದ ಝೂಲಪತಿಯೂ, ಬಿಜಲಿಯ ಪ್ರಮಾರ ಸರದಾರನೂ, ಝೂಲೋರದಿಂದ ಶೋಣಿಗುರು ಸರದಾರನೂ, ಬೇದಲಾ-ಕೋಟಾರಿಗಳಿಂದ ಚಹ್ವಾಣ ಸರದಾರರೂ, ಸಂಗಾಯತ್-ಕಚ್ಛವಾಹ ಮೊದಲಾದ ವಂಶಗಳ ಅನೇಕ ಸರದಾರರೂ ಬಂದರು.× ಗ್ವಾಲ್ಹೇರದ ತೋಮರವಂಶದ ರಾಮಶಹನು ಚಿತೋಡದಲ್ಲಿ ಆಶ್ರಯಹೊಂದಿದನೆಂದು ಹಿಂದೆ ಹೇಳಿದ್ದೇವೆ. ಅವನು ಈ ಯುದ್ಧದಲ್ಲಿ ತನ್ನ ವೀರವಿಕ್ರಮವನ್ನು ತೋರ್ಪಡಿಸಿದನು.

ಅಕಬರನು ಚಿತೋಡವನ್ನು ಮುತ್ತಿದನು. ಇವನು ಕುದುರೆಯನ್ನು ಹತ್ತಿ, ಕೋಟೆಯನ್ನು ಸುತ್ತಿ, ಸ್ವತಃ ಎಲ್ಲ ಸ್ಥಳಗಳನ್ನು ಸೂಕ್ಷ್ಮರೀತಿಯಿಂದ ಅವಲೋಕಿಸಿದನು. ಅಳತೆಯನ್ನು ಮಾಡತಕ್ಕವರು ಕೋಟೆಯ ಬೇರೆ ಬೇರೆ ಭಾಗಗಳ ಅಳತೆಯನ್ನು ತಕ್ಕೊಂಡರು. ಎಲ್ಲಿ ಎಷ್ಟು ಸೈನ್ಯವನ್ನಿಡಬೇಕು, ಎಲ್ಲಿ ಯಾವ ರೀತಿಯಿಂದ ತೋಫುಗಳನ್ನು ಹಚ್ಚಬೇಕು; ಈ ಮೊದಲಾದ ಸಂಗತಿಗಳನ್ನು ಅಕಬರನು ಸ್ವತಃ ತೋರಿಸಿಕೊಟ್ಟನು. ಇದರಂತೆ ಯಾವತ್ತೂ ವ್ಯವಸ್ಥೆಯನ್ನು ಮಾಡುವದಕ್ಕೆ ಒಂದು ತಿಂಗಳು ಹತ್ತಿತು. ಅಕಬರನು ಬಂದ ಸುದ್ದಿಯನ್ನು ಕೇಳಿದ ಕೂಡಲೇ ಕೋಟೆಯ ಮೂರೂ ದಿಕ್ಕಿನ ಬಾಗಿಲಗಳು ಮುಚ್ಚಲ್ಪಟ್ಟವು; ಮತ್ತು ಮೊದಲನೆಯ ದಿವಸದಿಂದ ಕೋಟೆಯೊಳಗಿನ ಜನರಿಗೂ, ಮುತ್ತಿಗೆ ಹಾಕಿದ ಜನರಿಗೂ ಸಣ್ಣ ಸಣ್ಣ ಯುದ್ಧಗಳು ನಡೆಯಹತ್ತಿದ್ದವು. ದುರ್ಗವಾಸಿಗಳು ಅಕಬ

---

× ಸಾಲುಂಬ್ರದುರ್ಗವು ಚಿತೋಡದ ನೈರುತ್ಯಕ್ಕೆ ೬೦ ಮೈಲುಗಳ ಮೇಲಿರುವದು ಚಿತೋಡದ ವಾಯುವ್ಯದಲ್ಲಿ ೭೦ ಮೈಲುಗಳ ಮೇಲಿರುವ ಮೈರಬಾರ ಸೀಮೆಯ ಹತ್ತರದಲ್ಲಿಯೇ ಬೇದನೂರ ಪಟ್ಟಣವೂ, ಕಮಲಮೀರ ದುರ್ಗದ ಕೆಳಭಾಗದಲ್ಲಿ ಕೈಲಬಾರಾ ಪಟ್ಟಣವೂ ಅವೆ. ಚಿತೋಡದಿಂದ ೩೫ ಮೈಲು ದಕ್ಷಿಣಕ್ಕಿರುವ ದೊಡ್ಡ ಅದ್ರಿಯಲ್ಲಿ ಈಗಲೂ ಒಂದು ಪಾರ್ವತ್ಯ-ದುರ್ಗದ ಭಗ್ನಾವಶೇಷವಿದೆ ಚಿತೋಡದಿಂದ ೬೦ ಮೈಲು ಉತ್ತರದಲ್ಲಿಯೂ, ಉದಯಪುರದಿಂದ ೧೮೧ ಮೈಲು ವಾಯುವ್ಯದಲ್ಲಿಯೂ ಬಿಜಲೀ ಪಟ್ಟಣವಿತ್ತು ಮಾರವಾಡದ ದಕ್ಷಿಣಭಾಗದಲ್ಲಿ ಜೋಧಪುರದಿಂದ ಸುಮಾರು ೬೦ ಮೈಲು ದಕ್ಷಿಣದಲ್ಲಿ ಝಾಲೋರಪಟ್ಟಣವಿದ್ದು, ಆಗ ಅಲ್ಲಿ ಒಂದು ಸುಂದರವಾದ ದುರ್ಗವಿತ್ತು ದರಬಾರದಲ್ಲಿ ಮಹಾರಾಣಾನ ಬಲಪಾರ್ಶ್ವದಲ್ಲಿ ಆಸನಹೊಂದುತ್ತಿರುವಂಥ ಮೇವಾಡದ ಹದಿನಾರು ಮಂದಿ ಶ್ರೇಷ್ಠಸರದಾರರಲ್ಲಿ, ಸದ್ರಿ, ಬೇದಲಾ, ಕೋಟಾರಿಯಾ, ಸಾಲುಂಬ್ರ, ಬಿಜಲಿ ಮತ್ತು ಬೇದನೂರಗಳ ಸರದಾರರ ಸಮಾವೇಶವಾಗಿದ್ದಿತು ಬೇದಲಾ ಪಟ್ಟಣವು ಉದಯಪುರದಿಂದ ೩ ಮೈಲು ಉತ್ತರದಲ್ಲಿ ಮತ್ತು ಕೋಟಾರಿಯಾವು ಉದಯಪುರದಿಂದ ೨೫ ಮೈಲು ದಕ್ಷಿಣದಲ್ಲಿ ಇದ್ದವು.

ರನ ತೋಫುಗಳನ್ನು ನೋಡಿ, ಕೋಟೆಯ ಅವಶ್ಯವಾದ ಸುಧಾರಣೆಗಳನ್ನು ಮಾಡುತ್ತಿದ್ದರು. ಹೀಗೆ ಸಣ್ಣಸಣ್ಣ ಯುದ್ಧಗಳು ನಡೆದಿದ್ದರೂ, ಭಯಂಕರವಾದ ಪರಿಣಾಮವನ್ನು ಗೊತ್ತುಮಾಡುವಂಥ ಯುದ್ಧಕ್ಕಾಗಿ ಯಾರೂ ಸಿದ್ಧರಾಗಿರಲಿಲ್ಲ.

ಟಾಡ್‌ಸಾಹೇಬರು ರಜಪೂತಸ್ತಾನದಲ್ಲಿ ನಡೆದುಬಂದ ಕಥೆಗಳ ಆಧಾರದಿಂದ ಅಕಬರನು ಚಿತೋಡದ ಮೇಲೆ ಎರಡುಸಾರೆ ದಂಡೆತ್ತಿಬಂದನೆಂದು ಹೇಳುತ್ತಿರುವರು. ಇದರಲ್ಲಿ ಅಕಬರನ ಮೊದಲನೆಯ ಪ್ರಯತ್ನವು ವ್ಯರ್ಥವಾಯಿತು. ಈ ವೇಳೆಯಲ್ಲಿ ರಾಣಾನ ಉಪಪತ್ನಿಯು ತಾನೇ ಯುದ್ಧವನ್ನು ಸಾಗಿಸಿ, ವೀರತ್ವದ ಕಡೆಯ ಮೆಟ್ಟನ್ನು ತೋರಿಸಿದಳು, ಕಾರಣ ಹೇಡಿಯಾದ ರಾಣಾನು ವಿಶೇಷ ಗೌರವವನ್ನು ಪಡೆದು, ಅವಳನ್ನು ಬಹುಪ್ರಕಾರವಾಗಿ ಹೊಗಳಿದನು. ಇದರಿಂದ ಸಾಮಂತ ಸರದಾರರು ಸಿಟ್ಟಾಗಿ, ಅವಳನ್ನು ಕೊಂದುಬಿಟ್ಟರು. ಉದಯಸಿಂಹನು ನಿರುಪಾಯನಾಗಿ ಚಿತೋಡವನ್ನು ಬಿಟ್ಟು ಹೋಗಿ, ಪರ್ವತಪ್ರದೇಶವನ್ನಾಶ್ರಯಿಸಿದನು. ಈ ಸಮಯದಲ್ಲಿ ಅಕಬರನು ಎರಡನೆಯ ಸಾರ ಕೋಟೆಯನ್ನು ಮುತ್ತಿ ಜಯಶಾಲಿಯಾದನು. ಆದರೆ ಅಬಲ್‌ಫಜಲನಾಗಲಿ, ನಿಜಾಮುದ್ದೀನನಾಗಲಿ, ಫೆರಿಸ್ತಾ ಮೊದಲಾದವರಾಗಲಿ ಅಕಬರನು ಎರಡುಸಾರೆ ಚಿತೋಡವನ್ನು ಮುತ್ತಿದನೆಂಬ ಬಗ್ಗೆ ಉಲ್ಲೇಖಮಾಡಿಲ್ಲ. ನಾವು ಅಕಬರನಾಮಾ ಮೊದಲಾದ ಗ್ರಂಥಗಳನ್ನವಲಂಬಿಸಿದ್ದೇವೆ.

ಅಕಬರನಾಮಾ ಮೊದಲಾದ ಗ್ರಂಥಗಳಲ್ಲಿ, ಅಕಬರನು ಚಿತೋಡವನ್ನು ಮುಟ್ಟುವ ಮೊದಲೇ ಉದಯಸಿಂಹನು ಚಿತೋಡವನ್ನು ಬಿಟ್ಟು ಹೋಗಿದ್ದನೆಂದು ಹೇಳಿದೆ.* ಈ ವಿಷಯವಾಗಿ ಎರಡು ರೀತಿಯಿಂದ ತರ್ಕಿಸಬಹುದು —ಚಿತೋಡಕ್ಕೆ ಬರುವ ಮೊದಲು, ಅಕಬರನು ಮಾಳವದ ಕಡೆಗೆ ಹೊರಟಿದ್ದನೆಂದೂ, ಮಾರ್ಗದಲ್ಲಿ ಮಂಡಲಗಡವನ್ನು ಮುತ್ತುವದಕ್ಕೆ ಆಸಫಖಾನ-ವಜೀರಖಾನರನ್ನು ಕಳಿಸಿದ್ದನೆಂದೂ ನಾವು ಮೇಲೆ ಹೇಳಿದ್ದೇವೆ. ಅವರೇ ಮಂಡಲಗಡವನ್ನು ವಶಮಾಡಿಕೊಂಡು ಚಿತೋಡಕ್ಕೆ ಬಂದರು. ಇವರೊಡನೆ ಚಿತೋಡದ ರಜಪೂತರ ಯುದ್ಧವಾಯಿತು. ಈ ಯುದ್ಧದಲ್ಲಿ ಉದಯಸಿಂಹನ ಉಪಪತ್ನಿಯು ತನ್ನ ಅಸಾಮಾನ್ಯ ವೀರತ್ವದಿಂದ ಯಾವತ್ತರಲ್ಲಿಯೂ ಆಶ್ಚರ್ಯವನ್ನುಂಟುಮಾಡಿದಳು; ಆದರೆ

* Akbarnamah, Beveaidge, Vol. II, P. 464. Tabrkat-i-Akbari, Elliot Vol. V. P. 325.-Badaoni, Lowe, Vol. II. P. 105.

ರಜಪೂತ ಸರದಾರರು ಅವಳನ್ನು ಕೊಂದರು. ಉದಯಸಿಂಹನು ಅಕಬರನು ದಂಡೆತ್ತಿ ಬರುವನೆಂಬ ಸುದ್ದಿಯನ್ನು ಕೇಳಿ ಓಡಿಹೋದನು.

ಅಕಬರನು ಚಿತೋಡವನ್ನು ಪ್ರವೇಶಿಸುವ ಮೊದಲು, ಉದಯಸಿಂಹನು ದುರ್ಗವನ್ನು ಬಿಟ್ಟು ಹೋಗಿದ್ದಿಲ್ಲವೆಂದು ಹೇಳಬಹುದು; ಯಾಕಂದರೆ ಪ್ರಾರಂಭದಲ್ಲಿ ಮೊಗಲರೊಡನೆ ಒಂದು ತಿಂಗಳವರೆಗೆ ಆದ ಸಣ್ಣ ಸಣ್ಣ ಯುದ್ಧಗಳಲ್ಲಿ, ಉದಯಸಿಂಹನು ಚಿತೋಡದಲ್ಲಿದ್ದನು, ಮತ್ತು ಶತ್ರುಗಳ ಪ್ರತಿಬಂಧಕ್ಕಾಗಿ ಯತ್ನ ನಡೆಸಿದ್ದನು. ಈ ಸಮಯದಲ್ಲಿ ಇವನ ರಾಣಿಯು ವೀರತ್ವವನ್ನು ತೋರಿಸಿದಳು. ತರುವಾಯ ಮೊಗಲರು ಕೋಟೆಯ ನಾಲ್ಕೂ ದಿಕ್ಕುಗಳಲ್ಲಿ ತೋಫುಗಳನ್ನು ಹಚ್ಚಿ, ಚಿತೋಡ-ಧ್ವಂಸದ ವಿಶೇಷ ವ್ಯವಸ್ಥೆಯನ್ನು ಮಾಡಿರುವದನ್ನು ನೋಡಿ, ಸಾಮಂತರಾಜರ ಆಲೋಚನೆಯಿಂದ ಸಪರಿವಾರವಾಗಿ ದುರ್ಗವನ್ನು ಬಿಟ್ಟು ಹೋದನು. ತರುವಾಯ ನಡೆದ ಯುದ್ಧಕ್ಕೆ ರಜಪೂತರ ಇತಿಹಾಸದಲ್ಲಿ ಎರಡನೆಯ ಆಕ್ರಮಣವೆಂದು ಹೇಳಿರಬಹುದು. ಈ ಅನುಮಾನಗಳಲ್ಲಿ ಯಾವದನ್ನೇ ಗ್ರಹಿಸಲಿ, ಅಕಬರನು ಚಿತೋಡವನ್ನು ಮುತ್ತಿದ ತರುವಾಯ, ಆದ ಭಯಂಕರ ಯುದ್ಧದಲ್ಲಿ ಉದಯಸಿಂಹನಿದ್ದಿಲ್ಲವೆಂಬದು ಸತ್ಯವು. ಈ ವೇಳೆಯಲ್ಲಿ ಚಿತೋಡವನ್ನು ರಕ್ಷಿಸುವ ಮಹತ್ವದ ಕಾರ್ಯಭಾರವು, ಯಾವತ್ತರ ಅನುಮತಿಯಿಂದ ಮಹಾವೀರನಾದ ಜಯಮಲ್ಲನ ಮೇಲೆ ಹೊರಿಸಲ್ಪಟ್ಟಿತ್ತು.

ಮೊಗಲರ ಸೈನ್ಯದಲ್ಲಿ ಸ್ವತಃ ಬಾದಶಹನೇ ಮುಖ್ಯ ಸೇನಾಪತಿಯಾಗಿದ್ದನು. ಅವನು ರಾಣಾನ ರಾಜ್ಯವನ್ನು ಹಾಳುಮಾಡುವದಕ್ಕೆ ನಾಲ್ಕೂ ದಿಕ್ಕಿಗೆ ಸೈನ್ಯವನ್ನು ಕಳುಹಿಸಿದನು. ಅಸಫಖಾನನು ಹೋಗಿ, ಚಿತೋಡದ ನೈರುತ್ಯಕ್ಕಿರುವ ರಾಮಪುರದ ಪ್ರದೇಶವನ್ನು ಹಾಳುಮಾಡಿದನು; ಹುಸೇನಕುಲಿಖಾನನು ಉದಯಸಿಂಹನನ್ನು ಹುಡುಕುವದಕ್ಕಾಗಿ, ಪಶ್ಚಿಮದಿಕ್ಕಿನ ಪರ್ವತಪ್ರದೇಶದಲ್ಲಿ ಹೋದನು. ಮಹಾರಾಣಾನು ಚಿತೋಡವನ್ನು ಬಿಟ್ಟುಹೋಗಿ, ಮೊದಲು ಪಶ್ಚಿಮದಿಕ್ಕಿನಲ್ಲಿ ಬನಾಸನದಿಯ ತೀರದಲ್ಲಿರುವ ರಾಜಪಿಪ್ಪಲಿಯೆಂಬ ಪಟ್ಟಣದಲ್ಲಿ ಆಶ್ರಯಹೊಂದಿದನು; ಮುಂದೆ ಮತ್ತೆ ದಕ್ಷಿಣಕ್ಕೆ ಹೋಗಿ, ಅರವಲೀ ಪರ್ವತದ ಮಧ್ಯದಲ್ಲಿ ನಡೆದನು. ಈ ಸ್ಥಳದಲ್ಲಿ ಅವನು ಕೆಲವು ವರುಷಗಳ ಪೂರ್ವದಲ್ಲಿ ಒಂದು ಜಲಾಶಯವನ್ನು ಕಟ್ಟಿಸಿದ್ದನು; ಈ ಜಲಾಶಯಕ್ಕೆ ಉದಯಸಾಗರವೆಂದೂ, ಇದರ ಹತ್ತರಿರುವ ಅರಮನೆಗೆ ನಾಚೌಕಿಯೆಂದೂ ಹೆಸರಿಟ್ಟಿದ್ದನು. ಉದಯಸಿಂಹನು

ಈ ಸ್ಥಳದಲ್ಲಿ ಕೆಲವು ದಿವಸ ವಾಸಮಾಡಿದನು. ಮುಂದೆ ಈ ಸ್ಥಳವು ಉದಯಪುರವೆಂಬ ಹೆಸರನ್ನು ಧರಿಸಿ, ಮೇವಾಡದ ರಾಜಧಾನಿಯಾಯಿತು. ಹುಸೇನಕುಲಿಖಾನನು ಈ ಉದಯಸಾಗರದ ಸಮೀಪದಲ್ಲಿ ಬರುವಷ್ಟರಲ್ಲಿಯೇ, ಉದಯಸಿಂಹನು ಇದನ್ನು ಬಿಟ್ಟು, ಪಶ್ಚಿಮಕ್ಕಿರುವ ದುರ್ಗಮ ಪರ್ವತಪ್ರದೇಶವನ್ನು ಹೊಕ್ಕನು. ಹುಸೇನಕುಲಿಖಾನನು ಬಡಜನರ ಮೇಲೆ ಭೀಷಣ ಅತ್ಯಾಚಾರ ಮಾಡಿ, ಸಿಕ್ಕಲ್ಲಿ ಸುಲಿಗೆಮಾಡುತ್ತ ನಡೆದು, ಕಡೆಯಲ್ಲಿ ರಾಣಾನನ್ನು ಹುಡುಕದೆ ತಿರುಗಿ ಬಂದನು.

ಇತ್ತ ಚಿತೋಡದಲ್ಲಿಯ ಮೊಗಲಸೈನಿಕರು, ದುರ್ಗಜಯದ ಯಾವ ಕಾರ್ಯಗಳನ್ನು ಮಾಡಲಿಕ್ಕೂ ಸಮರ್ಥರಾಗಲಿಲ್ಲ. ಖಾಅಲಿಮ, ಅದಿಲಖಾ ಮೊದಲಾದ ಸೇನಾಪತಿಗಳು ಮೇಲಿಂದ ಮೇಲೆ ಕೋಟೆಯನ್ನು ಮುತ್ತಿ, ವಿಫಲಮನೋರಥರಾದರು. ಇದೇ ಅಕಬರನ ಮೊದಲಿನ ವ್ಯರ್ಥ ಆಕ್ರಮಣವೆಂದು ರಜಪೂತರ ಚರಿತ್ರೆಯಲ್ಲಿ ಹೇಳಿದೆ. ಈ ರೀತಿಯಾಗಿ ಅವ್ಯವಸ್ಥೆಯಿಂದ ಕೋಟೆಯನ್ನು ಮುತ್ತಿದರೆ, ಉಪಯೋಗವೇನೂ ಆಗಲಾರದೆಂಬದನ್ನು ಅಕಬರನು ಗೊತ್ತುಮಾಡಿಕೊಂಡನು; ಆದರೂ ಯುದ್ಧವು ಹಾಗೇ ನಡೆದಿತ್ತು; ಅದರಿಂದ ದಿನಾಲು ಎಷ್ಟೋ ಮೊಗಲಸೈನಿಕರು ಮೃತ್ಯುಮುಖದಲ್ಲಿ ಬೀಳುತ್ತಿದ್ದರು; ಅನೇಕರು ಗಾಯಾಳುಗಳಾಗಿ ತಿರುಗಿ ಬರುತ್ತಿದ್ದರು; ಯಾಕಂದರೆ ಮೊಗಲರ ಗುಂಡು, ಬಾಣಗಳು ಎತ್ತರವಾದ ಶಿಖರದ ಮೇಲಿರುವ ಗೋಡೆಗಳಲ್ಲಿ ಹಾಯ್ದು, ರಜಪೂತರಿಗೆ ಅಪಾಯ ಮಾಡುವ ಸಂಭವವಿದ್ದಿಲ್ಲ; ಆದರೆ ರಜಪೂತವೀರರು 'ಕಾಂಗಡಾ' ಅಂದರೆ ಕೋಟೆಯ ಗೋಡೆಗಳೊಳಗಿನ ಕಿಂಡಿಗಳ ಮಾರ್ಗವಾಗಿ ಬಿಡುತ್ತಿದ್ದ ಗುಂಡು, ಬಾಣ, ಬರ್ಚಿಗಳಿಂದ ಅನೇಕ ಮೊಗಲ ಸೈನಿಕರು ಸತ್ತುಹೋಗುತ್ತಿದ್ದರು. §

---

§ ರಜಪೂತರು ತೋಫು, ಬಂದೂಕ ಮೊದಲಾದವುಗಳನ್ನು ಪಯೋಗಿಸುವದನ್ನು ಬಲ್ಲವರಾಗಿದ್ದರು ಆದರೆ ಇವರ ತೋಫುಗಳು ಮೊಗಲರ ತೋಫುಗಳಷ್ಟು ದೊಡ್ಡವಾಗಿರಲಿಲ್ಲ, ಮತ್ತು ಶ್ರೇಷ್ಠ ತರಗತಿಯವೂ ಇರಲಿಲ್ಲ See Sir H. Elliots article "on the early use of Gunpowder in India" Elliot, VI. P. P. 455-482. "There were dexterous artillery men among them" ( Rajputs ) Akbarnamah P. 466-7.

ಹೀಗಿದ್ದರೂ ಅಕಬರನು ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳುವದ ಕ್ಕಾಗಿ ಕೃತಸಂಕಲ್ಪನಾಗಿದ್ದನು. ಅದರಿಂದ ಅವನು ನಿರಾಶನಾಗಲಿಲ್ಲ. ಆದರೆ ಇದೇ ರೀತಿಯಿಂದ ಮುಂದೆಯೂ ಯುದ್ಧವನ್ನು ಸಾಗಿಸಿದರೆ ತನ್ನ ಜನರ ನಾಶ ವಾಗುವದಲ್ಲದೆ, ಯಾವ ಲಾಭವೂ ಆಗುವದಿಲ್ಲವೆಂಬದನ್ನು ನಿರ್ಧರಿಸಿಕೊಂಡು ಅವನು ಬೇರೆ ಯಾವದಾದರೊಂದು ಹಂಚಿಕೆಯಿಂದ ಕೋಟೆಯನ್ನು ವಶಮಾಡಿ ಕೊಳ್ಳುವ ಆಲೋಚನೆಯನ್ನು ಮಾಡಿದನು. ಎದುರಿನಲ್ಲಿ ನಿಂತು, ಕತ್ತಿ ಮೊದ ಲಾದ ಆಯುಧಗಳಿಂದ ಮಾಡತಕ್ಕ ಯುದ್ಧದಲ್ಲಿ ಅಕಬರನಿಗೆ ಜಯದೊರೆಯುವ ಸಂಭವವಿದ್ದಿಲ್ಲ. ಮೊಗಲರು ಅಗ್ನಿಯುದ್ಧದಲ್ಲಿ-ತೋಫುಗಳಿಂದ ಶತ್ರುನಾಶಮಾ ಡುವದರಲ್ಲಿ ಗಟ್ಟಿಗರಾಗಿದ್ದರು. ಹಿಂದೆ ಸಿಕ್ರಿಯ ಕಾಳಗದಲ್ಲಿ ರಜಪೂತರು ಪರಾ ಜಯ ಹೊಂದುವದಕ್ಕೆ ಮೊಗಲರ ಶ್ರೇಷ್ಠವಾದ ತೋಫುಗಳೇ ಕಾರಣೀಭೂತ ವಾದವೆಂದು ನಾವು ಹಿಂದೆ ಹೇಳಿದ್ದೇವೆ. ಈಗ ಅಕಬರನೂ ಇದೇ ಮಾರ್ಗವ ನ್ನವಲಂಬಿಸುವ ಹಂಚಿಕೆ ತೆಗೆದನು.

ಮೊಗಲರು ಈ ಮೊದಲೇ ಕೋಟೆಯ ನಾಲ್ಕೂ ಕಡೆಯಲ್ಲಿ ತೋಫುಗ ಳನ್ನು ಹಚ್ಚಿದ್ದರು. ಅವು ರಜಪೂತರ ಬಾಣಗಳು ತಾಕದಷ್ಟು ದೂರದಲ್ಲಿದ್ದವು. ದುರ್ಗಪ್ರವೇಶದ ಮೂರೂ ಮಾರ್ಗಗಳ ಎದುರಿಗೆ ಉತ್ತಮವಾದ ತೋಫುಗಳು ಹೆಚ್ಚಾಗಿರಿಸಲ್ಪಟ್ಟಿದ್ದವು. ಅಕಬರನು ತನ್ನ ಸೈನಿಕರಲ್ಲಿ ಮೂರು ಭಾಗಮಾಡಿ, ಒಂದೊಂದು ಭಾಗವನ್ನು ಒಬ್ಬೊಬ್ಬ ಸೇನಾಪತಿಯು ಕೈಯಲ್ಲಿ ಕೊಟ್ಟು, ಈ ಬಾಗಿ ಲಗಳ ಎದುರಿನಲ್ಲಿ ಕಾಯ್ದುಕೊಂಡಿರುವಂತೆ ಅಪ್ಪಣೆಮಾಡಿದನು. ಉತ್ತರದಿಕ್ಕಿನ ಲಕ್ಷತೋರಣದ ಎದುರಿಗೆ ಶ್ರೇಷ್ಠವಾದ ತೋಫುಗಳನ್ನು ಹಚ್ಚಿ, ಅವುಗಳ ವ್ಯವಸ್ಥೆಯ ಸಲುವಾಗಿ ಸೇನಾಪತಿ ಅಸಫಖಾ, + ರಾಯಪುತ್ತರದಾಸ ಮೊದ ಲಾದವರು ನಿಂತುಕೊಂಡರು; ಪೂರ್ವದಿಕ್ಕಿನಲ್ಲಿರುವ ಸೂರ್ಯತೋರಣದ ಎದು ರಿನ ಭಾಗದಲ್ಲಿ ವಜೀರಖಾ ಮೊದಲಾದವರು ನಿಂತುಕೊಂಡರು; ಮತ್ತು ಪಶ್ಚಿಮ ದಿಕ್ಕಿನಲ್ಲಿರುವ ಮುಖ್ಯ ಬಾಗಿಲದ ಎದುರಿನಲ್ಲಿ ಸೇನಾಪತಿ ಸುಜಾತಖಾ, ರಾಜಾ ತೋಡರಮಲ್ಲ ಮೊದಲಾದವರು ನಿಂತರು. ಬಾದಶಹ ಅಕಬರನೂ ಬಹುಶಃ ಇದೇ ಭಾಗದಲ್ಲಿರುತ್ತಿದ್ದನು; ಮತ್ತು ರಾಜಾ ಭಗವಾನದಾಸ ಮೊದಲಾದ ಮುಖ್ಯ

+Ain-i-Akbari, Blochmann P 469

ಸರದಾರರು ಇವನ ಅನುಚರರಾಗಿದ್ದರು. ಅಕಬರನು ಈ ಭಾಗದಲ್ಲಿ ವಿಶೇಷವಾಗಿರುತ್ತಿದ್ದರೂ, ಅವನ ದೃಷ್ಟಿಯು ನಾಲ್ಕೂ ಕಡೆಗೆ ಸಮಭಾವದಿಂದಿತ್ತೆಂದು ಹೇಳಬಹುದು.

ಮಹಾರಾಣಾನು ಓಡಿಹೋದನಂತರ ಜಯಮಲ್ಲನು ರಜಪೂತರ ಮುಖ್ಯ ಸೇನಾಪತಿಯಾಗಿದ್ದನು. ಇವನು ಪಶ್ಚಿಮ ದಿಕ್ಕಿನಲ್ಲಿರುವ ಮುಖ್ಯದ್ವಾರದ ಸಂರಕ್ಷಣೆಯನ್ನು ವಹಿಸಿದ್ದನೆಂದು ಹೇಳಿದ್ದೇವೆ. ಪ್ರತಾಪಸಿಂಹನು ಕೆಲವು ದಿವಸಗಳವರೆಗೆ ಜಯಮಲ್ಲನ ಕೈಕೆಳಗಿದ್ದು, ಮಹಾಪರಾಕ್ರಮದಿಂದ ಯುದ್ಧಮಾಡಿದನು. ಇವನ ವೀರತ್ವವನ್ನೂ, ಸಮಯಸೂಚಿಕತೆಯನ್ನೂ ನೋಡಿ, ಯಾವತ್ತು ಸರದಾರರಲ್ಲಿ ಆನಂದವೂ, ಉತ್ಸಾಹವೂ ಹೆಚ್ಚಾಯಿತು. ಸೂರ್ಯತೋರಣದಲ್ಲಿ ಸಹಿದಾಸನು ಸೇನಾಪತಿಯಾಗಿದ್ದನು; ಪುತ್ತನು ಇವನ ಸಹಾಯಕನಾಗಿದ್ದನು. ಈ ಸಮಯದಲ್ಲಿ ಪುತ್ತನಿಗೆ ಕೇವಲ ಹದಿನಾರು ವರುಷ ವಯಸ್ಸು ! ಝಾಲಾಪತಿ ಮೊದಲಾದ ಸರದಾರರು ಉತ್ತರ ತೋರಣದ ಭಾಗವನ್ನು ವಹಿಸಿದ್ದರು.

ಬಾದಶಹನು ತೋಫುಗಳನ್ನು ಹಚ್ಚಿ, ಸೈನ್ಯವನ್ನು ವ್ಯವಸ್ಥೆಯಿಂದಿರಿಸಿದರೂ ಉಪಯೋಗವಾಗಲಿಲ್ಲ. ಕೇವಲ ತೋಫುಗಳು ಕೋಟೆಯ ಗೋಡೆಗಳನ್ನು ಕೆಡವಲಿಕ್ಕೆ ಸಮರ್ಥವಾಗಲಿಲ್ಲ; ಯಾಕಂದರೆ ಈಗಿನಂತಹ ಪ್ರಬಲವಾದ ತೋಫುಗಳು ಆ ಕಾಲದಲ್ಲಿರಲಿಲ್ಲ. ಅದರಿಂದ ಕೋಟೆಯ ಗೋಡೆಗಳ ಕೆಳಭಾಗದಲ್ಲಿ ತಗ್ಗು ತೆಗೆದು, ಅದರಲ್ಲಿ ಮದ್ದು ತುಂಬಿ ಹಾರಿಸಿದರೆ, ಕೋಟೆಯ ಗೋಡೆಗಳು ಹಾರಿಹೋಗಬಹುದೆಂದು ಅಕಬರನು ಆಲೋಚಿಸಿದನು. ಈ ಮದ್ದಿನಿಂದ ತುಂಬಿದ ತಗ್ಗಿಗೆ ಸುರಂಗ ( Mine ) ವೆನ್ನುವರು. ಹೀಗೆ ಈ ಸುರಂಗವು ಹಾರಿ, ಕೋಟೆಯ ಗೋಡೆಯು ಬಿದ್ದಕೂಡಲೇ ಶಸ್ತ್ರಧಾರಿಗಳಾದ ಮೊಗಲ ಸೈನಿಕರು, ಒಮ್ಮೆಲೆ ಕೋಟೆಯಲ್ಲಿ ಪ್ರವೇಶಿಸಿ, ರಜಪೂತರ ಗರ್ವವನ್ನು ನಾಶಮಾಡಬೇಕೆಂದು ಗೊತ್ತಾಯಿತು. ಆದರೆ ಈ ತರದ ಸುರಂಗಗಳನ್ನು ರಚಿಸುವದು ಕಷ್ಟಕರವಾದ ಕಾರ್ಯವಾಗಿತ್ತು; ಯಾಕಂದರೆ ಈ ಸುರಂಗಗಳನ್ನು ರಚಿಸುವದಕ್ಕೆ ಕೋಟೆಯ ಕೆಳಭಾಗದಲ್ಲಿ ಹೋಗಲಿಕ್ಕೆ ಬರುವಂತಿದ್ದಿಲ್ಲ; ಒಂದುವೇಳೆ ಧೈರ್ಯದಿಂದ ಯಾರಾದರೂ ಹೋದಲ್ಲಿ, ರಜಪೂತರು ಗುಂಡು, ಬಾಣಗಳಿಂದ ಇವರನ್ನು ಸಂಹರಿಸಿ ಬಿಡುತ್ತಿದ್ದರು. ಪ್ರಾಚೀನಕಾಲದಿಂದಲೂ ನಮ್ಮ ಹಿಂದೂಜನರು

ಕೋಟೆಯನ್ನು ಮುತ್ತುವದಕ್ಕೂ, ಸಂರಕ್ಷಿಸುವದಕ್ಕೂ ವಿಶೇಷ ದಕ್ಷರಾಗಿದ್ದರು. †

ಉತ್ತರ ದಿಕ್ಕಿನ ಕೋಟೆಯ ಕೆಳಭಾಗದಲ್ಲಿ ಹೋಗುವದಕ್ಕೆ ಸಾಧ್ಯವಿದ್ದುದರಿಂದ, ಆ ದಿಕ್ಕಿನಲ್ಲಿ ಮೊಗಲರು ಮೊದಲು ಸುರಂಗತೋಡುವ ಉದ್ಯೋಗವನ್ನು ನಡೆಸಿದರು. ಮುಖ್ಯವಾಗಿ ಕಬೀರಖಾನನು ಈ ಕೆಲಸದ ಭಾರವನ್ನು ವಹಿಸಿದ್ದನು. ಪೂರ್ವ-ಪಶ್ಚಿಮ ದಿಕ್ಕುಗಳಲ್ಲಿ ಕೋಟೆಯ ಕೆಳಭಾಗಕ್ಕೆ ಹೋಗಲಿಕ್ಕೆ ಸಾಧ್ಯವಿಲ್ಲದ್ದರಿಂದ, ಈ ದಿಕ್ಕುಗಳಲ್ಲಿ ಸುರಂಗವನ್ನು ರಚಿಸುವದಕ್ಕೆ ಅಕಬರನು ಬೇರೊಂದು ಮಾರ್ಗವನ್ನವಲಂಬಿಸಿದನು. ಇದಕ್ಕಾಗಿ ಅವನು ರಜಪೂತರ ಬಾಣಗಳು ಮುಟ್ಟುವ ಸ್ಥಗಳಗಳಿಂದ ಕೋಟೆಯ ಕೆಳಭಾಗದವರೆಗೆ ಸುರಂಗದ ಮಾರ್ಗಗಳನ್ನು ರಚಿಸುವ ಪ್ರಯತ್ನ ಮಾಡಿದನು. ಎರಡೂ ದಿಕ್ಕುಗಳಲ್ಲಿ ಕಲ್ಲುಗಚ್ಚುಗಳಿಂದ ಅಂಕುಡೊಂಕಾದ ಗೋಡೆಗಳನ್ನು ವಕ್ರಾಕಾರವಾಗಿ ಕಟ್ಟಿ, ನಡುವೆ ಹಾದಿಯನ್ನು ಮಾಡಿದರು. ಈ ಗೋಡೆಗಳ ಮೇಲೆ ಶತ್ರುಗಳ ಗುಂಡು ಬಾಣಗಳು ಪಾರಾಗಿ ಬರದಂಥ ಹೊದಿಕೆಯನ್ನು ಹಾಕಿದ್ದರು. ಈ ಮಾರ್ಗವು ಹತ್ತು ಜನ ಅಶ್ವಾರೋಹಿಗಳು ಒಮ್ಮೆಲೇ ನಡೆದು ಹೋಗುವಷ್ಟು ವಿಸ್ತಾರವಾಗಿತ್ತು; ಇದರ ಗೋಡೆಗಳು ಆನೆಯನ್ನು ಹತ್ತಿಕೊಂಡು ಹೋಗಲಿಕ್ಕೆ ಬರುವಷ್ಟು ಎತ್ತರವಾಗಿದ್ದವು. ಈ ಮಾರ್ಗಗಳನ್ನು ಮಾಡುವದಕ್ಕಾಗಿ ಅಕಬರನು ೫೦೦೦ ಜನರನ್ನು ಹಚ್ಚಿದನು. ರಜಪೂತರಿಂದ ಈ ಕೂಲಿಕಾರರ ರಕ್ಷಣೆ ಮಾಡುವದಕ್ಕೂ ಅಕಬರನು ಉತ್ತಮವಾದ ವ್ಯವಸ್ಥೆಯನ್ನು ಮಾಡಿಸಿದ್ದನು. ಹೀಗಿದ್ದರೂ ದಿನಾಲು ಸುಮಾರು ೨೦೦ ಜನ ಕೂಲಿಕಾರರು ರಜಪೂತರ ಗುಂಡು ಬಾಣಗಳಿಗೆ ಆಹುತಿ

---

† ಹಿಂದೂ ಜನರು ಈ ಸುರಂಗಾದಿಗಳನ್ನು ನಿರ್ಮಿಸುವ ಕಲೆಯನ್ನು ಮೊಗಲರಿಂದಾಗಲಿ, ಯುರೋಪಿಯನರಿಂದಾಗಲಿ ಕಲಿತರೆಂದಲ್ಲ, ಒಬ್ಬ ವಿಖ್ಯಾತನಾದ ಬ್ರಿಟಿಶ ಸೇನಾಪತಿಯು ಬರೆದಿದ್ದಾನೆ—" The art of mining and the costruction of military field-works seem to have been familiar to the nations of India for maugages The skill they displayed at the siege of Ahmadnagar in 1585, against the Moghuls, and in those of kerowly in 1807, and of Bharatpur in 1826, against British troops, from whom they could not have harned the science of mining, bespeaks the fact " Brigges 'Ferishtah, vol II. P· 230.

ಯಾಗಿ, ಮರಣಹೊಂದುತ್ತಿದ್ದರು. ಈ ಸತ್ತ ಜನರ ಶವಗಳನ್ನು ಕಟ್ಟತಕ್ಕ ಗೋಡೆಗಳಲ್ಲಿ ಹುಗಿದುಬಿಡುತ್ತಿದ್ದರು. ಹೀಗೆ ಅನೇಕ ಜನರ ಪ್ರಾಣಹಾನಿಯಾಗುತ್ತಿದ್ದರೂ, ಅಕಬರನು ಹಿಂಜರಿಯಲಿಲ್ಲ. ಅವನು ಬಹು ಧನವನ್ನು ವೆಚ್ಚಮಾಡಿ,* ಕೂಲಿಕಾರರನ್ನು ಸಂತೋಷಪಡಿಸುತ್ತಿದ್ದನು. ಹೀಗೆ ಅಸಂಖ್ಯ ಜನರ ಬಲಿಯಿಂದಲೂ, ಬಹು ಧನವ್ಯಯದಿಂದಲೂ ಕೋಟೆಯ ಪಶ್ಚಿಮ ದಿಕ್ಕಿನ ಗೋಡೆಯ ತಳಕ್ಕೆ ಮುಟ್ಟುವ ಮಾರ್ಗವು ಸಿದ್ಧವಾಯಿತು. ಈ ದುಸ್ಸಾಧ್ಯ ಕಾರ್ಯವು ರಾಜಾ ತೋಡರಮಲ್ಲ ಮತ್ತು ಕಾಶೀಮಖಾ ಇವರ ವಿಶೇಷ ಪ್ರಯತ್ನದಿಂದ ಕೊನೆಗಂಡಿತು.

ಬಾದಶಹನು ಮದ್ದುಗುಂಡುಗಳ ಸಂಗ್ರಹವನ್ನು ಸಾಕಷ್ಟು ಮಾಡಿದ್ದನು. ಆದರೂ ಪ್ರಸಂಗವಿಶೇಷದಲ್ಲಿ ಕೊರತೆಯುಂಟಾಗಬಾರದೆಂದು ತನ್ನ ಶಿಬಿರದಲ್ಲಿ ಶಸ್ತ್ರಗಳನ್ನೂ, ಮದ್ದುಗುಂಡುಗಳನ್ನೂ ತಯಾರಿಸುವ ಕಾರಖಾನೆಯನ್ನು ಸ್ಥಾಪಿಸಿದನು. ಇದರಿಂದ ಯುದ್ಧದ ಯಾವತ್ತು ಸಾಮಾನುಗಳ ಪೂರೈಕೆಯು ವಿಶೇಷ ರೀತಿಯಿಂದಾಗಹತ್ತಿತು. ದೂರದಿಂದ ದೊಡ್ಡ ತೋಫನ್ನು ತರಿಸಲಿಕ್ಕೆ ವೇಳೆಯೂ, ಶ್ರಮವೂ ಹೆಚ್ಚು ಹತ್ತುವದೆಂದು ತಿಳಿದು, ಅಲ್ಲಿಯೇ ಒಂದು ದೊಡ್ಡ ತೋಫನ್ನು ಮಾಡಿಸಿದನು. ಈ ತೋಫು ಅರ್ಧ § ಮಣ ಗುಂಡುಗಳನ್ನು ಹಿಡಿಯುತ್ತಿದ್ದಿತು. ಕಬೀರಖಾನನು ಕೋಟೆಯ ಉತ್ತರ ಭಾಗದಲ್ಲಿ ಒಂದಕ್ಕೊಂದು ಹತ್ತಿ ಎರಡು ತಗ್ಗುಗಳನ್ನು ತೆಗೆದು, ಅವುಗಳಲ್ಲಿ ಅನುಕ್ರಮವಾಗಿ ೧೨೦೮೦ ಮಣ ಮದ್ದನ್ನು ತುಂಬಿದನು. ಸುರಂಗಗಳು ಹಾರಿದ ಕೂಡಲೇ ಶತ್ರುಗಳ ಮೇಲೆ ಸಾಗಿಹೋಗುವದಕ್ಕೆ ಶಸ್ತ್ರಧಾರಿಗಳಾದ ಮೊಗಲ ಸೈನಿಕರು ಸಿದ್ಧರಾದರು. ಅಕಬರನು ಸುರಂಗಗಳಿಗೆ ಕೊಳ್ಳಿಕೊಡುವಂತೆ ಅಪ್ಪಣೆ ಮಾಡಿದನು. (೧೭ನೇ ದಿಶಂಬರ ೧೫೬೭). ಎರಡೂ ಸುರಂಗಗಳು ಒಮ್ಮೆಲೇ ಹಾರತಕ್ಕವಿದ್ದವು; ಆದರೆ ದೈವವಶದಿಂದ ಅವು ಒಮ್ಮೆಲೇ ಹಾರಲಿಲ್ಲ. ಮೊಗಲರು ಎರಡೂ ಸುರಂಗಗಳು ಹಾರಿದವೆಂದು ತಿಳಿದುಕೊಂಡರು. ದುರ್ಗದ ಗೋಡೆಯು

---

*" Silver and gold were reckoned at the rate of earth." A. N. Beveridge II 467-8.

§ ಈಗಿನ ಕಾಲದಲ್ಲಿ ಈ ತರದ ತೋಫುಗಳಿಗೆ ಮಹತ್ವ ಕೊಡಲಿಕ್ಕೆ ಬರುವಂತಿಲ್ಲ; ಆದರೆ ಅಕಬರನ ಕಾಲದಲ್ಲಿ ಈ ತರದ ತೋಫುಗಳು ಅತಿ ವಿರಳವಾಗಿದ್ದವೆಂದು ಹೇಳಬಹುದು.

ಹಾರಿಹೋದದ್ದನ್ನು ನೋಡಿದರು. ಕೂಡಲೇ ಅವರು ಕೋಟೆಯನ್ನು ಪ್ರವೇಶ ಮಾಡುವದಕ್ಕೆ ಹೊರಟರು. ಆಗ ರಜಪೂತರಿಗೂ ಮೊಗಲರಿಗೂ ಭಯಂಕರವಾದ ಯುದ್ಧವಾಯಿತು. ಈ ಸಮಯದಲ್ಲಿ ಎರಡನೇ ಸುರಂಗವು ಹಾರಿ ಭಯಂಕರ ಸಪ್ಪಳವನ್ನುಂಟುಮಾಡಿತು. ಇದರಿಂದ ಕೋಟೆಯ ಗೋಡೆಯ ಮೇಲೆ ನಿಂತು ಯುದ್ಧಮಾಡುತ್ತಿರುವ ರಜಪೂತವೀರರು ಹಾರಿಬಿದ್ದು ಪ್ರಾಣಬಿಟ್ಟರು. ಈ ವೇಳೆಯಲ್ಲಿ ಎರಡೂ ಸೈನ್ಯಗಳಲ್ಲಿ ಭಯಂಕರ ಪ್ರಾಣಹಾನಿಯಾಯಿತು. ದೊಡ್ಡ ದೊಡ್ಡ ಕಲ್ಲುಗಳೂ, ಶವಗಳೂ ಬಹು ದೂರದವರೆಗೆ ಹೋಗಿಬಿದ್ದವು.+ ಈ ವಿಪತ್ತಿನಲ್ಲಿ ಮೊಗಲರ ೫೦೦ ಮಂದಿ ಉತ್ತಮ ಸೈನಿಕರು ಸತ್ತುಹೋದರು. ಇವರಲ್ಲಿ ಸೈಯದ ಜಲಾಲುದ್ದೀನ ಮೊದಲಾದ ಪ್ರಖ್ಯಾತ ಅಮೀರ ಮತ್ತು ಸೇನಾಪತಿಗಳಿದ್ದರು.

ಈ ಸಾರೆ ನಾಲ್ಕೂ ಕಡೆಯಲ್ಲಿ ಯುದ್ಧವು ಭಯಂಕರ ರೀತಿಯಿಂದ ನಡೆಯಿತು. ಪೂರ್ವತೋರಣದಲ್ಲಿ ಅಸಫಖಾನ ತೋಫಿನ ಹತ್ತರಿರುವ ಸುರಂಗವು ಹಾರಿ ೩೦ ಮಂದಿ ರಜಪೂತವೀರರು ಸತ್ತರು. ಮೊಗಲರಲ್ಲಿಯೂ ಅನೇಕರು ಮೃತ್ಯುಮುಖದಲ್ಲಿ! ಬೀಳತೊಡಗಿದರು. ಈ ಮೇರೆಗೆ ಎರಡೂ ಬಣದ ಅಸಂಖ್ಯ ಸೈನಿಕರು ಆಹತರಾಗಹತ್ತಿದರು ಮೊದಲನೇ ಸುರಂಗವು ಹಾರಿದ ಮೇಲೆ ಸುಮಾರು ಎರಡು ತಿಂಗಳವರೆಗೆ ಒಂದೇಸವನೆ ಇರ್ಬಣದ ನಡುವೆ ಭಯಂಕರ ಯುದ್ಧವು ನಡೆಯಿತು. ಅಕಬರನು ತನ್ನ ಸೈನ್ಯವನ್ನು ಬೇಕಾದಷ್ಟು ಬೆಳೆಸಬಲ್ಲವನಾಗಿದ್ದನು; ಆದರೆ ರಜಪೂತರಿಗೆ ಈ ಅನುಕೂಲತೆಯು ಇರಲಿಲ್ಲ. ಅಕಬರನು ರಾಜಧಾನಿಯಿಂದ ಹೊಸ ಸೈನ್ಯವನ್ನು ತರಿಸಹತ್ತಿದನು. ಇದನ್ನು ನೋಡಿ ರಜಪೂತರು ಹೆದರಲಿಲ್ಲ. ಬೇರೆ ಯಾವ ಜನಾಂಗದವರಾಗಿದ್ದರೂ ಈ ಸಮಯದಲ್ಲಿ ಶತ್ರುಗಳಿಗೆ ಶರಣುಹೋಗುವ ಆಲೋಚನೆಯನ್ನು ಮಾಡುತ್ತಿದ್ದರು; ಆದರೆ ರಜಪೂತರಲ್ಲಿ ಈ ಆಲೋಚನೆಯು ಬರಲಿಲ್ಲ. ಇಷ್ಟೇ ಅಲ್ಲ; ಬೆಳೆಯುತ್ತಿರುವ ಶತ್ರುಸೈನ್ಯವನ್ನು ನೋಡಿ ಅವರ ವೀರತ್ವವೂ, ಉತ್ಸಾಹವೂ ಹೆಚ್ಚಾಗತೊಡಗಿತು. ಈ ಮಾತನ್ನು ಮುಸಲ್ಮಾನ ಇತಿಹಾಸಕಾರರು ಅಭಿಮಾನವಿಲ್ಲದೆ ಒಪ್ಪಿಕೊಂಡಿದ್ದಾರೆ. ಸೂರ್ಯ

---

+ಮುಸಲ್ಮಾನ ಇತಿಹಾಸಕಾರರು ಈ ಸಂಗತಿಯ ವರ್ಣನೆಯನ್ನು ಮಾಡಿದ್ದು ಹೇಗಂದರೆ – It is notorions that stones of 200 mans were carried to a distance of three or four kos from the walls and bodies of men who had been burnt were found. T. A· Ellist V. 827

ತೋರಣವನ್ನು ರಕ್ಷಿಸುತ್ತಿರುವ ಸಹಿದಾಸನು ಯುದ್ಧದಲ್ಲಿ ಮಡಿದನು. ಇವನ ಸ್ಥಳ ವನ್ನು ಪುತ್ತನು ಸ್ವೀಕರಿಸಿ, ಅಪ್ರತಿಮ ಶೂರತನದಿಂದ ಯುದ್ಧವನ್ನು ನಡೆಸಿದನು. ಪುತ್ತನ ಸಹಾಯಾರ್ಥವಾಗಿ ಇವನ ಜನನಿ—ಸಹೋದರಿ--ಭಾರ್ಯೆಯರು ವೀರವೇಷದಿಂದ ಯುದ್ಧಭೂಮಿಯನ್ನು ಪ್ರವೇಶಮಾಡಿದರು. ಇವರನ್ನು ನೋಡಿ ಅನೇಕ ರಜಪೂತಲಲನೆಯರು ಶಸ್ತ್ರಗಳನ್ನು ಧರಿಸಿ ಕಾಳಗದ ಸ್ಥಳಕ್ಕೆ ಬಂದರು. ಈ ರಜಪೂತ ವೀರನಾರಿಯರ ಬಾಣಗಳಿಂದ ಪೂರ್ವಬಾಗಿಲದ ಇಕ್ಕಟ್ಟಾದ ಮಾರ್ಗ ದಲ್ಲಿರುವ ಮೊಗಲರ ಸೈನ್ಯವು ಚದುರಿಸಲ್ಪಟ್ಟಿತು. ಈ ಕಾಳಗದಲ್ಲಿ ಪುತ್ತನ ವೃದ್ಧ ಜನನಿಯು ಬಳಿಯಲ್ಲಿ, ಅವನ ಹೆಂಡತಿಯೂ ಚಿರನಿದ್ರಿತಳಾದಳು. ಪುತ್ತನ ಸಂಸಾ ರದ ಯಾವತ್ತು ಬಂಧನಗಳು ಕಡಿದುಹೋದವು—ಸಂಸಾರದಲ್ಲಿ ತನ್ನವರೆನ್ನುವವ ರಾರೂ ಉಳಿಯಲಿಲ್ಲ. ಆಗ ಪುತ್ತನು ಜನನಿಯಂತಿರುವ ಜನ್ಮಭೂಮಿಯ ಸಲು ವಾಗಿ ಆತ್ಮಯಜ್ಞಮಾಡುವ ಪ್ರಬಲವಾದ ಇಚ್ಛೆಯನ್ನು ಹೊಂದಿದನು. ಅದರಿಂದ ಅವನು ಹೆಚ್ಚು ಧೈರ್ಯವನ್ನವಲಂಬಿಸಿದನು. ಅವನ ಅದ್ಭುತವಾದ ಉದಾಹರಣೆ ಯೂ ಅಪೂರ್ವ ಉತ್ಸಾಹವಾಣಿಯೂ ರಜಪೂತರ ಧಮನಿಗಳಲ್ಲಿ ದೇವಶಕ್ತಿಯ ಸಂಚಾರವನ್ನುಂಟುಮಾಡಿದವು.

ಈ ಕಡೆಯಲ್ಲಿ ಜಯಮಲ್ಲನಿಗೆ ಸ್ವಲ್ಪ ಸಹ ವಿಶ್ರಾಂತಿಯಿರಲಿಲ್ಲ. ವಿಷಮ ಸಂಕಟಗಳೊದಗಿ ಹಿಮ್ಮೆಟ್ಟುವ ಸಮಯ ಬಂದಾಗ್ಗೆ ರಜಪೂತರು, ಸೇನಾಪತಿ ಯಾದ ಜಯಮಲ್ಲನ ಮೂರ್ತಿಯನ್ನು ನೋಡಿದ ಕೂಡಲೇ ಪುನಃ ನವೀನ ಉತ್ಸಾಹವನ್ನು ಹೊಂದುತ್ತಿದ್ದರು. ಶತ್ರುಗಳ ಸುರಂಗಗಳಿಂದ ಭಗ್ನವಾದ ಕೋಟೆ ಯ ಗೋಡೆಗಳಲ್ಲಿ ಸಣ್ಣ ಸಣ್ಣ ತೋಫುಗಳನ್ನು ಹಚ್ಚಿ, ಶತ್ರುಗಳನ್ನು ತಡೆಯುತ್ತಿ ದ್ದರು, ಎಡಬಲಗಳಲ್ಲಿರುವ ಬುರಜುಗಳ ಕಿಡಿಕಿಗಳಿಂದ ಗುಂಡುಗಳನ್ನು ಹಾರಿಸು ತ್ತಿದ್ದರು. ಇದರಿಂದ, ಮುಂದಕ್ಕೆ ಸಾಗಿಬರುವ ಮೊಗಲರಲ್ಲಿಯ ಬಹು ಜನರು ಇವರ ಗುರಿಯಿಟ್ಟ ಬಾಣಗಳಿಗೆ ಆಹುತಿಯಾಗುತ್ತಿದ್ದರು. ರಜಪೂತರು ಈ ಸಮ ಯದಲ್ಲಿ ತಮಗೊದಗಿದ ಅಲ್ಪಾವಕಾಶದಲ್ಲಿಯೇ ಕೋಟೆಯ ಗೋಡೆಗಳನ್ನು ಸುಧಾರಿಸಿ, ಒದಗಿದ ಭಯವನ್ನು ದೂರಮಾಡಿಕೊಳ್ಳುತ್ತಿದ್ದರು. ಈ ಮೇರೆಗೆ ಅನೇಕ ದಿವಸಗಳ ವರೆಗೆ ಅತ್ಯದ್ಭುತ ಯುದ್ಧವು ನಡೆಯಿತು.

ಅಕಬರನು ಈ ತರದ ಸಾಹಸಿಗಳಾದ ವೈರಿಗಳೊಡನೆ ಯುದ್ಧಮಾಡು ವದು ಭಯಂಕರ ವ್ಯಾಪಾರವೆಂದು ಭಾವಿಸಿದನು; ಯಾಕಂದರೆ ರಜಪೂತರ

ಅಸಂಖ್ಯ ಸೇನೆಯು ನಾಶವಾಗಿದ್ದರೂ, ಅವರ ಉತ್ಸಾಹವು ಕಡಿಮೆಯಾಗದೆ, ಹೆಚ್ಚುತ್ತ ನಡೆದಿತ್ತು. ಈ ಪ್ರಸಂಗದಲ್ಲಿ ಸಾವಕಾಶವಾಗಿ ಕೌಶಲ್ಯದಿಂದ ಕಾರ್ಯ ಸಾಧಿಸಿಕೊಳ್ಳುವದು ಯೋಗ್ಯವೆಂದು ವಿಚಾರಿಸಿದನು. ಚಿತೋಡದ ಕೋಟೆಯು ಒಂದು ಗುಡ್ಡದ ತುದಿಯಲ್ಲಿತ್ತು. ಅದರ ಗೋಡೆಗಳು ನಾಶಮಾಡಲಿಕ್ಕೆ ಅಸಾಧ್ಯವಾದವುಗಳಾಗಿದ್ದವು; ಮತ್ತು ಕೋಟೆಯಲ್ಲಿ ಸಾಕಷ್ಟು ಆಹಾರದ ಪದಾರ್ಥಗಳ ಸಂಗ್ರಹವೂ, ಜನಬಲವೂ ಇದ್ದಿತು. ಈ ತರದ ಸ್ಥಾನವನ್ನು ವಶಮಾಡಿಕೊಳ್ಳುವದು ಸುಲಭಸಾಧ್ಯವಾದ ಕಾರ್ಯವಾಗಿರಲಿಲ್ಲ. ಅದರಿಂದ ಅವಸರ ಮಾಡಿ ಉಪಯೋಗವಿರಲಿಲ್ಲ; ಯೋಗ್ಯಕಾಲ ಬರುವವರೆಗೆ ಮಾರ್ಗಪ್ರತೀಕ್ಷೆ ಮಾಡಬೇಕಾಗಿದ್ದಿತು. ಕಾರಣ ಅಕಬರನು ಈ ಸಮಯದಲ್ಲಿ ಆಲೋಚಿಸಿದ್ದೇನಂದರೆ —“ ರಜಪೂತರ ಮದ್ದುಗುಂಡುಗಳ ಸಂಗ್ರಹವು ಒಂದಿಲ್ಲೊಂದು ದಿವಸ ತೀರಲೇಬೇಕು, ಒಳಗಿರುವ ಆಹಾರದ ಪದಾರ್ಥಗಳೂ ತೀರುವವು; ಚಿತೋಡದ ಸೈನ್ಯವು ಒಂದಿಲ್ಲೊಂದು ದಿವಸ ನಿಶ್ಶೇಷವಾಗುವದು; ಯಾಕಂದರೆ ಒಳಗಿನ ಜನರ ಸಹಾಯಕ್ಕಾಗಿ ಹೊರಗಿನಿಂದ ಹೊಸ ಸೈನಿಕರು ಬರುವ ಸಂಭವವಿಲ್ಲ. ಕಾರಣ ನನಗೆ ಅನುಕೂಲವಾದ ಸಮಯವು ನಿಶ್ಚಯವಾಗಿ ಒದಗುವದು; ಆದರೆ ನಾನು ಆ ವರೆಗೆ ಮಾರ್ಗಕಾದುಕೊಂಡಿದ್ದು, ಬಿಡದಲೇ ಯುದ್ಧ ನಡೆಸಲೇಬೇಕು. ” ಈ ಮೇರೆಗೆ ಪುಷ್ಯಮಾಸವು ಹೋಯಿತು, ಮಾಘಮಾಸವು ಹೋಯಿತು; ಫಾಲ್ಗುಣಮಾಸವು ಬಂದಿತು; ಆದರೂ ಯುದ್ಧವು ನಡೆದೇ ಇತ್ತು. ಇದರಿಂದ ಎರಡೂ ಬಣಗಳು ದಿನಾಲು ನಿಸ್ತೇಜವಾಗುತ್ತನಡೆದವು.

ಈ ಸಮಯದಲ್ಲೊಂದು ದಿವಸ ರಾತ್ರಿಯ ವೇಳೆಯಲ್ಲಿ, ಪಶ್ಚಿಮಭಾಗದಲ್ಲಿ ಹನುಮಾನ್‌ಪೋಲದಲ್ಲಿಯ ಗೋಡೆಯ ಕೆಲವು ಭಾಗವು, ಮೊಗಲರ ಸುರಂಗದಿಂದ ಹಾರಿಹೋಯಿತು. ಅದರಿಂದ ಆ ಗೋಡೆಯ ಸುಧಾರಣೆಗಾಗಿ ರಜಪೂತರು ಕೂಡಿದರು. ಕೆಲವು ಜನರು ದೀವಟಿಗೆಗಳನ್ನು ಹಿಡಿದಿದ್ದರು, ಕೆಲವರು ಮೊಗಲರ ಆಕ್ರಮಣವನ್ನು ಎದುರಿಸಲಿಕ್ಕೆ ಸಿದ್ಧರಾಗಿ ನಿಂತಿದ್ದರು. ಕೆಳಭಾಗದಲ್ಲಿ ಮೊಗಲ ಸೈನಿಕರು ಸಿದ್ಧರಾಗಿ, ಕೆಲವರು ಗುಡ್ಡವನ್ನೇರುವದಕ್ಕೆ ಯತ್ನಿಸುತ್ತಿದ್ದರು. ಈ ಸಮಯದಲ್ಲಿ ಅಕಬರನು ದೀಪಮಂಚದ ಹತ್ತರ ಕುಳಿತು ರಜಪೂತರ ಯುದ್ಧಮಾಡುವ ಪದ್ಧತಿಯನ್ನು ನೋಡುತ್ತಿದ್ದನು. ಆಗ ಅವನು ಅಧಿಕಾರ

ವನ್ನು ನಡೆಸುವ ಸೇನಾಪತಿಯಂತಿರುವ ಒಂದು ಕಠೋರ ಮೂರ್ತಿಯನ್ನು‡ ಕಂಡನು. ಕೂಡಲೇ ಸಮೀಪದಲ್ಲಿದ್ದ* ಬಂದೂಕವನ್ನು ತೆಗೆದುಕೊಂಡು, ಗುರಿಯಿಟ್ಟು ಹೊಡೆದನು. ಇದರಿಂದ ಆ ಮೂರ್ತಿಯು ಆಹತವಾಗಿ ಬಿದ್ದುಬಿಟ್ಟಿತು. ಹಿಂದುಗಡೆಯಲ್ಲಿ ಇವನೇ ವೀರಚೂಡಾಮಣಿಯಾದ ಜಯಮಲ್ಲನೆಂದು ಗೊತ್ತಾಯಿತು.

ರಜಪೂತರ ಅವಸ್ಥೆಯು ಮೊದಲೇ ಶೋಚನೀಯವಾಗಿದ್ದಿತು; ಹೀಗೆ ಅಕಸ್ಮಾತ್ತಾಗಿ ಜಯಮಲ್ಲನು ಸತ್ತದ್ದನ್ನು ನೋಡಿ, ರಜಪೂತರು ಧೈರ್ಯಗುಂದಿದರು ಅವರು ಚಿತೋಡದ ರಕ್ಷಣೆಯ ವಿಷಯವಾಗಿ ನಿರಾಶರಾದರು. ಕೂಡಲೇ ಅವರು ತಮ್ಮ ಪದ್ಧತಿಯಂತೆ ಧರ್ಮರಕ್ಷಣೆಯ ಮಾರ್ಗವನ್ನವಲಂಬಿಸಿದರು. ದುರ್ಗದಲ್ಲಿ ಜೋಹಾರವ್ರತವನ್ನಾಚರಿಸುವ ಅಪ್ಪಣೆಯಾಯಿತು. ಶಿಶೋದಿಯಾ, ರಾಠೋರ, ಚೌಹಾಣ ಮೊದಲಾದ ಕ್ಷತ್ರಿಯರ ಪ್ರತಿಮನೆಯಲ್ಲಿ ಜೋಹಾರದ ಸಿದ್ಧತೆಯು ನಡೆಯಿತು. ಅನೇಕ ಚಿತೆಗಳು ತಯಾರಾದವು. ೯ ಮಂದಿ ರಾಣಿಯರೂ, ಐಯ್ವರು ರಾಜಕುಮಾರಿಯರೂ, ಸಾಮಂತ-ಸರದಾರರ ಅಸಂಖ್ಯ ಹೆಂಡಿರು-ಮಕ್ಕಳೂ ತಮ್ಮ ಕೂಸುಗಳೊಡನೆ ಆನಂದದಿಂದ ಅಗ್ನಿಯಲ್ಲಿ ಪ್ರವೇಶಿಸಿದರು. × ಎಂಟು ಸಾವಿರ ರಜಪೂತವೀರರು ನಡೆದುಬಂದ ಪದ್ಧತಿಯಂತೆ ಏಕತ್ರರಾಗಿ ಕಡೆಯ ತಾಂಬೂಲವನ್ನು ಗ್ರಹಿಸಿದರು; ಮತ್ತು ಹಳದೀ ವಸ್ತ್ರಗಳನ್ನು ಧರಿಸಿ, ಜೀವನಾಹುತಿಗಾಗಿ ಮುಂದೆ ಸಾಗಿದರು. ಇವರಲ್ಲಿ ಒಬ್ಬನೂ ಹಿಂದಿರುಗ

---

‡"The fierce force of Jaimal became visible throng the flashing of the fire of the cannon and guns" Badaoni, Lowe. P. 107

* ಜಯಮಲ್ಲನನ್ನು ತಾನು ಹೊಡೆದದ್ದಕ್ಕಾಗಿ ಅಕಬರನಿಗೆ ಬಹಳ ಆನಂದವಾಯಿತು. ಅಕಬರನು ತನ್ನ ಈ ಬಂದೂಕಿಗೆ 'ಸಂಗ್ರಾಮ' ವೆಂಬ ಹೆಸರಿಟ್ಟನು Rajasthan, Vol. I, P. 267. Akhbarnama Vol II, P. 472. ಅಕಬರನ ಈ ಬಂದೂಕಿಗೆ ದುರಸ್ತ-ಅಂದಾಜ (ನೇಟಗುರಿ) ಎಂಬ ಹೆಸರಿತ್ತೆಂದು ಜಹಾಂಗೀರನು ಹೇಳಿದ್ದಾನೆ Memoirs, (Price) P. 108.

× ಮೂರು ಸಾವಿರ ಸಾಮಂತ ಸರದಾರರ ರಮಣಿಯರು ಚಿತಾನಲದಲ್ಲಿ ಬಿದ್ದು, ಪ್ರಾಣಬಿಟ್ಟರೆಂದು ಅಬಲಫಜಲನು ಹೇಳಿದ್ದಾನೆ.

ಲಿಲ್ಲ. ಸಾಮಂತ-ಸರದಾರರ ಆಗ್ರಹದಿಂದ ರಾಮಶಹನೊಡನೆ ಪ್ರತಾಪಸಿಂಹನು ಈ ಮೊದಲೇ ಉದಯಪುರಕ್ಕೆ ಹೋಗಿದ್ದನು.

ದುರ್ಗದಲ್ಲಿ ಚಿತೆಗಳು ಉರಿಯುತ್ತಿರುವದನ್ನು ನೋಡಿ, ಭಗವಾನದಾಸನು ಇದೇ ಜೋಹಾರವ್ರತವೆಂದೂ, ಇನ್ನು ರಜಪೂತರು ತೀವ್ರವೇ ಯುದ್ಧಕ್ಕಾಗಿ ಹೊರಬೀಳುವರೆಂದೂ ಅಕಬರನಿಗೆ ಹೇಳಿದನು. ಬಾದಶಹನು ಕೋಟೆಯನ್ನಾಕ್ರಮಿಸುವದಕ್ಕೆ ಸೈನಿಕರಿಗೆ ಅಪ್ಪಣೆಯನ್ನು ಕೊಟ್ಟನು. ಸೈನಿಕರು ಉತ್ಸಾಹಿಗಳಾಗಿ ನಾಲ್ಕೂ ದಿಕ್ಕುಗಳಿಂದ ಕೋಟೆಯನ್ನಾಕ್ರಮಣಮಾಡಿದರು. ಬೆಳಗಾಗುವವರೆಗೆ ಯುದ್ಧವು ನಡೆಯಿತು. ಚಿತೋಡದ ರಕ್ಷಣೆಗಾಗಿ ಇದು ಕಡೆಯ ಪ್ರಯತ್ನವು. ರಜಪೂತರು ಈ ತಮ್ಮ ಕಡೆಯ ಪ್ರಯತ್ನದಿಂದ ಯಾವ ಲಾಭವೂ ಆಗುವದಿಲ್ಲೆಂಬದನ್ನು ಬಲ್ಲವರಾಗಿದ್ದರು. ಹೀಗಿದ್ದರೂ ಅವರು ಬಹು ಪರಾಕ್ರಮದಿಂದ ಕಾದಿದರು. ಅವರಿಗೆ ಜೀವವನ್ನುಳಿಸಿಕೊಂಡು ಹೋಗುವ ಆಲೋಚನೆಯಿರಲಿಲ್ಲ; ಯಾಕಂದರೆ ಅವರು ಮೃತ್ಯುದೇವತೆಯನ್ನಾಲಂಗಿಸುವದಕ್ಕಾಗಿಯೇ ಬಂದಿದ್ದರು. ಅಗಣಿತ ಶವಗಳು ರಾಶಿರಾಶಿಯಾಗಿ ಬಿದ್ದವು. ಇದರಲ್ಲಿ ಯಾರು ಪರಾಜಿತರಾದರೆಂಬದನ್ನು ಹೇಗೆ ಹೇಳಬೇಕು? ಯಾಕಂದರೆ ಪರಾಜಯದ ಫಲವನ್ನನುಭವಿಸಲಿಕ್ಕೆ ಯಾವ ರಜಪೂತನೂ ಜೀವಂತನಾಗಿ ಉಳಿದಿರಲಿಲ್ಲ. ಒಬ್ಬ ರಜಪೂತನಾದರೂ ಓಡಿಹೋಗಿ, ಆತ್ಮರಕ್ಷಣೆಗೆ ಪ್ರಯತ್ನಿಸಿದನೆಂದು, ಶತ್ರುಪಕ್ಷದ ಜನರಿಂದ ಬರೆಯಲ್ಪಟ್ಟ ಇತಿಹಾಸಗಳಲ್ಲಿಯೂ ಕೂಡ ದೊರೆಯುವದಿಲ್ಲ.

ಬೆಳಗಾಗುತ್ತಲೇ ಮೊಗಲರ ಅನೇಕ ಉತ್ತಮವಾದ ಆನೆಗಳು, ಶತ್ರುಗಳ ಶವಗಳನ್ನು ದಾಟುತ್ತ ನಡೆದವು; ಅಸಂಖ್ಯ ಮೊಗಲಸೈನಿಕರು ಕೋಟೆಯ ಕಡೆಗೆ ನಡೆದರು; ಬಾದಶಹನು ಆನೆಯನ್ನೇರಿ ಇವರನ್ನು ಹಿಂಬಾಲಿಸಿದನು. ಈ ಸಮಯದಲ್ಲಿಯೂ ಸಹ, ಉಳಿದ ಅತ್ಯಲ್ಪ ರಜಪೂತರು ತಮ್ಮ ಅತ್ಯದ್ಭುತ ರಣಕೌಶಲ್ಯವನ್ನು ತೋರಿಸುತ್ತಿರುವದನ್ನು ಅಕಬರನು ಕಂಡನು. ವೀರರಾದ ರಜಪೂತರ ಕತ್ತಿಯ ಹೊಡತಗಳಿಂದ ಆನೆಗಳ ಸೊಂಡೆಗಳು ಕಡಿದುಬೀಳುತ್ತಿದ್ದವು. ತುಸು ವೇಳೆಯಲ್ಲಿ ಈ ಉಳಿದಿರುವ ಅಲ್ಪಜನರೂ ಸತ್ತುಹೋದರು. ಯುದ್ಧವು ಸಮಾಪ್ತವಾಯಿತು. ಮಾರ್ಗವು ಕೇವಲ ಶವಗಳಿಂದ ತುಂಬಿಹೋಗಿತ್ತು. ಈ ವೇಳೆಯಲ್ಲಿ ಅಕಬರನು ಗಾಯಾಳುಗಳಾದ ರಜಪೂತಸೈನಿಕರ ಮೇಲೆ ನಡೆಸಿದ ಅತ್ಯಾಚಾರ

ವನ್ನು ಹೇಳಲಸಾಧ್ಯವು. ಮಹಾವೀರ ಪುತ್ತನು ಒಬ್ಬನೇ ಅಸಂಖ್ಯ ಸೈನಿಕರೊಡನೆ ಬಹುಕಾಲದವರೆಗೆ ಅಮಾತ್ಯರಾಕ್ಷಸನಂತೆ ಯುದ್ಧಮಾಡಿ, ಕಡೆಯಲ್ಲಿ ರಣಭೂಮಿಯಲ್ಲಿ ಬಿದ್ದನು. ಆದರೂ ಅವನ ಪ್ರಾಣವಿನ್ನೂ ಹೋಗಿರಲಿಲ್ಲ. ಒಂದು ಆನೆಯು ಇವನ ಅಚೇತನದೇಹವನ್ನು ತನ್ನ ಸೊಂಡಿಯಲ್ಲಿ ಹಿಡಿದುಕೊಂಡು ಹೋಗುತ್ತಿರುವದನ್ನು ಅಕಬರನು ನೋಡಿದನು. ಅಕಬರನಿಗೆ ಇವನ ಪರಿಚಯವು ಬಹಳವಾಗಿರಲಿಲ್ಲ. ಮಾವ್ರತನು ಇವನು ಒಬ್ಬ ರಜಪೂತ ಸೇನಾಪತಿಯೆಂದೂ, ಇವನ ಹೆಸರು ಪುತ್ತನೆಂದೂ ಅಕಬರನಿಗೆ ಹೇಳಿದನು. ಆದರೆ ತುಸು ವೇಳೆಯಲ್ಲಿ ಬಾಲವೀರನಾದ ಪುತ್ತನು ಚಿರನಿದ್ರೆಯನ್ನೈದಿದನು.

ಈ ವೇಳೆಯಲ್ಲಾದ ಚಿತೋಡದ ಅವಸ್ಥೆಯನ್ನು ಸರಿಯಾಗಿ ವರ್ಣಿಸುವದು ಸಾಧ್ಯವಲ್ಲ. ಕೋಟೆಯಲ್ಲಿ ಎಂಟು ಸಾವಿರ ರಜಪೂತರ ಹೊರತು ೪೦ ಸಾವಿರ ಒಕ್ಕಲಿಗ ಮುಂತಾದವರಿದ್ದರು. ಇವರು ಮೊದಲು ಚಿತೋಡದುರ್ಗದ ಕೆಳಭಾಗದಲ್ಲಿ ಅನೇಕ ಕಡೆಯಲ್ಲಿ ವಾಸಮಾಡುತ್ತಿದ್ದರು. ಮೊಗಲರ ಆಕ್ರಮಣಕ್ಕಿಂತ ಮೊದಲು ಇವರು ಕೋಟೆಯಲ್ಲಿ ಆಶ್ರಯಹೊಂದಿದ್ದರು. ಇವರಲ್ಲಿಯ ಸಮರ್ಥರಾದ ಮನುಷ್ಯರು ಯುದ್ಧದಲ್ಲಿ ವಾಹನಕಾರ್ಯವನ್ನೂ, ಪ್ರಹರಿಯ ಕಾರ್ಯವನ್ನೂ ಕೈಕೊಂಡಿದ್ದರು. ಬಾದಶಾಹೀ ಸೈನಿಕರು ಆಡಂಬರದಿಂದ ಕೋಟೆಯನ್ನು ಪ್ರವೇಶಿಸುವ ಮೊದಲೇ ಬಹುಜನ ರಜಪೂತರು ಮರಣಹೊಂದಿದ್ದರು. ಉಳಿದವರಲ್ಲಿಯ ಕೆಲವರು ದೇವರ ಗುಡಿಗಳಲ್ಲಿ ಅಡಗಿಕೊಂಡಿದ್ದರು, ಯಾಕಂದರೆ ಈ ವೇಳೆಯಲ್ಲಿ ದೇವರು ತಮ್ಮನ್ನು ರಕ್ಷಿಸುವನೆಂದೂ, ಗುಡಿಯಿಂದ ಹೊರಗೆಳೆದು ಯಾರೂ ತಮ್ಮನ್ನು ಕೊಲ್ಲಲಾರರೆಂದೂ ಅವರು ಭಾವಿಸಿದ್ದರು. ಕೆಲವರು ತಮ್ಮ ಮನೆಯಲ್ಲಿ ಅಡಗಿಕೊಂಡಿದ್ದರು. ಕೆಲವರು ಮಾರ್ಗದಲ್ಲಿ ಶತ್ರುಗಳಿಂದ ಮರಣಹೊಂದುತ್ತಿದ್ದರು. ರಜಪೂತರೊಡನಾದ ಅಕಬರನ ಯುದ್ಧವು ಬೆಳಗಾಗುತ್ತಲೇ ಮುಗಿದುಹೋಗಿತ್ತು; ಯಾಕಂದರೆ ಅಕಬರನ ಶತ್ರುಗಳಾದ ರಜಪೂತರಲ್ಲಿ ಯಾರೂ ಈ ವೇಳೆಯಲ್ಲಿ ಜೀವಿಸಿರಲಿಲ್ಲ.* ಅಕಬರನು ಇದನ್ನು ತಿಳಿದಿದ್ದರೂ ಸಹ, ಉಳಿದ ಯಾವತ್ತು ಜನರನ್ನು ಕೊಲ್ಲುವ ಅಪ್ಪಣೆಮಾಡಿದುದು ದುಃಖದ ವಿಷಯವಾಗಿದೆ.

* ಈ ಯುದ್ಧದಲ್ಲಿ ಯಾವತ್ತೂ ರಜಪೂತರು ಮಡಿದುಹೋಗಿದ್ದರೆಂದೂ, ಇವರ ಉಪವೀತಗಳ ಭಾರವು ೭೪॥ ಮಣವಾಯಿತೆಂದೂ ಹೇಳುತ್ತಿರುವರು ಒಂದು ಮಣಕ್ಕೆ ೪ ಸೇರುಯೆಂದು

ಪ್ರಾತಃಕಾಲದಿಂದ ಮಧ್ಯಾಹ್ನದವರೆಗೆ ಭಯಕಂರ ಕೊಲೆಯು ನಡೆಯಿತು. ಈ ಅತ್ಯಾಚಾರದಲ್ಲಿ ಸುಮಾರು ೩೦ ಸಾವಿರ ಜನರು ಮರಣಹೊಂದಿದರು. § ಚಿತೋಡದ ಭೂಮಿಯಲ್ಲಿ ರಕ್ತದ ಕಾಲಿವೆಗಳು ಹರಿದವು. ರಾಶಿರಾಶಿ ಶವಗಳು ಕಂಡಕಂಡೆಡೆಯಲ್ಲಿ ಬಿದ್ದು ಕೊಳೆಯಹತ್ತಿದವು. ಅರಮನೆ, ಗುಡಿಗಳ ಹತ್ತರ ಮೃತದೇಹಗಳ ರಾಶಿಯು ಪರ್ವತಾಕಾರವಾಗಿ ಬಿದ್ದಿತು. ಯಾರ ಅಂತ್ಯೇಷ್ಟಿ ಕ್ರಿಯೆಯೂ ಆಗಲಿಲ್ಲ. ಅದನ್ನು ಯಾರು ಮಾಡಬೇಕು? ಕೆಲವು ದಿವಸಗಳವರೆಗೆ, ರಜಪೂತರ ಶ್ರೇಷ್ಠವಾದ ಆ ರಾಜಧಾನಿಯು ಕೊಳೆತ ಹೆಣಗಳ ದುರ್ಗಂಧದಿಂದ ಕೂಡಿ, ನರಿನಾಯಿ ಮೊದಲಾದ ಪ್ರಾಣಿಗಳ ಉತ್ಸವಕ್ಷೇತ್ರವಾಯಿತು. ಸ್ವಾತಂತ್ರ್ಯದ ಲೀಲಾಭೂಮಿಯೂ, ದೈವೀಪ್ರಕೃತಿಯ ರಾಜಪುತ್ರರ ಆರಾಧ್ಯಜನನಿಯೂ ಆದ ಚಿತೋಡ ಮಹಾನಗರವು ಇಂದು ಸ್ಮಶಾನವಾಗಿ ಪರಿಣಮಿಸಿತು.

ಅಕಬರಬಾದಶಹನ ಸ್ತುತಿಯಲ್ಲಿ ತನ್ನ ಲೆಕ್ಕಣಿಕೆಯನ್ನುಪಯೋಗಿಸಿದ ವಿಖ್ಯಾತ ಇತಿಹಾಸಕಾರನಾದ ಅಬಲ್‌ಫಜಲನೂ ಕೂಡ, ಅಕಬರನ ಈ ಅತ್ಯಾಚಾರದ ಕಲಂಕವನ್ನು ಮುಚ್ಚಲಿಕ್ಕೆ ಸಮರ್ಥನಾಗಲಿಲ್ಲ. ಇವನು ಐತಿಹಾಸಿಕ ಸತ್ಯವನ್ನು ಮುಚ್ಚಿಡದೆ ಸ್ಪಷ್ಟವಾಗಿ ಹೇಳಿದ್ದಾನೆ —" ಅಲ್ಲಾವುದ್ದೀನನು ಕೋಟೆಯನ್ನಾಕ್ರಮಿಸಿದ ತರುವಾಯ, ಒಕ್ಕಲಿಗರು ಯುದ್ಧದಲ್ಲಿ ಸೇರದೆ ಇದ್ದುದರಿಂದ, ಅವರನ್ನು ಕೊಲ್ಲಲಿಲ್ಲ ಆದರೆ ಈ ಸಾರೆ ಒಕ್ಕಲಿಗರು ಯುದ್ಧಕ್ಕೆ ಸಹಾಯ ಮಾಡಿದ್ದನ್ನು ತಿಳಿದು, ಅಕಬರನು ಅವರ ಯಾವ ಮಾತನ್ನೂ ಕೇಳದೆ, ಯಾವತ್ತರನ್ನು

---

ತಿಳಿದು, ಒಬ್ಬ ರಜಪೂತನ ಉಪವೀತದ ಭಾರವು ಒಂದು ತೊಲಿಯೆಂದು ಭಾವಿಸಿದರೆ, ಈ ಯುದ್ಧದಲ್ಲಿ ಸುಮಾರು ೨೫೦೦೦ ಜನ ರಜಪೂತರು ಮೃತ್ಯುಮುಖದಲ್ಲಿ ಬಿದ್ದರೆಂದು ಹೇಳಬಹುದು ಈ ಯುದ್ಧಭೂಮಿಯಲ್ಲಿ ೪೦ ಸಾವಿರ ಜನರು ಸತ್ತರೆಂದು ಅಬಲ್‌ಫಜಲ ಮೊದಲಾದ ಇತಿಹಾಸಕಾರರು ಹೇಳಿದ್ದಾರೆ ಈ ಸಂಗತಿಯನ್ನು ಚಿರಸ್ಮರಣೀಯವಾಗಿ ಮಾಡುವದಕ್ಕೆ ಅಕಬರನು ತನ್ನ ರಾಜಕೀಯ ಆಜ್ಞಾಪತ್ರದ ಹಿಂಭಾಗದಲ್ಲಿ ೭೪|| ಈ ಸಾಂಕೇತಿಕ ಚಿನ್ಹವನ್ನು ಬರೆಯುವ ಪದ್ಧತಿಯನ್ನು ಪ್ರಚಾರದಲ್ಲಿ ತಂದನೆಂದು ವದಂತಿಯುದೆ. ನಿರ್ದಿಷ್ಟವ್ಯಕ್ತಿಯ ಹೊರತು ಅನ್ಯರು ಪತ್ರವನ್ನು ಒಡೆದಲ್ಲಿ, ಅವರಿಗೆ ಚಿತೋಡಧ್ವಂಸದ ಪಾಪಬರುವದೆಂದು ಇದರ ಅರ್ಥವು Rajasthan Vol. I, P. 268.

§ Akbarnama Vol. II, P. 475, Tabakat, Elliot Vol. V P. 328, 174. Badaoni Lowe P. 107.

ಕೊಲ್ಲುವ ಅಪ್ಪಣೆ ಮಾಡಿದನು. * ” ಕೇವಲ ಇಷ್ಟೇ ಅಲ್ಲ; ಅಕಬರನ ಸೈನಿಕರು ಚಿತೋಡದ ಮೇಲೆ ಪಾಪದ ಅತ್ಯಾಚಾರ ನಡೆಸಿದರು; ಮೂಲ್ಯವಾನ ವಸ್ತುಗಳನ್ನು ಸುಲಿಗೆ ಮಾಡಿದರು; ತೆಗೆದುಕೊಂಡುಹೋಗಲಿಕ್ಕೆ ಬರದವುಗಳನ್ನು ನಾಶಮಾಡಿದರು. ಅಲ್ಲಾವುದ್ದೀನನು ಚಿತೋಡದ ಉತ್ತಮ ಮಂದಿರಗಳನ್ನು ನಾಶಮಾಡುವ ಮನಸು ಮಾಡಲಿಲ್ಲ. ಬಹದ್ದುರಶಹನು ಈ ತರದ ಕೆಲಸ ಮಾಡಲಿಕ್ಕೆ ಅವಕಾಶವನ್ನು ಹೊಂದಲಿಲ್ಲ. ಆದರೆ ಅಕಬರನು ಚಿತೋಡದ ಯಾವತ್ತು ಉತ್ತಮ ಮಂದಿರಗಳನ್ನೂ, ದೇವಾಲಯಗಳನ್ನೂ ನಾಶಮಾಡಿ, ಚಿತೋಡದ ಶೋಭೆಯ ವಸ್ತುಗಳನ್ನು ಸುಲಿಗೆಮಾಡಿ, ಇಲ್ಲವೆ ನಾಶಮಾಡಿ, ತನ್ನ ಪಾಷಾಣ ಹೃದಯದ ಪರಿಚಯುವನ್ನುಂಟುಮಾಡಿಕೊಟ್ಟನು. ಇವನು ಚಿತೋಡದ ಅನೇಕ ಉತ್ತಮವಾದ ವಸ್ತುಗಳನ್ನು ತೆಗೆದುಕೊಂಡುಹೋಗಿ ಆಗ್ರಾ ರಾಜಧಾನಿಯ ಶೋಭೆಯನ್ನು ಬೆಳೆಸಿದನು. † ಅಲ್ಲಾವುದ್ದೀನನು ಓರ್ವ ಹಿಂದೂ ಮನುಷ್ಯನ ಕೈಯಲ್ಲಿ ಚಿತೋಡದ ಅಧಿಕಾರವನ್ನು ಒಪ್ಪಿಸಿ ಹೋದನು; ಆದರೆ ಅಕಬರನು ಸೇನಾಪತಿಯಾದ ಅಸಫಖಾನನ್ನು ಚಿತೋಡದ ಅಧಿಕಾರಿಯನ್ನಾಗಿ ಮಾಡಿದನು. ಅಲ್ಲಾವುದ್ದೀನನ ತರುವಾಯ ಚಿತೋಡದ ಪುನರುದ್ಧಾರವಾಯಿತು; ಆದರೆ ರಜಪೂತರು ಸಂಪೂರ್ಣವಾಗಿ ನಾಶರಾದ್ದರಿಂದ ಅಕಬರನ ತರುವಾಯ ಚಿತೋಡದ ಪುನರುದ್ಧಾರದ ಯಾವ ಆಶೆಯೂ ಉಳಿಯಲಿಲ್ಲ. ಚಿತೋಡದ ಇತಿಹಾಸವು ಇಲ್ಲಿಗೆ ಸಮಾಪ್ತವಾಯಿತು. ಯಾವತ್ತು ಜಾತಿಗಳ ಮೇಲೆ ಸಮದೃಷ್ಟಿಯನ್ನಿಟ್ಟ, ದಯಾಶಾಲಿಯೆಂದು ಹೆಸರಾಗಿ, ಭಾರತೀಯರಿಗೆ ಪ್ರಿಯನಾದ ಅಕಬರನ ಚರಿತ್ರೆಯಲ್ಲಿ ಚಿತೋಡದ ಅತ್ಯಾಚಾರವು ಒಂದು ದೊಡ್ಡ ಕಲಂಕವಾಗಿದೆ. ಅವನು

* The reason of so many being killed was that on the former occasion, when Sultan Allauddin took the fort. The peasantry were not put to death as they had not engaged in fighting. But on this occasion they had shown great zeal and activity. Their excuses after the emergence of victory were of no avail and orders were given for a general maassacre. Akbarnama Beveridge Vol II, P. 475.

† ಈಗ ಆಗ್ರಾದುರ್ಗದ ಮಧ್ಯದಲ್ಲಿ, ದಿವಾಣ-ಇ-ಅಮದ ಹಿಂದುಗಡೆಯಲ್ಲಿರುವ ಮಚ್ಛಿ ಭವನದ ಪ್ರಾಂಗಣದ ಪ್ರವೇಶಮಾರ್ಗದಲ್ಲಿ ಈ ಚಿತೋಡದ ಬಾಗಿಲವು ಅದೆ.

ಈ ಕಲಂಕವನ್ನು ತುಸುಮಟ್ಟಿಗಾದರೂ ಕಳೆದುಕೊಳ್ಳುವದಕ್ಕಾಗಿ, ಕೆಲವು ಕೆಲಸಗಳನ್ನು ಮಾಡಿದ್ದಾನೆ. ಅಕಬರನು ಜಯಮಲ್ಲ-ಪುತ್ತರ ವಿಕ್ರಮಕ್ಕೆ ಬಹಳ ವಾಗಿ ಮೋಹಿತನಾದ್ದರಿಂದ, ಆನೆಯ ಮೇಲೆ ಕುಳಿತಂತೆ ತಯಾರಿಸಿದ ಅವರ ಶಿಲಾಮೂರ್ತಿಗಳನ್ನು ಆಗ್ರಾದ ಬಾಗಿಲದಲ್ಲಿ ನಿಲ್ಲಿಸಿದ್ದಾನೆ. ‡

---

# ಅಷ್ಟಮ ಪರಿಚ್ಛೇದ.

## ಪ್ರತಾಪನ ರಾಜ್ಯಪ್ರಾಪ್ತಿ.

ಘೋರಾಟ್ಯದ ರಾಜ್ಯವ । ಸಾರವ್ಮೃಗೇಂದ್ರನು ಪಡೆಯುವ ತೆರದಿಂದಲಿ ಮೇ ||
ವಾರದ ಸಿಂಹಾಸನದಲಿ । ವೀರಂ ಪ್ರತಪಂ ಪ್ರತಾಪನರಸಾಗಿರ್ದಂ || ೧ ||

ಚಿತ್ತೋಡವು ಸಂಪೂರ್ಣವಾಗಿ ನಾಶವಾಯಿತು. ಅಕಬರನ ಮುತ್ತಿಗೆಯ ಪೂರ್ವದಲ್ಲಿ ಹೊರಗಿನಿಂದ ಅನೇಕ ಜನರು ಬಂದು ಕೋಟೆಯಲ್ಲಿ ವಾಸಮಾಡ ಹತ್ತಿದ್ದರಿಂದ, ಚಿತ್ತೋಡದ ಜನಸಂಖ್ಯೆಯು ಹೆಚ್ಚಾಗಿತ್ತು. ಈ ವಿಸ್ತಾರವಾದ ನಗ ರವು ಇಂದು ಜನಶೂನ್ಯವಾಯಿತು. ರಜಪೂತವೀರರಲ್ಲಿ ದೂರಿದ್ದವರು, ಇಲ್ಲವೆ ಮಹಾರಾಣಾ ಉದಯಸಿಂಹನೊಡನೆಯೂ, ಪ್ರತಾಪಸಿಂಹನೊಡನೆಯೂ ಹೋದ ವರು ನಾನಾಕಡೆಯಲ್ಲಿ ವಾಸಿಸುತ್ತಿದ್ದರು. ಚಿತ್ತೋಡವು ಇಂದು ಮೊಗಲರ ಅಧೀ ನವಾಗಿದೆ; ಅಸಫಖಾನನು ಈ ಶ್ಮಶಾನನಗರಿಯ ಅರಸನಾದನು. ದುರ್ಗವು ವಶವಾದ ಬಳಿಕ ಮೂರು ದಿವಸಗಳಾದ ಮೇಲೆ, ಅಕಬರನು ಅಜಮೀರಕ್ಕೆ ಹೊರ ಟನು. ಹೋಗುವಾಗ್ಗೆ ಚಿತ್ತೋಡದಲ್ಲಿ ಬಹು ಸೈನ್ಯವನ್ನಿಟ್ಟುಹೋದನು; ಯಾಕಂದ ರೆ ರಜಪೂತರು ತೀವ್ರವೇ ಮೊಗಲರ ಮೇಲೆ ಬೀಳದಂತಿದ್ದರೂ, ಅವರಲ್ಲಿ ಭಯ

---

‡ ಅಕಬರನು ಈ ಎರಡು ಮೂರ್ತಿಗಳನ್ನು ಆಗ್ರಾದ ಹಾತಿಪೋಲ ಅಗಸೆಯಲ್ಲಿ ಸ್ಥಾಪಿಸಿ ದನು ಪ್ರವಾಸಿಯಾದ ಬರ್ನಿಯರನು ಇವನ್ನು ನೋಡಿ, ಬಹಳವಾಗಿ ಹೊಗಳಿದ್ದಾನೆ. ಹಿಂದೂ ದ್ವೇಶಿಯಾದ ಔರಂಗಜೇಬನ ಅಪ್ಪಣೆಯಿಂದ ಇವು ನಷ್ಟವಾದವು. (೧೬೬೩) ಈ ಎರಡು ಮೂರ್ತಿಗಳು ಶಿಲ್ಪಕೌಶಲ್ಯದ ಅಪೂರ್ವ ನಿದರ್ಶನಗಳಾಗಿದ್ದವು Rajasthan Vol I, P. 298, Bernier' s Travels ( Bangabasi Edition )PP. 239-240, Havells ' Agra and Taj Pp 40.42, Agra Historical and discriptive P 76.

ವನ್ನುಂಟುಮಾಡುವದಕ್ಕೆ ಚಿತೋಡದಲ್ಲಿ ಹೆಚ್ಚು ಸೈನ್ಯವನ್ನಿಡುವದು ಅವಶ್ಯ. ವೆಂದು ಅವನು ಭಾವಿಸಿದನು. ಅಸಫಖಾನನು ಈ ಯಾವತ್ತು ಸೈನ್ಯವನ್ನು ತೆಗೆದುಕೊಂಡು, ಕೋಟೆಯ ಹತ್ತರಿರುವ ಮೊಗಲರ ಶಿಬಿರದಲ್ಲಿಯೇ ವಾಸಮಾಡುತ್ತಿದ್ದನು, ಯಾಕಂದರೆ ಕೆಲವು ದಿವಸಗಳವರೆಗಾದರೂ ದುರ್ಗದ ಸ್ಮಶಾನಭೂಮಿಯಲ್ಲಿ ವಾಸಮಾಡುವದು ಅಸಂಭವವಾಗಿತ್ತು. ಅಸಫಖಾನನ ಆಶ್ವಾಸನದಿಂದ ಕೆಲವು ಹಿಂದೂಜನರು ಬದುಕಿಕೊಂಡಿದ್ದರು; ಅವರೂ ದುರ್ಗದ ಕೆಳಭಾಗದಲ್ಲಿ ವಾಸಮಾಡಹತ್ತಿದರು; ಯಾಕಂದರೆ ಭಯಂಕರವಾದ ಜನಶೂನ್ಯಪಟ್ಟಣದಲ್ಲಿ ವಾಸಮಾಡಲಿಕ್ಕೆ ಅವರ ಮನಸಾಗಲಿಲ್ಲ. ಕಡೆಯಲ್ಲಿ ಮೊಗಲರು ಕೋಟೆಯ ಗೋಡೆಗಳನ್ನು ಸುಧಾರಿಸಿ, ಅಲ್ಲಿ ತೋಫುಗಳನ್ನು ಹಚ್ಚಿದರು, ಮತ್ತು ಕೆಳಗಿರುವ ಶಿಬಿರವನ್ನು ಬಿಟ್ಟು, ದುರ್ಗದಲ್ಲಿ ವಾಸಮಾಡತೊಡಗಿದರು. ಕೋಟೆಯಲ್ಲಿ ಸುರಕ್ಷಿತವಾಗಿರಲಿಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುವದಕ್ಕೆ ಅಸಫಖಾನನಿಗೆ ಒಂದೆರಡು ವರ್ಷ ಬೇಕಾದವು. ಕೋಟೆಯಲ್ಲಿ ಯಾನ-ವಾಪನ ಕಾರ್ಯಮಾಡಲಿಕ್ಕೂ, ಇತರ ಸೇವೆಯ ಕೆಲಸಮಾಡುವದಕ್ಕೂ ಭೃತ್ಯರಿರಲಿಲ್ಲ. ಕಾರಣ ಅಸಫಖಾನನು ಕೆಲವು ಗುಡ್ಡಗಾಡು ಜನರನ್ನು ಕೋಟೆಯಲ್ಲಿ ತಂದಿಟ್ಟನು. ಹೀಗೆ ಎಲ್ಲ ವ್ಯವಸ್ಥೆಯನ್ನು ಮಾಡಿದರೂ, ಪಟ್ಟಣದ ಹವೆಯು ಬಹಳವಾಗಿ ಕೆಟ್ಟದ್ದರಿಂದ, ದಿನಾಲು ಮೊಗಲಸೈನಿಕರಲ್ಲಿ ಎಷ್ಟೋ ಜನರು ಸತ್ತುಹೋಗತೊಡಗಿದರು. ಜನಸಂಕೀರ್ಣವಾದ ಆ ನಗರದಲ್ಲಿ, ಇಂದು ಬಹು ತುಸು ಜನರು ಮಾತ್ರ ವಾಸಮಾಡಹತ್ತಿದ್ದರಿಂದ, ಹಾಳಾದ ಗುಡಿಗಳ ಮೇಲೂ ಜನರ ಮನೆಗಳ ಮೇಲೂ ಹುಲ್ಲುಕಂಟಿಗಳು ಬೆಳೆಯತೊಡಗಿದವು. ಅದರಿಂದ ಪಟ್ಟಣವು ಅರಣ್ಯದಂತಾಗಿ, ಹಿಂಸ್ರಪಶುಗಳು ವಾಸಮಾಡತೊಡಗಿದವು.* ಮುಂದೆ ಕೆಲವು ವರುಷಗಳಲ್ಲಿಯೇ

* ಪ್ರತಾಪಸಿಂಹನ ಮರಣದ ತರುವಾಯು, ಮೊಗಲ ಸೈನಿಕರು ಚಿತೋಡವನ್ನು ಬಿಟ್ಟು ಹೋದರು, ಈ ಸಮಯುದಲ್ಲಿ ಚಿತೋಡದ ಸ್ಥಿತಿಯು ಅತಿಶಯ ಶೋಚನೀಯುವಾಗಿದ್ದಿತು ಇಂಗ್ಲಂಡದ ರಾಜದೂತನಾದ ಸರ್ ಟಾಮುಸ್‌ರೋನು ಸನ್ ೧೬೧೫ ರಲ್ಲಿ ಅಜಮೀರಕ್ಕೆ ಬಂದು ಜಹಂಗೀರನ ದರ್ಶನ ತಕ್ಕೊಂಡನು ಈ ಸಮಯುದಲ್ಲಿ ( ಅಜಮೀರಕ್ಕೆ ಬರುವ ಮೊದಲು ) ಅವನು ಚಿತೋಡವನ್ನು ನೋಡುವದಕ್ಕೆ ಹೋಗಿದ್ದನು ಇವನ ವರ್ಣನೆಯಿಂದ ಚಿತೋಡದ ಅವಸ್ಥೆಯುನ್ನು ತಿಳಿಯುಬಹುದಾಗಿದೆ —" Its inhabitants at this day are zum and Ohim, birds and wild beasts; but the stately ruins their of give a shadao of its beauty while it flourished in its pride." Rejas thaan I 287.

ಅಸಫಖಾನನು ಮೃತ್ಯು-ಮುಖದಲ್ಲಿ ಬಿದ್ದನು.§

ಉದಯಸಿಂಹನು ಚಿತೋಡವನ್ನು ಬಿಟ್ಟ ತರುವಾಯ, ಪರ್ವತ-ಕಂದರಗಳ ಮಧ್ಯದಲ್ಲಿ ಉದಯಸಾಗರದ ಸಮೀಪದಲ್ಲಿರುವ ನಾಚಾಕಿ ಎಂಬ ಸಣ್ಣ ಅರಮನೆಯಲ್ಲಿ ವಾಸಿಸಹತ್ತಿದನು. ಇವನು ಗತಜೀವನದ ಬಗ್ಗೆ ಪಶ್ಚಾತ್ತಾಪಪಡುತ್ತ ಬಹು ವ್ಯಸನದಿಂದ ಕಾಲಕಳೆಯುತ್ತಿದ್ದನು. ಪ್ರತಾಪಸಿಂಹನು ಇದರ ಸಮೀಪದಲ್ಲಿಯೇ ಇರುವ ಕಮಲಮೀರದುರ್ಗದಲ್ಲಿ ವಾಸಮಾಡುತ್ತಿದ್ದನು. ಉದಯಸಿಂಹನು ವೀರನಾದ ಪ್ರತಾಪಸಿಂಹನನ್ನು ವಿಶೇಷವಾಗಿ ಪ್ರೀತಿಸಲಿಲ್ಲ. ಅವನು ಜಯಮಲ್ಲನೆಂಬ ಸಣ್ಣ ಮಗನನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಆದರೆ ಪ್ರತಾಪಸಿಂಹನೇ ಸಂಗ್ರಾಮಸಿಂಹನ ವಂಶಜರಲ್ಲಿ ಯೋಗ್ಯ ಮನುಷ್ಯನಾಗಿದ್ದನು. ಇವನು ತಂದೆಯಲ್ಲಿದ್ದ ಯಾವ ದೋಷವನ್ನೂ ಹೊಂದಿರಲಿಲ್ಲ. ಕೆಲವು ಕಡೆಯಲ್ಲಿ ತಂದೆಯ ಗುಣಗಳು ಮಗನಲ್ಲಿರದೆ ಅಜ್ಜನ ಗುಣಗಳು ಮೊಮ್ಮಗನಲ್ಲಿರುವದನ್ನು ನೋಡುತ್ತೇವೆ. ಅದರಂತೆ ಸಂಗ್ರಾಮಸಿಂಹನ ಶೌರ್ಯಾದಿ ಗುಣಗಳು ಉದಯಸಿಂಹನಲ್ಲಿರಲಿಲ್ಲ; ಪ್ರತಾಪಸಿಂಹನು ಆ ಎಲ್ಲ ಗುಣಗಳಿಂದ ಕೂಡಿದವನಾಗಿದ್ದನು. ಪ್ರತಾಪಸಿಂಹನು ಎಷ್ಟೋ ಸಾರೆ ದುಃಖದಿಂದ ಅನ್ನುತ್ತಿದ್ದುದೇನಂದರೆ—" ಸಂಗ್ರಾಮಸಿಂಹನ ತರುವಾಯ, ಉದಯಸಿಂಹನು ಮಹಾರಾಣಾನಾಗದಿದ್ದಲ್ಲಿ ಮೇವಾಡಕ್ಕೆ ಈ ತರದ ದುರ್ದಶೆಯುಂಟಾಗುತ್ತಿದ್ದಿಲ್ಲ. "

ಸಾಮಾನ್ಯತಃ ಉದಯಸಿಂಹನೆಂಬ ಹೆಸರಿನಲ್ಲಿಯೇ ದೋಷವಿತ್ತೆಂದು ಹೇಳಬಹುದು. ಒಬ್ಬ ಉದಯಸಿಂಹನ ದೋಷದಿಂದ ಚಿತೋಡವು ಕೈಬಿಟ್ಟಿತು; ಮೇವಾಡದ ಗೌರವವು ನಷ್ಟವಾಯಿತು; ಮೇವಾಡದ ರಾಜಧಾನಿಯಲ್ಲಿ ಯವನರ ಪತಾಕೆಯು ಹಾರಹತ್ತಿತು. ಇನ್ನೊಬ್ಬ ಉದಯಸಿಂಹನು ಜೋಧಪುರದ

§ ಇವನ ಹೆಸರು ಅಬ್ದುಲ್‌ಮಜೀದಂ ಆದರೆ ಅಸಫಖಾ ಎಂಬ ಉಪಾಧಿಯನ್ನು ಹೊಂದಿದ್ದನು ಅಕಬರನ ದರಬಾರದಲ್ಲಿರುವ ಶ್ರೇಷ್ಠರಾದ ನಾಲ್ಕು ಜನ ಅಮೀರರಿಗೆ ಅಸಫಖಾಯೆಂಬ ಬಿರುದಿದ್ದಿತು ಇವರಲ್ಲಿ ಇವನು ಮೊದಲಿನವನು ಚಿತೋಡ ಧ್ವಂಸವಾದನಂತರ ಆರು ವರುಷಗಳ ಮೇಲೆ ಇವನು ತೀರಿಕೊಂಡನು. ಸಾಮ್ರಾಜ್ಞಿಯಾದ ನೂರಜಹಾನಳ ಸಹೋದರನು ಮೂರನೆಯ ಅಸಫಖಾ ಆಗಿದ್ದನು. ಅಬ್ದುಲ್‌ಮಜಿದನು ಸನ್ ೧೬೦೪ ರಲ್ಲಿ ಮಾನಸಿಂಹನ ಪ್ರತಿನಿಧಿಯಾಗಿ ಬಂಗಾಲದ ಸುಭೇದಾರನಾಗಿ ಹೋಗಿದ್ದನೆಂಬದು ಸತ್ಯವಾದದ್ದಲ್ಲ Ain, Blochman P. P. 368-369, 433. Stewart's History of Bengal ( Bangabasi Edition ) P. 214

ಮಲ್ಲದೇವನ ಮಗನು. ಜೋಧಪುರವು ಮೊಗಲರ ವಶವಾದನಂತರ ಉದಯಸಿಂಹನು ತನ್ನ ಸಹೋದರಿಯಾದ ಜೋಧಬಾಯಿಯನ್ನು ಅಕಬರನ ಹಸ್ತದಲ್ಲಿ ಸಮರ್ಪಿಸಿ, ರಾಜ್ಯಚಾಲಕನಾಗಿ ದರಬಾರದಲ್ಲಿ ಆನಂದದಿಂದಿರಹತ್ತಿದನು; ಮತ್ತು ಸ್ವಜನಾಂಗದ ಅಭಿಮಾನವನ್ನು ತ್ಯಜಿಸಿ, ರಾಜ್ಯಚಾಲಕನಾದೆನೆಂದು ಗೌರವವನ್ನು ನುಭವಿಸತೊಡಗಿದನು ಈ ಉದಯಸಿಂಹನಿಂದ ರಾಜಪುತ್ರರ ಮತ್ತು ರಜಪೂತ ಜಾತಿಯ ಗೌರವವು ನಾಶವಾಯಿತು. ಕಾರಣ ಈ ಉಭಯ ಉದಯಸಿಂಹರ ಕಾಲದಲ್ಲಿ ರಜಪೂತರ ಗೌರವದ ಉದಯವಾಗದೆ, ಅಸ್ತವಾಯಿತೆಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ಉದಯಪುರಕ್ಕೆ ಕೋಟೆಯಿರಲಿಲ್ಲ; ಮತ್ತು ಶತ್ರುಸೇನೆಯು ರಾಜಸ್ಥಾನವನ್ನು ಬಿಟ್ಟುಹೋಗಿರಲಿಲ್ಲ. ಆದರಿಂದ ಉದಯಸಿಂಹನು ಎಷ್ಟೋ ದಿವಸ ಉದಯಪುರದಿಂದ ನೈಋತ್ಯಕ್ಕಿರುವ +ಗೋಗುಂಡಾದುರ್ಗದಲ್ಲಿ ವಾಸಮಾಡುತ್ತಿದ್ದನು. ಗೋಗುಂಡವು ಪರ್ವತಶಿಖರದಲ್ಲಿರುವ ಸುಂದರವಾದ ಪಟ್ಟಣವು. ಇದು ಸಮುದ್ರಪಾತಳಿಯಿಂದ ಸುಮಾರು ೨೭೫೦ ಫೂಟು ಎತ್ತರದಲ್ಲಿದೆ. ಅರವಲೀ ಪರ್ವತದ ಮೇಲೆ ಇಷ್ಟು ಎತ್ತರದ ಮೇಲಿರುವ ಪಟ್ಟಣಗಳು ತೀರ ವಿರಳವಾಗಿವೆ ಇಷ್ಟು ಎತ್ತರವಾದ ಸ್ಥಳದಲ್ಲಿದ್ದರೂ, ಈ ಪಟ್ಟಣದಲ್ಲಿ ನೀರಿನ ಅನುಕೂಲತೆಯು ಚನ್ನಾಗಿತ್ತು * ಈ ಸ್ಥಳದಲ್ಲಿ ಉದಯಸಿಂಹನು ೪೨ ವರುಷದವನಾಗಿ ತೀರಿಕೊಂಡನು. ಇವನಿಗೆ ೨೫ ಮಂದಿ ಗುಂಡುಮಕ್ಕಳಿದ್ದರು. ಇವರಲ್ಲಿ ಪ್ರತಾಪಸಿಂಹನು ಹಿರಿಯನು. ಆದರೆ ಉದಯಸಿಂಹನು ತನ್ನ ತರುವಾಯ, ಪ್ರತಾಪಸಿಂಹನು ಅರಸನಾಗುವಂತೆ ಮಾಡದೆ, ಜಗಮಲ್ಲನೆಂಬ ಸಣ್ಣ ಮಗನನ್ನು ಪಟ್ಟಕ್ಕೆ ಯೋಗ್ಯನೆಂದು ಆರಿಸಿದ್ದನು. ರಜಪೂತರಲ್ಲಿ ಹಿರಿಯಮಗನೇ ಪಟ್ಟಕ್ಕೆ ಬಾಧ್ಯಸ್ಥನಾಗಬೇಕೆಂಬದು ನಿಯಮವು; ಆದರೆ ಉದಯಸಿಂಹನು ಬಹುಕಾಲದಿಂದ ನಡೆದುಬಂದ ನಿಯಮವನ್ನು ಮೀರಿ, ಮರಣಕಾಲದಲ್ಲಿ ಬೇರೊಂದು ನೀಚತ್ವವನ್ನು ಪ್ರಕಟಗೊಳಿಸಿದನು. ಇದರಿಂದ ಝಾಲೋರದ ಅರಸನಾದ ಶೋಣಿಗುರು ಸರದಾರನು ಬಹಳ ಸಿಟ್ಟಾಗಿ ಪ್ರತಾಪಸಿಂಹನನ್ನು ಪಟ್ಟಕ್ಕೆ ಕುಳ್ಳಿರಿಸುವೆ

---

+ ಬ್ಲಾಕಮನ ಮತ್ತು ಬೆವ್ಹರಿಜ್ ಈ ಉಭಯತರು ಇದಕ್ಕೆ ಗೋಗಾಂಡಾ ಎಂದು ಹೇಳಿದ್ದಾರೆ

* Gazetteer, Vol. III P. 55.

ನೆಂದು ಸ್ಥಿರಪ್ರತಿಜ್ಞೆಯನ್ನು ಮಾಡಿದನು. ಸಹಿದಾಸನ ತರುವಾಯ ಕೃಷ್ಣದಾಸನು ಚಂದಾಯತ್ ಕುಲದ ಅಧಿಪತಿಯಾದನು. ಚಂದಾಯತ್ ಕುಲದ ಸರದಾರರು ಬಹುಕಾಲದವರೆಗೆ ಮಹಾರಾಣಾನ ಮುಖ್ಯ ಮಂತ್ರಿಗಳಾಗಿದ್ದರು. ಝಾಲೋರದ ಅಧಿಪತಿಯು ಉದಯಪುರಕ್ಕೆ ಬಂದು ಕೃಷ್ಣದಾಸನನ್ನು ಕೇಳಿದನು:—“ ಮಹಾಶಯ, ಹಿರಿಯ ಮಗನಿರುತ್ತಿರಲು, ಕಿರಿಯ ಮಗನಾದ ಜಗಮಲ್ಲನು ಅರಸನಾಗಬೇಕೆಂಬ ಮಾತಿಗೆ ತಾವು ಹೇಗೆ ಒಪ್ಪಿಕೊಂಡಿರಿ? ” ಕೃಷ್ಣದಾಸನು ಉತ್ತರ ಕೊಟ್ಟದ್ದೇನಂದರೆ—:“ ಅಂತಿಮ ಕಾಲದಲ್ಲಿ ರೋಗಿಗೆ ಅಪಥ್ಯಸೇವನೆಯ ಇಚೆಯುಂಟಾದಲ್ಲಿ, ಅದನ್ನು ಯಾರು ತಡೆಯುವರು? ” ಕೃಷ್ಣದಾಸನು ಮುಂದೆ ಕೆಲವು ಹೊತ್ತು ಸುಮ್ಮನೆ ಕುಳಿತು, ಮತ್ತೆ ಹೇಳಿದನು —“ ಪ್ರತಾಪಸಿಂಹನೇ ಹಿರಿಯಮಗನು; ಪಟ್ಟಕ್ಕೆ ಯೋಗ್ಯ ಹಕ್ಕದಾರನು. ಅವನೇ ಅರಸನಾಗಬೇಕೆಂದು ನಮ್ಮ ಇಚ್ಛೆಯುಂಟು. ತಾವು ಯಾವ ರೀತಿಯಿಂದಲೂ ಚಿಂತಿಸಬೇಡಿರಿ. ” ತರುವಾಯ ಈರ್ವರೂ ಕೂಡಿ, ಸೈನ್ಯದೊಡನೆ ಪ್ರತಾಪಸಿಂಹನನ್ನು ಕರೆದುಕೊಂಡು ಜಗಮಲ್ಲನ ಹತ್ತರ ಹೋದರು.

ಗ್ವಾಲ್ಹೇರದ ಮೊದಲಿನ ಅರಸನಾದ ರಾಮಶಹನು, ಚಿತೋಡದಿಂದ ಪ್ರತಾಪಸಿಂಹನೊಡನೆ ಹೊರಬಿದ್ದು ಕಮಲಮೀರದುರ್ಗದಲ್ಲಿ ವಾಸಮಾಡಿದನು. ಅವನು ಪ್ರತಾಪನಲ್ಲಿರುವ ಉತ್ತಮ ಗುಣಗಳನ್ನು ನೋಡಿ, ಅವನನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಈ ಸಮಯದಲ್ಲಿ ಇವನೂ ಗೋಗುಂಡಕ್ಕೆ ಬಂದಿದ್ದನು. ಚಿತೋಡದಲ್ಲಿ ಒಬ್ಬ ಅರಸನ ತರುವಾಯ, ಬೇರೊಬ್ಬನು ಸಿಂಹಾಸನವನ್ನೇರುವ ಕಾರ್ಯವು, ಅತಿ ತೀವ್ರವಾಗಿ ನಡೆದುಹೋಗುತ್ತಿದ್ದಿತು. ಮೃತರಾಜನ ಅಂತೇಷ್ಟಿ ಕ್ರಿಯೆಯೊಡನೆ, ಹೊಸ ಅರಸನ ಪಟ್ಟಾಭಿಷೇಕಕಾರ್ಯವೂ ನಡೆದುಹೋಗುತ್ತಿತ್ತು. ಉದಯಸಿಂಹನು ಸತ್ತ ತುಸು ದಿವಸಗಳಲ್ಲಿಯೇ—ಫಾಲ್ಗುಣಮಾಸದ ಪೌರ್ಣಿಮೆಯ ದಿವಸ ಜಗಮಲ್ಲನು ಸಿಂಹಾಸನವನ್ನೇರಿದ್ದನು. ತರುವಾಯ ಕೃಷ್ಣದಾಸ ಮೊದಲಾದವರು ಬಂದರು. ಜಗಮಲ್ಲನು ಇವರೆಲ್ಲರಿಗೆ ಯೋಗ್ಯ ರೀತಿಯಿಂದ ಸತ್ಕಾರಮಾಡಿದನು. ಆದರೆ ಕೃಷ್ಣದಾಸ-ರಾಮಶಹರು ಗೃಹಪ್ರವೇಶ ಮಾಡಿ, ಒಬ್ಬೊಬ್ಬರು ಜಗಮಲ್ಲನ ಒಂದೊಂದು ಕೈಯನ್ನು ಹಿಡಿದು, ಅವನನು ಗಾದಿಯಿಂದ ಎಳೆದು, ಕೆಳಗೆ ಕೂಡಿಸಿದರು. ಮತ್ತು ಪ್ರಧಾನನು ಸಗರ್ವದಿಂದ ಹೇಳಿದನು:—“ ಮಹಾರಾಜ, ತಮಗೆ ಭ್ರಮೆಯಾಗಿದೆ; ಈ ಆಸನವು ತಮ್ಮದಲ್ಲ;

ಇದು ತಮ್ಮ ಹಿರಿಯ ಅಣ್ಣನಾದ ಪ್ರತಾಪಸಿಂಹನದು. ತರುವಾಯ ಅವನು ಪ್ರತಾಪಸಿಂಹನನ್ನು ಗಾದಿಯ ಮೇಲೆ ಕುಳ್ಳಿರಿಸಿ, ಅವನಿಗೆ ಚಿತೋಡದ ಮಹಾರಾಣಾರು ಪೂರ್ವಕಾಲದಿಂದ ಧರಿಸುತ್ತಬಂದಿದ್ದ ಆಯುಧವನ್ನು ಕೊಟ್ಟನು. ಆಗ ಎಲ್ಲರೂ ಪ್ರತಾಪಸಿಂಹನಿಗೆ ಮೂರು ಸಾರೆ ನೆಲಮುಟ್ಟಿ ನಮಸ್ಕಾರಮಾಡಿ, ಚಿತೋಡದ ಮಹಾರಾಣಾನೆಂದು ಗೌರವಿಸಿದರು. ಜಗಮಲ್ಲನು ನಿಸ್ತಬ್ಧನಾಗಿಹೋದನು. ಪ್ರತಾಪನಿಗೆ ದೈವವು ಸಹಾಯವಾಯಿತು. ಮಹಾರಾಣಾ ಪ್ರತಾಪಸಿಂಹರೇ ಜಯ ಎಂಬ ಉಚ್ಚ ಧ್ವನಿಯು ಎಲ್ಲ ಕಡೆಯಲ್ಲಿಯೂ ವ್ಯಾಪಿಸಿತು. ಹೀಗೆ ಮೇವಾಡದ ರಾಜಾಸನದ ಮೇಲೆ ಬಹು ದಿವಸಗಳ ಮೇಲೆ ಯೋಗ್ಯ ಮನುಷ್ಯನ ಪ್ರತಿಷ್ಠೆಯಾಯಿತು.

ಪ್ರತಿವರ್ಷ ವಸಂತಕಾಲದ ಪ್ರಾರಂಭದಲ್ಲೊಮ್ಮೆ ರಜಪೂತರು ಗುಂಪಾಗಿ, ಬೇಟೆಯಾಡುವದಕ್ಕೆ ಹೋಗುತ್ತಿದ್ದರು. ಇದಕ್ಕೆ ಆಹೇರಿಯಾ ಉತ್ಸವವೆನ್ನುತ್ತಿದ್ದರು. ಜ್ಯೋತಿಷಶಾಸ್ತ್ರದ ನಿಯಮಾನುಸಾರವಾಗಿ ಈ ದಿವಸವನ್ನು ಗೊತ್ತುಮಾಡಿರುತ್ತಿದ್ದರು. ರಜಪೂತರು ಈ ಉತ್ಸವಕ್ಕಾಗಿ ಅನೇಕ ದಿವಸಗಳಿಂದ ಸಿದ್ಧತೆಯನ್ನು ಮಾಡುತ್ತಿದ್ದರು; ಈ ಸಮಯದಲ್ಲಿ ರಾಜಸ್ಥಾನದ ಆಬಾಲ-ವೃದ್ಧರೆಲ್ಲರಲ್ಲಿಯೂ ನವೀನ ಶಕ್ತಿಯುಂಟಾಗುತ್ತಿದ್ದಿತು; ಅದರಿಂದವರು ಅತೀವ ಉತ್ಸಾಹದಿಂದ ಬಹು ಜನರು ಒಟ್ಟುಗೂಡಿ, ಈ ಉತ್ಸವವನ್ನು ನೆರವೇರಿಸುತ್ತಿದ್ದರು. ಅಸಂಖ್ಯ ಅಡವಿಯ ಹಂದಿಗಳನ್ನು ಬೇಟೆಯಾಡುವದು ಈ ಉತ್ಸವದ ಮುಖ್ಯ ಉದ್ದೇಶವಾಗಿತ್ತು. ಈ ಬೇಟೆಯಲ್ಲಿ ಕೊಂದ ಮೃಗಗಳನ್ನು ಗೌರೀದೇವಿಗೆ ಸಮರ್ಪಿಸುತ್ತಿದ್ದರು. ಈ ದಿವಸದ ಬೇಟೆಯ ಫಲದಿಂದ, ಇಡೀ ವರ್ಷದ ಯುದ್ಧದ ಶುಭಾಶುಭ ಫಲಗಳ ನಿರ್ಣಯ ಮಾಡುತ್ತಿದ್ದರು. ಅಂದರೆ ಆಹೇರಿಯದ ದಿವಸ ಬೇಟೆಯು ಸಾಕಷ್ಟು ದೊರೆತಲ್ಲಿ, ಆ ವರ್ಷ ಅಪಜಯವಿಲ್ಲ; ಹೀಗಾಗದೆ ಆಹೇರಿಯದಲ್ಲಿ ಬೇಟೆಯು ಚನ್ನಾಗಿ ದೊರೆಯದಿದ್ದಲ್ಲಿ ಆ ವರ್ಷ ಯುದ್ಧದಲ್ಲಿ ಜಯವಿಲ್ಲ. ಈ ಮಾತಿನ ಸತ್ಯಾಸತ್ಯತೆಯನ್ನು ನಾವು ಹೇಳಲಾರೆವು. ಆದರೂ ರಜಪೂತರಲ್ಲಿ ಈ ತರದ ದೃಢ ವಿಶ್ವಾಸವಿತ್ತೆಂಬದನ್ನು ಹೇಳಬಲ್ಲೆವು. ಬೇಟೆಯಾಡುವದು ಮುಗಿದನಂತರ ಒಂದು ಸ್ಥಳದಲ್ಲಿ ಅಡಿಗೆಮಾಡುತ್ತಿದ್ದರು. ಈ ವನಭೋಜನಕ್ಕೆ ಮಹಾರಾಣಾನು ತನ್ನ ಸಾಮಂತ-ಸರದಾರರೊಡನೆ ಬರುತ್ತಿದ್ದನು. ಪ್ರತಾಪಸಿಂಹನು ಆಹೇರಿಯಾ ಉತ್ಸವದ ದಿವಸವೇ ಸಿಂಹಾಸನವನ್ನೇರಿದನು. ಅದರಿಂದವನು ಪಟ್ಟಾಭಿಷೇಕವಾದ

ತರುವಾಯ, ಯಾವತ್ತರನ್ನು ಕರೆದು, ಆಹೇರಿಯಾ ಉತ್ಸವಕ್ಕೆ ಹೊರಡಲು ಸಿದ್ಧರಾಗಬೇಕೆಂದು ಹೇಳಿದನು; ಸೇವಕರಿಗೆ ಕುದುರೆಗಳನ್ನು ಸಿದ್ಧಮಾಡುವದಕ್ಕೆ ಅಪ್ಪಣೆಮಾಡಿದನು. ಎಲ್ಲ ಕಡೆಯಲ್ಲಿಯೂ ನವೀನ ಉತ್ಸಾಹದ ಸಂಚಾರವಾಯಿತು. ತೀವ್ರವೇ ಪ್ರತಾಪನು ತನ್ನ ಸಾಮಂತ-ಸರದಾರರೊಡನೆ ಬೇಟೆಗಾಗಿ ಹೊರಬಿದ್ದನು. ಅಂದು ಬಹು ಮೃಗಗಳನ್ನು ಬೇಟೆಯಾಡಿದರು. ಇದರಿಂದ ರಜಪೂತರಿಗಾದ ಆನಂದವನ್ನು ಹೇಳಲಾಸಲ್ಲ. ಯಾವತ್ತರೂ ಇನ್ನು ಹೊಸಯುಗವು ಪ್ರಾರಂಭವಾಯಿತೆಂದೂ, ಈ ಸಾರೆ ಸೂರ್ಯವಂಶದಲ್ಲಿ ಗೌರವ-ರವಿಯು ಉದಯಿಸಿದನೆಂದೂ ಭಾವಿಸಿದರು.

---

# ನವಮ ಪರಿಚ್ಛೇದ.

## ಕಠೋರ-ವ್ರತ.

ಭಾರತಭೂಮಿಯೊಳಗಣಿತ | ಸಾರತರ ಪಿರಾಗಿಗಳುದಯಿಸಿರುವರವರೊಳ್ ||
ಶೂರಪ್ರತಾಪನಂತಹ | ಗೌರವ ಪಡೆದ ಸ್ವದೇಶ ಭಕ್ತವೀರರಳರ್ || ೧ ||

ಪ್ರತಾಪಸಿಂಹನು ರಾಜ್ಯವನ್ನು ಹೊಂದಿದನು; ಆದರೆ ಆ ರಾಜ್ಯದಲ್ಲಿ ಅರ್ಥಬಲವಿದ್ದಿಲ್ಲ, ಜನರ ಬಲವೂ ಇರಲಿಲ್ಲ. ರಾಜಧಾನಿಯಾದ ಚಿತ್ತೋಡವು ಮೊಗಲರ ಆಧೀನವಾಗಿತ್ತು; ಅದರಿಂದ ಇಂದು ಚಿತ್ತೋಡದ ಮಹಾರಾಣಾನು ಮಾರ್ಗದಲ್ಲಿಯ ಭಿಕ್ಷುಕನಾಗಿದ್ದನು. ನಾಲ್ಕೂ ದಿಕ್ಕುಗಳಿಂದ ಮೊಗಲ-ಸೇನೆಯು ಬಂದು, ಮೇವಾಡದ ರಾಜ್ಯವನ್ನು ವ್ಯಾಪಿಸಹತ್ತಿತು. ಭಾರತಭೂಮಿಯ ಅತುಲೈಶ್ವರ್ಯದ ದೊಡ್ಡ ಭಾಗವು ಅಕಬರನ ವಶದಲ್ಲಿತ್ತು. ಅಕಬರನು ಆ ಯಾವತ್ತು ಧನವನ್ನು ರಜಪೂತರ ನಾಶಕ್ಕಾಗಿ ವೆಚ್ಚಮಾಡಲು ಹಿಂದೆಮುಂದೆ ನೋಡುತ್ತಿರಲಿಲ್ಲ. ಅಕಬರನ ಆಸ್ಥಾನದಲ್ಲಿ ಒಂಬತ್ತು ಮಂದಿ ದೊಡ್ಡ ಪಂಡಿತರು. ಇವರಿಗೆ ನವರತ್ನಗಳೆಂದು ಹೆಸರು. ಈ ಪಂಡಿತರು ಅಕಬರನಿಗೆ ಆಲೋಚನೆಯನ್ನು ಹೇಳುತ್ತಿದ್ದರು. ಅಕಬರನು ಚಿತ್ತೋಡದ ನಾಶಕ್ಕಾಗಿ—ಪ್ರತಾಪಸಿಂಹನ ಕೇಡಿಗಾಗಿ, ಈ ಯಾವತ್ತು ಪಂಡಿತರ ಬುದ್ಧಿಯ ಸಹಾಯವನ್ನು ಹೊಂದುತ್ತಿದ್ದನು. ಇವರೆಲ್ಲರ

ಆಲೋಚನೆಯನ್ನು ತೆಗೆದುಕೊಂಡು, ಇವರು ಸೂಚಿಸಿದ ಉತ್ತಮ ಆಲೋಚನೆಗಳಂತೆ ವರ್ತಿಸಿ, ರಜಪೂತರನ್ನು ಗೊತ್ತಿಗೆ ಹಚ್ಚಲು ಅವನು ಹಿಂಜರಿಯುತ್ತಿದ್ದಿಲ್ಲ. ಇವರ ಗುಪ್ತಾಲೋಚನೆಯು ಮೇವಾಡದ ಜಯಕ್ಕಾಗಿ—ಮೇವಾಡವನ್ನು ಹೇಗೆ ಜಯಿಸಿಕೊಳ್ಳಬೇಕು, ರಾಜಪುತ್ರರ ಗರ್ವವನ್ನು ಹೇಗೆ ಖಂಡಿಸಬೇಕು ಈ ಮೊದಲಾದ ಸಂಗತಿಗಳ ಸಲುವಾಗಿ ಪ್ರಾರಂಭವಾಯಿತು. ಬಹು ದೊಡ್ಡ ರಾಜ್ಯವನ್ನು ಬೆಳೆಸಲಿಕ್ಕೆ ಸಹಾಯಮಾಡಿದ ವೀರ ಮೊಗಲರು ಮೇವಾಡದ ಜಯಕ್ಕಾಗಿ ಉತ್ಸುಕರಾದರು. ಈ ಎಲ್ಲ ಅನುಕೂಲತೆಗಳನ್ನು ಹೊಂದಿದ ಅಕಬರನು ಸಾಮಾನ್ಯನಾದ ವೈರಿಯೇ? ಇಂತಹ ಪ್ರಚಂಡಶತ್ರುವಿನ ದೊಡ್ಡ ತುತ್ತಿನಿಂದ ಮೇವಾಡವನ್ನು ರಕ್ಷಿಸುವರಾರು?

ಪ್ರತಾಪಸಿಂಹನು ಈ ಪ್ರಬಲಶತ್ರುವಿಗೆ ಎದುರಾಗಿ ನಿಲ್ಲಲಿಕ್ಕೆ ಸಿದ್ಧನಾದನು. ತನ್ನ ಅಧೀನದಲ್ಲಿರುವ ಅಲ್ಪಸಂಖ್ಯಾಕರಾದ ರಜಪೂತರ ಬಾಹುಬಲ, ವೀರತ್ವ, ಸ್ವದೇಶಭಕ್ತಿಗಳೇ ಪ್ರತಾಪನಿಗೆ ಆಧಾರಗಳಾಗಿದ್ದವು. ಚಿತೋಡದ ಯುದ್ಧಭೂಮಿಯಲ್ಲಿ ಮಹಾ ಪರಾಕ್ರಮಿಗಳಾದ ರಜಪೂತ ಸೈನಿಕರು ಮರಣಹೊಂದಿದ್ದರು, ಅದರಿಂದ ಇಂದು ಪ್ರತಾಪಸಿಂಹನ ಸೈನಿಕರ ಸಂಖ್ಯೆಯು ಅತ್ಯಲ್ಪವಾಗಿದೆ. ಉಳಿದ ರಜಪೂತರೆಲ್ಲರೂ ಪ್ರತಾಪಸಿಂಹನ ಪಕ್ಷವನ್ನು ವಹಿಸಿರಲಿಲ್ಲ. ರಾಜಸ್ಥಾನದ ಆಬಾಲ-ವೃದ್ಧ-ವನಿತೆಯರೆಲ್ಲರೂ ವೀರರು; ಇಂತಹ ರಜಪೂತರೆಲ್ಲರೂ ಒಕ್ಕಟ್ಟಾಗಿ, ಪ್ರತಾಪಸಿಂಹನನ್ನು ಅನುಸರಿಸದಲ್ಲಿ, ಪ್ರತಾಪನಿಗೆ ಇತರ ಆಲೋಚನೆಗಳೇ ಇರಲಿಲ್ಲ. ಎಂತಹ ಪ್ರಬಲ ವೈರಿಯಿದ್ದರೂ, ಅವನನ್ನೆದುರಿಸುವದಕ್ಕೆ ಪ್ರತಾಪನು ಹಿಂದುಮುಂದೆ ನೋಡುತ್ತಿದ್ದಿಲ್ಲ. ಆದರೆ ನೀತಿನಿಪುಣನಾದ ಅಕಬರನ ಕುಶಲತೆಯಿಂದ ರಜಪೂತರಲ್ಲಿ ಬಹುಜನರು ಪ್ರತಾಪನ ವಿರುದ್ಧವಾಗಿ ಶಸ್ತ್ರವೆತ್ತಲು ಸಿದ್ಧರಾದರು. ಮಾರವಾಡದ ಉದಯಸಿಂಹನು ಮೊಗಲರ ಸೇವಕನು. ಬಿಕಾನೇರದ ರಾಯಸಿಂಹನು ಅಕಬರನ ಅರಮನೆಯಲ್ಲಿ ಊಟಮಾಡತಕ್ಕವನು. ಅಂಬರದ ಮಾನಸಿಂಹನು ಮೊಗಲರ ಸೇನಾಪತಿಯು, ಮತ್ತು ಬಾದಶಹನ ಬಲಗೈಯಂತಿರುವವನು. ಬುಂದಿಯ ಅರಸನು ಅಕಬರನೊಡನೆ ಒಪ್ಪಂದಮಾಡಿಕೊಂಡು, ಸ್ನೇಹದಿಂದಿದ್ದನು. ಅಜಮೀರವು ಮೊಗಲರ ಆಧೀನವಾಗಿತ್ತು. ಇಷ್ಟೇ ಅಲ್ಲ; ಪ್ರತಾಪಸಿಂಹನ ತಮ್ಮಂದಿರಾದ ಶಕ್ತಸಿಂಹನೂ, ಸಾಗರಜಿಯೂ ಪ್ರಚಂಡ ಶತ್ರುವಿನ ಪಕ್ಷದವರಾಗಿ, ಅಣ್ಣನ ವಿರುದ್ಧವಾಗಿ ಯುದ್ಧಮಾಡತಕ್ಕ

ವರು!* ಹೀಗಿರಲು ಪ್ರತಾಪಸಿಂಹನಿಗೆ ಸಹಾಯಕರಾಗಿ ಯುದ್ಧಮಾಡತಕ್ಕವರಾರು?

ಯಾರೂ ಸಹಾಯಕ್ಕೆ ಬರದಿದ್ದಲ್ಲಿ, ಪ್ರತಾಪನು ಒಬ್ಬನೇ ಯುದ್ಧಮಾಡುವದಕ್ಕೆ ಸಿದ್ಧನಾಗಿದ್ದನು. ಅವನು ಯುದ್ಧದ ಪರಿಣಾಮವೇನಾಗುತ್ತದೆಂಬದನ್ನು

* ಅಕಬರನು ಚಿತೋಡವನ್ನು ಮುತ್ತುವ ಮೊದಲೇ ಶಕ್ತಸಿಂಹನು ಅನುಗ್ರಹಪ್ರಾರ್ಥಿಯಾಗಿ ಮೊಗಲರ ಶಿಬಿರಕ್ಕೆ ಹೋಗಿದ್ದನೆಂದೂ, ಅಲ್ಲಿಂದ ಓಡಿ ಬಂದು ತಂದೆಗೆ ಯಾವತ್ತು ಸಂಗತಿಯನ್ನು ಹೇಳಿದನೆಂದೂ ನಾವು ಹಿಂದೆ ಹೇಳಿದ್ದೇವೆ ಇವರು ಬಹುಶಃ ಚಿತೋಡ ಧ್ವಂಸದ ಪೂರ್ವದಲ್ಲಿಯೇ ತಂದೆಯೊಡನೆ ಉದಯಪುರಕ್ಕೆ ಬಂದು ಅಲ್ಲಿ ವಾಸಮಾಡುತ್ತಿರಬಹುದು ಮುಂದೆ ತುಸು ದಿವಸಗಳಲ್ಲಿ ಇವನು ಮೊಗಲರ ಕೈವಶನಾದನು, ಮತ್ತು ಅಕಬರನಿಂದ ಪುರಸ್ಕೃತನಾದನು ಇವನು ಹಳದೀ ಘಟ್ಟದ ಯುದ್ಧದಲ್ಲಿ ಪ್ರತಾಪಸಿಂಹನ ವಿರುದ್ಧವಾಗಿ ಯುದ್ಧಮಾಡಿದನೆಂಬದನ್ನು ನೀವು ಮುಂದೆ ತಿಳಿಯುವಿರಿ

ಉದಯಸಿಂಹನ ಬೇರೊಬ್ಬ ಮಗನ ಹೆಸರು ‹ ಸಾಗರಸಿಂಹ › ಎಂದಿತ್ತು ಟಾಡ್‌ಸಾಹೇಬರು ಕೆಲವು ಕಡೆಯಲ್ಲಿ ಇವನಿಗೆ Sagrji ಎಂದೂ, ಮತ್ತೆ ಕೆಲವು ಕಡೆಯಲ್ಲಿ Sugra ಎಂದೂ ಹೇಳಿದ್ದಾರೆ ಬ್ಲಾಕ್‌ಮ ಸಾಹೇಬರು ಬಹಳ ಮಾಡಿ ಇವನಿಗೇ Sakra ಎಂದು ಉಲ್ಲೇಖಿಸಿರಬಹುದು ( Ain. P. 519 ) ಪ್ರತಾಪನು ರಾಜ್ಯಹೊಂದಿದ ಸುಮಾರದಲ್ಲಿಯೇ ಸಾಗಸಿಂಹನು ಮೊಗಲರನ್ನು ಕೂಡಿದನು ಇವನು ಈ ರಾಜದ್ರೋಹದ ಪುರಸ್ಕಾರಸ್ವರೂಪನಾಗಿ, ಅಂಬರದ ಹತ್ತರದಲ್ಲಿರುವ ಕಂಧಾರ ( Kandhar ) ಎಂಬ ಹೆಸರಿನ ದುರ್ಗವನ್ನೂ, ಸಣ್ಣ ಜಾಗೀರವನ್ನೂ ಹೊಂದಿದನು ಇವನ ವಂಶದ ಸಾಗರಾವತ್ ಜನರು ಹದಿನೆಂಟನೆಯ ಶತಮಾನದ ಪ್ರಾರಂಭದ ವರಿಗೆ ಈ ಜಾಗೀರನ್ನು ಉಪಭೋಗಿಸಿದರು ಅಮರಸಿಂಹನೊಡನೆ ಒಪ್ಪಂದ ಮಾಡಿಕೊಳ್ಳುವ ಮೊದಲು, ಜಹಾಂಗೀರನು ಸಾಗರಸಿಂಹನನ್ನು ಶಸ್ತ್ರವಿಭೂಷಿತನನ್ನಾಗಿ ಮಾಡಿ, ಚಿತೋಡದ ಅರಸನನ್ನಾಗಿ ಮಾಡಿ ಕಳುಹಿಸಿದನು ಅದರಂತೆ ಸಾಗರಸಿಂಹನು ರಾಜಸ್ಥಾನಕ್ಕೆ ಬಂದನು, ಆದರೆ ಇವನು ತಾನು ಮಾಡಿದ ಅನೇಕ ಕುಕರ್ಮಗಳ ಸಲುವಾಗಿ ಪಶ್ಚಾತ್ತಾಪವನ್ನು ಹೊಂದಿದನು ಆದರಿಂದವನು ಪ್ರತಾಪನ ಮಗನಾದ ಅಮರಸಿಂಹನಿಗೆ ರಾಜ್ಯವನ್ನೊಪ್ಪಿಸಿ, ಪುನಃ ದಿಲ್ಲಿಗೆ ತಿರುಗಿಹೋದನು ದಿಲ್ಲಿಯಲ್ಲಿ ಇವನು ಜಹಾಂಗೀರನಿಂದ ತಿರಸ್ಕೃತನಾಗಿ, ದರಬಾರದಲ್ಲಿ ಪ್ರಕಾಶರೀತಿಯಿಂದ ಅಸ್ತ್ರದಿಂದ ಹೊಟ್ಟೆಯನ್ನಿರಿದುಕೊಂಡು ಸತ್ತುಹೋದನು ಈ ಸಾಗರಜಿಯ ಮಗನೇ ಮುಸಲ್ಮಾನನಾಗಿ ಮೊಹಬತ್‌ಖಾನನೆಂಬ ಹೆಸರನ್ನು ಧರಿಸಿದನು ಜಹಾಂಗೀರನ ಕಾಲದಲ್ಲಿ ಇವನಂತಹ ಶೂರ ಸೇನಾಪತಿಗಳು ಬೇರೆ ಯಾರೂ ಇರಲಿಲ್ಲ See Rajasthan Vol. 1 PP 270-287 note.

ಆದರೆ Keene ಮೊದಲಾದ ಐತಿಹಾಸಕರು ಮೊಹಬತ್‌ಖಾನನು ಅಫಗಾಣನೆಂದು ಹೇಳಿದ್ದಾರೆ. ಆದರೆ ಮೊಹಬತ್‌ಖಾನನ ಹಾವಭಾವಗಳು ಹಿಂದುವಿನಂತಿದ್ದವೆಂಬದನ್ನು ಅವರು ಒಪ್ಪಿಕೊಂಡಿದ್ದಾರೆ "Turks in India" P. 82 note

ವಿಚಾರಿಸತಕ್ಕ ಮನುಷ್ಯನಾಗಿರಲಿಲ್ಲ. ಅದರಿಂದ ಅವನು ಪರಾಜಯಕ್ಕೆ ಹೆದರುವವನಾಗಿರಲಿಲ್ಲ. ಒಂದುವೇಳೆ ಪರಾಜಯದಲ್ಲಿ ಮರಣವುಂಟಾದರೂ, ಅದೊಂದು ಮಂಗಲವೇ ಎಂದು ಅವನು ಭಾವಿಸಿದನು. 'ಕಾರ್ಯಸಾಧನೆ ಇಲ್ಲವೆ ಮರಣ' ವೆಂಬದು ಪ್ರತಾಪನ ಮೂಲಮಂತ್ರವಾಗಿತ್ತು. ಬಾಪ್ಪಾರಾವಳನ ಪವಿತ್ರಕುಲದಲ್ಲಿ ಹುಟ್ಟಿ, ಸಮರ-ಸಂಗ್ರಾಮಸಿಂಹರ ಪವಿತ್ರ ರಕ್ತವನ್ನು ತನ್ನ ಧಮನಿಗಳಲ್ಲಿ ಧರಿಸಿ, ಶಿಶೋದಿಯಾ ರಜಪೂತರ ಕುಲ-ಮರ್ಯಾದೆಯನ್ನು ನಾಶಮಾಡುವದು ಪ್ರತಾಪಸಿಂಹನಿಗೆ ಅಸಂಭವವಾದ ಕಾರ್ಯವಾಗಿತ್ತು. ಕಾರಣ ಅವನು ಕಠೋರವಾದ ಪ್ರತಿಜ್ಞೆಯನ್ನು ಮಾಡಿದನು—"ಪ್ರಾಣವಿರುವವರೆಗೂ ರಜಪೂತರ ಧರ್ಮವನ್ನೂ, ಮೇವಾಡದ ಸ್ವಾತಂತ್ರವನ್ನೂ ಮಾರಲಿಕ್ಕಿಲ್ಲ—ಜೀವವಿರುವವರೆಗೂ ತಾಯಿಯ ಹಾಲನ್ನು ಕಲಂಕಿತವನ್ನಾಗಿ ಮಾಡಲಿಕ್ಕಿಲ್ಲ" ಈ ಕಠೋರ ಪ್ರತಿಜ್ಞೆಯನ್ನು ಕೇಳಿ, ಭಾರತವರ್ಷದ ಸಮಸ್ತ ಕ್ಷತ್ರಿಯರು ಸ್ತಂಭಿತರಾಗಿಹೋದರು.

ರಜಪೂತರೆಲ್ಲರೂ ಆತ್ಮವಿಕ್ರಯ ಮಾಡಿಕೊಂಡಿರಲಿಲ್ಲ. ಬಹು ದಿವಸಗಳಿಂದ ರಾಣಾನ ಬೇರೆ ಬೇರೆ ಕಾರ್ಯಗಳಲ್ಲಿದ್ದು, ಅವನ ಸೇವೆಮಾಡುತ್ತ ಬಂದಿದ್ದ ಅನೇಕ ರಜಪೂತರು ಪ್ರತಾಪನನ್ನು ಬಿಟ್ಟು ಹೋಗಲಿಲ್ಲ. ಮೊಗಲ ಸರಕಾರದ ಧನಸಮೃದ್ಧಿಯು ಇವರನ್ನು ಮೋಹಗೊಳಿಸಲಿಕ್ಕೆ ಸಮರ್ಥವಾಗಲಿಲ್ಲ. ಸಾಲುಂಬ್ರದ ಅರಸನಾದ ಕೃಷ್ಣಸಿಂಹನು ಸ್ವಾಮಿಧರ್ಮವನ್ನು ಮರೆಯಲಿಲ್ಲ. ಇವನು ತನ್ನ ಅನುಚರರೊಡನೆ ಕಮಲಮೀರ ದುರ್ಗದಲ್ಲಿ ಪ್ರತಾಪನ ಹತ್ತರ ಇರತೊಡಗಿದನು. ಬೇದನೂರ ರಾಠೋರ ರಜಪೂತರು ಪ್ರತಾಪಸಿಂಹನನ್ನು ಕೂಡಿದರು. ಇವರ ಅರಸನಾದ ಜಯಮಲ್ಲನು ಮಹಾಶೂರತನದಿಂದ ಕಾದಿ, ಚಿತೋಡದ ರಕ್ಷಣೆಗಾಗಿ ಪ್ರಾಣಬಿಟ್ಟನು; ಮುಂದೆ ಇವನ ವಂಶಜರೂ ತಮ್ಮ ಗೌರವವನ್ನು ಕಳೆದುಕೊಳ್ಳಲಿಲ್ಲ. ಶತ್ರುಗಳನ್ನು ಕೂಡ ಮುಗ್ಧಮಾಡಿದ ಬಾಲವೀರ ಪುತ್ತನ ವಂಶೀಯ 'ಜನಾಯಲ್' ರಜಪೂತರು ಕೈಲಬಾರದಿಂದ ಬಂದು, ಪ್ರತಾಪನನ್ನು ಕೂಡಿದರು. ಇವರ ಹೊರತು ದೇಲಬಾರ, ಕೋಟಾರಿ, ಝೂಲೋರ ಮೊದಲಾದ ಸಂಸ್ಥಾನಗಳಿಂದ, ಚೌಹಾಣ, ಪ್ರಮಾರ, ಝೂಲಾ ವಂಶೀಯ ರಜಪೂತರು ಬಂದು, ಪ್ರತಾಪನನ್ನು ಕೂಡಿದರು. ಈ ಮೇರೆಗೆ ಸುಮಾರು ೨೨ ಸಾವಿರ ಸೈನ್ಯವು ಕುಂಬಮೇರು (ಕಮಲಮೀರ) ದುರ್ಗದಲ್ಲಿ

ಕೂಡಿತು. ವೀರತ್ವದಲ್ಲಿಯೂ, ಕಷ್ಟಸಹಿಷ್ಣುತೆಯಲ್ಲಿಯೂ, ಸ್ವಾಮಿಭಕ್ತಿಯಲ್ಲಿಯೂ ಪ್ರತಾಪನ ಸೈನಿಕರಿಗೆ ಸರಿಯಾದವರು ಸಿಗುವದು ಅಸಂಭವವು. ಆದರೆ ಈ ಸೈನ್ಯವು ಮೊಗಲರ ಸೇನೆಯ ಮುಂದೆ ತೀರ ಸಣ್ಣದಾಗಿತ್ತು; ಕಾರಣ ಪ್ರತಾಪನು ಒಂದು ಕಠೋರ ವ್ರತವನ್ನವಲಂಬಿಸಿದನು.

ಜನ್ಮಭೂಮಿಯಾದ ಚಿತ್ತೋಡವು ಪ್ರತಾಪನಿಗೆ ಜನನೀ ಸ್ವರೂಪವು. ತಾಯಿಯ ಮರಣದ ತರುವಾಯ ಮಗನು ಕಠೋರ ವ್ರತವನ್ನಾಚರಿಸುವಂತೆಯೂ, ಶೋಕಚಿನ್ಹಗಳನ್ನು ಧರಿಸುವಂತೆಯೂ ಪ್ರತಾಪನು ಚಿತ್ತೋಡದ ನಾಶದಿಂದ ಕಠೋರ ವ್ರತದೀಕ್ಷಿತನಾಗಿ, ವಿಷಾದಚಿನ್ಹವನ್ನು ಧಾರಣಮಾಡಿದನು. ಇದಕ್ಕಾಗಿ ಅವನು ಪ್ರತಿಜ್ಞೆಮಾಡಿದನು —“ ಚಿತ್ತೋಡದ ಪುನರುಧ್ಧಾರವಾಗುವವರೆಗೆ ಮುಖಕ್ಷೌರ ಮಾಡಿಸಿಕೊಳ್ಳುವದಿಲ್ಲ. ಬೆಳ್ಳಿ-ಬಂಗಾರಗಳ ಪಾತ್ರೆಗಳಲ್ಲಿ ಊಟಮಾಡುವದಿಲ್ಲ; ಎಲೆಗಳಲ್ಲಿ ಊಟಮಾಡುವೆನು. ಕೋಮಲವಾದ ಹಾಸುಗೆಯ ಮೇಲೆ ಮಲಗುವದಿಲ್ಲ; ಹುಲ್ಲಿನ ಹಾಸುಗೆಯ ಮೇಲೆ ಮಲಗುವೆನು. ಸುರಮ್ಯವಾದ ಅರಮನೆಯಲ್ಲಿ ವಾಸಮಾಡದೆ, ಪರ್ಣಕುಟೀರದಲ್ಲಿ ಇರತೊಡಗುವೆನು. ” ತರುವಾಯ ಪ್ರತಾಪನು ತನ್ನ ಅನುಚರರಿಗೆ ಅಪ್ಪಣೆ ಮಾಡಿದನು — “ ರಾಜಸ್ಥಾನದಲ್ಲಿ ಯಾವ ತರದ ಉತ್ಸವವನ್ನು ನಡೆಸಬಾರದು; ಯುದ್ಧಕಾಲದಲ್ಲಿ ಎಲ್ಲರೂ ಶೋಕಚಿನ್ಹಗಳನ್ನು ಧರಿಸಬೇಕು ರಜಪೂತರ ದುರ್ದೆಶೆಯನ್ನು ನೆನಪು ಮಾಡುವದಕ್ಕಾಗಿ ಇನ್ನು ಮುಂದೆ ರಣವಾದ್ಯವನ್ನು ಸೈನ್ಯದ ಹಿಂಭಾಗದಲ್ಲಿ ಬಾರಿಸಬೇಕು. ” ಈಗಲೂ ರಣವಾದ್ಯವನ್ನು ಹಿಂಭಾಗದಲ್ಲಿ ಬಾರಿಸುತ್ತಿರುವರು; ರಾಣಾನ ವಂಶಜರಲ್ಲಿ ಯಾರೂ ಗಡ್ಡವನ್ನು ತೆಗೆಯಿಸುವದಿಲ್ಲ; ಕೆಲವರು ಧಾತುಗಳ ಪಾತ್ರೆಗಳಲ್ಲಿ ಭೋಜನ ಮಾಡುತ್ತಿದ್ದರೂ, ಅವುಗಳ ಕೆಳಗೆ ಎಲೆಗಳನ್ನಿಡುತ್ತಿರುವರು; ಮತ್ತು ಕೋಮಲವಾದ ಹಾಸುಗೆಗಳ ಮೇಲೆ ಮಲಗುವಮೊದಲು, ಅದರ ಕೆಳಗೆ ಹುಲ್ಲನ್ನು ಹಾಕುತ್ತಿರುವರು. ಈ ಮೇರೆಗೆ ರಜಪೂತರು ಸ್ವದೇಶಭಕ್ತನೂ, ವೀರಸನ್ಯಾಸಿಯೂ ಆದ ಪ್ರತಾಪನ ಕಠೋರ ವ್ರತಗಳನ್ನು ಈಗಲೂ ಆಚರಿಸುತ್ತಿರುವರು.

ನಾನಾ ದೇಶಗಳಲ್ಲಿ ಬಹು ಜನರು ಜನ್ಮಭೂಮಿಯ ಉದ್ಧಾರಕ್ಕಾಗಿ ಯುದ್ಧಮಾಡಿದ್ದಾರೆ; ಆದರೆ ಈ ಮೇರೆಗೆ ಕಠೋರ ವ್ರತಗಳನ್ನಾಚರಿಸಿದವರು ದೊರೆಯುವದಿಲ್ಲ. ‘ ಜನ್ಮಭೂಮಿಯು ಜನನಿಯ ಸ್ವರೂಪವು ’ ಎಂಬ ನೀತಿಯು ಸರ್ವ

ದೇಶಗಳಲ್ಲಿ ಪ್ರಚಾರದಲ್ಲಿರುವದು; ಆದರೆ ಪ್ರತಾಪನು ಜನ್ಮಭೂಮಿಯು ಮಾತೆಗಿಂತಲೂ ಶ್ರೇಷ್ಠವಾದದ್ದೆಂದು ತೋರಿಸಿಕೊಟ್ಟಿದ್ದಾನೆ. ಮಗನು ತಾಯಿಯ ಸಲುವಾಗಿ ಶೋಕಮಾಡುವನು; ನಿರ್ದಿಷ್ಟಕಾಲದವರೆಗೆ ಶೋಕಚಿನ್ಹ ಧಾರಣಮಾಡುವನು; ಆದರೆ ಪ್ರತಾಪನು ಜನ್ಮಭೂಮಿಯ ಸಲುವಾಗಿ, ಮುಂದಿನ ಸಂತತಿಯವರು ಸಹ ಶೋಕಚಿನ್ಹ ಧಾರಣಮಾಡುವ ವ್ಯವಸ್ಥೆಯನ್ನು ಮಾಡಿದನು. ನಮ್ಮ ಭಾರತದ ಇತಿಹಾಸದಲ್ಲಿ ಕಠೋರ ತಪಸ್ವಿಗಳಾದ ಸನ್ಯಾಸಿಗಳಿಗೆ ಕೊರತೆಯಿಲ್ಲ; ಆದರೆ ರಾಜರಾಜೇಶ್ವರನಾಗಿ ಕಠೋರವ್ರತಗಳಿಂದ ಸನ್ಯಾಸಿಗಳನ್ನು ಕೂಡ ಸೋಲಿಸಿದ ಉದಾಹರಣೆಯನ್ನು ರಾಜರ್ಷಿಯಾದ ಪ್ರತಾಪನು ಹಾಕಿಕೊಟ್ಟಿದ್ದಾನೆ.

ಪ್ರತಾಪನು ಸ್ವದೇಶದ ಸಲುವಾಗಿ ತಾನೊಬ್ಬನೇ ಸನ್ಯಾಸಿಯಾಗಿರಲಿಲ್ಲ. ತನ್ನ ದೇಶದಲ್ಲಿಯ ಯಾವತ್ತು ಜನರನ್ನು ಸನ್ಯಾಸಿಗಳನ್ನಾಗಿ ಮಾಡಿದನು. ಪ್ರಜೆಗಳೆಲ್ಲರೂ ಸಾಂಸಾರಿಕರ ಮೋಹದಿಂದ ದೂರಿರುವಂತೆ ಮಾಡಿದನು. ಇದಕ್ಕಾಗಿ ಅವನು ಪ್ರಜೆಗಳಿಗೆ ಅಪ್ಪಣೆಮಾಡಿದ್ದೇನಂದರೆ—"ಯಾವತ್ತರೂ ಮನೆ ಮೊದಲಾದವುಗಳನ್ನು ಬಿಟ್ಟು ಪರ್ವತದಲ್ಲಿ ವಾಸಮಾಡಬೇಕು; ಮನೆಗಳೆಲ್ಲವನ್ನು ಸುಟ್ಟು ಬಿಡಬೇಕು; ಯಾರೂ ವ್ಯಾಪಾರವನ್ನಾಗಲಿ, ಸುಖೋಪಭೋಗಗಳನ್ನಾಗಲಿ ಮಾಡಬಾರದು; ಯಾರೂ ಕುರಿಗಳನ್ನು ಕಾಯಬಾರದು, ವಿಲಾಸ-ಉತ್ಸವಗಳನ್ನಾಚರಿಸಬಾರದು; ಮುಸಲ್ಮಾನರ ಚಿತ್ತಾಕರ್ಷಕವಾದ ಯಾವ ಒಡವೆಯನ್ನೂ ಧರಿಸಬಾರದು. ಈ ಆಜ್ಞೆಯನ್ನು ಮೀರಿದವರಿಗೆ ಮರಣದಂಡನೆಯು ವಿಧಿಸಲ್ಪಡುವದು." ಪ್ರಜೆಗಳು ಕಡೆತನಕ ಈ ಆಜ್ಞೆಯಂತೆ ನಡೆದರು.

ಪ್ರತಾಪನು ಕೇವಲ ಆಜ್ಞೆಯನ್ನು ವಿಧಿಸಿ ಸುಮ್ಮನೆ ಕೂಡ್ರಲಿಲ್ಲ. ಅವನು ಕುದುರೆಯನ್ನು ಹತ್ತಿ, ಒಬ್ಬನೇ ಅನೇಕ ಕಡೆಯಲ್ಲಿ ಅಡ್ಡಾಡಿ, ತನ್ನ ಆಜ್ಞೆಯನ್ನು ಪ್ರಜೆಗಳು ಯಾವರೀತಿಯಿಂದ ಪಾಲಿಸುತ್ತಾರೆಂಬದನ್ನು ಸೂಕ್ಷ್ಮರೀತಿಯಿಂದ ನಿರೀಕ್ಷಿಸುತ್ತಿದ್ದನು. ಒಂದು ದಿವಸ ಒಬ್ಬ ಕುರುಬನು ಈ ನಿಯಮಗಳನ್ನು ಮುರಿದು, ಬನಾಸ ನದಿಯ ತೀರದಲ್ಲಿ ಕುರಿಗಳನ್ನು ಮೇಯಿಸುತ್ತಿದ್ದನು. ಪ್ರಜೆಗಳ ದುರವಸ್ಥೆಯನ್ನು ನೋಡಿ, ಸದಯನಾದ ಪ್ರತಾಪನ ಅಂತಃಕರಣವು ಕರಗುತ್ತಿದ್ದರೂ, ಈ ಸಮಯದಲ್ಲವನು ರಾಜದ್ರೋಹಿಯಾದ ಕುರುಬನಿಗೆ ಕ್ಷಮೆಯನ್ನು ತೋರಿಸಲಿಲ್ಲ. ಹತಭಾಗ್ಯನಾದ ಕುರುಬನು ಪ್ರತಾಪನ ಕತ್ತಿಗೆ ಬಲಿಯಾದನು. ಪ್ರತಾಪನ ಈ

ಭಯಂಕರವಾದ ಶಾಸನವನ್ನು ನೋಡಿ, ಯಾವತ್ತರು ಅವನ ಆಜ್ಞೆಯಂತೆ ನಡೆಯುತ್ತಿದ್ದರು.

ತೀವ್ರವೇ ಮೇವಾಡಕ್ಕೆ ಅತಿ ಶೋಚನೀಯ ಸ್ಥಿತಿಯು ಬಂದೊದಗಿತು. ಗ್ರಾಮಗಳೆಲ್ಲವು ಜನರಿಲ್ಲದಂತಾದವು; ಹೊಲಗಳಲ್ಲಿ ಒಕ್ಕಲಿಗರಿಲ್ಲದಂತಾಯಿತು. ಅಡವಿಯಲ್ಲಿ ಕುರಿಗಳಿಲ್ಲದಾದವು. ಮೊದಲು ಜನಕೋಲಾಹಲಮಯವಾದ ಮನೆಗಳು, ಈಗ ಮೃಗಗಳ ವಾಸಸ್ಥಳಗಳಾದವು. ರಾಜಮಾರ್ಗಗಳು ಗಿಡಗಂಟೆಗಳಿಂದ ತುಂಬಿಹೋಗಿ, ಮನುಷ್ಯಸಂಚಾರಕ್ಕೆ ಅಯೋಗ್ಯವಾದವು. ಬೆಳೆಯುಳ್ಳ ಮೇವಾರದ ಭೂಮಿಯು ಮರುಭೂಮಿಯಾಗಿ ಪರಿಣಮಿಸಿತು. ಅರವಲೀ ಪರ್ವತದ ಪೂರ್ವಕ್ಕಿರುವ ನಿತ್ಯ-ಉತ್ಸವಮಯವಾದ ಪ್ರದೇಶವು ದೀಪರಹಿತವಾಯಿತು. ಪ್ರತಾಪನು ಗುಡ್ಡದ ಹೇಲೆ ಅಡ್ಡಾಡುತ್ತಿರುವಾಗ ಮೇವಾರದ ಈ ದುಃಸ್ಥಿತಿಯನ್ನು ಕಂಡು ಅತೀವ ಕಳವಳಹೊಂದುತ್ತಿದ್ದನು. ಈ ವೇಳೆಯಲ್ಲಿ ಅವನ ಕಣ್ಣೀರುಗಳು ತಾವಾಗಿ ಧಾರೆಗಟ್ಟುತ್ತಿದ್ದವು; ಆದರೆ ಮಾಡುವದೇನು?

ಪ್ರತಾಪನ ಕುಟುಂಬದ ಜನರ ಸ್ಥಿತಿಯು ಇದಕ್ಕೂ ಭಯಂಕರವಾಗಿದ್ದಿತು. ರಾಜೋಚಿತ ಸುಖವಿಲಾಸಗಳಲ್ಲಿ ಚಿರಕಾಲ ಬೆಳೆದ ಅವರು, ದೀನಭಾವದಿಂದ ಹೀನಜಾತಿಯ ಜನರಂತೆ ಕಂದರಗಳಲ್ಲಿ ಅಡ್ಡಾಡಬೇಕಾಯಿತು. ರಾಜ-ಮಹಿಷಿಯು ತಾನೇ ಅಡಿಗೆ ಮಾಡಿ, ಗಿಡದ ಕೆಳಗೆ ಹುಲ್ಲಿನ ಹಾಸಿಗೆಯ ಮೇಲೆ ಮಲಗಿ, ಅತಿ ದುಃಖದಿಂದ ಕಾಲಕಳೆಯಬೇಕಾಯಿತು. ಈ ದೃಶ್ಯವು ಅತೀವ ಕಠೋರವಾಗಿದ್ದರೂ, ಪ್ರತಾನ ಪ್ರತಿಜ್ಞೆಯು ಅವನ ರಂಗಸ್ಥಳವಾದ ಅರವಲಿಯಂತೆ ಅಚಲವಾಗಿದ್ದಿತು!

# ದಶಮ ಪರಿಚ್ಛೇದ.

## ರಜಪೂತರ ಜಾತಿಧರ್ಮ.

ಅಡವಿಯೊಳಿರುತಿಹ ಗಜವಂ |
ಪಿಡಿದೋವಲ್ ತನೆ ಸ್ವಜಾತಿಹರಣಕೆ ಸಾಯಂ ||
ಮಾಡುಪದೆಂದೊಡಮೆಂಬದು |
ಕೊಡಲಿಯು ಕಾವದು ಕುಲಕ್ಕೆ ಮೂಲಂ ಪುಸಿಯೇ? || ೧ ||

ಅಕಬರನು ಮೊಗಲ ಬಾದಶಹರಲ್ಲಿ ಶ್ರೇಷ್ಠತಮನು. ಇವನು ಸೌಜನ್ಯ, ಸುವಿಚಾರ, ಗುಣಗ್ರಾಹಕತೆ ಮೊದಲಾದ ಗುಣಗಳಿಂದ ಯಾವತ್ತು ಜಾತಿಯ ಜನರ ಪ್ರೀತಿಯನ್ನು ಸಂಪಾದಿಸಿಕೊಂಡನು. ನಾವು ಅಕಬರನು ಹಿಂದುಗಳ ಮಿತ್ರನೆಂದೂ, ಔರಂಗಜೇಬನು ಭಾರತೀಯರ ಶತ್ರುವೆಂದೂ ತಿಳಿಯುತ್ತೇವೆ. ಆದರೆ ನಿಜವಾಗಿ ವಿಚಾರಿಸಿದರೆ ಶತ್ರುವಿಗಿಂತ ಮಿತ್ರನಿಂದ ಹಿಂದುಗಳಿಗೆ ಬಹಳ ಹಾನಿಯಾದದ್ದು ಕಂಡುಬರುವದು. ಅಕಬರನ ಮಿತ್ರತ್ವದಿಂದ ಹಿಂದೂ ಜನರಿಗೆ—ಅದರಲ್ಲಿಯೂ ರಜಪೂತರಿಗೆ ಬಹಳ ಹಾನಿಯಾಯಿತು. ಕೇವಲ ರಾಜಧಾನಿಯಾದ ಚಿತೋಡವೊಂದೇ ಅಲ್ಲ; ರಾಜಪುತ್ರರ ಜಾತಿಧರ್ಮವು ಅಕಬರನಿಂದ ನಾಶವಾಯಿತು. ಅಕಬರನು ಚಿಕ್ಕವಯಸ್ಸಿನಲ್ಲಿಯೇ ದಿಲ್ಲಿಯ ಸಿಂಹಾಸನವನ್ನೇರಿದ್ದರೂ, ರಾಜಕಾರಣಕುಶಲನೂ, ದೂರದೃಷ್ಟಿಯೂ ಆಗಿದ್ದನು. ಇವನು ಸಾಮ್ರಾಜ್ಯವನ್ನು ಬೆಳೆಯಿಸುವದಕ್ಕೂ—ಏಕತ್ರ ಮಾಡುವದಕ್ಕೂ ಹುಟ್ಟಿದ್ದನೆಂದು ಹೇಳಬಹುದು. ಇವನು ಬೇರೆ ಬೇರೆ ಜಾತಿಯ ಜನರಲ್ಲಿ ಒಕ್ಕಟ್ಟಿಲ್ಲದ್ದರಿಂದ, ಹಿಂದುಸ್ತಾನದ ಅವನತಿಯಾಗಿದೆಯೆಂದು ವಿಚಾರಿಸಿದನು. ಹಿಂದೂ-ಮುಸಲ್ಮಾನರಲ್ಲಿಯ ಐಕ್ಯವೊತ್ತಟ್ಟಿಗಿರಲಿ; ಹಿಂದೂ ಜನರಲ್ಲಿಯೇ—ಹಿಂದುಸ್ತಾನದ ಬೇರೆ ಬೇರೆ ಜಾತಿಯವರಲ್ಲಿಯೇ ಒಕ್ಕಟ್ಟಿರಲಿಲ್ಲ. ನಾನಾ ಜಾತಿಯ ಹಿಂದೂ ಜನರು ತಮ್ಮ ತಮ್ಮೊಳಗೆ ಬಡೆದಾಡುತ್ತಿದ್ದರು. ಈ ಸಮಯದಲ್ಲಿ ಈ ಕಲಹವನ್ನು ನಿಲ್ಲಿಸಿ, ಹಿಂದೂಮುಸಲ್ಮಾನರಲ್ಲಿ ಪ್ರೀತಿಯನ್ನು ಬಳೆಯಿಸಿ, ಅದರಿಂದ ಯಾವತ್ತು ಜನರ ಸಹಾಯ ಪಡೆದು, ತನ್ನ ರಾಜ್ಯವನ್ನು ಬಲಿಷ್ಠವಾಗಿ ಮಾಡುವದು ಅಕಬರನ ಉದ್ದೇಶವಾಗಿತ್ತು. ರಜಪೂತರು ಪಾಣಿಪತದ ಯುದ್ಧದಲ್ಲಿ ತನ್ನ ಅಜ್ಜನಿಗೆ ಸಹಾಯಕರಾಗಿ

ಕಾದಿದ್ದನ್ನು ಇವನು ಕೇಳಿದ್ದನು. ಸಂಗ್ರಾಮಸಿಂಹನಂತಹ ವೀರಜನರಿಗೆ ಜನ್ಮ ವಿತ್ತ ಈ ಜನಾಂಗವನ್ನು ನನ್ನ ಕೈವಶಮಾಡಿಕೊಂಡಲ್ಲಿ ಅನೇಕ ಲಾಭವಾಗುವ ದರಲ್ಲಿ ಸಂದೇಹವಿಲ್ಲವೆಂದು ಇವನ ಗ್ರಹಿಕೆಯಾಯಿತು; ಆದರೆ ಈ ವೀರಜಾತಿಯು ಜನರನ್ನು ವಶಮಾಡಿಕೊಳ್ಳುವದು ಸುಲಭಸಾಧ್ಯವಾದ ಕಾರ್ಯವಾಗಿರಲಿಲ್ಲ. ಆದರೂ ಅಕಬರನು ನಿರಾಶನಾಗಲಿಲ್ಲ. ಅವನು ಯಾವದೊಂದು ರೀತಿಯಿಂದ ಈ ಕೆಲಸವನ್ನು ಮಾಡಲೇಬೇಕೆಂದು ಗೊತ್ತುಮಾಡಿಕೊಂಡನು.§ ಇದಕ್ಕಾಗಿ ಅವನು ತನ್ನ ಯಾವತ್ತು ಶಕ್ತಿಯನ್ನುಪಯೋಗಿಸುವ ಮನಸು ಮಾಡಿದನು. ಈ ಕಾರ್ಯಕ್ಕಾಗಿ ಅವನು ಯಾವ ಮಾರ್ಗವನ್ನವಲಂಬಿಸುವದಕ್ಕೂ ಹಿಂದುಮುಂದೆ ನೋಡಲಿಲ್ಲ. ಈ ಸಮಯದಲ್ಲಿ ಅವನು ಸಕಲ ಜಾತಿಗಳನ್ನು ಒಂದಾಗಿ ಮಾಡು ವದಕ್ಕೆ ಎಲ್ಲ ಜನಾಂಗಗಳನ್ನು ಪ್ರೇಮಬಂಧನದಿಂದ ಕಟ್ಟುವದಕ್ಕೆ ವಿವಾಹದಂಥ ಉತ್ತಮವಾದ ಮಾರ್ಗವು ಬೇರೊಂದಿಲ್ಲವೆಂದು ಭಾವಿಸಿದನು.* ಕಾರಣ ಅವನು ಛಲದಿಂದಲೂ, ಬಲದಿಂದಲೂ, ಕೌಶಲ್ಯದಿಂದಲೂ ರಾಜಸ್ಥಾನದ ಯಾವತ್ತು ಮುಖ್ಯ ಕ್ಷತ್ರಿಯರೊಡನೆ, ವಿವಾಹಸಂಬಂಧವನ್ನುಂಟುಮಾಡುವದಕ್ಕೆ ಯತ್ನಿಸಿ ದನು. ಇದರಿಂದ ರಜಪೂತರು ತಮ್ಮ ಜಾತಿಧರ್ಮಕ್ಕೆ ಕ್ರಮವಾಗಿ ಜಲಾಂಜಲಿ ಯನ್ನು ಕೊಡಹತ್ತಿದರು, ಆದರೆ ಅವರು ಅಕಬರನ ಮೋಹಿನೀ ಶಕ್ತಿಯ ಪ್ರಭಾ ವದಿಂದ ಇದನ್ನು ತಿಳಿಯಲಿಲ್ಲ. ಮಹಾರಾಣಾ ಪ್ರತಾಪಸಿಂಹನೊಬ್ಬನು ಮಾತ್ರ ಈ ಸಂಗತಿಯನ್ನು ಸ್ಪಷ್ಟವಾಗಿ ತಿಳಿದುಕೊಂಡಿದ್ದನು.‡

ರಜಪೂತರಂತಹ ಶತ್ರುಗಳು ಒಕ್ಕಟ್ಟಿನಿಂದಿದ್ದರೆ, ಅವರನ್ನು ಸೋಲಿಸು ವದು ಅಸಾಧ್ಯವು; ಕಾರಣ ಇವರನ್ನು ಪರಾಜಿತರನ್ನಾಗಿ ಮಾಡಬೇಕಾದರೆ, ಇವ ರಲ್ಲಿ ಗೃಹಕಲಹವನ್ನುಂಟುಮಾಡುವದು ಅವಶ್ಯವು; ಈ ಭೇದನೀತಿಯನ್ನು ಅಕಬರನು ಪೂರ್ಣವಾಗಿ ಬಲ್ಲವನಾಗಿದ್ದನು. ಜಾತಿಧರ್ಮದಲ್ಲಿ ಕೈಹಾಕಿದರೆ, ರಜ ಪೂತರನ್ನು ಹೀನಬಲರನ್ನಾಗಿ ಮಾಡುವದು ಸಾಧ್ಯವಿಲ್ಲವೆಂಬದನ್ನು ಅವನು ತಿಳಿ ದಿದ್ದನು. ಕಾರಣ ಅವನು ರಜಪೂತರೊಡನೆ ಸ್ನೇಹದಿಂದಲೂ, ಸೌಜನ್ಯದಿಂದಲೂ

§ Indian Historical studies, Rawlinson, PP. 108-9.

* Malieson's Akbar, PP. 129-31.

‡ Elphinstone, P. 495; Kaye's life of Lord Metcalfe, Vol. I, P, 416.

ಇರುವವನಂತೆ ತೋರಿಸುವದಕ್ಕಾಗಿ ರಾಜಪುತ್ರ-ರಮಣಿಯರನ್ನು ವಿವಾಹ ಮಾಡಿಕೊಂಡನು. ಇವನು ರಾಜ್ಯ, ದೊಡ್ಡ ಅಧಿಕಾರ, ಹಣ ಮೊದಲಾದವುಗಳ ಆಶೆಯನ್ನು ತೋರಿಸಿ, ಕ್ರಮವಾಗಿ ರಜಪೂತ ಸಾಮಂತ ನೃಪರನ್ನು ವಶಮಾಡಿಕೊಂಡನು. ಇದರಿಂದ ರಜಪೂತರು ಕ್ರಮವಾಗಿ ದುರ್ಬಲರಾಗುತ್ತ ನಡೆದರು.

ಔರಂಗಜೇಬನು ಹಿಂದುಗಳ ದ್ವೇಷಿಯಾಗಿದ್ದನು; ಅದರಿಂದ ಹಿಂದುಗಳು ಅವನನ್ನು ತಿರಸ್ಕರಿಸುತ್ತಿದ್ದರು; ಮತ್ತು ಅವನ ಸಮೀಪಕ್ಕೆ ಯಾರೂ ಹೋಗುತ್ತಿದ್ದಿಲ್ಲ. ಆದರೆ ಅಕಬರನು ಮಿತ್ರನಂತೆ ವರ್ತಿಸುತ್ತಿದ್ದುದರಿಂದ, ಬಾಹ್ಯ ವ್ಯವಹಾರಗಳಿಗೆ ಮೋಸಹೋಗಿ, ತಮ್ಮ ಮಿತ್ರನೆಂದು ತಿಳಿದು, ರಜಪೂತರು ಅವನನ್ನಾಶ್ರಯಿಸಿದರು; ಮತ್ತು ಕಡೆಯಲ್ಲಿ ತಮ್ಮ ಜಾತಿಧರ್ಮಕ್ಕೆ ಜಲಾಂಜಲಿಯನ್ನು ಕೊಡುತ್ತಿದ್ದರು. ಇತಿಹಾಸವನ್ನು ತೆಗೆದು ನೋಡಿರಿ. ಔರಂಗಜೇಬನು ನಿಷ್ಠುರನೂ, ಅತ್ಯಾಚಾರಿಯೂ ಆಗಿದ್ದರೂ, ಅಕಬರನಂತೆ ವಿಲಾಸಿಯೂ, ಇಂದ್ರಿಯ ನಿರತನೂ ಆಗಿರಲಿಲ್ಲ; † ಅಕಬರನಂತೆ ನೃತ್ಯಗೀತಗಳನ್ನು ಪ್ರೀತಿಸಲಿಲ್ಲ; + ಅಕಬರನಂತೆ ಹಿಂದೂ ರಮಣಿಯರ ಧರ್ಮನಾಶಕ್ಕಾಗಿ ಕೌಶಲ್ಯಮಯವಾದ ಜಾಲವನ್ನು ಪಸರಿಸಲಿಲ್ಲ. ಔರಂಗಜೇಬನು ಹಿಂದುಗಳನ್ನು ದ್ವೇಷಿಸುತ್ತಿರುವದನ್ನು ಅವನ ಮಾತಿನಿಂದಲೂ, ಕೃತಿಯಿಂದಲೂ ಕಂಡುಹಿಡಿಯಬಹುದಾಗಿದ್ದಿತು; ಆದರೆ ಅಕಬರನು ಹಿಂದುಗಳ ವಿಷಯದಲ್ಲಿ ಸದಾಚಾರವನ್ನು ತೋರಿಸುತ್ತಿದ್ದರೂ, ಅವರನ್ನು ಬಲಹೀನರನ್ನಾಗಿಯೂ, ಧರ್ಮಹೀನರನ್ನಾಗಿಯೂ ಮಾಡುವದು ಅವನ ಉದ್ದೇಶವಾಗಿತ್ತು. ಮುಸಲ್ಮಾನರಲ್ಲನೇಕರು ಅಕಬರನನ್ನು ತಿರಸ್ಕರಿಸಿ

† ಔರಂಗಜೇಬನು ತನ್ನ ಉಪಜೀವನವನ್ನು ಶಿಲ್ಪಕಾರ್ಯದಿಂದಲೂ, ಸಾಹಿತ್ಯ ಸೇವೆಯಿಂದಲೂ ಬಂದ ಹಣದಿಂದ ಸಾಗಿಸುತ್ತಿದ್ದನು ಇವನು ಧರ್ಮವಿಷಯಕವಾದ ಪುಸ್ತಕಗಳನ್ನು ಬರೆದು, ಮತ್ತು ಟೊಪ್ಪಿಗೆಗಳನ್ನು ತಯಾರಿಸಿ, ಇವುಗಳನ್ನು ಮಾರುತ್ತಿದ್ದನೆಂದು ಹೇಳುತ್ತಿರುವರು. ( Rajasthan, Vol. I, P. 279 ) ಇವನು ಮೃತ್ಯುಕಾಲದಲ್ಲಿ ಹೇಳಿದ್ದೇನಂದರೆ—“ ನಾನು ತಯಾರ ಮಾಡಿದ ಟೊಪ್ಪಿಗೆಗಳನ್ನು ಮಾರಿ, ಅದರಿಂದ ಬಂದ ಹಣದಿಂದ ನನ್ನ ಸಮಾಧಿಕ್ರಿಯೆಯನ್ನು ಮುಗಿಸಿರಿ ” ಭಾರತವರ್ಷದ ಪ್ರಬಲ ಪ್ರತಾಪಾನ್ವಿತನಾದ ಈ ಮೊಗಲ ಸಾಮ್ರಾಟನ ಸಮಾಧಿಗಾಗಿ ಮೇಲೆ ಹೇಳಿದ ಉಪಾಯದಿಂದ ನಾಲ್ಕುವರೆ ರೂಪಾಯಿ ಸಂಗ್ರಹವಾಗಿತ್ತು.

+ History of Aurangzeb, Sarkar. Vol. III, P. 96.

ದ್ದಾರೆ. ಆದರಂತೆ ಹಿಂದುಗಳೂ ಅವನನ್ನು ತಿರಸ್ಕರಿಸಲಿಕ್ಕೆ ಕಾರಣಗಳಿಲ್ಲದಿರಲಿಲ್ಲ. ಈ ವಿಷಯವಾಗಿ ನಾವು ಒಂದು ಸಂಗತಿಯನ್ನು ಕೆಳಗೆ ಬರೆಯುವೆವು.

ಅಕಬರನು ಅನೇಕ ಸಮಯದಲ್ಲಿ ಪಾರ್ಸೀಧರ್ಮವನ್ನವಲಂಬಿಸುತ್ತಿದ್ದನು. ಪ್ರತಿವರ್ಷ ಮೇಷರಾಶಿಯಲ್ಲಿ ಸೂರ್ಯನು ಪ್ರವೇಶ ಮಾಡಿದ ದಿವಸವು ಇರಾಣೀ ಯುಗಾದಿಯು. ಅಕಬರನೂ ಇದೇ ದಿವಸದಿಂದ ವರ್ಷಾರಂಭ ಮಾಡುತ್ತಿದ್ದನು. ಈ ದಿವಸದಿಂದ ಕೆಲವು ದಿವಸಗಳವರೆಗೆ ಆಗ್ರಾದಲ್ಲಿ ಆನಂದೋತ್ಸವವಾಗುತ್ತಿದ್ದಿತು. ಇದಕ್ಕೆ ನವರೋಜ ಅಥವಾ ಹೊಸ ವರ್ಷದ ಸಮಾರಂಭವೆನ್ನುತ್ತಿದ್ದರು. ಇದರ ಸಲುವಾಗಿ ಆಗ್ರಾದಲ್ಲಿ ಉತ್ತಮ ವಸ್ತುಗಳ ಪ್ರದರ್ಶನದ ಸಂತೆಯು ನೆರೆಯುತ್ತಿತ್ತು. ಇದಕ್ಕೆ ಮೀನಾಬಜಾರ (Fancy fair) ಅನ್ನುತ್ತಿದ್ದರು. ಈ ಬಜಾರಕ್ಕೆ ಬಾದಶಹನ ಅಂತಃಪುರದ ಸ್ತ್ರೀಯರೂ, ಪಟ್ಟಣದೊಳಗಿನ ಬೇರೆ ದೊಡ್ಡ ಮನೆತನದ ಹೆಂಗಸರೂ ಬರುತ್ತಿದ್ದರು. ಇಲ್ಲಿ ಪುರುಷರ ಪ್ರವೇಶವಾಗುವಂತಿದ್ದಿಲ್ಲ. ಇದರಲ್ಲಿ ರಮಣಿಯರೇ ಅಂಗಡಿಕಾರರು; ನಾರಿಯರೇ ಗಿರಾಕಿಗಳು; ಮತ್ತು ಅವರೇ ಪ್ರೇಕ್ಷಕರು. ಈ ಬಜಾರದಿಂದ ಸ್ತ್ರೀಯರಿಗೆ ತಮ್ಮ ಸ್ನೇಹಿತೆಯರ ದರ್ಶನಲಾಭವಾಗುತ್ತಿದ್ದುದಲ್ಲದೆ, ವಿವಾಹಸಂಬಂಧದ ಮಾತು-ಕತೆಗಳನ್ನಾಡುವದಕ್ಕೂ ಅನುಕೂಲವಾಗುತ್ತಿದ್ದಿತು. ಬಾದಶಹನೊಡನೆ ಮಿತ್ರತ್ವದಿಂದಿರುವ—ಅಕಬರನೊಡನೆ ಒಪ್ಪಂದ ಮಾಡಿಕೊಂಡಿರುವ ಯಾವತ್ತು ರಜಪೂತರು ತಮ್ಮ ಹೆಂಡಿರು-ಮಕ್ಕಳನ್ನು ಈ ಪ್ರದರ್ಶನಕ್ಕೆ ಕಳುಹಿಸಬೇಕೆಂಬ ನಿಯಮವಿದ್ದಿತು. ಆದರಿಂದ ಈ ಪೇಟೆಯಲ್ಲಿ ದೊಡ್ಡ ಮನೆತನದ ಅಸಂಖ್ಯ ಹಿಂದು-ಮುಸಲ್ಮಾನ ರಮಣಿಯರು ನೆರೆಯುತ್ತಿದ್ದರು. ಬಾದಶಹನು ವೇಷ ಬದಲಾಯಿಸಿಕೊಂಡು, ಈ ಸಂತೆಗೆ ಬಂದು, ಸುಂದರ ಸ್ತ್ರೀಯರ ರೂಪಸುಧೆಯನ್ನು ಪಾನಮಾಡುತ್ತಿದ್ದನು; ಮತ್ತು ಕೆಲವು ಪ್ರಸಂಗದಲ್ಲಿ ಇಂದುಮುಖಿಯರಾದ ಸುಂದರ ರಮಣಿಯರ ಧರ್ಮನಾಶಮಾಡುವ ಕಾರ್ಯವನ್ನೂ ಕೈಕೊಳ್ಳುತ್ತಿದ್ದನು! ಅಕಬರನು ಈ ಉತ್ಸವಕ್ಕೆ ಖುಷರೋಜ ಅಥವಾ ಆನಂದದ ದಿವಸವೆಂಬ ಹೆಸರನ್ನಿಟ್ಟಿದ್ದನು.*

---

* ಬದಾವುನಿಯೆಂಬ ಇತಿಹಾಸಕಾರನು ಇದಕ್ಕೆ 'ನವರೋಜ-ಇ-ಜಲಾಲೀ' ಎಂದು ಹೇಳಿದ್ದಾನೆ Blochmann. PP. 183,276; Rajasthan, Vol.I, 279-280.

ಅಕಬರನು ಈ ಬಜಾರದಲ್ಲಿ ಬರುತ್ತಿದ್ದನೆಂಬದನ್ನು, ಅಬಲಫಜಲನು ತನ್ನ ಕೌಶಲ್ಯದಿಂದ ಮುಚ್ಚಿಡಲಿಕ್ಕೆ ಸಮರ್ಥನಾಗಲಿಲ್ಲ. ಒಂದು ಕಡೆಯಲ್ಲಿ ಈ ಖುಷರೋಜದ ವರ್ಣನೆಯದ್ದು

ಬಿಕಾನೇರದ ಮಹಾರಾಜನಾದ ರಾಯಸಿಂಹನ ತಮ್ಮನಾದ ಪೃಥ್ವೀರಾಜನು, ಅಕಬರನ ದರಬಾರದಲ್ಲಿ ಪ್ರತಿನಿಧಿಯಾಗಿದ್ದನು. ಇವನು ಪ್ರತಾಪಸಿಂಹನ ತಮ್ಮನಾದ ಶಕ್ತಸಿಂಹನ ಮಗಳನ್ನು ಲಗ್ನಮಾಡಿಕೊಂಡಿದ್ದನು. ಇವಳು ಗುಣವತಿಯೂ, ಅತ್ಯಂತ ರೂಪಲಾವಣ್ಯವತಿಯೂ ಆಗಿದ್ದಳು. ಒಂದು ದಿವಸ ಇವಳು ನವರೋಜದ ಪೇಟೆಗೆ ಹೋಗಿದ್ದಳು. ಆಗ ಅಕಬರನು ಇವಳನ್ನು ನೋಡಿ, ಇವಳ ಅಪ್ರತಿಮವಾದ ಸೌಂದರ್ಯಕ್ಕೆ ಮರುಳಾಗಿ, ಪಶುವಿನಂತೆ ಮುಗ್ಧನಾಗಿ ಹೋದನು. ಮುಂದೆ ಅವಳು ನವರೋಜದ ಬಜಾರದಿಂದ ಹೊರಬಿದ್ದ ಮೇಲೆ, ಅಕಬರನು ಕೌಶಲ್ಯದಿಂದ ಅವಳನ್ನು ಹಾದಿಯಲ್ಲಿರುವದೊಂದು ಮನೆಯಲ್ಲಿ ಹಿಡಿದು ಹಾಕಿಸಿದನು; ಮತ್ತು ಕಾಮಾತುರನಾಗಿ ನರಪಿಶಾಚಿಯಂತೆ ಅವಳೆದುರಿನಲ್ಲಿ ಹೋಗಿ ನಿಂತನು. ಶಿಶೋದಿಯೂ ರಜಪೂತರ ಪವಿತ್ರವಂಶದಲ್ಲಿ ಹುಟ್ಟಿದವಳೂ, ಪೃಥ್ವೀರಾಜನಂತಹ ಪುರುಷಸಿಂಹನ ಅರ್ಧಾಂಗಿಯೂ ಆದ ಅವಳು ಅಕಬರನನ್ನು ಹುಲ್ಲಿಗಿಂತಲೂ ಕಡೆಯಾಗಿ ಎಣಿಸಿದಳು ಈ ಸಮಯದಲ್ಲಿ ಅವಳು ತನ್ನ ವಸ್ತ್ರದಲ್ಲಿ

---

ಆದರಲ್ಲಿ ಹೇಳಿದ್ದೇನಂದರೆ—" The people of his majesty's harem, and the women of other men are also invited, and buying and selling is quite general His majesty uses such days to select any articles which he wishes to buy, or to fix the price of things and thus add to his Knowledge" Blochmann, PP 276-7. ಮಹಾತ್ಮರಾದ ಟಾಡ್‌ಸಾಹೇಬರು ಈ ಸಂಗತಿಯನ್ನು ಹೇಳಿ, ಸ್ತ್ರೀಜಾತಿಯ ಮಾನಹಾನಿಯ ಈ ಪ್ರಸಂಗದಿಂದ ಉದ್ರಿಕ್ತರಾಗಿ ಬರೆದಿದ್ದೇನಂದರೆ—" The ingenuous Abul-Fazl thus softens down the unhallowed purchase of this day." Vol. I, P 279.

ಐತಿಹಾಸಿಕ ಬದಾವುನಿಯು ಸ್ಪಷ್ಟವಾಗಿ ಹೇಳಿದ್ದೇನಂದರೆ— ‘ ಖುಷರೋಜ ಬಾಜಾರದ ಪದ್ಧತಿಯಿಂದ ಅಕಬರನು ಮುಸಲ್ಮಾನ ಧರ್ಮಕ್ಕೆ ಬೇರೊಂದು ಆಘಾತವನ್ನುಂಟುಮಾಡಿದನು " In order to direct another blow at the honour of our religion, His majesty ordered that the stalls of the Fancy Bazars should be given up for the enjoyment of the Begums and women of the harem and also for other married ladies." Badaoni, P 338 quoted by Blochmann P. 204. ಈ ಬಜಾರದಿಂದ ಸ್ವಧರ್ಮನಿರತರಾದ ಹಿಂದುಗಳು ಹೇಗೆ ಮರ್ಮಹತರಾಗುತ್ತಿದ್ದರೆಂಬದನ್ನು ಇದರಿಂದ ಸಹಜವಾಗಿ ತಿಳಿಯಬಹುದಾಗಿದೆ.

ಮುಚ್ಚಿಟ್ಟುಕೊಂಡಿದ್ದೊಂದು ತೀಕ್ಷ್ಣ ಆಯುಧವನ್ನು ಹೊರಗೆ ತೆಗೆದು, ಅದನ್ನು ಅಕಬರನಿಗೆ ತೋರಿಸಿ, ಉಗ್ರಮೂರ್ತಿಯನ್ನು ಧಾರಣಮಾಡಿ, ಕ್ರೋಧದಿಂದ "ಪಾಪಿಷ್ಟ! ನರಾಧಮ! ಇನ್ನು ಮುಂದೆ ರಜಪೂತ ರಮಣಿಯರ ಸತೀತ್ವವನ್ನೆಂದಿಗೂ ನಾಶಮಾಡೆನೆಂದು ಪ್ರತಿಜ್ಞೆ ಮಾಡು; ಇಲ್ಲವಾದರೆ ಈ ಶಸ್ತ್ರದಿಂದ ನಿನ್ನ ಭವಲೀಲೆಯನ್ನು ಕೊನೆಗಾಣಿಸಿಬಿಡುವೆನು." ಎಂದು ಗದ್ದರಿಸಿದಳು. ಅಕಬರನು ಸ್ತಂಭಿತನೂ, ಭೀತನೂ ಆಗಿ, ಅವಳನ್ನು ಹೊರಗೆ ಬಿಟ್ಟುಕೊಟ್ಟನು. ಈ ಸಂಗತಿಯಿಂದ ಅಕಬರನಿಗೆ ಸುಬುದ್ಧಿಯುಂಟಾಯಿತು.

ಈ ಮೇರೆಗೆ ಓರ್ವ ರಜಪೂತ ಕುಲಲಕ್ಷ್ಮಿಯು ತನ್ನ ಪಿತೃ-ವಂಶದ ಪವಿತ್ರತೆಯನ್ನು ಕಾಯ್ದುಕೊಂಡಳು; ಆದರೆ ಸಕಲ ನಾರಿಯರಲ್ಲಿಯೂ ಈ ತರದ ಮನೋಧೈರ್ಯವಿರದ ಮೂಲಕ, ಎಲ್ಲರೂ ತಮ್ಮ ಪತಿವ್ರತಾಧರ್ಮವನ್ನು ಕಾಯ್ದುಕೊಳ್ಳಲು ಸಮರ್ಥರಾಗುತ್ತಿದ್ದಿಲ್ಲ. ಪೃಥ್ವೀರಾಜನ ಲಲನೆಯಂತೆ, ರಾಯಸಿಂಹನ ಹೆಂಡತಿಯು ತನ್ನ ಸತೀತ್ವವನ್ನು ರಕ್ಷಿಸಿಕೊಳ್ಳಲಿಲ್ಲ. ರಾಯಸಿಂಹನ ಹೆಂಡತಿಯು ರತ್ನಾಲಂಕಾರಗಳ ಆಶೆಯಿಂದ ತನ್ನ ಸತೀಧರ್ಮವನ್ನು ಮಾರಿಕೊಂಡಳೆಂದು ಹೇಳುತ್ತಿರುವರು. ಇದರಂತೆ ಎಷ್ಟು ರಜಪೂತ ಕುಲಸ್ತ್ರೀಯರು ತಮ್ಮ ಧರ್ಮಕ್ಕೆ ಜಲಾಂಜಲಿಯನ್ನು ಕೊಟ್ಟರೆಂಬದನ್ನು ಹೇಗೆ ಹೇಳಬೇಕು? ಅಕಬರನು ಅನೇಕ ಪರಸ್ತ್ರೀಯರನ್ನು ಪತ್ನೀರೂಪವಾಗಿ ಗ್ರಹಿಸಿದ್ದನೆಂದು ಹೇಳುತ್ತಿರುವರು. ಅಕಬರನ ಅಧೀನತ್ವವನ್ನೊಪ್ಪಿಕೊಂಡು, ಅವನೊಡನೆ ಸಖ್ಯತ್ವದಿಂದಿರಬೇಕಾದ ರಜಪೂತರು, ಬಾದಶಹನ ಅಂತಃಪುರಕ್ಕೆ ಕನ್ಯಾದಾನ ಮಾಡಬೇಕಾಗುತ್ತಿದ್ದಿತು; ಮತ್ತು ತಮ್ಮ ಹೆಂಡಿರು-ಮಕ್ಕಳನ್ನು ನವರೋಜದ ಮೀನಾಬಾಜಾರಕ್ಕೆ ಕಳಿಸಬೇಕಾಗುತ್ತಿದ್ದಿತು. ಒಬ್ಬ ಬುಂದಿಯ ಅರಸನು ಮಾತ್ರ ಅಕಬರನ ಅಧೀನತ್ವವನ್ನೊಪ್ಪಿಕೊಂಡಿದ್ದರೂ, ಈ ಸಂಗತಿಗಳನ್ನು ಒಪ್ಪಿಕೊಂಡಿರಲಿಲ್ಲ. ಅವನ ಒಪ್ಪಂದದ ಪತ್ರದಲ್ಲಿ "ಬುಂದಿಯ ಅರಸರು ದಿಲ್ಲಿಯ ಬಾದಶಹನಿಗೆ ಕನ್ಯೆಯನ್ನು ಮಾರತಕ್ಕವರಲ್ಲ; ಮತ್ತು ತಮ್ಮ ಪರಿವಾರದ ಸ್ತ್ರೀಯರನ್ನು ನವರೋಜದ ಮೀನಾಬಾಜಾರಕ್ಕೆ ಕಳಿಸುವವರಲ್ಲ." ‡ ಎಂದು ಸ್ಪಷ್ಟವಾಗಿ ಬರೆದದೆ.

‡ "That the chief of Boondi should be exempted from that custom, degrading to a Rajput, of sending a dola (ಅಂತಃಪುರಕ್ಕೆ ಕೊಡಬೇಕಾದ ಕನ್ಯೆ) to the royal harem"

ಯವನರಿಗೆ ತಮ್ಮ ಕನ್ನಿಕೆಯರನ್ನು ಕೊಟ್ಟು, ಜಾತಿಧರ್ಮಕ್ಕೆ ಜಲಾಂಜಲಿಯನ್ನು ಕೊಟ್ಟ ರಜಪೂತರೊಡನೆ, ಪ್ರತಾಪಸಿಂಹನು ಆಹಾರವ್ಯವಹಾರವನ್ನು ಬಂದುಮಾಡಿದನು; ಮತ್ತು ಅಕಬರನ ಆಧೀನದಲ್ಲಿರುವವರಲ್ಲಿ ಬುಂದಿಯ ಅರಸನನ್ನುಳಿದು, ಉಳಿದವರೊಡನೆ ಶಿಶೋದಿಯಾ ರಜಪೂತರು ಶರೀರಸಂಬಂಧವನ್ನು ಮಾಡಬಾರದೆಂದು ಕಟ್ಟಪ್ಪಣೆ ಮಾಡಿದನು. ಶಿಶೋದಿಯಾ ವಂಶದವರೊಡನೆ ಶರೀರಸಂಬಂಧಮಾಡುವದು ಶ್ರೇಷ್ಠವೆಂದು ರಜಪೂತರು ತಿಳಿಯುತ್ತಿದ್ದರು; ಮತ್ತು ಮೇವಾಡದ ಅರಸನಾದ ಪ್ರತಾಪಸಿಂಹನೊಡನೆ ಆಹಾರವ್ಯವಹಾರ ನಡೆಯಿಸಲಿಕ್ಕೆ ಬಾರದಂತಾದ ಬಳಿಕ, ತಾವು ಬಹಿಷ್ಕೃತರಾದೆವೆಂದು ತಿಳಿಯುತ್ತಿದ್ದರು. ಆದರಿಂದ ಎಷ್ಟೋ ಸಾಮಂತ-ರಾಜರು ಪ್ರತಾಪನ ಅನುಗ್ರಹಕ್ಕಾಗಿ ವಿನಯದಿಂದ ಬೇಡಿಕೊಂಡರು; ಆದರೆ ಸ್ಥಿರಪ್ರತಿಜ್ಞನಾದ ಪ್ರತಾಪನು ಅವರ ಪ್ರಾರ್ಥನೆಯನ್ನು ಮನ್ನಿಸಲಿಲ್ಲ.

ಅಕಬರನ ಆಧೀನತ್ವವನ್ನೊಪ್ಪಿಕೊಂಡವರಲ್ಲಿ ಮಾನಸಿಂಹನು ಮುಖ್ಯನಾಗಿದ್ದನು. ಇವನು ಬುದ್ಧಿವಂತನೂ, ಮಹಾಪರಾಕ್ರಮಿಯೂ ಆಗಿದ್ದನು. ಇವನು ಯವನರೊಡನೆ ಬಳಿಕೆಯನ್ನಿಟ್ಟದ್ದರಿಂದುಂಟಾದ ರಜಪೂತರ ಹೀನತೆಯನ್ನು ಚನ್ನಾಗಿ ತಿಳಿದುಕೊಂಡಿದ್ದನು. ರಜಪೂತರ ಆಖ್ಯಾಯಿಕೆಯಲ್ಲಿ ಚಾರಣಕವಿಗಳು ಇವನನ್ನು 'ಕಲಿಯುಗದ ಕಲಂಕ'ನೆಂದು ವರ್ಣಿಸಿದ್ದಾರೆ. ಈ ಸಮಯದಲ್ಲಿ ಮಾನಸಿಂಹನು ಪ್ರತಾಪನನ್ನು ಸಂತುಷ್ಟಪಡಿಸುವದಕ್ಕೆ ಸಮಯವನ್ನು ಕಾಯ್ದುಕೊಂಡಿದ್ದನು. ಪ್ರತಾಪನೊಡನೆ ಅಕಬರನ ಯುದ್ಧವಾಗುವ ಪೂರ್ವದಲ್ಲಿ—ಡೊಂಗರಪುರವಿಜಯದ ತರುವಾಯ ಮಾನಸಿಂಹನು ರಾಜಧಾನಿಗೆ ಹೊರಟಿದ್ದನು. ಹಾದಿಯಲ್ಲಿ ಅವನು ಪ್ರತಾಪನ ದರ್ಶನ ತೆಗೆದುಕೊಳ್ಳುವ ಮನಸುಮಾಡಿದನು; ಅದರಂತೆ ಪ್ರತಾಪನಿಗೆ ಹೇಳಿಕಳುಹಿಸಿದನು. ಪ್ರತಾಪನಾದರೂ ಇವನ ಪ್ರಾರ್ಥನೆಯನ್ನು ಮನ್ನಿಸಿದನು. ಈ ಸಮಯದಲ್ಲಿ ಪ್ರತಾಪನು ಕಮಲಮೀರ ದುರ್ಗದಲ್ಲಿರುತ್ತಿದ್ದನು. ಅವನು ಅತಿಥಿಯ ಎದುರ್ಗೊಳ್ಳುವದಕ್ಕಾಗಿ, ಉದಯ

---

"That the vassals of Boondi should be exempted from the obligation of sending their wives or female relatives "to hold a stall in the meena-Bazar" at the palace on the festival of Noroza." Rajasthan Vol. II, P. 389.

ಸಾಗರದ ಹತ್ತರ ಬಂದನು; ಮತ್ತು ಅಲ್ಲಿ ಅತಿಥಿಸತ್ಕಾರದ ಯೋಗ್ಯ ವ್ಯವಸ್ಥೆಯನ್ನು ಮಾಡಿಸಿದ್ದನು. ಅಡಿಗೆಯು ಸಿದ್ಧವಾಯಿತು. ಮಾನಸಿಂಹನನ್ನು ಭೋಜನಕ್ಕೆಬ್ಬಿಸಿದರು. ಮಾನಸಿಂಹನ ಸತ್ಕಾರಮಾಡುವದಕ್ಕೆ ಪ್ರತಾಪನ ಹಿರಿಯ ಮಗನಾದ ಯುವರಾಜ ಅಮರಸಿಂಹನು ಸಿದ್ಧನಾಗಿದ್ದನು. ಅವನು ವಿನಯದಿಂದ ಮಾನಸಿಂಹನಿಗೆ—“ ಇಂದು ತಂದೆಯವರ ತಲೆನೋಯಿಸುತ್ತಿರುವದು; ಅದರಿಂದ ವರು ತಮ್ಮೊಡನೆ ಊಟಕ್ಕೆ ಬರಲಾರರು; ನೀವು ಯಾವ ಸಂಕೋಚವನ್ನು ತೆಗೆದುಕೊಳ್ಳದೆ, ಆತಿಥ್ಯವನ್ನು ಸ್ವೀಕರಿಸಿ, ನಮ್ಮನ್ನು ಕೃತಾರ್ಥರನ್ನಾಗಿ ಮಾಡಿರಿ. ” ಎಂದು ಹೇಳಿದನು. ತೀಕ್ಷ್ಣಬುದ್ಧಿಯ ಮಾನಸಿಂಹನು ಪ್ರತಾಪನ ಇಂಗಿತವನ್ನರಿತನು. ಅವನು ಗಂಭೀರಸ್ವರದಿಂದ—“ ಪ್ರತಾಪನ ತಲೆಶೂಲಿಯ ಕಾರಣವನ್ನು ನಾನು ಕಂಡುಹಿಡಿದಿದ್ದೇನೆ. ಆಗಿಹೋದ ಮಾತನ್ನು ತಿರುಗಿಸಲಿಕ್ಕೆ ಬರುವಂತಿಲ್ಲ. ಕಾರಣ ಅವನು ನನ್ನೊಡನೆ ಭೋಜನಕ್ಕೆ ಬರಲೇ ಬೇಕು. ಈ ಮಾತನ್ನು ನಿಮ್ಮ ತಂದೆಯವರಿಗೆ ತಿಳಿಸು. ” ಎಂದನು. ಅಮರಸಿಂಹನು ಪ್ರತಾಪನಿಗೆ ಈ ಮಾತನ್ನು ತಿಳಿಸಲು ಪ್ರತಾಪನು ಹೇಳಿಕಳುಹಿಸಿದ್ದೇನಂದರೆ—“ ಯವನರಿಗೆ ಸಹೋದರಿಯನ್ನು ಮಾರಿದ, ದಿನಾಲು ಯವನರೊಡನೆ ಅನ್ನಪಾನಮಾಡುವ ರಜಪೂತರೊಡನೆ ಪ್ರತಾಪನು ಭೋಜನಮಾಡಲಾರನು. ”

ಮಾನಸಿಂಹನು ತಾನಾಗಿಯೇ ಪ್ರತಾಪನ ಆತಿಥ್ಯ ಸ್ವೀಕಾರಮಾಡುವದಕ್ಕೆ ಬಂದು ಈ ಅಪಮಾನಕ್ಕೆ ತಾನೇ ಕಾರಣನಾಗಿದ್ದನು. ಅವನು ಒಂದು ತುತ್ತನ್ನು ಕೂಡ ಬಾಯಿಯಲ್ಲಿಟ್ಟುಕೊಳ್ಳಲಿಲ್ಲ. ಚಿತ್ರಾವತಿಯಾಗಿಟ್ಟ ಕೆಲವು ಅಗಳುಗಳನ್ನು ತನ್ನ ಉಷ್ಣೀಯದಲ್ಲಿಟ್ಟುಕೊಂಡು, ಸ್ಥಳವನ್ನು ಬಿಟ್ಟು ಹೊರಟನು. ಹೋಗುವ ಮುಂದೆ ರಾಣಾನನ್ನುದ್ದೇಶಿಸಿ—“ ತಮ್ಮ ಸನ್ಮಾನವು ಬಳೆಯುವದಕ್ಕಾಗಿ, ನಾವು ನಮ್ಮ ಮರ್ಯಾದೆಗೆ ಜಲಾಂಜಲಿಯನ್ನು ಕೊಟ್ಟು, ನಮ್ಮ ಸಹೋದರಿಯರನ್ನು ತುರ್ಕರಿಗೆ ಕೊಟ್ಟಿದ್ದೇವೆ. ವಿಪತ್ತನ್ನು ತಂದುಕೊಳ್ಳುವದೇ ತಮ್ಮ ಇಚ್ಛೆಯಿದ್ದಲ್ಲಿ ಉಪಾಯವಿಲ್ಲ. ಈ ರಾಜ್ಯದಲ್ಲಿ ಇನ್ನು ನೀವು ಬಹುಕಾಲವಿರಲಾರಿರಿ. ” ಎಂದನು. ಮಾನಸಿಂಹನು ಕುದುರೆಯನ್ನು ಹತ್ತತಕ್ಕವನಿದ್ದನು. ಅಷ್ಟರಲ್ಲಿ ಪ್ರತಾಪನು ಬಂದು ಅವನ ದರ್ಶನ ತಕ್ಕೊಂಡನು. ಆಗ ಮಾನಸಿಂಹನು ಸಿಟ್ಟಿನಿಂದ ಅಂದದ್ದೇನಂದರೆ—“ ತಮ್ಮ ಗರ್ವವನ್ನು ಖಂಡಿಸದಿದ್ದಲ್ಲಿ ನನ್ನ ಹೆಸರು ಮಾನಸಿಂಹನಲ್ಲ.” ಇದಕ್ಕೆ ಪ್ರತಾಪನು ಗಂಭೀರತೆಯಿಂದ—“ ತಮ್ಮನ್ನು ಯುದ್ಧಕ್ಷೇತ್ರದಲ್ಲಿ ನೋಡು

ವೆನಾದರೆ ಬಹು ಆನಂದಿತನಾಗುವೆನು. ” ಎಂದು ಉತ್ತರಕೊಟ್ಟನು. ಈ ಸಮಯದಲ್ಲಿ ಪ್ರತಾಪನ ಹಿಂದುಗಡೆಯಲ್ಲಿ ಯಾರೋ “ ತಮ್ಮ ಬೀಗನಾದ ಅಕಬರನನ್ನು ಕರೆದುಕೊಂಡು ಬರುವದಕ್ಕೆ ಮರೆಯಬೇಡಿರಿ. ”ಎಂದು ನುಡಿದರು. ಮಾನಸಿಂಹನು ಮಾಡುತ್ತಾನೇನು? ಸುಮ್ಮನೆ ಹೊರಟುಹೋದನು.

ಮಾನಸಿಂಹನು ಊಟಕ್ಕೆ ಕುಳಿತ ಸ್ಥಳವನ್ನು ಗಂಗಾಜಲದಿಂದ ಶುದ್ಧ ಮಾಡಿದರು. ಕಲಂಕಿತನಾದ ಮಾನಸಿಂಹನ ದರ್ಶನತಕ್ಕೊಂಡ ರಜಪೂತರು ಸ್ನಾನಮಾಡಿ, ಬೇರೆ ವಸ್ತ್ರಗಳನ್ನು ಧರಿಸಿದರು. ರಜಪೂತರು ಮುಸಲ್ಮಾನರೊಡನೆ ಶರೀರಸಂಬಂಧವನ್ನು ಮಾಡಿದ ಸ್ವಜನಾಂಗವನ್ನು ಅತೀವ ತಿರಸ್ಕಾರದೃಷ್ಟಿಯಿಂದ ನೋಡುತ್ತಿದ್ದರೆಂಬದನ್ನು ಇದರಿಂದ ತಿಳಿಯಬಹುದಾಗಿದೆ.

ಕ್ರೋಧಾಂಧನಾದ ಮಾನಸಿಂಹನು ಅಕಬರನಿಗೆ ತನ್ನ ಅಪಮಾನದ ಕಥೆಯನ್ನೂ, ಅದರೊಡನೆ ಬಾದಶಹನ ವಿಷಯವಾಗಿರುವ ಪ್ರತಾಪನ ತಿರಸ್ಕಾರವನ್ನೂ ವರ್ಣಿಸಿ ಹೇಳಿದನು. ಇದನ್ನು ಕೇಳಿ ಬಾದಶಹನು ಸಿಟ್ಟಾಗಿ, ಯವನರ ಕಡು ಹಗೆಯಾದ ಪ್ರತಾಪನಿಗೆ ಯೋಗ್ಯ ಶಿಕ್ಷೆಯನ್ನು ವಿಧಿಸುವದಕ್ಕಾಗಿ ದೊಡ್ಡ ಯುದ್ಧದ ಸಿದ್ಧತೆಯು ನಡೆಯಿತು. ಪ್ರತಾಪನ ಗರ್ವವನ್ನು ನಾಶಮಾಡಿ, ವೀರಭೂಮಿಯಾದ ರಾಜಸ್ಥಾನವನ್ನು ಯವನರ ಸ್ವಾಧೀನಪಡಿಸಲು ಮಾನಸಿಂಹನು ಮನಸುಮಾಡಿದನು; ಮತ್ತು ಅದರಂತೆ ಅಕಬರನಿಗೆ ಆಲೋಚನೆಯನ್ನು ಹೇಳತೊಡಗಿದನು. ಯಾವ ಅರಸನ ರಾಜ್ಯವಿಸ್ತಾರಕ್ಕಾಗಿಯೂ, ಶತ್ರುಸಂಹಾರಕ್ಕಾಗಿಯೂ ತನ್ನ ದೇಹದ ರಕ್ತವನ್ನು ನೀರಿನಂತೆ ವೆಚ್ಚಮಾಡುತ್ತಿದ್ದನೋ, ಆ ಅರಸನು ಒಂದು ಕಾಲದಲ್ಲಿ ತನ್ನ ಮರಣದ ಸಲುವಾಗಿ ವಿಷದಿಂದ ಕೂಡಿದ ಉಂಡಿಯನ್ನು ತಯಾರಿಸುವನೆಂಬದನ್ನು ಮಾನಸಿಂಹನು ಸ್ವಪ್ನದಲ್ಲಿಯೂ ಕೂಡ ಭಾವಿಸಿರಲಿಲ್ಲ.§

---

§ಬುಂದಿಯ ರಾಜದಫ್ತರದ ಕಾಗದ-ಪತ್ರಗಳಿಂದ ತಿಳಿಯುವವೇನಂದರೆ:—ಮಾನಸಿಂಹನು ತನ್ನ ಸಹೋದರಿಯ ಮಗನಾದ ಖುಸರುನನ್ನು ದಿಲ್ಲೀಶ್ವರನನ್ನಾಗಿ ಮಾಡುವದಕ್ಕೆ ಯತ್ನಿಸಿದ್ದನ್ನು ತಿಳಿದು, ಅಕಬರನು ಅವನ ವಿಷಯವಾಗಿ ಸಿಟ್ಟಾದನು, ಮತ್ತು ಮಾನಸಿಂಹನನ್ನು ಕೊಲ್ಲುವದಕ್ಕಾಗಿ ವಿಷಮಿಶ್ರಿತವಾದ ಉಂಡಿಯನ್ನು ತಯಾರಮಾಡಿಸಿದನು; ಆದರೆ ಮರವಿನಿಂದ ಉತ್ತಮವಾದ ಉಂಡಿಯನ್ನು ಮಾನಸಿಂಹನಿಗೆ ಕೊಟ್ಟು, ವಿಷದಿಂದ ಕೂಡಿದ ಉಂಡಿಯನ್ನು ತಾನು



**ಮಹಾರಾಣಾ ಪ್ರತಾಪಸಿಂಹ.**

ಭಾರತಬಂಧು ಬಾಗಲಕೋಟ.

G. S. P.

# ಏಕಾದಶ ಪರಿಚ್ಛೇದ.

## ಯುದ್ಧದ ಸಿದ್ಧತೆ.

ರಜಪೂತ ಮಾನಸಿಂಹನು । ನಿಜಧರ್ಮವ ಮರೆದು ರಾಜಪುತ್ರ-ತಿಲಕನಂ ॥
ತ್ಯಜಿಸಿದನು ನಾಶಗೆಯ್ಯೆ । ಲ್ಕಜಮೀರವ ಸೈನ್ಯಯುಕ್ತ ಕುಲಹಂತಾರಂ ॥ ೧ ॥

ಪ್ರತಾಪಸಿಂಹನು ಮೇವಾಡದ ಹಳ್ಳಿಗಳನ್ನು ಜನಶೂನ್ಯವಾಗಿ ಮಾಡಿ, ಗುಡ್ಡಗಾಡು ಪ್ರದೇಶದಲ್ಲಿ ಆಶ್ರಯವನ್ನು ಹೊಂದಿದ್ದನು. ಈ ಪ್ರದೇಶವು ಉತ್ತರದಲ್ಲಿ ಕಮಲಮೀರದಿಂದ ದಕ್ಷಿಣಕ್ಕೆ ಋಷಭನಾಥ* (ರಿಕಬನಾಥ)ದ ವರೆಗೂ, ಪಶ್ಚಿಮದಲ್ಲಿ ಮೀರಪುರದಿಂದ ಪೂರ್ವಕ್ಕೆ ಸಾತೋಲದ ವರೆಗೂ ವಿಸ್ತೃತವಾಗಿತ್ತು. ಇದು ಸುಮಾರು ನಾಲ್ವತ್ತು ಕ್ರೋಶ ಚೌರಸ ಪ್ರದೇಶವಾಗಿದ್ದಿತು. ಇದರ ನಾಲ್ಕೂ ಕಡೆಗಳಲ್ಲಿ ದುರ್ಭೇದ್ಯವಾದ ಪರ್ವತ-ಪ್ರಾಕಾರಗಳು ಸುತ್ತುಗಟ್ಟಿದ್ದವು. ಮಧ್ಯಭಾಗದ ಕೆಲವೆಡೆಯಲ್ಲಿ ದುರಾರೋಹವಾದ ಪರ್ವತ; ಬೇರೆ ಕೆಲವೆಡೆಯಲ್ಲಿ ಘನವಿನ್ಯಸ್ತವಾದ ತಮಸಾಚ್ಛನ್ನ ಭೂಮಿಯು. ಯಾವತ್ತು ಸ್ಥಳವು ಕಲ್ಲುಗಿಡಗಂಟೆಗಳಿಂದ ತುಂಬಿಹೋಗಿತ್ತು. ಮತ್ತು ಏರ-ಇಳವುಗಳಿಂದ ಕೂಡಿಹೋಗಿದ್ದಿತು. ಈ ಪ್ರದೇಶದಲ್ಲಿ ಯಾವ ತರದ ಸಸ್ಯಾದಿಗಳೂ ಬೆಳೆಯುತ್ತಿರಲಿಲ್ಲ. ಸುತ್ತಲೂ ನೋಡಿದರೆ, ಅಂಕುಡೊಂಕಾದ ಘಟ್ಟದ ಮಾರ್ಗಗಳೂ, ವಕ್ರಗಾಮಿಗಳಾದ ಗಿರಿನದಿಗಳೂ ಕಾಣುತ್ತಿರುವವು; ಇವುಗಳ ಹೊರತು ಈ ಸ್ಥಳದಲ್ಲಿ ಬೇರೆ ದೃಶ್ಯವಿಲ್ಲ.

---

ತಿಂದನು. ಇದರಿಂದಲೇ ಅಕಬರನು ಮರಣವನ್ನು ಹೊಂದಿದನು (೧೬೦೫) ವಾಚಕಮಹಾಶಯರು ಮಹಾತ್ಮಾ ಟಾಡ್‌ಸಾಹೇಬರಿಂದ ಬರೆಯಲ್ಪಟ್ಟ ರಾಜಸ್ಥಾನದ ಎರಡನೆಯ ಭಾಗದಲ್ಲಿಯ ಬುಂದಿಯ ಇತಿಹಾಸವನ್ನು ಅವಲೋಕಿಸಬೇಕು. ಓರ್ವ ಪೋರ್ತುಗೀಜ ಇತಿಹಾಸಕನೂ ಈ ಸಂಗತಿಯನ್ನು ಸಮರ್ಥಿಸಿದ್ದಾನೆ. Rajasthan, Vol. II, P. 392

* ಋಷಭನಾಥ (Rakabnath) ವು ಉದಯಪುರದಿಂದ ದಕ್ಷಿಣಕ್ಕೆ ೪೫ ಮೈಲುಗಳ ಮೇಲಿದೆ. ಇಲ್ಲಿ ಆದಿನಾಥ ಅಥವಾ ಋಷಭನಾಥನ ಗುಡಿಯದೆ. Raj. Gazetteer Vol. III P. 55; ಟಾಡ್ ಸಾಹೇಬರು ಇದಕ್ಕೆ ರಿಕುಮನಾಥ ಎಂದು ಹೇಳಿದ್ದಾರೆ.

ಈ ಭೀಷಣಪ್ರದೇಶದಲ್ಲಿ ಮೇವಾಡದ ಜನರು ಕ್ರಮವಾಗಿ ಬಂದು, ವಾಸಮಾಡಹತ್ತಿದರು. ಎಲ್ಲರೂ ಪ್ರತಾಪನ ಆಜ್ಞೆಯನ್ನು ಪಾಲಿಸಬೇಕು; ಇಲ್ಲ ವಾದರೆ ಯಾವ ತರದ ಶಿಕ್ಷೆಯನ್ನನುಭವಿಸಬೇಕಾಗುತ್ತಿದ್ದಿತೆಂಬದನ್ನು ನಾವು ಮೊದಲು ಹೇಳಿದ್ದೇವೆ. ಈ ಮೇರೆಗೆ ಪ್ರತಾಪನ ಆಜ್ಞೆಯನ್ನು ಪಾಲಿಸುವದರಲ್ಲಿ ಪ್ರಜೆಗಳ ಸ್ವಾರ್ಥವಿಲ್ಲದಿರಲಿಲ್ಲ. ಒಂದುವೇಳೆ ರಜಪೂತರು ಪ್ರತಾಪನ ಕಣ್ಣು ತಪ್ಪಿಸಿ, ಎಲ್ಲಿಗಾದರೂ ಹೋಗಬಹುದಾಗಿದ್ದಿತು, ಆದರೆ ಈ ಜನರು ಮೊಗಲರ ಕಣ್ಣುತಪ್ಪಿಸಲು ಸಮರ್ಥರಾಗುತ್ತಿದ್ದಿಲ್ಲ, ಅಂದರೆ ಮೊಗಲರ ಕೈಯಲ್ಲಿ ಸಿಕ್ಕು, ಅವರ ಅತ್ಯಾಚಾರಕ್ಕೆ ಬಲಿಬೀಳಬೇಕಾಗುತ್ತಿದ್ದಿತು. ಪ್ರತಾಪನಿಗೆ ಯೋಗ್ಯ ಶಿಕ್ಷೆಯನ್ನು ವಿಧಿಸುವದಕ್ಕಾಗಿ—ಅವನನ್ನು ಪೀಡಿಸುವದಕ್ಕಾಗಿ ಮೊಗಲರ ಸೈನ್ಯವು ನಾಲ್ಕೂ ಕಡೆಯಿಂದ ಬಂದು, ಮೇವಾರದ ಈ ಪರ್ವತಪ್ರದೇಶದ ಹೊರಭಾಗದಲ್ಲಿ ಕೂಡತೊಡಗಿತ್ತು. ಗುಜರಾಥ, ಮಾಳವ ಮೊದಲಾದವುಗಳನ್ನು ಜಯಿಸುವದಕ್ಕಾಗಿ ಕಳಿಸಲ್ಪಟ್ಟ ಬಾದಶಾಹೀ ಸೈನ್ಯವು, ಮೇವಾಡದ ಪಾರ್ಶ್ವದಲ್ಲಿ ಯಾತಾಯಾತ ಮಾಡುತ್ತಿದ್ದಿತು. ಈ ಸೈನಿಕರು ಯಾವದೊಂದು ಸ್ಥಳದಲ್ಲಿ ಅತ್ಯಾಚಾರಕ್ಕೆ ಅನುಕೂಲವಾದ ಪ್ರಸಂಗಗಳೊದಗಿದಲ್ಲಿ, ಅವನ್ನು ಎಂದೂ ವ್ಯರ್ಥವಾಗಿ ಕಳೆದುಕೊಳ್ಳುತ್ತಿದ್ದಿಲ್ಲ. ಚಿತೋಡ ಮತ್ತು ಮಂಡಲಗಡ ಇವು ಮೊಗಲರ ಆಧೀನವಾಗಿದ್ದವು. ಇಲ್ಲಿರತಕ್ಕ ಸೈನ್ಯವು ಮೇವಾಡದ ಪೂರ್ವಕ್ಕಿರುವ ಸಮಸ್ತ ಭಾಗವನ್ನು ಹಾಳುಮಾಡುತ್ತಿದ್ದಿತು. ಮಾನಸಿಂಹನು ಒಮ್ಮೆ ಪ್ರತಾಪನ ದರ್ಶನಕ್ಕಾಗಿ ಬಂದು, ಕ್ರುದ್ಧನಾಗಿಹೋದನೆಂಬದನ್ನು ಹಿಂದೆ ಹೇಳಿದ್ದೇವೆ. ಅವನೂ ಸಸೈನ್ಯನಾಗಿ ಹೊರಬಿದ್ದನು; ಮತ್ತು ತನ್ನ ಸೈನಿಕರೊಡನೆ ಉದಯಪುರದಿಂದ ಚಿತೋಡ-ನಸಿರಾಬಾದದ ಮಾರ್ಗವಾಗಿ ಹೋದನು. ಈ ಸಮಯದಲ್ಲಿ ಎಡಬಲ ಪ್ರದೇಶಗಳಲ್ಲಿ ಅತ್ಯಾಚಾರಕ್ಕೆ ಕೊರತೆಯಿರಲಿಲ್ಲ. ಅಹಮದನಗರದ ಜಯದ ತರುವಾಯ, ಅಕಬರನು ಸೇನಾಪತಿ ಭಗವಾನದಾಸ, ಶಹಾ ಕುಲಿಖಾ ಮೊದಲಾದವರನ್ನು ಸಸೈನ್ಯವಾಗಿ ಈದರದ ಮಾರ್ಗದಿಂದ ಮಹಾರಾಣಾನ ರಾಜ್ಯದಲ್ಲಿ ಕಳುಹಿಸಿದನು.* ಬಾದಶಹನ ಉದ್ದೇಶವೇನಂದರೆ:— “ಯಾವದೇ ರೀತಿಯಿಂದಾಗಲಿ, ಪ್ರತಾಪನು ಒಮ್ಮೆ ತನ್ನ ಆಧೀನತ್ವವನ್ನು ಒಪ್ಪಿಕೊಂಡರೆ ಸಾಕು; ಹೀಗಾದಲ್ಲಿ ಅವನನ್ನು ವಿಶೇಷ ಮರ್ಯಾದೆಯಿಂದ ನಡೆಸಿಕೊಳ್ಳುವೆವು;

* Akbarnama (Beveridge) III P. 89.

ಮತ್ತು ಅವನ ರಾಜ್ಯದಲ್ಲಿ ಎಷ್ಟು ಮಾತ್ರವೂ ಕೈಹಾಕಲಾರೆವು." ಬಾದಶಹನು ತನ್ನ ಈ ಉದ್ದೇಶದಂತೆ, ಪ್ರತಿಯೊಬ್ಬ ಸೇನಾಪತಿಯ ಮುಂದೂ, ದೂತನ ಮುಂದೆಯೂ ಈ ಸಂಗತಿಯನ್ನು ಹೇಳಿ ಕಳುಹಿಸುತ್ತಿದ್ದನು. ಯಾವತ್ತು ಅರಸರು ಅಕಬರ ಬಾದಶಹನ ವಶೀಭೂತರಾಗಿದ್ದರು; ಆದರೆ ಸಣ್ಣದೇಶದ ಕ್ಷುದ್ರನರಪತಿಯಾದ ಪ್ರತಾಪಸಿಂಹನು ಅಕಬರನನ್ನು ಹುಲ್ಲಿನಂತೆ ಎಣಿಸಿದ್ದನು; ಅಂದರೆ ಪ್ರತಾಪ ಬಾದಶಹನಿಗೆ ಯಾವ ತರದ ಮರ್ಯಾದೆಯನ್ನು ಕೊಡುತ್ತಿರಲಿಲ್ಲ; ಈ ಸಂಗತಿಯನ್ನು ಅಕಬರನು ಸಹಿಸದವನಾಗಿದ್ದನು. ಪ್ರತಾಪನ ಆ ಗರ್ವೋನ್ನತ ಪ್ರಕೃತಿಯು, ದಿಲ್ಲೀಶ್ವರನ ಅಭಿಮಾನಕ್ಕೆ ಆಘಾತ ಮಾಡುತ್ತಲಿದ್ದಿತು. ಇದಕ್ಕಾಗಿಯೇ ಅಕಬರನು ಪ್ರತಾಪನ ದಮನಕ್ಕಾಗಿ ಇಷ್ಟು ಸಿದ್ಧತೆಯನ್ನು ನಡೆಸಿದ್ದನು; ಮತ್ತು ಯಾವದೇ ರೀತಿಯಿಂದ ಪ್ರತಾಪನ ಗರ್ವಖಂಡನೆಯನ್ನು ಮಾಡಲು ಕೃತಸಂಕಲ್ಪನಾಗಿದ್ದನು. ಬಾದಶಹನು ವಂಗದೇಶದಿಂದ ಪಂಜಾಪದ ವರೆಗಿರುವ ಪ್ರದೇಶದಲ್ಲಿ ಬೇಕಾದಲ್ಲಿ ಹೋಗಲಿ, ಅಲ್ಲಿ ಅವನ ವಿಜಯದುಂದುಭಿಯು ಬಾರಿಸುತ್ತಲಿತ್ತು. ಆದರೆ ಈ ಯಾವತ್ತು ಜಯೋಲ್ಲಾಸದಲ್ಲಿ ಪ್ರತಾಪನು ಅವನತನಾಗಲಿಲ್ಲೆಂಬ ಸಂಗತಿಯ ಸ್ಮರಣೆಯಾಗಿ, ಬಾದಶಹನ ಮನಸು ಕಳವಳ ಹೊಂದುತ್ತಿತ್ತು. ರಜಪೂತಸ್ಥಾನದ ರಾಜರಲ್ಲಿ ಬಹು ಜನರು—ಪ್ರತಾಪನನ್ನುಳಿದು ಯಾವತ್ತರು ಸದಾ ಬಾದಶಹನನ್ನು ಓಲೈಸಿರುತ್ತಿದ್ದರು. ಆದರೆ ಮಹಾರಾಣಾನೂ, ಶ್ರೇಷ್ಠ ವೀರನೂ ಆದ ಪ್ರತಾಪನು ಮಾತ್ರ, ಈ ಕಾರ್ಯವನ್ನು ಮಾಡಲಿಕ್ಕೆ ಎಷ್ಟು ಮಾತ್ರವೂ ಮನಸು ಮಾಡಲಿಲ್ಲ; ಇಷ್ಟೇ ಅಲ್ಲ; ಅವನು ಬಾದಶಹನನ್ನು ಸದಾ ಓಲೈಸುವದೊತ್ತಟ್ಟಿಗಿರಲಿ; ಒಮ್ಮೆ ಅಧೀನತ್ವವನ್ನೊಪ್ಪಿಕೊಂಡಿದ್ದರೆ ಸಾಕಾಗಿತ್ತು; ಆದರೆ ಪ್ರತಾಪನು ಈ ಶಾಬ್ದಿಕ ಅಧೀನತ್ವಕ್ಕೂ ಒಪ್ಪಿಗೆಯನ್ನು ತೋರಿಸಲಿಲ್ಲ. ಪ್ರತಾಪನೇನು ದೊಡ್ಡ ಸಾಮ್ರಾಟನೇ? ಮೊದಲು ಚಿತೋಡದ ಅಧಿಪತಿಯಾಗಿ, ಬಹು ಸಾಮಂತ ರಾಜರ ಮೇಲೆ ಅಧಿಕಾರ ನಡೆಸಲು ಸಮರ್ಥನಾಗಿದ್ದರೂ, ಇಂದು ಆ ಶಕ್ತಿಯಿಲ್ಲ, ಸಾಮಂತರಲ್ಲಿ ಬಹು ಜನರು ಅಕಬರನನ್ನು ಕೂಡಿದ್ದಾರೆ. ಇಂದು ಪ್ರತಾಪನಿಗೆ ಆ ಚಿತೋಡದ ರಾಜತ್ವವಿಲ್ಲ; ಕೇವಲ ರಾಜನೆಂಬ ಉಪಾಧಿಯಿಂದ ಗುಡ್ಡಗಾಡು ಪ್ರದೇಶದಲ್ಲಿ ಅಲೆಯುತ್ತಿರುವನು. ಹೀಗಿದ್ದರೂ ಅವನು ಅಕಬರನಿಗೆ ವಶವಾಗದಿರುವದೇಕೆ? ಮೊಗಲ ಬಾದಶಹನ ಸಕಲ ಬಲ-ಕೌಶಲ್ಯಗಳು ಪ್ರತಾಪನ ವೀರತ್ವದ ಗರ್ವವನ್ನಡಗಿಸಲಾರವೇ? ಮೊಗಲ-ಸಾಮ್ರಾಜ್ಯವನ್ನು

ದೃಢಪಡಿಸಬೇಕಾಗಿದ್ದಲ್ಲಿ, ದಿಲ್ಲೀಶ್ವರನ ಪ್ರತಾಪವನ್ನು ಅಕ್ಷುಣ್ಣವಾಗಿ ಕಾಯ್ದುಕೊಳ್ಳಬೇಕಾದಲ್ಲಿ, ಪ್ರತಾಪಸಿಂಹನನ್ನು ಅವನತನನ್ನಾಗಿ ಮಾಡಲೇಬೇಕು.

ಮೊಗಲ ಸೈನ್ಯವು ನಾಲ್ಕೂ ಕಡೆಯಿಂದ ಬರುತ್ತಲಿತ್ತು; ಆದರೆ ಈ ಸೈನಿಕರು ಗುಡ್ಡಗಾಡುಪ್ರದೇಶದಲ್ಲಿ ಸಂಪೂರ್ಣವಾಗಿ ಅಪರಿಚಿತರಾಗಿದ್ದರು. ಅದರಲ್ಲಿಯೂ ಹಾದಿಯಲ್ಲಿಯ ಗ್ರಾಮಗಳೆಲ್ಲವೂ ಜನಶೂನ್ಯವಾದುದರಿಂದ ಈ ಸೈನಿಕರಿಗೆ ಆಹಾರದ ಪದಾರ್ಥಗಳ ಅಭಾವವಾಗಹತ್ತಿತು. ಕಾರಣ ಮೊಗಲರು ಸಾಕಷ್ಟು ಸೈನ್ಯವನ್ನೂ, ಯುದ್ಧೋಪಯೋಗೀ ಸಾಮಾನುಗಳನ್ನೂ, ಆಹಾರದ ಪದಾರ್ಥಗಳನ್ನೂ ಸಂಗ್ರಹಮಾಡಿಕೊಳ್ಳದೆ, ಈ ಪ್ರದೇಶವನ್ನು ಪ್ರವೇಶಿಸುವಂತಿರಲಿಲ್ಲ. ಈ ಕಡೆಯಲ್ಲಿ ಪ್ರತಾಪನು ತನ್ನ ಅನುಚರವರ್ಗಕ್ಕೆಲ್ಲ, ಗುಡ್ಡಗಾಡುಪ್ರದೇಶದಲ್ಲಿ ವಾಸಮಾಡಹೇಳಿ, ಒಂದು ಗುರುತರ ಭಾರವನ್ನು ಹೊತ್ತುಕೊಂಡಿದ್ದನು. ಈ ಸಸ್ಯಹೀನ ದುರಾರೋಹಪ್ರದೇಶದಲ್ಲಿ, ಅನುಚರವರ್ಗದ ಅಬಲ-ವೃದ್ಧ-ವನಿತೆಯರ ಆಹಾರದ ಪದಾರ್ಥಗಳನ್ನೊದಗಿಸಿಕೊಡುವರಾರು ? ಸಂಕಟಕಾಲದಲ್ಲಿ ಮನುಷ್ಯನಿಗೆ ಉಪಾಯವು ಗೊತ್ತಾಗುವದು. ಅದರಲ್ಲಿಯೂ ಹೆಚ್ಚು ಹೆಚ್ಚು ಸಂಕಟಗಳೊದಗಿದಂತೆ, ಅವುಗಳನ್ನು ತಡೆದುಕೊಳ್ಳುವ ಶಕ್ತಿಯೂ, ಅವುಗಳಿಂದ ಪಾರಾಗುವ ಹಂಚಿಕೆಯೂ ದೊರೆಯುವದು; ಅಂದರೆ ಅವಸ್ಥಾವಿಶೇಷದಲ್ಲಿ ಮನುಷ್ಯನು ತಕ್ಕ ಉಪಾಯವನ್ನು ಹೊಂದುವನು. ಈ ಪ್ರಸಂಗದಲ್ಲಿ ಪ್ರತಾಪನಿಗೆ ಒಂದು ಅನುಕೂಲತೆಯಿತ್ತು. ಅದೇನಂದರೆ —ಅವನ ಅನುಚರರು ಸ್ವದೇಶದ ಘಟ್ಟದ ಮಾರ್ಗಗಳನ್ನೂ, ಇತರ ಪ್ರದೇಶವನ್ನೂ ಚನ್ನಾಗಿ ಬಲ್ಲವರಾಗಿದ್ದರು. ಇದರಿಂದವರು ಅಕಸ್ಮಾತ್ತಾಗಿ ಶತ್ರುಸೇನೆಯ ಮೇಲೆ ಬಿದ್ದು, ಅವರ ಸಾಮಾನುಗಳನ್ನೆಲ್ಲ ತೆಗೆದುಕೊಂಡು, ತೀವ್ರವಾಗಿ ಮಾಯುವಾಗುತ್ತಿದ್ದರು. ಉತ್ತರ ಹಿಂದುಸ್ಥಾನದಿಂದ ಯುರೋಪಖಂಡಕ್ಕೆ ಹೋಗುವ ಯಾವತ್ತು ವ್ಯಾಪಾರದ ಪದಾರ್ಥಗಳು, ಅರವಲೀ ಪರ್ವತದ ಹತ್ತರ ಹಾಯ್ದು ಸುರತಬಂದರಕ್ಕೆ ಹೋಗುತ್ತಿದ್ದವು; ಮುಂದೆ ಅವು ಹಡಗಗಳ ಮಾರ್ಗವಾಗಿ ಯುರೋಪಕ್ಕೆ ಹೋಗುತ್ತಿದ್ದವು. ರಜಪೂತರು ಈ ಯಾವತ್ತು ಪದಾರ್ಥಗಳನ್ನೂ, ವ್ಯಾಪಾರಸ್ಥರಲ್ಲಿರುವ ಧನವನ್ನೂ ಸುಲಿಗೆ ಮಾಡುತ್ತಿದ್ದರು. ಈ ರೀತಿಯಾಗಿ ಆ ಭೀಷಣಪ್ರದೇಶದಲ್ಲಿ ಮಾರ್ಗಸ್ಥರು ಹೋಗದಂತಾಯಿತು. ಯಾವದೇ ಜನಾಂಗವಾಗಲಿ, ತಮ್ಮ ಅಲ್ಪ ಬಲದಿಂದ ಬಹುಸಂಖ್ಯಾಕರಾದ ಶತ್ರುಪಕ್ಷದೊಡನೆ ಯುದ್ಧಮಾಡಲು ಸಿದ್ಧರಾದಲ್ಲಿ, ಸಮಯ

ವರಿತು ಈ ತರದ ಮಾರ್ಗವನ್ನವಲಂಬಿಸಬೇಕಾಗುವದು, ಯಾಕಂದರೆ ಈ ತರದ ಮಾರ್ಗವನ್ನವಲಂಬಿಸದಿದ್ದಲ್ಲಿ, ಅವರಿಗೆ ಬೇರೆ ಉಪಾಯವೇ ದೊರೆಯುವದಿಲ್ಲ; ಆದರಿಂದವರು ಶತ್ರುಗಳೊಡನೆ ಯುದ್ಧಮಾಡಲು ಅಸಮರ್ಥರಾಗುವರು. ಮುಂದೆ ತುಸು ದಿವಸಗಳಲ್ಲಿ ಮಹಾರಾಷ್ಟ್ರರೂ ಈ ಮಾರ್ಗವನ್ನವಲಂಬಿಸಿ, ಮೊಗಲರನ್ನು ಹಣ್ಣಿಗೆತಂದರು. ಹೀಗಿದ್ದರೂ ಮಹಾರಾಷ್ಟ್ರ ಮತ್ತು ರಜಪೂತರಲ್ಲಿ ಭೇದ ವೇನಂದರೆ:— ಮಹಾರಾಷ್ಟ್ರರು ಇದೊಂದೇ ಮಾರ್ಗವನ್ನವಲಂಬಿಸಿದ್ದರು; ಅಂದರೆ ಅವರು ಎದುರಿನಲ್ಲಿ ನಿಂತು ಯುದ್ಧಮಾಡದೆ, ಯಾವಾಗಲೂ ಈ ಕಪಟ ಯುದ್ಧವನ್ನೇ ಮಾಡುತ್ತಿದ್ದರು; ಆದರೆ ರಾಜಪುತ್ರರು ಮಾತ್ರ ಹೀಗಲ್ಲ. ರಜಪೂತರು ಎದುರಿನಲ್ಲಿ ನಿಂತು ಯುದ್ಧಮಾಡುವದಕ್ಕೆ ಹೆದರುತ್ತಿದ್ದಿಲ್ಲ.

ಗುಡ್ಡಗಾಡ ಪ್ರದೇಶದಲ್ಲಿ ರಜಪೂತರಿಗೆ ಇನ್ನೊಂದು ಅನುಕೂಲವಿದ್ದಿತು. ಅದೇನಂದರೆ:—ಅಲ್ಲಿರುವ ಭಿಲ್ಲಜನರು ಇವರಿಗೆ ಸಹಾಯಕರಾಗಿದ್ದರು. ರಾಜಸ್ಥಾನದಲ್ಲಿಯ ಭಿಲ್ಲಜನರ ಹಳ್ಳಿಗಳಂತಹ ಸುಂದರ ಸ್ಥಳವು ಜಗತ್ತಿನಲ್ಲಿ ದುರ್ಲಭವೆಂದು ಹೇಳಬಹುದು. ಈ ಭಿಲ್ಲರೇ ರಜಪೂತಸ್ತಾನದ ಮೊದಲಿನ ನಿವಾಸಿಗಳು. ಪ್ರಾಚೀನಕಾಲದಲ್ಲಿ ರಜಪೂತರು ಇವರನ್ನು ಗುಡ್ಡಗಾಡು ಪ್ರದೇಶಕ್ಕೋಡಿಸಿ, ಇವರ ಸೀಮೆಯನ್ನು ತೆಗೆದುಕೊಂಡು, ಅಲ್ಲಿ ಅವರು ವಾಸಿಸಹತ್ತಿದರು. ಭಿಲ್ಲರು ಹೆಸರಿಗೆ ಮಾತ್ರ ರಜಪೂತರ ಅಧೀನತ್ವವನ್ನೊಪ್ಪಿಕೊಂಡಿದ್ದರು; ಆದರೆ ನಿಜವಾಗಿ ನೋಡಿದರೆ, ಶಾಂತಿಯಿಂದಲೂ, ಸ್ವಾತಂತ್ರ್ಯದಿಂದಲೂ ಇರುತ್ತಿದ್ದರು. ಹೀಗಿದ್ದರೂ ಈ ಭಿಲ್ಲರು ವಿಪತ್ತಿನ ಸಮಯದಲ್ಲಿ, ಪ್ರಾಣದ ಹಂಗುದೊರೆದು ಮಹಾರಾಣಾನಿಗೆ ಸಹಾಯ ಮಾಡುತ್ತಿದ್ದರು. ರಜಪೂತರಂತೆ ಭಿಲ್ಲರಾದರೂ ಮಹತ್ವವುಳ್ಳವರಾಗಿದ್ದರು. ಭಿಲ್ಲರಾದರೂ ಆಡಿದಂತೆ ಮಾಡುವವರಾಗಿದ್ದರು; ಮತ್ತು ಹಿಡಿದ ಹಟವನ್ನು ಬಿಡತಕ್ಕವರಾಗಿರಲಿಲ್ಲ. ಇವರು ಸ್ವದೇಶದ ಸ್ವಾಧೀನತೆಗಾಗಿ ಪ್ರಾಣವನ್ನು ತ್ಯಜಿಸಲಿಕ್ಕೂ ಕೂಡ ಭೀತರಾಗುತ್ತಿರಲಿಲ್ಲ§ ಮೇವಾಡದ ಈ ವಿಪತ್ತಿನ ಸಮಯದಲ್ಲಿ ಅಸಂಖ್ಯ ಭಿಲ್ಲಜನರು ಶರಧನುಗಳನ್ನು ತೆಗೆದುಕೊಂಡು, ಪ್ರತಾಪನ ಸಹಾಯಕ್ಕಾಗಿ ಬಂದರು. ಗುಪ್ತಭಾವದಿಂದ ಪರ್ವತಶಿಖದಿಂದ ವಾರಿಧಾರೆಯಂತೆ, ಶರಜಾಲವನ್ನು ವರ್ಷಣಮಾಡಿ, ಇಲ್ಲವೆ ಅಂಸಖ್ಯ ಕಲ್ಲುಗಳನ್ನೆಸೆದು, ಭಿಲ್ಲರು

§ ರಾಜಸ್ತಾನದ ಸರಕಾರೀ ವಿವರಣೆಯಲ್ಲಿ ಭಿಲ್ಲರ ರೀತಿ-ನೀತಿ ಮೊದಲಾದವುಗಳ ವರ್ಣನೆಯುದೆ See Rajputana Gazetteer, Vol III, P. 64–8.

ಸಂಕೀರ್ಣವಾದ ಮಾರ್ಗದಲ್ಲಿ ಶತ್ರುಗಳ ಗತಿಯನ್ನು ತಡೆಯಲಿಕ್ಕೆ ಸಮರ್ಥರಾಗಿದ್ದರು. ಇವರು ನಾಲ್ಕೂ ದಿಕ್ಕುಗಳಲ್ಲಡ್ಡಾಡಿ, ಶತ್ರುಗಳ ಸುದ್ದಿಯನ್ನು ತಿಳಿದುಕೊಂಡು ಮಹಾರಾಣಾನಿಗೆ ತಿಳಿಸುತ್ತಿದ್ದರು. ಈ ಕೆಲಸದಲ್ಲಿ ಇವರು ಬಹು ಪ್ರವೀಣರಿದ್ದುದರಿಂದ, ಮೊಗಲರು ಶತ್ರುಗಳಿಗೆ ಗೊತ್ತಾಗದಂತೆ ಒಂದು ಹೆಜ್ಜೆಯನ್ನಿಡುವದಕ್ಕೂ ಸಮರ್ಥರಾಗುತ್ತಿದ್ದಿಲ್ಲ.

ಪ್ರತಾಪಸಿಂಹನು ಮಹಾರಾಣಾನಾದ ತರುವಾಯ, ಕಮಲಮೀರ ದುರ್ಗವನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಇವನು ಉದಯಪುರದಲ್ಲಿ ಇನ್ನೂವರೆಗೆ ಅರಮನೆಯನ್ನು ಕಟ್ಟಿಸಿರಲಿಲ್ಲ; ಯಾಕಂದರೆ ಈ ಸ್ಥಳವು ಗುಡ್ಡಗಾಡು ಪ್ರದೇಶದ ಒಂದು ತುದಿಯಲ್ಲಿದ್ದಿತು; ಕಾರಣ ಇಲ್ಲಿ ಮೊಗಲರು ಆಕ್ರಮಣ ಮಾಡುವ ಭಯವು ಸದಾ ಇರುತ್ತಿತ್ತು. ಇದರಿಂದ ರಾಣಾನು ಇಲ್ಲಿ ವಾಸಮಾಡಲಿಕ್ಕೆ ಮನಸು ಮಾಡಲಿಲ್ಲ. ಕಮಲಮೀರ ಮತ್ತು ಉದಯಪುರಗಳ ನಡುವೆ ಒಂದು ಪ್ರಸಿದ್ಧ ಪಟ್ಟಣವಿದ್ದಿತು. ಇದರ ಹೆಸರು ಗೋಗುಂಡಾ.* ಇದು ನಾಲ್ಕೂ ಕಡೆಯಲ್ಲಿ ಪರ್ವತದ ಸಾಲುಗಳಿಂದ ಸುತ್ತುಗಟ್ಟಲ್ಪಟ್ಟಿದ್ದು, ಬಹು ಉಚ್ಚ ಶಿಖರದಲ್ಲಿರುವದು. ಕಾರಣ ಮಹಾರಾಣನು ಕೆಲವು ದಿವಸ ಇಲ್ಲಿ ವಾಸಮಾಡುತ್ತಿದ್ದನು. ಇಲ್ಲಿ ಇವನ ಅರಮನೆಯೂ, ಕೆಲವು ದೇವಸ್ಥಾನಗಳೂ ಇದ್ದವು. ಬಹು ಎತ್ತರವಾದ ಸ್ಥಳದಲ್ಲಿದೆಯೆಂಬದೊಂದೇ ಅನುಕೂಲತೆಯು ಈ ಪಟ್ಟಣಕ್ಕಿತ್ತು; ಇದನ್ನುಳಿದು ಬೇರೆ ಅನುಕೂಲತೆಗಳು ಈ ಪಟ್ಟಣದಲ್ಲಿರಲಿಲ್ಲ; ಅಂದರೆ ಈ ಪಟ್ಟಣಕ್ಕೆ ಕೋಟೆಯಿರಲಿಲ್ಲ; ಕೋಟೆಯನ್ನು ಕಟ್ಟಿಸಿದಲ್ಲಿ ಮೊಗಲರು ಈ ಪಟ್ಟಣವನ್ನು ಸುಲಭವಾಗಿ ವಶಮಾಡಿಕೊಳ್ಳಲಿಕ್ಕೆ ಬರುವಂತಹದಾಗುತ್ತಿರಲಿಲ್ಲ. ಆದರೆ ಪ್ರತಾಪನು ಇಲ್ಲಿ ದುರ್ಗವನ್ನು ನಿರ್ಮಿಸುವ ಅವಕಾಶವನ್ನು ಹೊಂದಲಿಲ್ಲ. ಯಾಕಂದರೆ ಇವನು ರಾಜ್ಯವನ್ನು ದೊರಕಿಸಿದ ಅವಧಿಯಿಂದ—ಮಹಾರಾಣಾನಾದ ಕಾಲದಿಂದ ಸಂಕಟಮಧ್ಯದಲ್ಲಿಯೇ ಕಾಲಕಳೆದನು. ಮೊಗಲರು ಇವನ ಸುತ್ತು ಬೆನ್ನುಹತ್ತಿದ್ದರು. ಆದರಿಂದ ರಾಣಾನು ಪರ್ವತ-ಪ್ರದೇಶದಲ್ಲಿ ಅಲೆಯಬೇಕಾಯಿತು. ಇದರಿಂದ ಸಾಕಷ್ಟು ಧನವನ್ನು ಸಂಗ್ರಹಿಸಿ, ಶಾಂತರೀತಿಯಿಂದ ಕೋಟೆಯನ್ನು

* ನಿಜಾಮುದ್ದೀನ ಮತ್ತು ಬದಾವುನಿ ಇವರು ಇದಕ್ಕೆ ಕೋಕಾಂಡಾ (Kokandah) ಎಂದೂ, ಬ್ಲಾಕವನ್ನನು ಗೋಗಾಂಡಾ (Gogandah) ಎಂದೂ, ಟಾಡ್‌ಸಾಹೇಬರು ಗೋಗುಂಡಾ (Gogoondah) ಎಂದೂ, ಅಂದಿದ್ದಾರೆ.

ಕಟ್ಟಿಸಲಿಕ್ಕೆ ಮನಸು ಮಾಡುವ ಸುಯೋಗವನ್ನು ಹೊಂದಲಿಲ್ಲ. ಕಾರಣ ಕಮಲಮೀರವೇ ಇವನ ಮುಖ್ಯ ವಾಸಸ್ಥಳವಾಗಿದ್ದು, ಒಂದೊಂದು ಸಮಯದಲ್ಲಿ ಗೋಗುಂಡದಲ್ಲಿ ಇರುತ್ತಿದ್ದನು.

ಮೊಗಲರು ಚಿತೋಡವನ್ನು ಗೆದ್ದುಕೊಂಡ ತರುವಾಯ, ಆರೇಳು ವರುಷಗಳವರೆಗೆ ರಜಪೂತರೊಡನೆ ಪ್ರಕಾಶವಾಗಿ ಎಂದೂ ಯುದ್ಧಮಾಡಲಿಲ್ಲ. ಈ ಅವಧಿಯವರೆಗೆ ಅವರು ರಾಜಸ್ಥಾನದಲ್ಲಿ ವಿಶ್ರುಂಖಲರೀತಿಯಿಂದ ಅತ್ತಿತ್ತ ಅಡ್ಡಾಡಿದರು; ಕೊಳೆಸುಲಿಗೆಗಳನ್ನು ಮಾಡಿ ಪ್ರಜೆಗಳಿಗೆ ಬಹಳ ಉಪದ್ರವಕೊಟ್ಟರು. ಆದರೆ ದೊಡ್ಡ ಸೈನ್ಯವನ್ನು ಕೂಡಿಹಾಕಿ, ರಜಪೂತರೊಡನೆ ಪುನಃ ಯುದ್ಧಮಾಡುವ ಸಿದ್ಧತೆಯನ್ನು ಮಾಡಿರಲಿಲ್ಲ; ಯಾಕಂದರೆ ಈ ಅವಧಿಯಲ್ಲಿ ಅಕಬರನು ಗುಜರಾಥ ಮತ್ತು ಬಂಗಾಲಗಳಲ್ಲಿದ್ದ ಬಂಡಾಯವನ್ನು ಮುರಿಯುವದರಲ್ಲಿ ತೊಡಗಿದ್ದನು. ಈ ಕೆಲಸಕ್ಕಾಗಿ ತನ್ನ ಮುಖ್ಯ ಸೈನ್ಯವನ್ನೂ, ಆಲೋಚನೆಯನ್ನೂ ವೆಚ್ಚಮಾಡಬೇಕಾದ್ದರಿಂದ, ಮೇವಾಡದ ಕಡೆಗೆ ದೃಷ್ಟಿಯನ್ನಿರಿಸಲು ಅವನಿಗೆ ಅವಕಾಶ ದೊರೆಯಲಿಲ್ಲ. ಆದರೂ ಅಕಬರನು ಸನ್ ೧೫೭೦ ರಲ್ಲಿ ಮಾರವಾಡದ ಮೇಲೆ ದಂಡೆತ್ತಿಬಂದನು; ಮತ್ತು ಅಲ್ಲಿಯ ರಾಠೋರರನ್ನು ಸೋಲಿಸಿದನು. ಈ ವೇಳೆಯಲ್ಲಿ ಜೋಧಪೂರ, ಬಿಕಾನೇರಗಳ ರಜಪೂತ ಅರಸರು, ಅಕಬರನಿಗೆ ಶರಣುಬಂದರು. ಸನ್ ೧೫೭೪ ರಲ್ಲಿ ಅಕಬರನು ತಾನೇ ಸೈನ್ಯದೊಡನೆ ಬಂಗಾಲದ ಮೇಲೆ ದಂಡೆತ್ತಿಹೋದನು; ಮತ್ತು ಅಲ್ಲಿಯ ಬಂಡುಗಾರನಾದ ದಾಯೂದನನ್ನು ಸೋಲಿಸಿದನು. ಪರಾಜಿತನಾದ ದಾಯೂದಖಾನನು ಓಡಿಹೋದನು. ಮುಂದೆ ಅಕಬರನು ರಾಜಧಾನಿಗೆ ತಿರುಗಿಬಂದನು. ತರುವಾಯ ಕೆಲವು ದಿವಸಗಳವರೆಗೆ ಅಕಬರನು ಫತ್ತೆಪುರ-ಶಿಕ್ರಿಯಲ್ಲಿ ವಾಸಮಾಡಿದನು; ಮತ್ತು ಇಲ್ಲಿ ಇವನು ತನ್ನ ನೂತನಧರ್ಮವನ್ನು ಪ್ರಸಾರಮಾಡುವದರಲ್ಲಿ ತೊಡಗಿದನು.* ಸನ್ ೧೫೭೬ರ ಪ್ರಾರಂಭದಲ್ಲಿ ಅಕಬರನು ಅಜಮೀರಕ್ಕೆ ಬಂದನು. ಈ ಸಮಯದಲ್ಲಿ ಇವನು ಪ್ರತಾಪಸಿಂಹನ ಕಠೋರ ವ್ರತಗಳನ್ನೂ, ಕಾರ್ಯಗಳ ವಿವರಣೆಯನ್ನೂ ತಿಳಿ

---

* ಅಕಬರನು ಅನೇಕ ಧರ್ಮಗಳ ಸಾರವನ್ನು ತೆಗೆದುಕೊಂಡು, ಇಲಾಹಿಧರ್ಮವನ್ನು ಸ್ಥಾಪಿಸಿದನು ಯಾವತ್ತು ಧರ್ಮದವರ ಧರ್ಮವಿಷಯವಾಗಿ ಆಲೋಚನೆಗಳನ್ನು ಮಾಡುವದಕ್ಕೆ ಇವನು ಶಿಕ್ರಿಯಲ್ಲಿ ಒಂದು ದೊಡ್ಡ ವಾಡೆಯನ್ನು ಕಟ್ಟಿಸಿದನು. ಇದರ ಹೆಸರು—ಇಬಾದಾತಖಾನಾ ಇದು ೧೫೭೫ ರಲ್ಲಿ ನಿರ್ಮಿತವಾಯಿತು.

ದನು. ಅಕಬರನು ಚಿತೋಡ-ಮಂಡಲಗಡಗಳ ಅಧಿಕಾರಿಗಳಿಂದಲೂ, ನಾನಾ ಸ್ಥಳಗಳಿಂದ ಬಂದ ದೂತರಿಂದಲೂ, ಮಹಾರಾಣಾನು ಸೈನ್ಯವನ್ನು ಕೂಡಹಾಕಿ, ಮೊಗಲರೊಡನೆ ಯುದ್ಧಮಾಡುವ ದೊಡ್ಡ ಸಿದ್ಧತೆಯನ್ನು ಮಾಡಿರುವನೆಂಬದನ್ನು ತಿಳಿದನು. ಈ ಸಮಯದಲ್ಲಿ ಅಭಿಮಾನಿಯಾದ ಮಾನಸಿಂಹನು ಬಂದು ಪ್ರತಾಪನಿಂದ ತನಗೊದಗಿದ ಅಪಮಾನದ ಕಥೆಯನ್ನು ವರ್ಣಿಸಿ ಹೇಳಿದನು; ಮಾನಸಿಂಹನು ತನ್ನ ಅಪಮಾನವೇ ಬಾದಶಹನ ಅಪಮಾನವೆಂಬದನ್ನು ತಿಳಿಸಿಕೊಡಲಿಕ್ಕೆ ಮರೆಯಲಿಲ್ಲ. ಈ ಸಮಯದಲ್ಲಿ ಅಕಬರನನ್ನು ಉತ್ತೇಜಿತನನ್ನಾಗಿ ಮಾಡುವದಕ್ಕೆ ಮಾನಸಿಂಹನು ಹೇಳಿದ್ದೇನಂದರೆ —" ಈ ಪ್ರಕಾರವಾಗಿ ಮೊಗಲಪಕ್ಷದ ರಜಪೂತರು ಮೇಲಿಂದಮೇಲೆ ಪ್ರತಾಪಸಿಂಹನಿಂದ ಅಪಮಾನಿತರಾಗತೊಡಗಿದಲ್ಲಿ, ಪ್ರತಾಪನ ಪ್ರತಿಜ್ಞೆಯು ಕಡೆತನಕ ಸ್ಥಿರವಾಗಿ ಉಳಿದಲ್ಲಿ, ಮೊಗಲರ ಪ್ರಭುತ್ವವು ನಾಶವಾಗುವದು. ಈಗ ಮೊಗಲಪಕ್ಷವನ್ನು ಸೇರಿದ ರಜಪೂತರು ಹೀಗೆಯೇ ಸ್ವಜನಾಂಗದವರಿಂದ ತಿರಸ್ಕಾರವನ್ನು ಹೊಂದತೊಡಗಿದಲ್ಲಿ, ಅವರು ಮೊಗಲರ ಸಂಧಿ-ಸೂತ್ರಗಳನ್ನು ಹರಿದೊಗೆಯುವರು, ಮತ್ತು ಪ್ರತಾಪಸಿಂಹನನ್ನು ಕೂಡುವರು. ಅದಕ್ಕಾಗಿ ಪ್ರತಾಪನ ಸೊಕ್ಕನ್ನು ಇಲ್ಲದಂತೆ ಮಾಡುವದೂ, ಅದರಿಂದ ಮೊಗಲರನ್ನು ಸೇರಿದ ರಜಪೂತರ ಅಪಮಾನವಾಗದಂತೆ ಮಾಡುವದೂ ಅವಶ್ಯವು." ಅಜಮೀರದಲ್ಲಿರುವ ಬಾದಶಾಹೀ ದರಬಾರದಲ್ಲಿ ಈ ಯಾವತ್ತು ವಿಷಯಗಳ ಸಲುವಾಗಿ ಆಲೋಚನೆಗಳು ನಡೆದವು.

ಕಡೆಯಲ್ಲಿ, ಇನ್ನು ಕಾಲವಿಲಂಬಮಾಡುವದು ಯೋಗ್ಯವಲ್ಲೆಂದು ನಿಶ್ಚಯವಾಯಿತು. ಮಾನಸಿಂಹನ ಅಪಮಾನದ ಸೇಡನ್ನು ತೀರಿಸಿಕೊಂಡು, ಪ್ರತಾಪನ ಗರ್ವವನ್ನು ಖಂಡಿಸಲೇ ಬೇಕು. ರಾಣಾನಂತಹ ಕ್ಷುದ್ರವ್ಯಕ್ತಿಗಳ ಅನರ್ಥಕವಾದ ಗರ್ವವನ್ನು ನಾಶಮಾಡುವದು ಬಾದಶಹನ ಮುಖ್ಯಕಾರ್ಯವೆಂದು, ಮುಖಸ್ತುತಿಮಾಡುವವರು ಸೂಚಿಸಿದರು.+ ಹೀಗೆ ಬಹು ಜನರ ಮನಸಿಗೆ ಬಂದ ಈ

---

+ Majestic rules cause the stiff-naked way-farers of the lanes of pride to journey to the city of supplication And if the ill fate of the men of this class has been caufirmed great rulers cleanse the earth from the rubbish of their existence" Akbarnama ( Beveridge ) Vol. III. P. 236.

ಅಬಲಫಜಲನಂತಹ ಐತಿಹಾಸಿಕರು ಅಕಬರನ ಅತಿ ಪ್ರಶಂಸೆಯನ್ನು ಮಾಡುವದಕ್ಕೆ

ಕಾರ್ಯವನ್ನು ಮಾಡುವದಕ್ಕಾಗಿ, ಮೇವಾಡದ ಮೇಲೆ ದಂಡೆತ್ತಿಹೋಗುವ ಆಲೋಚನೆಯು ನಡೆಯಿತು. ಸರ್ವಸಮ್ಮತಿಯಿಂದ ಬಹು ಸೈನ್ಯದೊಡನೆ ದಂಡೆತ್ತಿ ಹೋಗುವದು ಗೊತ್ತಾಯಿತು; ಮತ್ತು ಮಾನಸಿಂಹನು ಈ ದೊಡ್ಡ ದಾಳಿಯ ಮುಖ್ಯಸ್ಥನಾಗಬೇಕೆಂದು ನಿರ್ಧರಿಸಿದರು; ಯಾಕಂದರೆ ಅಲ್ಲಿರತಕ್ಕ ಸೇನಾಪತಿಗಳಲ್ಲಿ ಮಾನಸಿಂಹನೇ ಬುದ್ಧಿಮತ್ತೆಯಲ್ಲಿಯೂ, ರಾಜನಿಷ್ಠೆಯಲ್ಲಿಯೂ, ಸಾಹಸದಲ್ಲಿಯೂ ಶ್ರೇಷ್ಠನಾಗಿದ್ದನು. ಪ್ರತಾಪನ ಮೇಲೆ ದಂಡೆತ್ತಿಹೋಗುವದು ಸುಲಭ ಕಾರ್ಯವಲ್ಲವೆಂಬದನ್ನೂ, ಈ ಗುರುತರಕಾರ್ಯದ ಸೇನಾಪತಿಯ ಮಾನರಕ್ಷಣೆಯನ್ನು ಮಾಡಿಕೊಳ್ಳುವದು ಅತೀವ ಕಠಿಣಕೆಲಸವೆಂಬದನ್ನೂ, ಮಾನಸಿಂಹನು ಚನ್ನಾಗಿ ತಿಳಿದಿದ್ದನು. ಉಳಿದವರಿಗೆ ಪ್ರತಾಪನ ಯೋಗ್ಯತೆಯು ಚನ್ನಾಗಿ ತಿಳಿಯುದಿದ್ದುದರಿಂದ ಈ ಕಾರ್ಯದ ಮಹತ್ವವು ತಿಳಿಯುವ ಸಂಭವವಿದ್ದಿಲ್ಲ. ತನಗೆ ಸೇನಾಪತಿಪದವು ದೊರೆತದ್ದು ನೋಡಿ, ಮಾನಸಿಂಹನಿಗೆ ಬಹಳ ಆನಂದವಾಯಿತು, ಅದರಿಂದ ಅವನು ಬಾದಶಹನ ಅಪ್ಪಣೆಯನ್ನು ಶಿರಸಾವಹಿಸಿದನು, ಯಾಕಂದರೆ ಅವನ ಮನಸಿನಲ್ಲಿ ಅಭಿಮಾನದ ಅಗ್ನಿಯು ಉರಿಯುತ್ತಲಿತ್ತು; ಅದು ತನ್ನ ಅಪಮಾನದ ಸೇಡನ್ನು ತೀರಿಸಿಕೊಳ್ಳುವದರಿಂದ ಶಾಂತವಾಗುತ್ತಲಿತ್ತು. ಅದಕ್ಕಾಗಿ ಮಾನಸಿಂಹನು ಪ್ರತಾಪಸಿಂಹನ ಮೇಲೆ ದಂಡೆತ್ತಿಹೋಗುವದಕ್ಕೆ ಇಷ್ಟೊಂದು ಉತ್ಸುಕತೆಯನ್ನು ತೋರಿಸಿದನು. ಹಿಜರೀ ಶಕದ ೯೮೫ ವರ್ಷದ ಮೊಹರಮ ೨ನೇ ತಾರಿಖಿನ ದಿವಸ ( ೩ನೇ ಎಪ್ರಿಲ ೧೫೭೬ ) ಮಾನಸಿಂಹನು ಸಸೈನ್ಯವಾಗಿ ಹೊರಟನು. ಈ ಅಭಿಯೋಗದಲ್ಲಿ ಯಾವ ಯಾವ ಕಾರ್ಯಗಳನ್ನು ಮಾಡಬೇಕು? ಅವನ್ನು ಯಾವ ರೀತಿಯಿಂದ ನಾಗಿಸಬೇಕು? ಈ ಮೊದಲಾದ ಸಂಗತಿಗಳ ವಿವರಣೆಯನ್ನು ಬರೆದು, ಅಕಬರನು ಮಾನಸಿಂಹನ ಕೈಯಲ್ಲಿ ಕೊಟ್ಟನು ‡ ಮಾನಸಿಂಹನು ಈ ಕಾಗದವನ್ನು ತೆಗೆದುಕೊಂಡು, ಮಹಾರಾಣಾ ಪ್ರತಾಪಸಿಂಹ

---

ಹೋಗಿ, ವಿಪಕ್ಷದ ಜನರನ್ನು ಕೆಟ್ಟ ಭಾಷೆಯಿಂದ ತಿರಸ್ಕರಿಸಿರುವದು ಅತೀವ ದುಃಖದ ವಿಷಯುವಾಗಿದೆ ಇವನು ಮಹಾರಾಣಾ ಪ್ರತಾಪಸಿಂಹನಿಗೆ ಸಾಧಾರಣ ದಸ್ಯು ಅಥವಾ ದುರಾತ್ಮ ( "Wretch" III P 247 ) ನೆಂದು ಹೇಳುವದಕ್ಕೆ ಹಿಂಜರಿದಿಲ್ಲ ಈ ಮೇರೆಗೆ ಅಬಲಫಜಲನು ಒಂದು ಪಕ್ಷದ ಅನರ್ಥಕಸ್ತುತಿಯಿಂದಲೂ, ವಿಪಕ್ಷದ ಜಾತಿವಿದ್ವೇಷಸೂಚಕ ನಿಂದೆಯಿಂದಲೂ ಇತಿಹಾಸದ ಪುಟಗಳನ್ನು ಕಲಂಕಿತಮಾಡಿದ್ದಾನೆ

‡ A N. III 237.

ನಿಗೆ ಕರ್ತವ್ಯವನ್ನೂ, ಶುಭಮಾರ್ಗವನ್ನೂ ತೋರಿಸುವದಕ್ಕಾಗಿ ಹೊರಟನು ×

ಅಬಲಫಜಲನ ಇತಿಹಾಸದಿಂದ ತಿಳಿಯುವದೇನಂದರೆ –ಗಾಜೀಖಾ, ಗೈಸುದ್ದೀನ ಅಲ್ಲಿಅಸಫಖಾ, ಸೈಯುದಅಹಮ್ಮದ, ಸೈಯುದ ಹಾಸಿಮ, ಸೈಯುದ ರಾಜೂ, ಮಿಹತರಖಾ, ಮುಜಾಹಿದಬೇಗ, ಜಗನ್ನಾಥ, ಮಧುಸಿಂಹ, ಲಂಬಕರ್ಣರಾಯ‡ ಮೊದಲಾದ ವೀರಸೇನಾಪತಿಗಳು ಮಾನಸಿಂಹನ ಸಹಾಯಕರಾಗಿ ಯುದ್ಧಕ್ಕೆ ಹೋಗಿದ್ದರು. ಅಸಫಖಾನನು ಈ ಸೈನಿಕರ ಮಿರಬಕ್ಷೀ ( ಪಗಾರಕೊಡುವವ, Pay–master ) ಆಗಿ ಹೋಗಿದ್ದನು. ಇತಿಹಾಸಕಾರನಾದ ಅಬ್ದುಲ್‌ಕಾದಿರ ಬದಾವುನಿಯು ಒಬ್ಬ ಅಭಿಮಾನಿಯಾದ ಮುಸಲ್ಮಾನನು. ಇವನು ಹಿಂದುಗಳನ್ನು ಅತಿಶಯವಾಗಿ ದ್ವೇಷಿಸುತ್ತಿದ್ದನು. ಕಾರಣ ಇವನು ಹಿಂದುಗಳ ವಿರುದ್ಧವಾಗಿ

---

× "(Akbar) ordered kuar Man Singh to go with a number of loyal men, and arouse him ( Rana ) from his infatuated slumbers and guide him to the school of auspiciousness." Jbid III, P. 244

‡ ಇವರಲ್ಲಿಯು ಬಹುಜನರು ವಿಖ್ಯಾತರಾದ ಸೇನಾಪತಿಗಳಾಗಿದ್ದರು ಗಾಜೀಖಾನನು ಆಗಿನಕಾಲದ ಒಬ್ಬ ಪ್ರಸಿದ್ಧ ಪಂಡಿತನಾಗಿದ್ದನು ಅಕಬರನು ಇವನ ತೀಕ್ಷ್ಣಬುದ್ಧಿಯನ್ನು ನೋಡಿ, ಮುಗ್ಧನಾಗಿ ಇವನನ್ನು ಒಂದು ಸಾವಿರ ಸೈನಿಕರ ಮೇಲಿನ ಮನಸಬದಾರನನ್ನು ಮಾಡಿದನು ಗೈಸುದ್ದೀನಅಲ್ಲಿ ಅಸಫಖಾ ಎಂಬವನು ಒಬ್ಬನೇ ಮನುಷ್ಯನು ಇವನು ಎರಡನೇ ಅಸಫಖಾನನು ಮೊದಲನೇ ಅಸಫಖಾನನು ಚಿತೋಡದ ಅಧಿಕಾರಿಯಾಗಿದ್ದನು ಅವನ ಮೃತ್ಯುವಿನ ತರುವಾಯ ಗೈಸುದ್ದೀನನು ಮೊದಲನೇ ಅಸಫಖಾನನಾದನು ಜಗದ್ವಿಖ್ಯಾತಳಾದ ಮುಮತಾಜಮಹಾಲಳು ಇವನ ಮೊಮ್ಮಗಳು ಸೈಯುದರು ಬರ್ಹಾಣಪುರದಿಂದ ಬಂದವರಾಗಿದ್ದು, ಬಹು ಶೂರರಾಗಿದ್ದರು ಮಿಹತರಖಾ ( ಅಲ್ಲಿಸುದ್ದೀನ ) ನು ಹುಮಾಯುನನ ಕಾಲದ ಅಧಿಕಾರಿಯು ಅಕಬರನು ರತ್ನಾಂಬರದುರ್ಗವನ್ನು ತೆಗೆದುಕೊಂಡು, ಅದರ ಅಧಿಕಾರವನ್ನು ಇವನಿಗೆ ಕೊಟ್ಟನು ಇವನು ಮೂರು ಸಾವಿರ ಸೈನಿಕರ ಮನಸಬದಾರನಾಗಿದ್ದನು ( Bloch 417 ) ಜಗನ್ನಾಥನು ಬಿಹಾರಿಮಲ್ಲನ ಮಗನು, ಮತ್ತು ಪ್ರಸಿದ್ಧ ಕಲಿಯು ಇವನು ಜಹಾಂಗೀರನ ಆಳಿಕೆಯಲ್ಲಿ ಐದುಸಾವಿರ ಸೈನಿಕರ ಮನಸಬದಾರನಾದನು ( Bloch 387 ) ಮಧುಸಿಂಹನು ಭಗವಾನ್‌ದಾಸನ ಮಗನು, ಮತ್ತು ಮೂರು ಸಾವಿರ ಸೈನಿಕರ ಮನಸಬದಾರನು. ( Bloch 418 ). ಲಂಬಕರ್ಣರಾಯ ( Lonkarn ) ನೂ ಮಾನಸಿಂಹನಂತೆ ಕಚ್ಛವಾಹ ಕುಲದಲ್ಲಿ ಹುಟ್ಟಿದವನು ಅಕಬರನ ಕಾಲದಲ್ಲಿ ಇವನು ಅನೇಕ ಕಡೆಯಲ್ಲಿ ಯುದ್ಧಮಾಡಿದ್ದಾನೆ. ಇವನ ಮಗನಾದ ಮನೋಹರರಾಯನು ಒಬ್ಬ ಫಾರ್ಸೀ ಕವಿಯು ( Bloch. 494 )

ಮಾಡತಕ್ಕ ಮುಸಲ್ಮಾನರ ಯುದ್ಧಕ್ಕೆ ಧರ್ಮಯುದ್ಧವೆಂದು ಅನ್ನುತ್ತಿದ್ದನು. ಇವನು ಮಾನಸಿಂಹನೊಡನೆ ಯುದ್ಧಕ್ಕೆ ಹೊರಡುವ ಮನಸ್ಸುಮಾಡಿದನು. ಇವನಲ್ಲಿ ವೀರತ್ವವು ಎಷ್ಟುಮಾತ್ರವೂ ಇರಲಿಲ್ಲ, ಅಕಬರನು ಯುದ್ಧದ ಯಾವತ್ತೂ ಸುದ್ದಿಯನ್ನು ಸಂಗ್ರಹಿಸುವದಕ್ಕಾಗಿ ಇವನನ್ನು ಕಳುಹಿಸಿದನು. ಇವನು ಅಸಫಖಾನನೊಡನೆ ಇರುತ್ತಿದ್ದನು; ಮತ್ತು ಲೆಕ್ಕಪತ್ರದಲ್ಲಿ ಅವನಿಗೆ ಸಹಾಯ ಮಾಡುತ್ತಿದ್ದನು.*

ಮಾನಸಿಂಹನು ಐದುಸಾವಿರ ಉತ್ತಮವಾದ ಸೈನಿಕರನ್ನು ಕರೆದುಕೊಂಡು, ಅಜಮೀರವನ್ನು ಬಿಟ್ಟು ಹೊರಟನು. ಹಾದಿಯಲ್ಲಿ ಇವನ ಸೈನಿಕರ ಸಂಖ್ಯೆಯು ಕ್ರಮವಾಗಿ ಬೆಳೆಯುತ್ತ ನಡೆಯಿತು. ಇವನು ನಸಿರಾಬಾದ ಮತ್ತು ಭಿಲ್ಲಬಾರಗಳ ಮಾರ್ಗವಾಗಿ ಮಂಡಲಗಡಕ್ಕೆ ಮುಟ್ಟಿದನು. ಈ ಸ್ಥಳದಲ್ಲಿರುವ ಮೊಗಲಸೈನಿಕರಲ್ಲಿಯ ಬಹುಜನರು, ಇವನ ಸಂಗಡ ಹೊರಡುವವರಾದರು. ಆದರೆ ಚಿತೋಡದಲ್ಲಿಯ ಸೈನ್ಯವನ್ನು ಕಡಿಮೆಮಾಡಲು ಮಾನಸಿಂಹನಿಗೆ ಸಾಹಸವಾಗಲಿಲ್ಲ. ಮಾನಸಿಂಹನು ಮೊಗಲ ಬಾದಶಹನ ಪೋಷ್ಯಪುತ್ರನಂತಿದ್ದು ಎಷ್ಟೇ ಶಕ್ತಿಶಾಲಿಯಾಗಿರಲೊಲ್ಲನೇಕೆ,× ಮಹಾರಾಣಾ ಪ್ರತಾಪಸಿಂಹನ ಬಳಿಯಲ್ಲಿ ಅವನು ಮೇವಾಡದ ಆಧೀನದಲ್ಲಿರುವ ಒಬ್ಬ ಸಾಮಾನ್ಯ ಜಮೀನದಾರನ ಮಗನೆಂದು ಪರಿಚಿತನಾಗಿದ್ದನು.– ಪ್ರತಾಪಸಿಂಹನು ಗುಡ್ಡಗಾಡುಪ್ರದೇಶವನ್ನು ಬಿಟ್ಟು, ಹೊರಗೆ ಬಂದು ಯುದ್ಧಮಾಡಬಹುದೆಂದು ಮೊಗಲರು ಭಾವಿಸಿದ್ದರು+ ಆದರೆ

---

* ಬದಾವುನಿಯು ಈ ಅಭಿಯೋಗದಲ್ಲಿ ಕೂಡಿ, ಪ್ರಖ್ಯಾತ ಯುದ್ಧಕ್ಷೇತ್ರವಾದ ಹಳದೀಘಟ್ಟದ ಯುದ್ಧದಲ್ಲಿ ಇದ್ದನು, ಮತ್ತು ಇವನು ತಾನೇ ಈ ಯುದ್ಧದ ವಿವರಣೆಯನ್ನು ಬರೆದಿಟ್ಟದ್ದಾನೆ ಅಬಲಫಜಲನ ವಿವರಣೆಯಾದರೂ ಚನ್ನಾಗಿದೆ ನಾವು ಈ ಮತ್ತು ಮುಂದಿನ ಅಧ್ಯಾಯಗಳನ್ನು ಇವರೀರ್ವರ ಗ್ರಂಥಗಳಿಂದ ಸಂಗ್ರಹಿಸಿದ್ದೇವೆ. See also Noer's Akbar ( Translation ) I, 247.

× ಅಕಬರನು ಮಾನಸಿಂಹನನ್ನು ಸನ್ಮಾನಿಸಿ, ಅವನಿಗೆ ಫರಜಾಂದ ( Farzand ಅಥವಾ ಮಗ ) ಎಂಬ ಬಿರುದನ್ನು ಕೊಟ್ಟದ್ದನು. See Blochmann. P 339.

– ಅಂಬರವು ಶಿಶೋದಿಯಾವಂಶೀಯ ಮೇವಾಡದ ಮಹಾರಾಣಾರ ಆಧೀನದಲ್ಲಿರುವ ಒಂದು ಸಣ್ಣ ರಾಜ್ಯವು ಇಕ್ಬಲ್‌ನಾಮಾ ( Elliot Vol VI P. 400 ) ದಲ್ಲಿಯೂ ಈ ಮೋರೆಗೆ ಹೇಳಿದೆ. A. N III 244 note.

+ A N III 2±4.

ಅವರ ಈ ಗ್ರಹಿಕೆಯು ತಪ್ಪಾದದ್ದಿತ್ತು; ಯಾಕಂದರೆ ಇವರ ಇಚ್ಛೆಯಂತೆ ಪ್ರತಾಪಸಿಂಹನು ಬೈಲುಪ್ರದೇಶದಲ್ಲಿ ನಿಂತು ಮೊಗಲರೊಡನೆ ಯುದ್ಧಮಾಡಲು ಮನಸುಮಾಡಲಿಲ್ಲ. ಮೊಗಲರ ಸೇನೆಯು ಅಸಂಖ್ಯವಾಗಿದ್ದಿತು; ಈ ದೃಷ್ಟಿಯಿಂದ ನೋಡಲು ಪ್ರತಾಪನ ಸೈನಿಕರ ಸಂಖ್ಯೆಯು ಅತ್ಯಲ್ಪವಾಗಿತ್ತು. ಮೇಲಾಗಿ ಯುದ್ಧದ ಸಾಮಗ್ರಿಗಳನ್ನು ಸಾಕಷ್ಟು ಒದಗಿಸಿಕೊಳ್ಳಲು ಅವನಿಗೆ ಧನದ ಅನುಕೂಲತೆಯಿರಲಿಲ್ಲ. ಕಾರಣ ತನ್ನ ಈ ಸ್ಥಿತಿಯನ್ನು ಶತ್ರುಗಳಿಗೆ ತೋರಿಸುವದು ಪ್ರತಾಪನಿಗೆ ಇಷ್ಟವಾಗಿರಲಿಲ್ಲ; ಮತ್ತು ಹಿತಾವಹವೂ ಆಗಿರಲಿಲ್ಲ. ಆದರಿಂದ ಪ್ರತಾಪನು ಮಾನಸಿಂಹನು ಏರಿಬರುವವರೆಗೆ—ಅನುಕೂಲವಾದ ಸ್ಥಳದಲ್ಲಿ ಅಡಗಿ ಯೋಗ್ಯ ಸಮಯವನ್ನು ಕಾಯ್ದುಕೊಂಡಿದ್ದನು ಇವನನ್ನು ಸೋಲಿಸಬೇಕಾಗಿದ್ದಲ್ಲಿ—ಪ್ರತಾಪನನ್ನು ಪಿತೃರಾಜ್ಯದಿಂದ ಹೊಡೆದೋಡಿಸಬೇಕಾಗಿದ್ದಲ್ಲಿ—ಅವನ ಗರ್ವವನ್ನು ಖಂಡಿಸಬೇಕಾಗಿದ್ದಲ್ಲಿ ಮಾನಸಿಂಹನು, ಆ ಗುಡ್ಡಗಾಡು ಪ್ರದೇಶಕ್ಕೆ ಹೋಗಿ, ಅಲ್ಲಿಯೇ ತನ್ನ ಬಲ-ವಿಕ್ರಮಗಳನ್ನು ತೋರಿಸುವದು ಆವಶ್ಯಕವಾಯಿತು. ಕಾರಣ ಮಾನಸಿಂಹನು ಮಂಡಲಗಡದಿಂದ ನೆಟ್ಟಗೆ ಪೂರ್ವಕ್ಕೆ ಹೊರಟು, ನಾಥದ್ವಾರ ಮೊದಲಾದವುಗಳ ಮೇಲೆ ಹಾಯ್ದು, ಬನಾಸನದಿಯ ತೀರದಗುಂಟ ಮುಂದೆ ನಡೆದನು. ಕ್ಷುದ್ರವಾದ ಬನಾಸನದಿಯು ಪರ್ವತ-ಪ್ರದೇಶದಿಂದ ಹೊರಬೀಳುತ್ತಿರುವ ಸ್ಥಳದಲ್ಲೊಂದು ಸಂಕೀರ್ಣವಾದ ಘಟ್ಟದ ಮಾರ್ಗವಿದ್ದಿತು. ಈ ಸ್ಥಳದಲ್ಲಿ ಪ್ರತಾಪಸಿಂಹನು ಮಾನಸಿಂಹನನ್ನು ತಡೆದನು.

ಅಜಮೀರದಲ್ಲಿಯ ಬಾದಶಹನ ದರಬಾರದಲ್ಲಿ ಚಿತೋಡದ ಮೇಲೆ ದಂಡೆತ್ತಿ ಹೋಗುವ ಬಗ್ಗೆ ಆಲೋಚನೆಯಾಯಿತೆಂದು ನಾವು ಮೇಲೆ ಹೇಳಿದ್ದೇವೆ. ಇದಕ್ಕಿಂತ ಬಹುಕಾಲ ಮೊದಲೇ ಪ್ರತಾಪನು ಕಮಲಮೀರ ದುರ್ಗದಲ್ಲಿ ಸೈನಿಕರನ್ನು ಕೂಡಿಸಲು ತೊಡಗಿದ್ದನು. ಶೂರರಾದ ರಜಪೂತರೆಲ್ಲರೂ ಬಂದು, ಪ್ರತಾಪನ ಸೈನ್ಯದಲ್ಲಿ ಸೇರಿದರು; ಕಾಡುಜನರಾದ ಭಿಲ್ಲರು ಧನುಷ್ಯ-ಬಾಣಗಳನ್ನು ತೆಗೆದುಕೊಂಡು ಬಂದು, ಯುದ್ಧಕ್ಕೆ ಸಿದ್ಧರಾದರು; ಮೊಗಲರನ್ನು ದ್ವೇಷಿಸುವಂತಹ ಕೆಲವು ಪಠಾಣರು ಬಂದು, ಪ್ರತಾಪಸಿಂಹನ ಸೈನ್ಯವನ್ನು ಬೆಳೆಸಿದರು. ಈ ಮೇರೆಗೆ ಪ್ರತಾಪಸಿಂಹನು ೨೨ ಸಾವಿರ ಸೈನಿಕರನ್ನು ಕೂಡಿಸಿದನು. ಮೊಗಲರ ಸೈನ್ಯವು ಇದಕ್ಕಿಂತಲೂ ಬಹಳ ಹೆಚ್ಚಾಗಿದ್ದಿತು. ಮಾನಸಿಂಹನು ದಂಡೆತ್ತಿ ಮಂಡಲಗಡಕ್ಕೆ ಬಂದ ಸುದ್ದಿಯು ಪ್ರತಾಪನಿಗೆ ತಿಳಿಯಿತು. ಅವನು ರಾಜಧಾನಿಯನ್ನು ರಕ್ಷಿಸುವ

ದರ ಸಲುವಾಗಿ, ಕೆಲವು ಸೈನಿಕರನ್ನು ಕಮಲಮೀರ ದುರ್ಗದಲ್ಲಿಟ್ಟನು. ಗೋಗುಂಡೆ ಮೊದಲಾದ ಸ್ಥಳಗಳಲ್ಲಿರುವ ಸೈನಿಕರಿಗೆ ಪಶ್ಚಿಮ ದಿಕ್ಕಿಗೆ ಮುಂದೆ ಸಾಗಲು ಅಪ್ಪಣೆ ಮಾಡಿದನು. ಸ್ವತಃ ಸಸೈನ್ಯನಾಗಿ ಹೊರಟು, ದಕ್ಷಿಣಕ್ಕೆ ನಡೆದು, ಮಧ್ಯಮಾರ್ಗದಲ್ಲಿ ಯಾವತ್ತು ಸೈನಿಕರನ್ನು ಒಟ್ಟುಗೂಡಿಸಿದನು. ಅಲ್ಲಿಂದ ಏಕತ್ರವಾದ ಯಾವತ್ತು ಸೈನ್ಯವನ್ನು ತೆಗೆದುಕೊಂಡು ಹಳದೀ ಘಟ್ಟವೆಂಬ ಘಟ್ಟದ ಮಾರ್ಗಕ್ಕೆ ಬಂದು, ಅಲ್ಲಿ ಮಾನಸಿಂಹನ ಮಾರ್ಗಪ್ರತೀಕ್ಷೆಮಾಡುತ್ತ ಕುಳಿತನು. ಈ ಹಳದೀ ಘಟ್ಟದಲ್ಲಿಯೇ ಪ್ರಖ್ಯಾತವಾದ ಯುದ್ಧವಾಯಿತು †

---

† ಈ ಯುದ್ಧಕ್ಕೆ ಗೋಗುಂಡದ ಯುದ್ಧವೆಂದೂ ಅನ್ನುತ್ತಿರುವರು ( Malleson's Akbar R. I Series P. 125 ) ಹಳದೀಘಟ್ಟವೆಂಬ ಘಟ್ಟದ ಮಾರ್ಗದ ಮುಖದಲ್ಲಿರುವ ಕಾಮನೂರವೆಂಬ ಹಳ್ಳಿಯಲ್ಲಿ ಈ ಯುದ್ಧವಾಯಿತು ಈ ಹಳ್ಳಿಯು ಗೋಗುಂಡದ ಅಂತರ್ಗತವಾಗಿದೆ. ( A. N III 245 ) ಹಳದೀಘಟ್ಟವು ಗೋಗುಂಡದಿಂದ ಉತ್ತರಕ್ಕೆ ೭ ಕ್ರೋಶದ ಮೇಲಿರುವದೆಂದು ಬದಾವುನಿಯು ಹೇಳುತ್ತಿರುವನು ( Badaoni (Lowe) II P. 236 ) "When Kanwar Mansing drew near to Kokanda, Ranakika called all the Rajas of Hinduwara and came out of Ghati Haldeo with a strong force to oppose his assailant" Tobakat, Elliot, Vol V. P 398. ಈ ಸ್ಥಳದ ಮಣ್ಣು ಹಳದೀ ವರ್ಣದ್ದಿರುವದರಿಂದ ಈ ಗಿರಿ ಮಾರ್ಗಕ್ಕೆ ಹಳದೀಘಟ್ಟವೆಂಬ ಹೆಸರು ಬಂದಿದೆಯೆಂದು ಕವಿರಾಜ ಶ್ಯಾಮಲದಾಸರು ಹೇಳಿದ್ದಾರೆ ( A N. III 245 note ) ಟಾಡ್‌ಸಾಹೇಬರ ನಕಾಶದಲ್ಲಿ ಗೋಗುಂಡದ ಉತ್ತರಕ್ಕೆ ಕಾಮನೂರಗ್ರಾಮವಿದೆ ಮುಸಲ್ಮಾನ ಇತಿಹಾಸಕಾರರ ವಿವರಣೆಯಲ್ಲಿಯೂ ಪ್ರತಾಪಸಿಂಹನಿಗೆ ರಾಣಾಕೀಕಾಯೆಂದು ಹೆಸರಿದ್ದದ್ದು ಕಂಡುಬರುವದು. ( Rana Partab ) "Generally called in the histories Rana Kika" Bloch 443 note ಚಿತೋಡದ ಯುವರಾಜರಿಗೆ ರಾಣಾಕೀಕಾಯೆಂದೆನ್ನುವ ಪದ್ಧತಿಯಿದ್ದಿತು. ಪ್ರತಾಪನು ಅರಸನಾದ ನಂತರ ಸಹ ಕೆಲವು ಮುಸಲ್ಮಾನ ಇತಿಹಾಸಕಾರರು ಈ ಶಬ್ದವನ್ನು ಉಪಯೋಗಿಸಿದ್ದಾರೆ. See Noer's Emperor Akbar, Translator's note, i, 245.

# ದ್ವಾದಶ ಪರಿಚ್ಛೇದ.

## ಹಳದೀ-ಘಟ್ಟದ ಯುದ್ಧ.

ಹಳದೀ ಘಟ್ಟದ ಯುದ್ಧವ | ತುಲನೀಯುವದು ಜಗತೀತಲದೊಳಂತದರಿಂ ||
ಹಳದೀ ಘಟ್ಟದ ಯುದ್ಧವು | ಹಳದೀ ಘಟ್ಟದ ತೆರದಲಿಯೆಂದುಂ ಪೇಳ್ವೆಂ || ೧ ||

ಹದಿನೇಳನೂರಾ ಮೂವತ್ತೆರಡನೆಯ ಸಂವತದ ವರ್ಷಾರಂಭದಲ್ಲಿ,‡ ಮಾನಸಿಂಹನ ಪ್ರಬಲವಾದ ಸೈನ್ಯವು, ಹಳದೀಘಟ್ಟದ ಸಂಕೀರ್ಣವಾದ ಗಿರಿಪಥದ ಎದುರಿನಲ್ಲಿರುವ ಕಾಮನೂರ ಗ್ರಾಮಕ್ಕೆ ಬಂದಿತು. ಈಗಲೂ ಮಹಾರಾಣಾನು ಈ ಘಟ್ಟದಿಂದ ಹೊರಬಿದ್ದು, ಮಾನಸಿಂಹನನ್ನು ಎದುರಿಸಲಿಲ್ಲ. ಪ್ರತಾಪನು ಸಾಕಷ್ಟು ಸೈನ್ಯವನ್ನು ಕೂಡಿಸಿರುವನೆಂಬದನ್ನು ಮಾನಸಿಂಹನು ಕೇಳಿದ್ದನು. ಒಂದು ವೇಳೆ ಪ್ರತಾಪನು ಘಟ್ಟದಿಂದ ತೀವ್ರವೇ ಹೊರಬೀಳದಿದ್ದಲ್ಲಿ, ಮಾನಸಿಂಹನು ಕೆಲವು ದಿವಸಗಳವರೆಗೆ ಅವನ ಗತಿವಿಧಿಯನ್ನು ನಿರೀಕ್ಷಿಸುವದಕ್ಕಾಗಿ ತಡೆಯುತ್ತಿದ್ದನು. ಪ್ರತಾಪನ ಸೈನ್ಯವೆಷ್ಟು? ಅದು ಯಾವತರದ್ದಿರುವದು? ಅದು ಯಾವ ಯಾವ ಸ್ಥಳದಲ್ಲಿರುವದು? ಈ ಮೊದಲಾದ ಸಂಗತಿಗಳನ್ನು ತಿಳಿದುಕೊಳ್ಳುವದು ಅವಶ್ಯವಾಗಿತ್ತು. ಮಾನಸಿಂಹನು ಇದಕ್ಕಾಗಿ ಕೆಲವು ಕಾಲಕಳೆಯುವ ಮನಸುಮಾಡಿದನು; ಆದರೆ ಈ ರೀತಿಯಿಂದ ಯುದ್ಧವನ್ನು ತಡೆದು, ಸುಮ್ಮನೆ ಕುಳಿತುಕೊಳ್ಳುವ ಪ್ರಸಂಗವು ಮಾನಸಿಂಹನಿಗೆ ಬರಲಿಲ್ಲ; ಯಾಕಂದರೆ ಪ್ರತಾಪನು ಮೊಗಲ ಸೈನ್ಯವನ್ನು ಪರ್ವತಪ್ರದೇಶದಲ್ಲಿ ಪ್ರವೇಶ ಮಾಡಗೊಡದೆ, ತತ್ಪೂರ್ವದಲ್ಲಿಯೇ ಅದನ್ನು ನಾಶಮಾಡುವ ಮನಸು ಮಾಡಿದ್ದನು. ಕಾರಣ ತೀವ್ರವೇ ಅವನು ಸಸೈನ್ಯವಾಗಿ ಘಟ್ಟದಿಂದ ಹೊರಬಿದ್ದು, ಮೊಗಲರನ್ನು ಆಕ್ರಮಿಸಿದನು.

ಎರಡೂ ಸೈನ್ಯಗಳು ಒಂದನ್ನೊಂದು ಎದುರಿಸಿದವು. ಮೊಗಲರ ಸೇನಾಪತಿಯಾದ ಮಾನಸಿಂಹನು ತನ್ನ ಸೈನ್ಯದ ಮುಂಭಾಗದಲ್ಲಿ ಜಗನ್ನಾಥನನ್ನೂ, ಗೈಸು

‡ ಹಳದೀಪಟ್ಟದ ಯುದ್ಧದ ತಾರೀಖಿನ ವಿಷಯವಾಗಿ ಐತಿಹಾಸಿಕರಲ್ಲಿ ಐಕ್ಯವಿಲ್ಲ, ಬೇರೆಬೇರೆ ಜನರು ಈ ವಿಷಯವಾಗಿ ಭಿನ್ನ ಅಭಿಪ್ರಾಯಗಳುಳ್ಳವರಾಗಿದ್ದಾರೆ, ಆದರೂ ಈ ಯುದ್ಧವು ಕ್ರಿ. ಶಕದ ೧೫೭೬ ನೇ ಇಸವಿಯ ಜೂನ ೨೦ ನೇ ತಾರೀಖಿನ ದಿವಸ ( ಆಷಾಢ ಮಾಸದ ಪ್ರಾರಂಭ) ಆಯಿತೆಂದು ಹೇಳಬಹುದು

ದ್ದೀನ ಅಸಫಖಾನನನ್ನೂ ನಿಲ್ಲಿಸಿದನು, ಬಲಭಾಗದಲ್ಲಿ ಎಲ್ಲಕ್ಕೂ ಮುಂದೆ ಸೈಯದ ಹಾಸಿಮನನ್ನೂ, ಹಿಂದೆ ಸೈಯದ ಅಹಮ್ಮದನನ್ನೂ, ಸೈಯದ ರಾಜೂನನ್ನೂ ನಿಲ್ಲಿಸಿದನು; ಎಡಭಾಗದಲ್ಲಿ ಮುಂದೆ ಗಾಜೀಖಾನನನ್ನೂ, ಹಿಂದೆ ರಜಪೂತ ಸೇನೆಯೊಡನೆ ರಾಯಲಂಬಕರ್ಣನನ್ನೂ ಇರಿಸಿದನು. ಮಧ್ಯಭಾಗದಲ್ಲಿ ಸೇನಾಪತಿಯಾದ ಮಾನಸಿಂಹನು ತನ್ನ ಪ್ರಬಲ ರಜಪೂತ ಸೈನ್ಯವನ್ನು ತೆಗೆದುಕೊಂಡು ನಿಂತನು. ಮುಂಭಾಗದಲ್ಲಿಯ ಜಗನ್ನಾಥ ಮತ್ತು ಮಧ್ಯಭಾಗದಲ್ಲಿರುವ ಮಾನಸಿಂಹ ಇವರ ನಡುವೆ ಮಧುಸಿಂಹನೂ, ಇತರ ರಜಪೂತ ಸೇನಾಪತಿಗಳೂ ನಿಂತುಕೊಂಡರು. ಪ್ರತಾಪನ ತಮ್ಮಂದಿರಾದ ಶಕ್ತಸಿಂಹ ಮತ್ತು ಸಾಗರಜಿ ಇವರು ಈ ಭಾಗದಲ್ಲಿಯೇ ಇದ್ದರು. ಮಾನಸಿಂಹನ ಹಿಂಭಾಗದಲ್ಲಿ ಹುಸೇನಖಾನನು ಆನೆಗಳ ಅಧಿಪತಿಯಾಗಿ ನಿಂತುಕೊಂಡಿದ್ದನು; ಎಲ್ಲಕ್ಕೂ ಹಿಂಭಾಗದಲ್ಲಿ ಮಿಹತರಖಾನನು ರಕ್ಷಿತ ( Reserve )ಸೈನ್ಯದ ಅಧಿನಾಯಕನಾಗಿ ಉಳಿದನು. ಮೊಗಲ-ಸೇನೆಯ ಹಿಂಭಾಗದಲ್ಲಿಯೇ ಸಣ್ಣ ಬನಾಸ ನದಿಯು ಹರಿಯುತ್ತಲಿತ್ತು. ಮಾನಸಿಂಹನು ಹಳದೀಘಟ್ಟದ ಮುಖದಲ್ಲಾಗಲಿ, ಪರ್ವತದ ಸಾಲುಗಳ ತೀರ ಸಮೀಪದಲ್ಲಾಗಲಿ ಬರಲಿಕ್ಕೆ ಮನಸು ಮಾಡಲಿಲ್ಲ; ಯಾಕಂದರೆ ಈ ಸ್ಥಳದಲ್ಲಿ ಬಂದಿದ್ದರೆ, ಅನೇಕ ವಿಪತ್ತುಗಳೊದಗುವ ಸಂಭವವಿದ್ದಿತು.

ಪ್ರತಾಪಸಿಂಹನು ಹಳದೀಘಟ್ಟದ ಮುಖದಲ್ಲಿಯೇ ತನ್ನ ಸೈನ್ಯವನ್ನು ನಿಲ್ಲಿಸಿದನು. ಈ ಸೈನ್ಯದ ಎರಡೂ ಬದಿಗಳಲ್ಲಿ ದುರಾರೋಹವಾದ ಪರ್ವತದ ಸಾಲುಗಳು ಆಕಾಶವನ್ನು ಭೇದಿಸುತ್ತಿರುವಂತೆ ನಿಂತುಕೊಂಡಿದ್ದವು. ಈ ಪರ್ವತ-ಮೂಲೆಯ ಮೇಲ್ಭಾಗದಲ್ಲಿರುವ ನಾನಾ ಗುಪ್ತಸ್ಥಳಗಳಲ್ಲಿ ಪ್ರತಾಪನ ಭಿಲ್ಲ ಸೈನಿಕರು ಧನುರ್ಬಾಣಗಳನ್ನು ತೆಗೆದುಕೊಂಡು, ಅಡಗಿಕೊಂಡು ನಿಂತರು. ಈ ಭಿಲ್ಲರು ತಾವು ಅಡಗಿದ ಸ್ಥಳದಲ್ಲಿ ಕಲ್ಲುಗಳನ್ನು ರಾಶಿರಾಶಿಯಾಗಿ ಕೂಡಿಹಾಕಿಕೊಂಡಿದ್ದರು; ಇದರಿಂದವರು ಮೊಗಲರು ಒಂದು ವೇಳೆ ಘಟ್ಟದ ಮಾರ್ಗವನ್ನು ಪ್ರವೇಶ ಮಾಡುವ ಮನಸು ಮಾಡಿದಲ್ಲಿ ತಡೆಯಬಹುದಾಗಿದ್ದಿತು. ಪ್ರತಾಪನ ಪಕ್ಷವನ್ನು ವಹಿಸಿದ ಪಠಾಣ ಸೈನಿಕರು ಹಕಿಮಖಾँ ಸೂರನ ಆಧೀನರಾಗಿ ಎಡಭಾಗದಲ್ಲಿ ನಿಂತುಕೊಂಡರು; ಮತ್ತು ಬಲಭಾಗದಲ್ಲಿ ಘಟ್ಟದ ಮುಂಭಾಗದಲ್ಲಿಯೇ ರಜಪೂತ ಸೈನಿಕರು ನಿಲ್ಲಬೇಕೆಂದು ಗೊತ್ತಾಯಿತು. ಈ ರಜಪೂತ ಸೈನ್ಯದ ತೀರ ಮುಂಭಾಗದಲ್ಲಿ ಮಹಾವೀರ ಜಯಮಲ್ಲನ ಮಗನಾದ ರಾಮದಾಸನು ನಿಂತುಕೊಂಡನು;

ಇವನ ತಂದೆಯು ಚಿತೋಡದ ರಕ್ಷಣೆಗಾಗಿ ಅಸಾಮಾನ್ಯ ವೀರತ್ವವನ್ನೂ, ಆತ್ಮತ್ಯಾಗವನ್ನೂ ತೋರಿಸಿದ್ದನು; ಈ ಗೌರವವರ್ಧನಕ್ಕಾಗಿ ಇಂದು ಮಹಾವೀರ ರಾಮದಾಸನು ರಜಪೂತ ಸೈನಿಕರ ಅಗ್ರಣಿಯಾದನು.

ರಾಮದಾಸನ ತುಸು ಹಿಂದೆ ಬಲಭಾಗದಲ್ಲಿ ಗ್ವಾಲ್ಹೇರದ ಮೊದಲಿನ ಅರಸನಾದ ರಾಮಶಹನು ನಿಂತನು; * ಮತ್ತು ಇವನ ಮೂವರು ಮಕ್ಕಳಾದ ಶಾಲಿವಾಹನ, ಭಾನುಸಿಂಹ, ಪ್ರತಾಪಸಿಂಹರು § ಇವನೊಡನೆ ಇದ್ದರು. ಎಡಭಾಗದಲ್ಲಿ ಝಾಲಾಸಂಸ್ಥಾನದ ಅರಸನಾದ ಮಾನ್ನಾನು ನಿಂತುಕೊಂಡನು.† ಮಧ್ಯಭಾಗದಲ್ಲಿ ಮಹಾರಾಣಾ ಪ್ರತಾಪಸಿಂಹನು ತಾನೇ ನಿಂತುಕೊಂಡನು. ಇವನ ಎಡ-ಬಲ ಭಾಗಗಳಲ್ಲಿ 'ಚಂದಾಯತ್' 'ಜಗಾಯತ್' ಮೊದಲಾದ ಅಸಂಖ್ಯ ರಜಪೂತರು ನಿಂತರು. ರಾಣಾನ ಆನೆಗಳು ಎಲ್ಲಕ್ಕೂ ಹಿಂದೆ ಪರ್ವತದ ಕೆಳಭಾಗದಲ್ಲಿದ್ದವು. ಈ ಮೇರೆಗೆ ಪ್ರತಾಪಸಿಂಹನು ವ್ಯೂಹವನ್ನು ರಚಿಸಿ, ರಣಕ್ರೀಡೆಯ ಮಾರ್ಗಪ್ರತೀಕ್ಷೆಯನ್ನು ಮಾಡಹತ್ತಿದನು.

ಮೊದಲು ರಜಪೂತರೇ ಯುದ್ಧವನ್ನಾರಂಭಿಸಿದರು. ಪ್ರಾರಂಭದಲ್ಲಿ ಪಠಾಣವೀರನಾದ ಹಾಕಿಮಖಾನನು ಸೈಯದ ಹಾಸೀಮನನ್ನು ಮುತ್ತಿದನು. ಈ ಯುದ್ಧದಲ್ಲಿ ಸೈಯದ ಬಂಧುಗಳು ಪ್ರಾರಂಭದಿಂದಲೂ ತಮ್ಮ ಅಶೇಷ ವೀರತ್ವವನ್ನು ತೋರ್ಪಡಿಸಿ, ಮೊಗಲರ ಗೌರವವನ್ನು ರಕ್ಷಿಸಿದರು. ರಜಪೂತರ ಬಲಭಾಗದಲ್ಲಿರುವ ಗ್ವಾಲ್ಹೇರದ ಅರಸನಾಗಿದ್ದ ರಾಮಶಹನು, ಮೊಗಲ ಪಕ್ಷದ ರಾಯಲುಂಬಕರ್ಣನ್ನೂ, ಮಹಾರಾಣಾ ಪ್ರತಾಪಸಿಂಹನು ಗಾಜೀಖಾನನನ್ನೂ ಮುತ್ತಿದನು.

---

* ಇವನಿಗೆ ಬ್ಲಾಕಮನ್ನನು Ram Sah ಎಂದೂ, ಬೆವ್ಹರಿಜ್, ಲೋ ಮೊದಲಾದವರು Ram Shah ಎಂದೂ ಹೇಳಿದ್ದಾರೆ ಆದರೆ ಇಲಿಯಟನು ತಬಕಾತದ ಅನುವಾದದಲ್ಲಿ ಇವನಿಗೆ ರಾಮೇಶ್ವರ ಗ್ವಾಲ್ಹೇರಿ ಎಂದು ಹೇಳಿದ್ದಾನೆ ( Vol. V. P. 399 ) ಇದನ್ನನುಸರಿಸಿಯೇ ವಿಶ್ವಕೋಶದಲ್ಲಿ ರಾಮೇಶ್ವರನೆಂದು ಹೇಳೋಣವಾಗಿದೆ ಇವನ ಹೆಸರು ರಾಮಶಹನೆಂದಾಗಿರದೆ, ರಾಮೇಶ್ವರನೆಂದಿರುವದೇ ಹೆಚ್ಚು ಸಯುಕ್ತಿಕವೆಂದು ತೋರುವದು,

§ A. N ( Bev. ) III 246.

† ಟಾಡ್ ಸಾಹೇಬರು ತಮ್ಮ ಇತಿಹಾಸದಲ್ಲಿ ಮಾನ್ನಾನ ವಿಷಯವಾಗಿ ಹೇಳಿದ್ದಾರೆ. ಅಬಲಫಜಲನ ಅನುವಾದದಲ್ಲಿ Bedamata of the Jhala tribe ಎಂದು ಉಲ್ಲಿಖಿತವಾಗಿದೆ. A N. III 245.

ಈ ಮೊದಲನೇ ಆಕ್ರಮಣದಲ್ಲಿಯೇ ರಾಯಲಂಬಕರ್ಣನು ತನ್ನ ರಜಪೂತ ಸೈನ್ಯವನ್ನು ತೆಗೆದುಕೊಂಡು, ರಚಿಸಿದ ವ್ಯೂಹವನ್ನು ಭಂಗಮಾಡಿ ಓಡಿಹೋದನು; ಮತ್ತು ಆಶ್ರಯಕ್ಕಾಗಿ ಬಲಭಾಗಕ್ಕೆ ಹೊರಟನು. ಈ ಕಾರಣದಿಂದ ಮೊಗಲರ ಸೈನ್ಯದಲ್ಲಿ ಭಯಂಕರ ಗೊಂದಲವೆದ್ದಿತು. ಹೀಗಾದರೂ ಗಾಜೀಖಾನನು ಓಡಿ ಹೋಗಲು ಮನಸು ಮಾಡಲಿಲ್ಲ; ಕೆಲವು ಹೊತ್ತಿನವರೆಗೆ ವೀರವಿಕ್ರಮದಿಂದ ಯುದ್ಧಮಾಡಿದನು; ಆದರೆ ಅದರಿಂದೇನೂ ಲಾಭವಾಗಲಿಲ್ಲ, ರಜಪೂತರ ಬಲವು ಕ್ರಮವಾಗಿ ಹೆಚ್ಚುತ್ತ ನಡೆಯಿತು; ಈ ಪ್ರಸಂಗದಲ್ಲಿ ಗಾಜೀಖಾನನು ಓಡಿ ಹೋಗುವದರ ಹೊರತು ಬೇರೆ ಉಪಾಯವನ್ನು ಕಾಣಲಿಲ್ಲ; ಆದರಿಂದವನು ಓಡಿ ಹೋಗಲು ಸಿದ್ಧನಾದನು. ಈ ವೇಳೆಯಲ್ಲಿ ಇವನ ಕೈಗೆ ಶತ್ರುಗಳ ಕತ್ತಿಯ ಹೊಡತವು ಬಿದ್ದಿತು; ಆದರಿಂದವನು ಗಾಯಾಳುವಾಗಿ ಭೂಮಿಯ ಮೇಲೆ ಬಿದ್ದನು. ಮೊಗಲ ಸೈನ್ಯದಲ್ಲಿ ಹಾ-ಹಾಕಾರವೆದ್ದಿತು. ಕೂಡಲೇ ಮೊಗಲ ಸೈನಿಕರು ತೀವ್ರವೇಗದಿಂದ ಊರ್ಧ್ವಶ್ವಾಸರಾಗಿ ಓಡತೊಡಗಿದರು. ಇವರು ನದಿಯನ್ನು ದಾಟಿ ಐದಾರು ಕ್ರೋಶಗಳನ್ನು ಕ್ರಮಿಸುವವರೆಗೆ ನಿಲ್ಲಲಿಲ್ಲ;+ ಯಾಕಂದರೆ ಹಿಂದೆ ರಜಪೂತರು ಬೆನ್ನುಹತ್ತಿ ಬಂದು, ತಮ್ಮನ್ನೆಲ್ಲಿ ಕೊಲ್ಲುವರೋ ಎಂಬ ಭೀತಿಯು ಇವರಿಗೆ ಬಹಳವಾಗಿತ್ತು. ರಾಮಶಹನ ಭೀಮಪರಾಕ್ರಮದಿಂದ ಮಧುಸಿಂಹ ಮೊದಲಾದ ಮೊಗಲಪಕ್ಷದ ರಜಪೂತ ಸೇನಾಪತಿಗಳು ಪಲಾಯನ ಹೇಳಿಸಿದರು; ಮತ್ತು ಇದನ್ನು ನೋಡಿ ಅಸಫಖಾನನ ಸೈನಿಕರೂ ರಣಭೂಮಿಯಿಂದ ಧಾವಿಸತೊಡಗಿದರು ಐತಿಹಾಸಿಕ ಬದಾವುನಿಯು ಈ ಅಸಫಖಾನನ ಸೈನ್ಯದಲ್ಲಿದ್ದನು. ಇವನು ತನ್ನ ವಿಷಯದ ಯಾವ ಸಂಗತಿಯನ್ನು ಬರೆದಿಲ್ಲ. ಹೀಗಿದ್ದರೂ ಇವನು ಅಸಫಖಾನನ ಸೈನಿಕರೊಡನೆ ಓಡಿಹೋದನೆಂಬದಕ್ಕೆ ಸಂದೇಹವಿಲ್ಲ. ಎರಡೂ ಪಕ್ಷದ ರಜಪೂತ ಸೈನಿಕರು ಒಬ್ಬರೊಳಗೊಬ್ಬರು ಕೂಡಿ ಹೋದರು. ಇದರಿಂದ ಶತ್ರುಗಳಾರು? ಎಂಬದನ್ನು ಗೊತ್ತುಮಾಡುವದು ಕಠಿಣವಾಯಿತು. ಈ ಸಮಯದಲ್ಲಿ ಸೈಯದಬಂಧುಗಳು ಸಂಪೂರ್ಣವಾದ ಪರಾಕ್ರಮದಿಂದ ಆತ್ಮರಕ್ಷಣೆಯನ್ನು ಮಾಡಿಕೊಳ್ಳದಿದ್ದಲ್ಲಿ, ಮೊಗಲರು ಪೂರ್ಣ ಪರಾಭವ

+ Those of the army who had fled on the first attack, did not draw rein till they had passed five are six 'cosses' beyond the river" Badaoni ( Lowe ) II P. 238.

ವನ್ನು ಹೊಂದಿದಂತಾಗುತ್ತಿತ್ತು. ಯುದ್ಧದ ಪರಿಣಾಮವು ಗೊತ್ತಾಗಿ, ರಜಪೂತರು ಜಯಶಾಲಿಗಳಾಗಿ ಹೋಗುತ್ತಿದ್ದರು.

ಸ್ವದೇಶದ ಸ್ವಾತಂತ್ರ್ಯರಕ್ಷಣೆಯ ಸಲುವಾಗಿ ರಜಪೂತರು ಜೀವದ ಹಂಗು ದೊರೆದು, ಕಾದತೊಡಗಿದರು. ತರಂಗದ ಮೇಲೆ ತರಂಗಗಳಪ್ಪಳಿಸುವಂತೆ ರಜಪೂತ ಸೈನಿಕರು ಮೊಗಲ-ಸೈನ್ಯದ ಮೇಲೆ ಬೀಳತೊಡಗಿದರು. ಸಾಮಂತ ಸರದಾರರು ತಮ್ಮ ಶೂರ ಸೈನಿಕರನ್ನು ತೆಗೆದುಕೊಂಡು, ಶತ್ರುಸೇನೆಯನ್ನು ಮಥನ ಮಾಡುತ್ತ ಮುಂದೆ ಸಾಗತೊಡಗಿದರು. ರಜಪೂತರ ಸಾಹಸವನ್ನೂ, ವೀರತ್ವವನ್ನೂ, ಆತ್ಮತ್ಯಾಗವನ್ನೂ ನೋಡಿ, ಶತ್ರುಗಳು ವಿಸ್ಮಿತರೂ, ಸ್ತಂಭಿತರೂ ಆದರು. ಬಿಲ್ಲುಬಾಣಗಳನ್ನು ಧರಿಸಿದ ಭಿಲ್ಲರು, ಪರ್ವತದ ತುದಿಯಿಂದಲೂ, ವೃಕ್ಷಾಂತರಾಲದಿಂದಲೂ ಬಾಣಗಳ ಮಳೆಗರೆಯುತ್ತಿದ್ದರು. ಒಮ್ಮೊಮ್ಮೆ ಭಿಲ್ಲರು ಕಲ್ಲುಗಳನ್ನೆಸೆದು, ನೂರಾರು ಮುಸಲ್ಮಾನರ ಶಿರಗಳನ್ನು ಜಜ್ಜಿಬಿಡುತ್ತಿದ್ದರು. ಮೊಗಲ ಸೈನಿಕರು ಮುಂದುವರಿಯುವದೇ ಕಠಿಣವಾಯಿತು. ರಜಪೂತರು ಪ್ರಾಣದ ಹಂಗು ದೊರೆದು, ಸ್ವಜನಾಂಗದ ಜೀವರಕ್ಷಣೆಗಾಗಿಯೂ, ಸ್ವದೇಶದ ಉದ್ಧಾರಕ್ಕಾಗಿಯೂ, ಸ್ವಜಾತಿಯ ಧರ್ಮರಕ್ಷಣೆಗಾಗಿಯೂ ಯುದ್ಧಮಾಡುತ್ತಿದ್ದರು; ಆದರೆ ಮೊಗಲರು ಪ್ರತಿಹಿಂಸೆಯನ್ನು ಮಾಡುವದಕ್ಕಾಗಿಯೂ ರಾಜ್ಯವನ್ನು ವಿಸ್ತರಿಸುವದಕ್ಕಾಗಿಯೂ, ಪರರ ಸ್ವತ್ತನ್ನು ತಮ್ಮದನ್ನಾಗಿ ಮಾಡಿಕೊಳ್ಳುವದಕ್ಕಾಗಿಯೂ ಯುದ್ಧಮಾಡುತ್ತಿದ್ದರು. ಈ ಮೇರೆಗೆ ಉದಾರಹೃದಯದ ಸ್ವದೇಶಭಕ್ತರೊಡನೆ ಕಾಳಗಮಾಡುವದು, ಪರರಾಜ್ಯವನ್ನಪಹರಿಸುವ ಇಚ್ಛೆಯುಳ್ಳವರಿಗೆ ಕಷ್ಟಕರವಾದುದರಲ್ಲಿ ಆಶ್ಚರ್ಯವಿಲ್ಲ.

ಮೊಗಲರ ವ್ಯೂಹದ ಎಡಬಲ ಭಾಗಗಳಲ್ಲಿಯೂ ಮಧ್ಯದಲ್ಲಿಯೂ ಮಹಾಹಾಹಾಕಾರವೆದ್ದಿತು. ಈ ಸಮಯದಲ್ಲಿ ಓರ್ವ ವೀರಪುರುಷನು ಸ್ಥೈರ್ಯದಿಂದ ಆತ್ಮರಕ್ಷಣೆಯನ್ನು ಮಾಡಿಕೊಳ್ಳುತಲಿದ್ದನು; ಇವನು ಬಿಹಾರಿಮಲ್ಲನ ಮಗನಾದ ಜಗನ್ನಾಥನು. ಇವನೊಡನೆ ಮಹಾವೀರನಾದ ರಾಮದಾಸನ ಭೀಷಣಯುದ್ಧವು ನಡೆದಿತ್ತು; ಕಡೆಯಲ್ಲಿ ಜಗನ್ನಾಥನು ತನ್ನ ಕೈಯಿಂದ ರಾಮದಾಸನ ಶಿರಚ್ಛೇದನ ಮಾಡಿದನು.* ಇವನ ತಂದೆಯು ಚಿತೋಡದ ಯುದ್ಧದಲ್ಲಿ ಮೊಗಲ-ಬಾದಶಹನ

* Blochmann Ain, P. 387.

ಕೈಯಿಂದ ಮರಣಹೊಂದಿದ್ದನು; ಇವನು ಇಂದು ಓರ್ವ ಮೊಗಲಸೇನಾಪತಿಯ ಹಸ್ತದಿಂದ ಭವಲೀಲೆಯನ್ನು ಮುಗಿಸಿಕೊಂಡು, ಸ್ವದೇಶಭಕ್ತಿಯ ಉತ್ತಮ ಉದಾಹರಣೆಯಿಂದ ಪುತ್ರೋಚಿತವಾದ ಗೌರವವನ್ನು ಕಾಯ್ದುಕೊಂಡು ಹೋದನು. ಕೇವಲ ರಾಮದಾಸನೊಬ್ಬನೇ ಅಲ್ಲ; ದಕ್ಷಿಣಭಾಗದಲ್ಲಿರುವ ರಾಮಶಹನೂ ಮೃತ್ಯುಮುಖದಲ್ಲಿ ಬಿದ್ದನು + ಈ ಇಬ್ಬರು ವೀರಶ್ರೇಷ್ಠರ ಮರಣದಿಂದ ಪ್ರತಾಪನ ಎದೆಯೊಡೆಯಿತು; ಆದರೂ ಯುದ್ಧಭೂಮಿಯಿಂದ ಓಡಿಹೋಗುವ ಮನಸುಮಾಡಲಿಲ್ಲ; ಹೆಚ್ಚು ಆವೇಶವನ್ನು ಹೊಂದಿ, ಯುದ್ಧಕ್ಕಾಗಿ ಮುಂದುವರಿದನು; ತನ್ನ ಚೈತಕವೆಂಬ ನೀಲವರ್ಣದ ಕುದುರೆಯನ್ನೇರಿ ಮತ್ತ ಗಜದಂತೆ ಮಹಾ ಪರಾಕ್ರಮದಿಂದ ಯುದ್ಧಮಾಡತೊಡಗಿದನು.

ಮಹಾರಾಣಾನ ಈ ವೀರ-ಪ್ರಭಾವವನ್ನು ನೋಡಿ, ವೀರಭೂಮಿಯ ವೀರಯೋದ್ಧೃಗಳು, ಕ್ರಮವಾಗಿ ಹೆಚ್ಚು ಹೆಚ್ಚು ಉತ್ಸಾಹವನ್ನೂ, ಉಗ್ರಮೂರ್ತಿಯನ್ನೂ ತಳೆದರು. ಪ್ರತಾಪನು ರಜಪೂತಕುಲಾಂಗಾರನಾದ ಮಾನಸಿಂಹನನ್ನು ಹುಡುಕುತ್ತ, ರಣಭೂಮಿಯಲ್ಲಿ ಅತ್ತಿತ್ತ ಸಂಚರಿಸುತ್ತಿದ್ದನು. ಇವನು ಎರಡು ಸಾರೆ ಶತ್ರುಸೇನೆಯ ಮಧ್ಯದಲ್ಲಿ ಪ್ರವೇಶಮಾಡಿದನು, ತನ್ನ ಸುದಕ್ಷವಾದ ಕೈಯಲ್ಲಿರುವ ತೀಕ್ಷ್ಣವಾದ ಆಯುಧದ ಪ್ರಚಂಡ ಆಘಾತಗಳಿಂದ ನೂರಾರು ಶತ್ರುಗಳನ್ನು ಯಮ-ಸದನಕ್ಕೆ ಕಳುಹಿಸಿದನು, ಆದರೂ ಇವನು ಮಾನಸಿಂಹನನ್ನು ಕಾಣಲಿಲ್ಲ. ಹಿಂದೊಂದು ಪ್ರಸಂಗದಲ್ಲಿ ಪ್ರತಾಪನು ಮಾನಸಿಂಹನಿಗೆ ನಿನ್ನನ್ನು ಯುದ್ಧಭೂಮಿಯಲ್ಲಿ ನೋಡಿದ್ದಾದರೆ ಸಂತೋಷಿತನಾಗುವೆನೆಂದು ಹೇಳಿದ್ದು ವಾಚಕರ ಸ್ಮರಣೆಯಲ್ಲಿರಬಹುದು, ಆದರೆ ಪ್ರತಾಪನ ಈ ಮನೋರಥವು ಈಡೇರಲಿಲ್ಲ. ಇಂದು ಗರ್ವಿತನಾದ ಮಾನಸಿಂಹನು ಪ್ರತಾಪನ ರುದ್ರಮೂರ್ತಿಯಿಂದ

---

+ ರಾಮಶಹನ ವೀರತ್ವದ ಕಥೆಯನ್ನು ಭಾಷೆಯಿಂದ ಪ್ರಕಾಶಪಡಿಸಲು ಬರುವಂತಿಲ್ಲ ಬದಾವುನಿಯೂ ಕೂಡ ಹೇಳಿದ್ದಾನೆ—" Ram Shah performed such prodigies of valour against the Rajputs of Mansing as baffle description." ಬದಾವುನಿಯು ಈ ಯುದ್ಧವನ್ನು ಸ್ವತಃ ನೋಡಿದ್ದಾನೆ ಆದರಿಂದ ಇವನ ಮಾತಿನ ಮೇಲೆ ಅವಿಶ್ವಾಸವಿಡುವ ಕಾರಣವಿಲ್ಲ ರಾಮಶಹನೊಡನೆ ಇವನ ಮಗನಾದ ಶಾಲಿವಾಹನನೂ ಅಸಮಸಾಹಸದಿಂದ ಯುದ್ಧಮಾಡಿ ಮರಣಹೊಂದಿದನು. ( Badaoni II 239 ) ಇವನಿಗೆ ಖಂಡೇರಾವನೆಂಬ ಬೇರೊಂದು ಹೆಸರಿತ್ತು Rajasthan Vol. I. P. 276.

ದೂರಿದ್ದು, ಅಸಂಖ್ಯ ಅನುಚರರಿಂದ ಆತ್ಮರಕ್ಷಣೆಯನ್ನು ಮಾಡಿಕೊಳ್ಳುತಲಿದ್ದನು; ಬೇರೊಂದು ಕಡೆಯಲ್ಲಿ ಪ್ರತಾಪನು ಇವನನ್ನು ಹುಡುಕುವದಕ್ಕಾಗಿ ಅಸಂಖ್ಯ ಶತ್ರುಗಳಿಂದ ವೇಷ್ಟಿತನಾಗಿ ಮಹಾ ವಿಪತ್ತಿನಲ್ಲಿ ಬಿದ್ದಿದ್ದನು; ಆದರೆ ರಾಠೋರ, ಚೌಹಾಣ, ಚಂದಾಯತ್, ಜಗಾಯತ್ ಮೊದಲಾದ ರಜಪೂತವೀರರು ನಿಶ್ಚಿಂತ ರಾಗಿರಲಿಲ್ಲ. ನೂರಾರು ರಜಪೂತವೀರರು ಸ್ವಾಮಿಗಾಗಿ ಆತ್ಮಯಜ್ಞವನ್ನು ಮಾಡಿ ಎರಡೂ ಸಾರೆ ಮಹಾರಾಣಾನನ್ನು ಸಂರಕ್ಷಿಸಿದರು—ಮೇವಾಡದ ಗೌರವವನ್ನು ಕಾಯ್ದರು.

ಪ್ರತಾಪಸಿಂಹನು ಇಂದು ಅತ್ಯಂತ ಕ್ರುದ್ಧನೂ, ಚಪಲನೂ ಆಗಿದ್ದಾನೆ; ಮಧುಸಿಂಹನೊಡನೆ ಯುದ್ಧಮಾಡುತ್ತಿದ್ದಾನೆ, ವರ್ಷಾಕಾಲದ ವಾರಿಧಾರೆಯಂತೆ ಇವನ ಮೇಲೆ ಬಾಣಗಳ ಮಳೆಯಾಗುತ್ತಿದ್ದಿತು. ರಾಮದಾಸನ ಮರಣದ ತರು ವಾಯ ರಜಪೂತ ಸರದಾರರು ಭೀಷಣಪರಾಕ್ರಮದಿಂದ ಜಗನ್ನಾಥನೊಡನೆ ಯುದ್ಧಮಾಡುತ್ತಿದ್ದರು. ಇನ್ನು ಈ ರಜಪೂತರಿಂದ ಜಗನ್ನಾಥನು ಮೃತ್ಯುಮುಖ ದಲ್ಲಿ ಬೀಳತಕ್ಕವನಿದ್ದನು; ಇಷ್ಟರಲ್ಲಿ ಮಾನಸಿಂಹನು ಸ್ವತಃ ಯುದ್ಧಕ್ಕಾಗಿ ಮುಂದುವರಿದು ಬಂದನು. ಕೆಲ ಹೊತ್ತಾದ ಬಳಿಕ ಪ್ರತಾಪನು ಆನೆಯ ಮೇಲೆ ಕುಳಿತ ಮಾನಸಿಂಹನನ್ನು ನೋಡಿದನು; ಆ ಕಡೆಗೆ ಧಾವಿಸಿ ನಡೆದನು.* ಮೊಗಲ

* ಟಾಡ್‌ಸಾಹೇಬರು ಅಕಬರನ ಹಿರಿಯ ಮಗನಾದ ಯುವರಾಜ ಸೇಲಿಮನು ಈ ಯುದ್ಧದ ಮುಖ್ಯ ಸೇನಾಪತಿಯಾಗಿದ್ದನೆಂದೂ, ಮಾನಸಿಂಹನು ಅವನ ಸಹಾಯಕಸೇನಾಪತಿ ಯಾಗಿದ್ದನೆಂದೂ ಹೇಳುತ್ತಿರುವರು ಆದರೆ „ ಅಕಬರ ನಾಮಾ," ಬದಾವುನಿಯ „ ಮುತಾ ಖಾಬುತ್-ತಾರೀಖ," ನಿಜಮುದ್ದೀನನ „ ತಬಕಾತ ಇ ಅಕಬರ" ಮೊದಲಾದ ಯಾವ ಪ್ರಾಮಾಣಿಕಗ್ರಂಥಗಳಲ್ಲಿಯೂ ಇದಕ್ಕೆ ಆಧಾರವಿಲ್ಲ ಕಾರಣ ಟಾಡ್‌ಸಾಹೇಬರ ಸಂಗತಿಯನ್ನು ನಂಬಲಿಕ್ಕೆ ಬರುವಂತಿಲ್ಲ ಸಾಮ್ರಾಟ ಜಹಾಂಗೀರನ ಆತ್ಮವೃತ್ತದಿಂದ ತಿಳಿದು ಬರುವದೇನಂದರೆ— ಇವನು ಹಿಜರೀ ಸನ್ ೯೭೮ ರಲ್ಲಿ ಅಥವಾ ಸನ್ ೧೫೭೦ನೆಯ ಆಗಸ್ಟ ೧೮ನೇ ತಾರೀಖಿನ ದಿವಸ ಹುಟ್ಟಿದನು ( Memoirs of Jahangir, translated by Major Price P 3 ) ಬದಾವುನಿಯು ಸ್ವತಃ ಈ ಯುದ್ಧದಲ್ಲಿದ್ದು, ಇವನು ಸೇಲೀಮನನ್ನು ಉಲ್ಲೇಖಿಸಿಲ್ಲ. ಇವನ ಮತ ದಂತೆ ಈ ಯುದ್ಧವು ಹಿಜರೀ ಸನ್ ೯೮೪ರಲ್ಲಿ ಅಥವಾ ಕ್ರಿ. ಶಕದ ೧೫೭೬ ರಲ್ಲಿ ಆಯಿತು, ಕಾರಣ ಈ ಯುದ್ಧದ ಸಮಯದಲ್ಲಿ ಸೇಲೀಮನಿಗೆ ಆರೇಳು ವರ್ಷಕ್ಕಿಂತ ಹೆಚ್ಚಾಗಿರಲಿಲ್ಲ, ಅದ ರಿಂದ ಸೇಲೀಮನು ಈ ಯುದ್ಧದ ಸೇನಾಪತಿಯಾಗಿರುವದು ಅಸಂಭವವು. ಕಾರಣ ನಾವು ಟಾಡ್‌ಸಾಹೇಬರ ಸಂಗತಿಯನ್ನು ನಂಬಲಾರೆವು ಟಾಡ್‌ಸಾಹೇಬರ ಇತಿಹಾಸದಲ್ಲಿ ಸೇಲೀಮ ನನುದ್ದೇಶಿಸಿ ಹೇಳಿದ ಸಂಗತಿಯನ್ನು ಮಾನಸಿಂಹನಿಗೆ ಸಂಬಂಧಿಸಿ ಬರೆದಿದ್ದೇವೆ. ಪ್ರತಾಪನು

ಸೈನಿಕರು ನಾಲ್ಕೂ ಕಡೆಯಿಂದ ತಮ್ಮ ಸೇನಾಪತಿಯ ರಕ್ಷಣೆಗಾಗಿ ಬಂದು ಕೂಡ ಹತ್ತಿದರು; ಮತ್ತು ಪ್ರತಾಪನನ್ನು ಆಕ್ರಮಿಸಿದರು; ಆದರೆ ಪ್ರತಾಪನಿಗೆ ಈ ಕಡೆಗೆ ಲಕ್ಷವಿರಲಿಲ್ಲ—ಅವನ ಪ್ರತಿಜ್ಞೆಯು ಅಚಲವಾಗಿದ್ದಿತು; ಸ್ವದೇಶಕ್ಕಾಗಿ ಈ ಭಯಂಕರ ಯುದ್ಧದಲ್ಲಿ ಪ್ರಾಣವನ್ನು ತ್ಯಜಿಸುವದೇ ಅವನ ಉದ್ದೇಶವಾಗಿದ್ದಿತು. ಪ್ರತಾಪನು ದೂರದಿಂದ ಲಕ್ಷವಿಟ್ಟು, ಮಾನಸಿಂಹನಿಗೆ ಹದನವಾದ ಬರ್ಚಿಯನ್ನೆಸೆದನು; ಆದರೆ ದೈವವಶದಿಂದ ಈ ಬರ್ಚಿಯು ಮಾನಸಿಂಹನಿಗೆ ಬಡಿಯಲಿಲ್ಲ; ಲೋಹಮಯವಾದುದೊಂದು ಹೌದಿಗೆ ಬಡಿದು, ವ್ಯರ್ಥವಾಗಿ ಹೋಯಿತು. ಪ್ರತಾಪನ ಅಶ್ವವಾದ ಚೈತಕವು ಚಪಲವಿದ್ದಿತು, ಇದು ಪ್ರಭುವಿಗೆ ತಕ್ಕ ವಾಹನವಾಗಿದ್ದಿತು. ಇದು ಶತ್ರುಸೇನೆಯಲ್ಲಿ ತನ್ನ ಪ್ರಭುವನ್ನು ತೆಗೆದುಕೊಂಡು ಮುಂದೆ ಸಾಗಿತು. ಪ್ರತಾಪನು ಮಾನಸಿಂಹನ ಹತ್ತರ ಬಂದನು ತೇಜಸ್ವಿಯಾದ ಚೈತಕವು ಮಾನಸಿಂಹನ ಆನೆಗೆ ಕಾಲನ್ನು ಆನಿಸಿ ನಿಂತುಕೊಂಡಿತು. ಪ್ರತಾಪನು ಮಾನಸಿಂಹನನ್ನು ಹೊಡೆಯುವದಕ್ಕಾಗಿ ಶಸ್ತ್ರವನ್ನೆತ್ತಿದನು; ಮಾವುತನು ನಿಹತನಾದನು. ಚಾಲಕನಿಲ್ಲದ ಮತ್ತಗಜವು ಮಾನಸಿಂಹನನ್ನು ತೆಗೆದುಕೊಂಡು ಓಡಹತ್ತಿತು. ಇಂದು ದೈವಬಲದಿಂದ ಮಾನಸಿಂಹನು ರಕ್ಷಣೆಯನ್ನು ಹೊಂದಿದನು.

ಸೇನಾಪತಿಗೊದಗಿದ ಈ ವಿಪತ್ತನ್ನು ನೋಡಿ, ಮೊಗಲ-ಸೈನಿಕರು ಸಾಗರ-ತರಂಗಗಳಂತೆ, ಆ ಕಡೆಗೆ ಧಾವಿಸಿ ನಡೆದರು. ಹಿಂಭಾಗದಲ್ಲಿರುವ ಮಿಹತರಖಾನನು ತನ್ನ ರಕ್ಷಿತ ಸೇನೆಯನ್ನು ತೆಗೆದುಕೊಂಡು, ನಗಾರಿಯನ್ನು ಬಾರಿಸುತ್ತ ಮುಂದೆ ಸಾಗಿದನು; ಮತ್ತು ಬಾದಶಾಹೀ ಸೈನಿಕರನ್ನು ಉತ್ಸಾಹವಾಣಿಯಿಂದ ಧೈರ್ಯಗೊಳಿಸತೊಡಗಿದನು; ಇದರಿಂದ ಓಡಿಹೋಗಲು ಸಿದ್ಧರಾದ ಅನೇಕ ಸೈನಿಕರು ಹಿಂದಿರುಗಿದರು. ಈ ಕಡೆಯಲ್ಲಿ ಪ್ರಭುಭಕ್ತರಾದ ರಜಪೂತರು ಪ್ರತಾಪನ ಜೀವರಕ್ಷಣೆಗಾಗಿ ಮುಂದುವರಿದರು, ಈ ಸ್ಥಳದಲ್ಲಿ ಭಯಂಕರವಾದ ಯುದ್ಧವು ನಡೆಯಿತು.

---

ಮಾನಸಿಂಹನನ್ನು ಆಕ್ರಮಿಸಿದ ಸಂಗತಿಯನ್ನುಳಿದು, ಇತರ ವಿಷಯಗಳನ್ನು ನಾವು ಬದಾವುನಿ ಮತ್ತು ಅಬಲಫಜಲರ ಗ್ರಂಥದಿಂದ ಸಂಗ್ರಹಿಸಿದ್ದೇವೆ, ಅಬಲಫಜಲನು ಹೇಳಿದ್ದಾನೆ—

"During these blazing sparks of commotion and contest and heat of the fires of fortune Kuar Mansing and the Rana approached one another and did valiant deeds " A N Vol. III, P. 246.

ಈ ಸಮಯದಲ್ಲಿ ಮೊಗಲ-ಪಕ್ಷದ ಹಸ್ತಿನಾಯಕನಾದ ಹುಸೇನಖಾನನು, ಆನೆಯನ್ನೇರಿ ಯುದ್ಧಮಾಡುತ್ತ ಮುಂದೆ ಸಾಗಿದನು. ರಜಪೂತರ ಆನೆಗಳೂ ಯುದ್ಧದಲ್ಲಿ ಕೂಡಿದ್ದವು. ಮಾನಸಿಂಹನು ಒಂದು ಆನೆಯ ಮೇಲೆ ಕುಳಿತು ಕಲ್ಪನಾತೀತವಾದ ವೀರವಿಕ್ರಮದಿಂದ ಯುದ್ಧಮಾಡುತ್ತಲಿದ್ದನು * ಮೊಗಲರ ಒಂದು ಆನೆಯೊಡನೆ ರಾಣಾನ ಪಕ್ಷದ 'ರಾಮಪ್ರಸಾದ' ವೆಂಬ ಆನೆಯ ವಿಷಮ ಯುದ್ಧವು ನಡೆಯಿತು; ಕಡೆಯಲ್ಲಿ ರಾಣಾನ ಆನೆಯ ಮಾವುತನು ನಿಹತನಾದನು. ಮೊಗಲರ ರಾವುತನು ರಾಮಪ್ರಸಾದದ ಮೇಲೆ ಕುಳಿತು, ಅದನ್ನು ತನ್ನ ಕೈವಶಮಾಡಿಕೊಂಡನು, ಈ ಮೇರೆಗೆ ಆನೆ-ಆನೆಗಳಲ್ಲಿ ಬಹು ಕಾಲದ ವರೆಗೆ ಯುದ್ಧವು ನಡೆದಿತ್ತು ಪ್ರತಾಪನು ತನ್ನ ಅವಿರತ ಅಸಿಸಂಚಾಲನದಿಂದ ಶತ್ರುಗಳನ್ನು ನಾಶಮಾಡುತ್ತಲಿದ್ದನು. ರಜಪೂತರ ಕೈಯಿಂದ ಮೊಗಲರೂ, ಮೊಗಲರ ಹಸ್ತದಿಂದ ರಜಪೂತರೂ ಭೂಮಿ-ಶಾಯಿಗಳಾಗುತ್ತಲಿದ್ದರು. ಕ್ರಮವಾಗಿ ಬಾಣಗಳ ಮಳೆಯಿಂದ ಆ ಸ್ಥಳವು ಭೀಷಣ ಆಕಾರವನ್ನು ಧರಿಸಿತು.× ರಜಪೂತರಿಗೆ ಪ್ರತಾಪನ ಜೀವರಕ್ಷಣೆಯ ಆಶೆಯು ಉಳಿಯಲಿಲ್ಲ. ಪ್ರತಾಪನು ಇಡೀ ದಿವಸ ಯುದ್ಧಮಾಡಿ ಬಹಳವಾಗಿ ದಣಿದವನೂ, ಶಕ್ತಿರಹಿತನೂ ಆಗಿದ್ದನು. ಕ್ರಮವಾಗಿ ಅವನು ನಿರ್ವಿಣ್ಣನಾಗುತ್ತ ನಡೆದನು. ಈ ಮೊದಲೇ ಇವನ ಶರೀರದಲ್ಲಿ ಮೂರು ಬರ್ಚಿಯ ಗಾಯಗಳೂ, ಮೂರು ಕತ್ತಿಯ ಗಾಯಗಳೂ, ಒಂದು ಬಾಣದ ಗಾಯವೂ ಆಗಿದ್ದವು. ಈ ಏಳೂ ಗಾಯಗಳಿಂದ ರಕ್ತ-ಪ್ರವಾಹವು ಒಂದೇ ಸವನೆ ಹರಿಯುತ್ತಲಿತ್ತು.§ ರಜಪೂತಶಲ್ಲಿಯ ಮುಖ್ಯ ವೀರರು ನಿಹತರಾಗಿಹೋಗಿದ್ದರು; ರಜಪೂತ ಸೈನಿಕರು ಹೀನಬಲರಾಗಿದ್ದರು. ಈ ಸ್ಥಿತಿಯಲ್ಲಿ ಪ್ರತಾಪನ ಪ್ರಾಣರಕ್ಷಣೆಯ ಆಶೆಯೆಲ್ಲಿ?

ದೇಲವಾರದ ಅಧಿಪತಿಯಾದ ವೀರಶ್ರೇಷ್ಠ ಮಾನ್ನಾನು ದೂರದಿಂದ ಇದನ್ನು ನೋಡಿದನು; ಇವನು ತನ್ನ ಪ್ರಾಣವನ್ನು ಕೊಟ್ಟು, ಮಹಾರಾಣಾನ

---

* "Man Singh springing into the place of the elephant driver, exhibited such intrepidity as surpasses all imagination." Badaoni II 238.

× There was a market of life-taking and life-surrendering A N III 245.

§ Rajasthan, Vol I, P. 275 note.

ಪ್ರಾಣರಕ್ಷಣೆ ಮಾಡುವ ಪ್ರತಿಜ್ಞೆಯನ್ನು ಮಾಡಿದನು; ಮತ್ತು ತೀವ್ರವೇ ತನ್ನ ಝಾಲಾ ಸೈನಿಕರನ್ನು ಕರೆದುಕೊಂಡು ಮುಂದುವರಿದನು. ಪ್ರತಾಪನು ಹಿಂದಕ್ಕೆ ತಿರುಗಿ ನೋಡಿದನು; ರಜಪೂತ ಸೈನಿಕರು ವೀರವಿಕ್ರಮದಿಂದ ಜಯ-ನಿನಾದ ವನ್ನು ಮಾಡುತ್ತ ಮೊಗಲರನ್ನು ಮುತ್ತಿದ್ದರು. ಮುಹೂರ್ತಮಧ್ಯದಲ್ಲಿ ರಾಜಪುತ್ರರ ರಾಜಛತ್ರವು ಮಾನ್ನಾನ ಮಸ್ತಕವನ್ನಲಂಕರಿಸಿತು; ರಜಪೂತರ ರಕ್ತಪತಾಕೆಯು ಝಾಲಾ ಸೈನಿಕರ ಮುಂಭಾಗದಲ್ಲಿ ಕಾಣಹತ್ತಿತು. ಅತ್ಯಲ್ಪಕಾಲದಲ್ಲಿ ಈ ಯಾವತ್ತು ಕಾರ್ಯವನ್ನು ಮಾಡಿದ್ದಾಯಿತು ಮೊಗಲರು ಮಾನ್ನಾನನ್ನೇ ಮಹಾರಾಣಾನೆಂದು ಭಾವಿಸಿದರು; ಮತ್ತು ಅವನನ್ನು ಕೊಲ್ಲುವದಕ್ಕಾಗಿ ಪ್ರತಾಪನನ್ನು ಬಿಟ್ಟು, ಆ ಕಡೆಗೆ ನಡೆದರು. ಮಾನ್ನಾನು ರಾಣಾನ ಜೀವವನ್ನುಳಿಸುವದಕ್ಕಾಗಿ ತನ್ನ ಪ್ರಾಣವನ್ನು ಬಲಿಯಾಗಿ ಕೊಟ್ಟಿದ್ದನು, ಅವನ ಅನುಚರರಲ್ಲಿ ಒಬ್ಬನೂ ಉಳಿದಿರಲಿಲ್ಲ; ಎಲ್ಲರೂ ರಣ-ಯಜ್ಞಕ್ಕೆ ಆಹುತಿಯಾಗಿದ್ದರು. ಮಹಾಪ್ರಾಣನಾದ ಈ ಮಾನ್ನಾನ ಅದ್ಭುತವಾದ ಆತ್ಮಯಜ್ಞದ ಕಥೆಯು, ರಾಜಸ್ಥಾನದ ವೀರಗಾಥೆಯಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ.*

ಪ್ರತಾಪನು ನೋಡಿದನು—ಮಧ್ಯಾಹ್ನ ಕಾಲವಾಗಿತ್ತು;√ ರಜಪೂತರಲ್ಲಿಯ ಅಧಿಕಾಂಶ ಜನರು ಮರಣಹೊಂದಿದ್ದರು; ಇನ್ನು ಜಯದ ಯಾವ ಆಶೆಯೂ ಇರಲಿಲ್ಲ. ಪ್ರತಾಪನು ತನ್ನ ಉಳಿದ ಅನುಚರರಿಗೆ ಅವಶ್ಯವಿರುವ ಆಜ್ಞೆಯನ್ನಿತ್ತು, ವಿಷಣ್ಣಮುಖನೂ, ಅವಸನ್ನದೇಹನೂ ಆಗಿ, ಯುದ್ಧಭೂಮಿಯಿಂದ ಹೊರಟು ಹೋದನು. ಹಳದೀಘಟ್ಟದ ಯುದ್ಧವು ಮುಗಿಯಿತು; ಮಾನಸಿಂಹನ ಅಭೀಷ್ಟವು ಪೂರ್ಣವಾಯಿತು; ಮೊಗಲ ಶಿಬಿರದಲ್ಲೆಲ್ಲಿ ನೋಡಿದರೂ ಜಯೋಲ್ಲಾಸವು ತುಂಬಿಕೊಂಡಿತು; ಇಂದು ಮೊಗಲರು ಜಯಶಾಲಿಗಳಾಗಿ ಆನಂದ-ಸಾಗರದಲ್ಲಿ ಮುಳುಗಿಹೋಗಿದ್ದಾರೆ. ಹೀಗಿದ್ದರೂ ಹಳದೀಘಟ್ಟದ ಯುದ್ಧದಲ್ಲಿ ರಜ

* ಪ್ರತಾಪನು ಮಾನ್ನಾನ ಆತ್ಮತ್ಯಾಗದ ಕಥೆಯನ್ನೆಂದೂ ಮರೆಯಲಿಲ್ಲ ಆ ದಿವಸದಿಂದ ಝಾಲಾ ಜನರು ಮೇವಾಡದ ರಾಜಪತಾಕೆಯನ್ನು ಹಿಡಿಯುವ ಅಧಿಕಾರವನ್ನು ಹೊಂದಿದರು. ಇವರಿಗೆ ಸದ್ರಿಸಂಸ್ಥಾನವು ಇನಾಮಾಗಿ ಕೊಡಲ್ಪಟ್ಟಿತು ಝಾಲಾಸರದಾರನು ರಾಜಧಾನಿಯಿಂದ ಹೊರಡುವ ಕಾಲಕ್ಕೆ, ಅರಮನೆಯ ಬಾಗಿಲದವರೆಗೆ ಇವನೊಡನೆ ನಗಾರಿಯನ್ನು ಬಾರಿಸುವದರ ಮುಂಖಾಂತರವಾಗಿ ಸನ್ಮಾನವನ್ನು ತೋರಿಸುತ್ತಿದ್ದರು.

√ ಈ ಯುದ್ಧವು ಪ್ರಾತಃಕಾಲದಿಂದ ಮಧ್ಯಾಹ್ನದವರೆಗೆ ಆಯಿತೆಂದು ಬದಾವುನಿಯು ಹೇಳಿದ್ದಾನೆ Lowe II, 239

ಪೂತರು ಸೋತರೋ, ಗೆದ್ದರೋ, ಎಂಬದನ್ನು ಪ್ರಕೃತದಲ್ಲಿ ಹೇಳಲಿಕ್ಕೆ ಬರುವಂತಿಲ್ಲ. ಗೌರವ-ವೃದ್ಧಿಯೂ, ಅಮರತ್ವ-ಲಾಭವೂ ವಿಜಯದ ಲಕ್ಷಣಗಳಾಗಿದ್ದಲ್ಲಿ, ರಜಪೂತರು ಸೋಲಲಿಲ್ಲವೆಂದು ಹೇಳಬಹುದು. ಗ್ರೀಸದೇಶದಲ್ಲಿ ಥರ್ಮಪಲಿಯು ಸಂಕೀರ್ಣವಾದ ಘಟ್ಟದ ಮಾರ್ಗದಲ್ಲಿ, ಮಹಾವೀರ ಲಿಯೋನಿಡಸನು ಅಲ್ಪ ಸಂಖ್ಯಾಕರಾದ ಗ್ರೀಕಯೋದ್ಧೃಗಳನ್ನು ತೆಗೆದುಕೊಂಡು, ಇರಾಣದ ಅರಸನ ವಿರಾಟ್ ಸೈನಿಕರೊಡನೆ ಯುದ್ಧಮಾಡಿ, ಆತ್ಮಯಜ್ಞದಿಂದ ಜಗತ್ತಿನ ಇತಿಹಾಸದಲ್ಲಿ ಅಮರನಾಗಿದ್ದಾನೆ, ಅಂತೆಯೇ ಹಳದೀಘಟ್ಟದ ಸಂಕೀರ್ಣ ಮಾರ್ಗದಲ್ಲಿ ಹದಿನಾಲ್ಕು ಸಾವಿರ ರಜಪೂತವೀರರು ಮತ್ತು ಆತ್ಮಯಜ್ಞದ ಉತ್ತಮ ಉದಾಹರಣೆಯನ್ನು ತೋರಿಸಿ, ಅಮರರಾಗಿ ಉಳಿದಿದ್ದಾರೆ †

# ತ್ರಯೋದಶ ಪರಿಚ್ಛೇದ.

## ಶಕ್ತಸಿಂಹ.

ಕಿಂ ಕರೋತಿ ನರಃ ಪ್ರಾಜ್ಞಃ ಪ್ರೇರ್ಯಮಾಣಃ ಸ್ವಕರ್ಮಣಾ |
ಪ್ರಾಗೇವ ಹಿ ಮನುಷ್ಯಾಣಾಂ ಬುದ್ಧಿಃ ಕರ್ಮಾನುಸಾರಿಣೀ || ೧ ||

ಸಮಯೋಚಿತ ಪದ್ಯಮಾಲಿಕಾ

ಪ್ರತಾಪನು ಯುದ್ಧಭೂಮಿಯನ್ನು ಬಿಟ್ಟು, ಏಕಾಕಿಯಾಗಿ ದಕ್ಷಿಣಾಭಿಮುಖನಾಗಿ ಹೊರಟನು. ದೂರದಿಂದ ಈರ್ವರು ಮೊಗಲಸೈನಿಕರು ಇವನನ್ನು ನೋಡಿದರು; ಹಿಡಿಯುವದಕ್ಕಾಗಿ ಬೆನ್ನುಹತ್ತಿದರು, ಯಾಕಂದರೆ ಪ್ರತಾಪನನ್ನು ಹಿಡಿದುಕೊಟ್ಟ

† ಹಳದೀಘಟ್ಟದ ಭಯಂಕರ ಯುದ್ಧದಲ್ಲಿ ರಜಪೂತರ ೨೨ ಸಾವಿರ ಜನರಲ್ಲಿ ಸುಮಾರು ೧೪ ಸಾವಿರ ಜನರು ಮಡಿದರೆಂದು ಟಾಡ್ ಸಾಹೇಬರು ಹೇಳಿದ್ದಾರೆ ಇವರಲ್ಲಿ ಪ್ರತಾಪನ ಆತ್ಮೀಯರ ಸಂಖ್ಯೆಯು ಸುಮಾರು ೫೦೦ ಇತ್ತು ರಾಮಶಹನ ಮೂವರೂ ಮಕ್ಕಳು ಯುದ್ಧದಲ್ಲಿ ಮಡಿದರು. ತೋಮರವಂಶದ ೭೫೦ ಜನರು ಸತ್ತರು ಝಾಲಾ ಸರದಾರನ ೧೫೦ ಜನರು ಮೃತ್ಯುಮುಖದಲ್ಲಿ ಬಿದ್ದರು ಈ ಯುದ್ಧದಿಂದ ಮೇವಾಡದ ಪ್ರತಿಯೊಂದು ಪರಿವಾರದವರು ಶೋಕಗ್ರಸ್ತರಾದರು ಈ ಯುದ್ಧದಲ್ಲಿ ಶ್ರೇಷ್ಠವಾದ ೫೦೦ಜನರು ಮಡಿದರೆಂದೂ, ಇವರಲ್ಲಿ ೩೫೦ ಹಿಂದುಗಳು, ೧೫೦ ಮುಸಲ್ಮಾನರು ಇದ್ದರೆಂದೂ ಬದಾವನಿಯು ಹೇಳಿದ್ದಾನೆ.

ಲ್ಲಿ, ಇಲ್ಲವೆ ಕೊಂದಲ್ಲಿ ಬಾದಶಹನಿಂದ ಹೇರಳವಾದ ಬಹುಮಾನವು ದೊರೆಯುತ್ತಿತ್ತು. ಪ್ರತಾಪನು ದಣಿದವನೂ, ಗಾಯಾಳುವೂ ಆಗಿದ್ದನು; ಮೇಲಾಗಿ ಯುದ್ಧದ ಫಲವನ್ನೂ ಸ್ವದೇಶದ ಪರಿಣಾಮುವನ್ನೂ ಭಾವಿಸಿ, ಚಿಂತೆಯಿಂದಲೂ, ವಿಷಾದದಿಂದಲೂ ಮ್ರಿಯಮಾಣನಾಗಿದ್ದನು. ಕಾರಣ ಅವನಿಗೆ ಶಾರೀರಿಕ, ಮಾನಸಿಕ ವಿಶ್ರಾಂತಿಗಳ ಅವಶ್ಯಕತೆಯು ಬಹಳವಾಗಿತ್ತು. ಯುದ್ಧದಿಂದ ದಣಿದ ಚೈತಕವು ಬಹು ಗಾಯಪಟ್ಟಿದ್ದರೂ, ಸ್ವಾಮಿಯನ್ನು ತೆಗೆದುಕೊಂಡು ಓಡುತಲಿತ್ತು. ಇದು ಒಂದೇ ಹಾರಿಕೆಯಿಂದ ಒಂದು ಗಿರಿ-ನದಿ*ಯನ್ನು ದಾಟಿ, ಬೆನ್ನು ಹತ್ತಿಬರುವವರ ಕೈಯಿಂದ ಮಹಾರಾಣಾನ ರಕ್ಷಣೆಮಾಡಿತು; ಯಾಕಂದರೆ ರಾಣಾನನ್ನು ಹಿಡಿಯಲಿಕ್ಕೆ ಬರುತ್ತಿರುವವರ ಕುದುರೆಗಳು ಹಾರಿ ನದಿಯನ್ನು ದಾಟಲು ಸಮರ್ಥವಾಗಲಿಲ್ಲ. ಪ್ರತಾಪನು ಮತ್ತಿಷ್ಟು ಮುಂದೆ ಹೋದನು. ಹಿಂದಿನಿಂದ ಆರೋ ಒದರುವ ಧ್ವನಿಯು ಕೇಳಬಂದಿತು. ದೂರದಿಂದ ಯಾರೋ ಕೂಗಿದರು—“ಎಲೈ ನೀಲಿಯ ಕುದುರೆಯ ಸವಾರನೇ,” ಪ್ರತಾಪನು ಅಲ್ಲಿಯೇ ನಿಂತುಕೊಂಡನು. ಅಶ್ವಾರೋಹಿಯಾದ ಸೈನಿಕನೋರ್ವನು ತೀರವೇಗದಿಂದ ಇವನ ಕಡೆಗೆ ಬರುತ್ತಿದ್ದನು ಪ್ರತಾಪನು ಇವನನ್ನು ಗುರ್ತಿಸಿದನು—ಇವನು ತನ್ನ ತಮ್ಮನಾದ ಶಕ್ತಸಿಂಹನು.

ಶಕ್ತಸಿಂಹನು ಅಣ್ಣನನ್ನು ದ್ವೇಷಿಸಿ, ಮೊಗಲರನ್ನಾಶ್ರಯಿಸಿ, ಸ್ವದೇಶದ್ರೋಹಿಯಾದನೆಂದು ನಾವು ಹಿಂದೆ ಹೇಳಿದ್ದೇವೆ. ಇವನು ಹಳದೀಘಟ್ಟದ ಯುದ್ಧಭೂಮಿಯಲ್ಲಿ ಮಾನಸಿಂಹನ ಕೈಕೆಳಗೆ ಸೈನಿಕರ ಒಂದು ಗುಂಪಿಗೆ ಅಧಿಪತಿಯಾಗಿ, ಯುದ್ಧಮಾಡಿದನು. ಯುದ್ಧದ ಸಮಯದಲ್ಲಿ ತನ್ನ ಅಣ್ಣನಾದ ಪ್ರತಾಪಸಿಂಹನ ಅಸಾಧಾರಣ ವೀರತ್ವವನ್ನು ನೋಡಿ, ಇವನ ಮನಸಿನಲ್ಲಿ ನಿರ್ಮಲವಾದ ಭಕ್ತಿಯು ಹುಟ್ಟಿತು. ಅದರಿಂದ ಇವನು ಪ್ರತಾಪನ ವಿಷಯದಲ್ಲಿರುವ ಹಿಂದಿನ ದ್ವೇಷವನ್ನು ಮರೆತುಬಿಟ್ಟನು. ಇಬ್ಬರು ಮೊಗಲಸೈನಿಕರು ರಣಶ್ರಾಂತನಾದ ತನ್ನ ಅಣ್ಣನ ಬೆನ್ನು ಹತ್ತಿದ್ದನ್ನು ನೋಡಿ ಇವನು ಸುಮ್ಮನಿರದಾದನು. ಈ ವೇಳೆಯಲ್ಲಿ ಸೋದರಪ್ರೇಮವು ಉತ್ಪನ್ನವಾಯಿತು. ಅದರಿಂದ ಅವನು ಯಾವದೇ ರೀತಿಯಿಂದಾದರೂ ತನ್ನ ಅಣ್ಣನ ರಕ್ಷಣೆಮಾಡುವ ಮನಸುಮಾಡಿದನು. ಕಾರಣ

* ಈ ಗಿರಿ-ನದಿಯು ಸಾಬರಮತಿಯ ಒಂದು ಶಾಖೆಯು. ಈ ಶಾಖಾನದಿಯು ಕೋಟ್ರಾ ಪಟ್ಟಣದ ವರೆಗೆ ದಕ್ಷಿಣಕ್ಕೆ ಹರಿದು, ಮುಂದೆ ಮೂಲನದಿಯಲ್ಲಿ ಕೂಡಿಹೋಗಿದೆ.

ಅವನು ಅಗ್ರಜನ ಜೀವನರಕ್ಷಣೆಗಾಗಿ ವ್ಯಗ್ರಭಾವದಿಂದ ಮುಂದುವರಿದನು. ಇವನು ಗುರಿಯಿಟ್ಟು ಹೊಡೆದ ಬರ್ಚಿಗಳ ಪೆಟ್ಟಿನಿಂದ, ಆ ಇಬ್ಬರು ಸೈನಿಕರು ಮರಣವನ್ನು ಹೊಂದಿದರು. ತರುವಾಯ ಇವನು ಪ್ರತಾಪನನ್ನು ಕರೆದನು. ಅಣ್ಣತಮ್ಮಂದಿರ ಮಿಲನವಾಯಿತು. ಶಕ್ತಸಿಂಹನು ಭಕ್ತಿ-ಪ್ರೇಮ-ಪೂರ್ಣವಾದ ಹೃದಯದಿಂದ ಪ್ರತಾಪನ ಕಾಲ್ಗೆರಗಿದನು; ಮೊದಲು ಮಾಡಿದ ಅಪರಾಧಕ್ಕಾಗಿ ಸಜಲ-ನಯನನಾಗಿ ಕ್ಷಮೆಯನ್ನು ಬೇಡಿಕೊಂಡನು. ಈ ಆನಂದದ ಪ್ರಸಂಗದಲ್ಲಿ ಪ್ರತಾಪಸಿಂಹನು ಹಳದೀಘಟ್ಟದ ಪರಾಜಯದ ಸಂಗತಿಯನ್ನು ಕ್ಷಣಕಾಲದ ವರೆಗೆ ಮರೆತುಬಿಟ್ಟನು, ಅವನ ಮನಸಿನಲ್ಲಿ ಅಭೂತಪೂರ್ವ ಆನಂದದ ಸಂಚಾರ ವಾಯಿತು. ಮಧ್ಯಾಹ್ನದಲ್ಲಿ ಹಳದೀಘಟ್ಟದಲ್ಲಿ ಮೊಗಲರು ಜಯಪಡೆದರು—ಸಾಯಂಕಾಲದಲ್ಲಿ ಗಿರಿ-ಪಥದಲ್ಲಿ ಭ್ರಾತೃಸ್ನೇಹವು ಜಯಶಾಲಿಯಾಯಿತು.

ಆದರೆ ಅಕಸ್ಮಾತ್ತಾಗಿ ಒದಗಿದ ಒಂದು ದುರ್ಘಟನೆಯು ಈ ಆನಂದದ ಸಮ್ಮಿಲನವನ್ನು ನಿರಾನಂದವನ್ನಾಗಿ ಮಾಡಿಬಿಟ್ಟಿತು. ಪ್ರತಾಪನ ಪ್ರೀತಿಯ ಕುದುರೆಯು—ಅವನನ್ನು ರಣಕ್ಷೇತ್ರದಲ್ಲಿಯೂ, ಗಿರಿ-ಪಂಥಾನದಲ್ಲಿಯೂ ರಕ್ಷಿಸಿದ ಅಶ್ವವು ಇಡೀ ದಿವಸದ ಶ್ರಮದಿಂದ ಅತ್ಯಂತ ದಣಿದಿದ್ದಿತು; ಯಜಮಾನನಂತೆ ಅದೂ ಅನೇಕ ಗಾಯಗಳನ್ನು ಹೊಂದಿ ದುರ್ಬಲವಾಗುತ್ತ ನಡೆದಿದ್ದಿತು, ಅಣ್ಣ ತಮ್ಮಂದಿರು ಸಂತೋಷದಿಂದ ಮಾತಾಡುತ್ತಿರುವಾಗ, ಚೈತಕವು ಧರಾಶಾಯಿ ಯಾಗಿ ಪ್ರಾಣಬಿಟ್ಟಿತು. ಪ್ರತಾಪನು ಈ ಪ್ರಭುಭಕ್ತವಾದ ರಣತುರಂಗದ ಮೃತ್ಯು ವನ್ನು ನೋಡಿ, ಕಣ್ಣೀರು ತಡೆಯಲು ಸಮರ್ಥನಾಗಲಿಲ್ಲ. ಈಗಿರುವ ಜಾರೋಲದ ಬಳಿಯಲ್ಲಿ ಕುದುರೆಯು ಸತ್ತಿತು. ಈ ಸ್ಥಳದಲ್ಲಿ ಪ್ರತಾಪನ ಅಪ್ಪಣೆಯಂತೆ ಕುದುರೆಯ ಸ್ಮಾರಕಕ್ಕಾಗಿ ಒಂದು ದೊಡ್ಡ ವೇದಿಕೆಯು ನಿರ್ಮಿತವಾಗಿದೆ.* ಇದಕ್ಕೆ ಈಗ 'ಚೈತಕಕಾ ಚಾಬುತ್ರಾ' ಎಂದೆನ್ನುವರು. ಈಗಲೂ ಮೇವಾಡದ ಪ್ರತಿಮನೆಯಲ್ಲಿರುವ ಪ್ರತಾಪನ ಚಿತ್ರದೊಡನೆ, ಈ ಕುದುರೆಯ ಚಿತ್ರವನ್ನು ನೋಡಬಹುದಾಗಿದೆ.

---

* Rajasthan Vol I P. 276 note ರಜಪೂತಸ್ಥಾನದ ನಕಾಶದಲ್ಲಿ ಜಾಲೋರವು ಗೋಗುಂಡಾದಿಂದ ದಕ್ಷಿಣಕ್ಕೆ ಸುಮಾರು ೧೦-೧೫ ಮೈಲುಗಳ ಮೇಲಿದ್ದುದನ್ನು ನೋಡಬಹುದಾಗಿದೆ

ಶಕ್ತಸಿಂಹನು ಈ ಸ್ಥಳದಲ್ಲಿ ಬಹುಕಾಲದವರೆಗೆ ನಿಲ್ಲುವಂತಿರಲಿಲ್ಲ; ಯಾಕಂದರೆ ಇದನ್ನು ಮೊಗಲ ಸೇನಾಪತಿಯು ನೋಡಿದನಾದರೆ, ಇಲ್ಲವೆ ಯಾರಿಂದಾದರೂ ತಿಳಿದರೆ, ಶಿಕ್ಷೆಗೊಳಗಾಗಬೇಕಾದೀತೆಂಬ ಭಯವಿದ್ದಿತು. ಕಾರಣ ಇವನು ತನ್ನ ಕುದುರೆಯನ್ನು ಪ್ರತಾಪನಿಗೆ ಕೊಟ್ಟು, ಭಕ್ತಿಭಾವದಿಂದ ನಮಸ್ಕಾರಮಾಡಿ, ನಿರೋಪವನ್ನು ಪಡೆದು, ಹೊರಟುಹೋದನು. ಇವನು ಹೋಗುವ ಮುಂದೆ, ಅನುಕೂಲತೆಯೊದಗಿದಲ್ಲಿ ತೀವ್ರವೇ ಪುನಃ ದರ್ಶನ ತೆಗೆದುಕೊಳ್ಳುವೆನೆಂದು ಅಣ್ಣನ ಮುಂದೆ ಹೇಳಿಹೋದನು.

ಮುಂದೆ ತುಸು ದಿವಸಗಳಾದ ಮೇಲೆ, ಈ ಸಂಗತಿಯು ಪ್ರಕಾಶವಾಯಿತು. ಇದರಿಂದ ಮೊಗಲಸೇನಾಪತಿಯು ಶಕ್ತಸಿಂಹನ ಮೇಲೆ ಸಿಟ್ಟಾದನು. ಶಕ್ತನು ಇವನ ಅಪ್ಪಣೆಯಂತೆ ಮೊಗಲರ ಶಿಬಿರವನ್ನು ಬಿಟ್ಟು ಹೋಗಬೇಕಾಯಿತು. ಶಕ್ತನು ಈ ಅಪ್ಪಣೆಯನ್ನು ಹೊಂದಿ, ಹರ್ಷೋತ್ಫುಲ್ಲನಾಗಿ ತನ್ನ ಸೈನಿಕರೊಡನೆ ಹೊರಬಿದ್ದನು. ಈ ಸಮಯದಿಂದ ಶಕ್ತನ ಸುದಿನಗಳು ಪುನಃ ತಿರುಗಿದವು. ಅನರ್ಥಕರವಾದ ಭ್ರಾತೃದ್ವೇಷದ ವಶವರ್ತಿಯಾಗಿ ಮಹಾವೀರ ಶಕ್ತನು ಸ್ವದೇಶದ್ರೋಹಿಯಾಗಿದ್ದನು. ರಜಪೂತರ ಶಾಸ್ತ್ರದಲ್ಲಿ ಸ್ವದೇಶದ್ರೋಹಿಗಳಂತಹ ಪಾಪಿಗಳಾರೂ ಇಲ್ಲ, ಅಂದರೆ ದೇಶದ್ರೋಹವು ಮಹಾ ಪಾತಕವೆಂದೆಣಿಸಲ್ಪಡುತ್ತಿತ್ತು. ಈ ಪಾಪದಿಂದ ಪಾರಾಗುವದಕ್ಕಾಗಿ ಶಕ್ತಸಿಂಹನು ಆನಂದದಿಂದ ಮೊಗಲರ ಪಕ್ಷವನ್ನು ತ್ಯಜಿಸಿದನು. ಪುನರ್ಮಿಲನದ ಸಮಯದಲ್ಲಿ ಮಹಾರಾಣಾನಿಗೆ ಯಾವದಾದರೊಂದು ಉಪಯುಕ್ತ ನಜರಾಣಿಯನ್ನು ಕೊಡಬೇಕೆಂದು ಶಕ್ತಸಿಂಹನಿಗೆ ಇಚ್ಛೆಯಾಯಿತು. ಕಾರಣ ಅವನು ಹಾದಿಯಲ್ಲಿರುವ ವಾಯಿನಸ್ರೋರ ದುರ್ಗವನ್ನು ಮುತ್ತಿ, ಅದನ್ನು ವಶಮಾಡಿಕೊಂಡನು; ಮತ್ತು ಅದನ್ನು ಪ್ರತಾಪನಿಗೆ ಕಾಣಿಕೆಯಾಗಿ ಕೊಟ್ಟನು.§ ಪ್ರತಾಪನು ತಮ್ಮನ ಈ ಕಾರ್ಯದಿಂದ ಸಂತುಷ್ಟನಾಗಿ, ಈ ಕೋಟೆಯನ್ನು ವಂಶಪರಂಪರೆಯಾಗಿ ಭೋಗಿಸುವದಕ್ಕಾಗಿ ಶಕ್ತ

§ ವಾಯಿನಸ್ರೋರ ದುರ್ಗವು ಮೇವಾಡದ ಪೂರ್ವಸೀಮಾಂತದಲ್ಲಿ ಬ್ರಾಹ್ಮಣೀ ಮತ್ತು ಚಂಬಳನದಿಗಳ ಸಂಗಮ ಸ್ಥಳದಲ್ಲಿದೆ. ಈ ಸ್ಥಳದ ಪೌರ್ವಾತ್ಯ ಸೌಂದರ್ಯವು ಅತುಲ ರಮಣೀಯವಾಗಿದೆ ಟಾಡ್‌ಸಾಹೇಬರು ಇದರ ವಿಶೇಷ ವಿವರಣೆಯನ್ನು ಕೊಟ್ಟಿದ್ದಾರೆ Rajasthan, Vol. 11 Personal narratives PP. 558-566. ಈ ದುರ್ಗವು ಈಗ ಕೋಟಾ ಏಜೆನ್ಸಿಯಲ್ಲಿದೆ.

ಸಿಂಹನಿಗೆ ತಿರುಗಿ ಕೊಟ್ಟನು ಆ ಕಾಲದಿಂದ ಮನಮೋಹನವಾದ ವಾಯಿನ ಸ್ರೋರದುರ್ಗವು ಶಕ್ತನ ವಂಶಜರ ಅಥವಾ ಶಕ್ತಾಯತ್ ಜನರ ಆವಾಸಸ್ಥಾನ ವೆಂದು ನಿರ್ದಿಷ್ಟವಾಗಿದೆ.

ರಾಜಮಾತೆಯು ತನ್ನ ಮಕ್ಕಳಲ್ಲಿ ಶಕ್ತಸಿಂಹನನ್ನು ವಿಶೇಷವಾಗಿ ಪ್ರೀತಿಸುತ್ತಿದ್ದಳು ಅದರಿಂದವಳು, ಶಕ್ತನು ವಾಯಿನ್‌ಸ್ರೋರ ದುರ್ಗದಲ್ಲಿ ವಾಸಮಾಡ ಹತ್ತಿದ ಬಳಿಕ, ಇಲ್ಲಿಗೆ ಬಂದು, ಶಕ್ತನ ಸಂಸಾರದ ವ್ಯವಸ್ಥೆಯನ್ನು ನೋಡಹತ್ತಿದಳು. ಮೇವಾಡದ ರಾಜಮಾತೆಗೆ ' ಬಾಯಿಜಿರಾಜ ' ಎಂದೆನ್ನುತ್ತಿದ್ದರು. ಅದರಿಂದ ಶಕ್ತಾಯತ್ ಕುಲದ ಮಾತೆಯರು ಬಹು ದಿವಸಗಳ ವರೆಗೆ ಈ ಹೆಸರಿನಿಂದ ಪರಿಚಿತರಾಗಿದ್ದರು. ಶಕ್ತನ ಆಗಮನದಿಂದ ಪ್ರತಾಪನ ಬಲವು ಬೆಳೆಯಿತು; ' ಚಂದಾಯತ್ ' ರಜಪೂತರಂತೆ ' ಶಕ್ತಾಯತ್ ' ರಜಪೂತರಾದರೂ ವೀರಶ್ರೇಷ್ಠರಲ್ಲಿ ಅಗ್ರಣಿಗಳಾದರು. ಶಕ್ತಸಿಂಹನು ಖುರಾಸನ ಮತ್ತು ಮುಲತಾನ ಸೈನಿಕರೀರ್ವರನ್ನು ಕೊಂದು, ಅಣ್ಣನನ್ನು ಸಂರಕ್ಷಿಸಿದ್ದರಿಂದ, ಇವನ ವಂಶಜರೆಲ್ಲರು " ಖುರಾಸಾನೀ ಮುಲತಾನೀಕಾ ಅಗ್ಗಲ " (ಅರ್ಗಲ ಅಥವಾ ಪ್ರತಿರೋಧಕಾರಿ) ಎಂಬ ಹೆಸರಿನಿಂದ ಪ್ರಸಿದ್ಧರಾದರು.

# ಚತುರ್ದಶ ಪರಿಚ್ಛೇದ.

## ಸಮರ-ಲೀಲಾ.

ಕುಟಿಲತರ ಯುದ್ಧಮಾರ್ಗವು । ದಿಟಮಾದೊಡೆ ಶೂರಜನಕ ಯೋಗ್ಯಂ ಸಲೆ ಸಂ ॥
ಕಟದಲಿ ಚರಿಪುದು ಪೊಡವಿಪ । ರಾಟವು ವಾರಾಂಗನೇವ ಬಹುವಿಧರೂಪಂ ॥ ೧॥

ಹಳದೀಘಟ್ಟದ ಯುದ್ಧವು ಆಷಾಢಮಾಸದ ಪ್ರಥಮ ಭಾಗದಲ್ಲಾಯಿತು. ಈ ಸಮಯದಲ್ಲಿ ಭೀಷಣವಾದ ಗ್ರೀಷ್ಮಕಾಲವಿದ್ದಿತು. ಅದರಲ್ಲಿಯೂ ಯುದ್ಧವು ಸಮಾಪ್ತವಾದಾಗ—ಮಧ್ಯಾನ್ಹದ ಎರಡು ಗಂಟೆಯ ಸುಮಾರಕ್ಕೆ ರವಿಯು ತಾಪದಿಂದ ಪರ್ವತದ ಪ್ರದೇಶವು ಬೆಂಕಿಯಂತೆ ಸುಡುತಲಿದ್ದಿತು. ಮಹಾರಾಣಾನ ಸೈನಿಕರಲ್ಲಿ ಜೀವದಿಂದುಳಿದವರು ಅಲ್ಪಕಾಲದಲ್ಲಿ ತಮ್ಮ ಚಿರಪರಿಚಿತವಾದ ಗುಡ್ಡಗಾಡು ಪ್ರದೇಶದಲ್ಲಿ ಅಡಿಗಿಹೋದರು; ಮೊಗಲ ಸೈನಿಕರು ಬಹಳವಾಗಿ ದಣಿದವರೂ, ಶಕ್ತಿಗುಂದಿದವರೂ ಆದುದರಿಂದವರು ಇಂತಹ ಭೀಷಣಪ್ರಖರತೆಯ ಕಾಲ

ದಲ್ಲಿ ಅಪರಿಚಿತವಾದ ಗಿರಿ-ಪಥವನ್ನು ಪ್ರವೇಶ ಮಾಡಲು ಸಾಹಸಿಗಳಾಗಲಿಲ್ಲ. ಮೊಗಲರು ಘಟ್ಟದ ಮಾರ್ಗವನ್ನು ಪ್ರವೇಶಿಸದಿರಲಿಕ್ಕೆ ಬೇರೊಂದು ಕಾರಣವೂ ಇದ್ದಿತು. ಅದೇನಂದರೆ—ರಾಣಾನ ಸೈನಿಕರು ಕೌಶಲ್ಯದಿಂದ ಎಲ್ಲಿಯಾದರೂ ಅಡಗಿಕೊಂಡಿದ್ದು, ಅಕಸ್ಮಾತ್ತಾಗಿ ತಮ್ಮನ್ನೆಲ್ಲಿ ಆಕ್ರಮಿಸುವರೋ ಎಂಬ ಭೀತಿಯು ಅವರಿಗಿದ್ದಿತು. ಈ ಯಾವತ್ತು ಸಂಗತಿಗಳನ್ನು ವಿಚಾರಮಾಡಿ, ಮೊಗಲರು ರಜಪೂತರ ಬೆನ್ನುಹತ್ತಿ ಹೋಗದೆ, ಶಿಬಿರದಲ್ಲಿ ಆಶ್ರಯ ಹೊಂದಿದರು. ಹಳದೀಘಟ್ಟವು ಪರ್ವತ-ಪ್ರದೇಶದ ಬಾಗಿಲದಂತಿದ್ದಿತು. ಈ ಬಾಗಿಲನ್ನು ದಾಟಿಹೋದಲ್ಲಿ, ಅಲ್ಲಿ ಯಾವತರದ ವಿಪತ್ತೊದಗಬಹುದೆಂಬದನ್ನು ಹೇಳಲಿಕ್ಕೆ ಬರುವಂತಿದ್ದಿಲ್ಲ.

ಸಾಯಂಕಾಲದ ತರುವಾಯ ಮಾನಸಿಂಹನು ಗುಪ್ತಚಾರರನ್ನು ಕಳುಹಿಸಿ, ಎದುರಿನಲ್ಲಿರುವ ಮಾರ್ಗದ ಸಂಬಂಧವಾದ ಸಂಗತಿಗಳನ್ನು ಗೊತ್ತುಹಚ್ಚಿದನು. ಗುಪ್ತಚಾರರು ಆ ದಾರಿಯ ವಿಷಯವಾಗಿರುವ ಸಂಗತಿಗಳನ್ನು ಹೇಳಿದರು, ಆದರೆ ಆ ಅಂಕಡೊಂಕಾದ ಪರ್ವತಮಾಲೆಯ ಒಳಭಾಗದಲ್ಲಿ ರಜಪೂತರೆಲ್ಲಿ ಅಡಗಿಕೊಂಡಿರುವರು? ಅವರೆಷ್ಟು ಜನರಿರುವರು? ಅಥವಾ ಯಾರೂ ಅಡಗಿಲ್ಲವೇ? ಈ ಮೊದಲಾದ ಸಂಗತಿಗಳನ್ನು ಅವರಿಂದ ತಿಳಿಯುವದಾಗಲಿಲ್ಲ. ಮಾನಸಿಂಹನು ಪ್ರಾತಃಕಾಲದಲ್ಲೆದ್ದು, ಮೊದಲು ಯುದ್ಧಭೂಮಿಯನ್ನು ಅವಲೋಕಿಸಿದನು; ತರುವಾಯ ಸೈನಿಕರೊಡನೆ ಘಟ್ಟದ ಮಾರ್ಗವನ್ನು ಪ್ರವೇಶಿಸಿದನು. ಎರಡು ಪ್ರಹರಗಳಾಗುವದಕ್ಕಿಂತ ಮೊದಲೇ ಇವರು ಗೋಗುಂಡವನ್ನು ಮುಟ್ಟಿದರು; ಆದರೆ ಗಿರಿ-ಶಿಖರದಲ್ಲಿರುವ ಸುಂದರವಾದ ಈ ಗೋಂಗುಡ ನಗರವು ಇಂದು ಜನಶೂನ್ಯವಾಗಿದ್ದಿತು; ಮೊಗಲರ ಭೀತಿಯಿಂದ ಯಾವತ್ತು ಜನರು, ನಗರವನ್ನು ಬಿಟ್ಟು ಹೋಗಿದ್ದರು; ಕೆಲವು ಜನ ರಜಪೂತವೀರರು ಮಾತ್ರ ಪ್ರಹರಿಗಳಂತೆ ಅಲ್ಲಿರುವ ಮಂದಿರಗಳ ರಕ್ಷಣೆಗಾಗಿಯೂ, ಕೋಟೆಯ ಸಂರಕ್ಷಣೆಗಾಗಿಯೂ ವಾಸಮಾಡಿದ್ದರು. ಇವರು ಅತಿಸ್ವಲ್ಪ ಜನರಾಗಿದ್ದರೂ, ಹಿಂದೂವೀರರ ಚಿರಾನುಗತ ಮಾರ್ಗವನ್ನವಲಂಬಿಸಿ, ದುರ್ಗರಕ್ಷಣೆಯ ಸಲುವಾಗಿ ಜೀವವಿರುವವರೆಗೆ ಯುದ್ಧಮಾಡಿದರು. ಅನಾಯಾಸವಾಗಿ ಗೋಗುಂಡ ನಗರವು ಮಾನಸಿಂಹನ ವಶವಾಯಿತು; ಆದರೆ ಮಾನಸಿಂಹನು ನಿರಾಪದನಾಗಲಿಲ್ಲ; ಯಾಕಂದರೆ ರಾಣಾನು ರಾತ್ರಿಯ ಸಮಯದಲ್ಲಿ ಅಕಸ್ಮಾತ್ತಾಗಿ ತಮ್ಮ ಮೇಲೆ ಬಿದ್ದು, ಎಲ್ಲಿ ಸಂಕಟಕ್ಕೊಳಗು ಮಾಡುವನೋ ಎಂಬ ಭೀತಿಯು ಸರ್ವರಿಗೂ ಉಂಟಾಯಿತು. ಕಾರಣ ಮೊಗ

ಲರು ಕೆಲವು ದಿವಸಗಳಲ್ಲಿ ಪಟ್ಟಣದ ನಾಲ್ಕೂ ಕಡೆಯಲ್ಲಿ ಕಂದಕವನ್ನು ತೋಡಿಸಿ ಎತ್ತರವಾದ ಗೋಡೆಯನ್ನು ಕಟ್ಟಿಸಿದರು. ರಜಪೂತರ ಕುದುರೆಗಳು ಹಾರಿ, ಒಳಗೆ ಪ್ರವೇಶ ಮಾಡಲಿಕ್ಕೆ ಬರಬಾರದೆಂಬದು ಮೊಗಲರ ಉದ್ದೇಶವಾಗಿತ್ತು. ತರುವಾಯ ಮೊಗಲರು ತುಸುಮಟ್ಟಿಗೆ ಶಾಂತರಾದರು; ಮತ್ತು ಯುದ್ಧದಲ್ಲಾದ ಲಾಭ-ಹಾನಿಗಳ ಲೆಕ್ಕವನ್ನು ನೋಡಹತ್ತಿದರು. ಬಾದಶಹನಿಂದ ಕಳುಹಿಸಲ್ಪಟ್ಟ ಮಹಮ್ಮದಖಾನನೆಂಬುವವನು ಬಂದು, ಯುದ್ಧದ ಯಾವತ್ತು ಸಂಗತಿಗಳನ್ನು ತಿಳಿದುಕೊಂಡು ಹೋದನು ಕಡೆಯಲ್ಲಿ ಮಾನಸಿಂಹನು ಐತಿಹಾಸಿಕ ಅಬ್ದುಲಖಾದಿರ ಬದಾವುನಿಯ ಕೈಯಲ್ಲಿ ಯುದ್ಧದ ಯಾವತ್ತು ವಿವರಣೆಯನ್ನೂ, ಸುಲಿಗೆಯಲ್ಲಿ ದೊರೆತ ಪದಾರ್ಥಗಳನ್ನೂ ಕೊಟ್ಟು, ಉಪಯುಕ್ತವಾದ ಸೈನ್ಯದೊಡನೆ ಅವನನ್ನು ಬಾದಶಹನ ಬಳಿಗೆ ಕಳುಹಿಸಿಕೊಟ್ಟನು,‡ ಮತ್ತು ರಣಭೂಮಿಯಲ್ಲಿ ಹಸ್ತಗತವಾದ ಮಹಾರಾಣಾನ ರಾಮಪ್ರಸಾದವೆಂಬ ಆನೆಯನ್ನು ಬದಾವುನಿಯೊಡನೆ ಕಳಿಸಿದನು ಮಾನಸಿಂಹನು ಸ್ವತಃ ಮೋಹಾನೀ ನಗರದವರೆಗೆ ಬದಾವುನಿಯೊಡನೆ ಹೋದನು.† ಬೇಟೆಯಾಡುವ ನೆವದಿಂದ ಹೋಗಿ, ಬೇರೆ ಬೇರೆ ಕಡೆಯಲ್ಲಿ ಪ್ರಹರಿಗಳನ್ನು ನಿಯಮಿಸಿಬರುವದು ಮಾನಸಿಂಹನ ಉದ್ದೇಶವಾಗಿತ್ತು. ಬದಾವುನಿಯು ಬಾದಶಹನ ಬಳಿಗೆ ಹೋಗುತ್ತಿರುವಾಗ ಮಾರ್ಗದಲ್ಲಿ ಯುದ್ಧದ ವೃತ್ತಾಂತವನ್ನು ಜನರಲ್ಲಿ ಪ್ರಚಾರಮಾಡುತ್ತ ನಡೆದನು, ಆದರೆ ಯಾರೂ ಇವನು ಹೇಳುತ್ತಿರುವ ಸಂಗತಿಯನ್ನು ನಂಬಲಿಲ್ಲ,* ಯಾಕಂದರೆ ಪ್ರತಾಪನ ಪರಾಜಯದ ಸುದ್ದಿಯು ರಜಪೂತರೆಲ್ಲರಿಗೂ ಅಪ್ರಿಯವಾಗಿತ್ತು.

---

‡ ಬದಾವುನಿಯು ಬಾಹೋರ, ಮಂಡಲಗಡಗಳ ಮಾರ್ಗವಾಗಿ ಮೊದಲು ಅಂಬರಕ್ಕೆ ಹೋದನು ತರುವಾಯ ಫತ್ತೇಪುರಕ್ಕೆ ಹೋಗಿ ಬಾದಶಹನ ದರ್ಶನ ತಕ್ಕೊಂಡನು ಬಾದಶಹನು ಇವನನ್ನು ಬಹುರೀತಿಯಿಂದ ಗೌರವಿಸಿದನು.

† ಮೋಹಾನೀ ನಗರವು ಗೋಗುಂಡದಿಂದ ೨೦ ಕ್ರೋಶ ದೂರದಲ್ಲಿರುವದು. ಇದಕ್ಕೆ ಬದಾವುನಿಯು ಮೋಹಾನೀ ಎಂದೂ, ಬ್ಲಾಕ್‌ಮನ್ನನು ಮೋಹಿನೀ ಎಂದೂ, ಬೆವ್ಹರಿಜನು ಮೋಹಿ ಎಂದೂ ಹೇಳಿದ್ದಾರೆ Badaoni (Lowe) II 242-9. A. N. (Beveridge) III 274, Bloch 372, 383.

* Wherever we passed, the circumstance of the battle were published but the people would not credit our statements." Lowe II. P. 242.

ಹಳದೀಘಟ್ಟದ ಯುದ್ಧದ ತರುವಾಯ ಪ್ರತಾಪನು ದಕ್ಷಿಣಾಭಿಮುಖನಾಗಿ ಹೊರಟನೆಂದು ನಾವು ಹಿಂದೆ ಹೇಳಿದ್ದೇವೆ. ಇವನ ಸೈನಿಕರೂ ಕ್ರಮವಾಗಿ ಈ ಪ್ರದೇಶದಲ್ಲಿ ಕೂಡುತ್ತ ನಡೆದರು. ರಜಪೂತರಲ್ಲಿಯ ಅಸಂಖ್ಯಜನರು ಯುದ್ಧ ಭೂಮಿಯಲ್ಲಿ ಮಡಿದಿದ್ದರೂ, ಅವರು ನಾಮಶೇಷರಾಗಿರಲಿಲ್ಲ; ಇದ್ದ ಅಲ್ಪ ಜನರು ಮೊಗಲರಿಗೆ ಹೆದರಲಿಲ್ಲ. ಮೇವಾಡದ ಆಬಾಲ-ವೃದ್ಧ-ವನಿತೆಯರೆಲ್ಲರೂ ಗುಡ್ಡು ಗಾಡು ಪ್ರದೇಶವನ್ನಾಶ್ರಯಿಸಿದ್ದರು. ಇವರೆಲ್ಲರೂ ಯುದ್ಧಮಾಡಲು ಸಿದ್ಧರಾಗಿದ್ದರು. ಪ್ರತಾಪನು ಇವರಲ್ಲಿಯ ಯೋಗ್ಯರಾದ ಜನರನ್ನಾರಿಸಿ, ಹೊಸ ಸೈನ್ಯವನ್ನು ನಿರ್ಮಾಣ ಮಾಡಿದನು; ಪುನಃ ಯುದ್ಧ ಮಾಡುವದಕ್ಕೆ ಪ್ರಸ್ತುತನಾದನು; ಆದರೆ ಈ ಸಾರೆ ಯುದ್ಧಮಾಡುವ ರೀತಿಯು ಬೇರೆತರದ್ದಾಗಿತ್ತು.

ಅಲ್ಪಸಂಖ್ಯಾಕರಾದ ಸೈನಿಕರನ್ನು ಕಟ್ಟಿಕೊಂಡು, ಶತ್ರುಗಳ ಅಸಂಖ್ಯ ಸೈನಿಕರೊಡನೆ ಯುದ್ಧ ಮಾಡಬೇಕಾಗಿದ್ದಲ್ಲಿ--ಎದುರಿಗೆ ನಿಂತು ಕಾಳಗವಾಡುವದು ಸರಿಯಾದ ಉಪಾಯವಲ್ಲ. ಈ ರೀತಿಯಾಗಿ ಯುದ್ಧಮಾಡಿದಲ್ಲಿ ಆ ಜನರ ಸರ್ವನಾಶವಾಗುವದು ನಿಶ್ಚಿತವು. ಕಾರಣ ಈ ತರದ ವಿಪತ್ತಿನ ಸಮಯದಲ್ಲಿ ಯುದ್ಧ ವ್ಯವಸಾಯಿಗಳು ಒಂದು ಕುಟಿಲ-ಯುದ್ಧದ ನಿರ್ಮಾಣ ಮಾಡುವರು. ಬೈಲು ಪ್ರದೇಶದಲ್ಲಿ ಈ ತರದ ಕೂಟಯುದ್ಧವನ್ನು ಮಾಡುವದು ದುಸ್ತರವು. ಯಾವದೇ ರೀತಿಯಿಂದಾಗಲಿ, ಕುಟಿಲ-ಕೌಶಲ್ಯದಿಂದ ಶತ್ರುಗಳ ನಾಶಮಾಡುವದು ಈ ಯುದ್ಧದ ಉದ್ದೇಶವು. ದುರ್ಬಲ ಪಕ್ಷದ ಸೈನಿಕರು ಗುಡ್ಡಗಾಡು ಪ್ರದೇಶದ ಬೇರೆ ಬೇರೆ ಸ್ಥಳಗಳಲ್ಲಿ ಅಡಗಿಕೊಂಡಿದ್ದು, ಶತ್ರುಗಳ ಮಾರ್ಗವನ್ನು ತಡೆಯುವರು; ಶತ್ರುಗಳ ಖಾದ್ಯಾದಿ ಪದಾರ್ಥಗಳೂ, ಸಹಾಯಕ ಸೈನ್ಯವೂ ಯುದ್ಧಭೂಮಿಗೆ ಮುಟ್ಟದಂತೆ—ಶತ್ರುಗಳಿಗೆ ದೊರೆಯದಂತೆ ಮಾಡುವರು; ಅಕಸ್ಮಾತ್ತಾಗಿ ವೈರಿಗಳ ಮೇಲೆ ಬಿದ್ದು, ಅವರ ದ್ರವ್ಯವನ್ನಪಹರಿಸುವರು; ಆದಷ್ಟು ತೀವ್ರ ಸಾಧ್ಯವಾದಷ್ಟು ಹಗೆಗಳ ನಾಶವನ್ನು ಮಾಡುವರು; ಮತ್ತು ಇದೆಲ್ಲವನ್ನು ಮಾಡಿ, ಕ್ಷಣಮಾತ್ರದಲ್ಲಿ ಪರ್ವತದ ಪ್ರದೇಶದಲ್ಲಿ ಅಡಗಿಹೋಗುವರು. ಈ ಜನರು ಸಮರಭೂಮಿಯಲ್ಲಿ ಎದುರಿಗೆ ನಿಂತು ಯುದ್ಧಮಾಡುವದನ್ನು ಎಂದೂ ಇಚ್ಛಿಸುವದಿಲ್ಲ. ಇದರ ಹೆಸರು ಕುಟಿಲ ಸಮರ-ಕಾರ್ಯವು (Guerrilla warfare). ಅನೇಕ ದೇಶಗಳಲ್ಲಿ ದುರ್ಬಲಪಕ್ಷದ ಜನರು ಈ ಮಾರ್ಗವನ್ನವಲಂಬಿಸಿದ್ದಾರೆ. ಮಹಾರಾಷ್ಟ್ರ ವೀರನಾದ ಶಿವಾಜಿಯು ಈ ಮಾರ್ಗವನ್ನವಲಂಬಿಸಿ, ಬಹು ವರ್ಷ

ಗಳವರೆಗೆ ಔರಂಗಜೇಬನಂತಹ ಪರಾಕ್ರಮಿಯಾದ ಬಾದಶಹನ ಅಸಂಖ್ಯ ಸೈನಿಕರನ್ನು ಎದುರಿಸಿ, ಅವರನ್ನು ಗೋಳಾಡಿಸಿ ಬಿಟ್ಟನು. ಶಿವಾಜಿಗಿಂತ ನೂರು ವರ್ಷ ಮೊದಲೇ ಪ್ರತಾಪಸಿಂಹನು ಈ ಮಾರ್ಗವನ್ನವಲಂಬಿಸಿ, ಸಾಮ್ರಾಟನಾದ ಅಕಬರನನ್ನು ಸಂಕಟದಲ್ಲಿ ಕೆಡವಿದನು. ಇದರಿಂದ ಪ್ರತಾಪಸಿಂಹನು ಅವಲಂಬಿಸಿದ ಯುದ್ಧ-ಮಾರ್ಗವು ಶಿವಾಜಿಯ ಆದರ್ಶಸ್ವರೂಪವಾಯಿತೆಂದು, ಸುಲಭವಾಗಿ ಹೇಳಬಹುದಾಗಿದೆ.

ಆದರೆ ಪ್ರತಾಪಸಿಂಹನು ಹಳದೀಘಟ್ಟದ ಯುದ್ಧದಲ್ಲಿ ಈ ಮಾರ್ಗವನ್ನವಲಂಬಿಸಲಿಲ್ಲ; ಯಾಕಂದರೆ ಇವನಿಗೆ ಮೊಗಲರ ಸಂಪೂರ್ಣಬಲವು ಗೊತ್ತಾಗಿರಲಿಲ್ಲ; ಅಂದರೆ ಮೊಗಲರ ಸೇನೆಯಷ್ಟು? ಅದು ಯಾವತರದ್ದಿರುವದು? ಈ ಮೊದಲಾದ ಯಾವತ್ತು ಸಂಗತಿಗಳು ಪ್ರತಾಪನಿಗೆ ತಿಳಿದಿರಲಿಲ್ಲ; ಕಾರಣ ಪ್ರತಾಪನು ಮೊಗಲರ ಎದುರಿಗೆ ನಿಂತು ಯುದ್ಧ ಮಾಡಿದನು. ಹೀಗೆ ಮಾಡುವದಕ್ಕೆ ಇನ್ನೊಂದು ಕಾರಣವೂ ಇದ್ದಿತು. ಅದೇನಂದರೆ ಗುಡ್ಡಗಾಡು ಪ್ರದೇಶವನ್ನು ಪ್ರವೇಶ ಮಾಡುವ ಮಾರ್ಗದಲ್ಲಿ, ಮೊಗಲರು ಸೋತದ್ದಾದರೆ, ಅವರು ಮುಂದೆ ಸಾಗಿಬರಲು ಎಂದೂ ಮನಸು ಮಾಡುವದಿಲ್ಲೆಂದು ಪ್ರತಾಪನು ಭಾವಿಸಿದ್ದನು. ಹೀಗಾಗಿದ್ದಲ್ಲಿ ಮೊಗಲರಿಗೆ ಪ್ರತಾಪನ ಭೀತಿಯು ಪೂರ್ಣವಾಗಿ ಉಳಿಯುತ್ತಿತ್ತು. ಪ್ರತಾಪನಲ್ಲಿ ಈ ತರದ ಕೆಲಸ ಮಾಡುವನೆಂಬ ಪೂರ್ಣ ವಿಶ್ವಾಸವಿದ್ದಿತು. ಯಾಕಂದರೆ ಅವನು ಕೂಡಿಸಿದ ಸೈನ್ಯವನ್ನು ನೋಡುತ್ತಿರಲು ಸೋಲುವ ಸಂಭವವಿರಲಿಲ್ಲ. ಅದರಿಂದವನು ತಾನು ಸೋಲುವೆನೆಂಬದನ್ನು ಎಷ್ಟು ಮಾತ್ರವೂ ಮನಸಿನಲ್ಲಿ ತಂದಿರಲಿಲ್ಲ. ಆದರೆ ದೈವಗತಿಯು ವಿಪರೀತವಾಗಿತ್ತು; ಅದರಿಂದದು ಪ್ರತಾಪನು—ಮಹಾವೀರನೂ, ಅಸಂಖ್ಯ ಸ್ವಾಮಿಭಕ್ತ-ಸ್ವದೇಶಪ್ರಿಯ ಶೂರ ರಜಪೂತರ ನಾಯಕನೂ ಆದವನು ಪರಾಜಿತನಾಗುವಂತೆ ಮಾಡಿತು. ತಾನು ಕನಸುಮನಸಿನಲ್ಲೆಣಿಸದ ಪರಾಭವವು ಬಂದೊದಗಿದರೂ ಪ್ರತಾಪನು ಹೆದರಲಿಲ್ಲ; ಧೈರ್ಯಗುಂದಲಿಲ್ಲ; ಬಂದ ಯಾವತ್ತು ಸಂಕಟಗಳಿಗೆ ಎದೆಗೊಟ್ಟು ನಿಲ್ಲಲು ಅವನು ಸಿದ್ಧನಾಗಿದ್ದನು. ಒಂದು ವೇಳೆ ತಾನು ಸೋತಲ್ಲಿ ಮೊಗಲರು ಬೆನ್ನುಹತ್ತಿ ಬಂದು ಗೋಗುಂಡಾ ಮತ್ತು ಕಮಲಮೀರ ದುರ್ಗಗಳನ್ನು ಆಕ್ರಮಿಸುವರೆಂಬದನ್ನು ದೂರದರ್ಶಿಯಾದ ಪ್ರತಾಪನು ಮೊದಲೇ ತರ್ಕಿಸಿದ್ದನು; ವಿಜಯಿಗಳಾದ ಮೊಗಲರು ಮೊದಲು ಗೋಗುಂಡವನ್ನು ಮುತ್ತುವರೆಂದು ತಿಳಿದು, ತನ್ನ ಪರಿವಾರವನ್ನೆಲ್ಲ ಬೇರೆ ಕಡೆಗೆ

ಕಳುಹಿಸಿದ್ದನು; ಮತ್ತು ಆ ಪಟ್ಟಣವನ್ನು ಜನಶೂನ್ಯವಾಗಿ ಮಾಡಿಬಿಟ್ಟಿದ್ದನು. ಮೊಗಲರು ಕಮಲಮೀರ ದುರ್ಗವನ್ನು ಆಕ್ರಮಿಸಬಹುದೋ ಇಲ್ಲವೋ ಎಂಬ ದನ್ನು ಸ್ಪಷ್ಟವಾಗಿ ತಿಳಿಯಲಾರದವನಾದ್ದರಿಂದ, ಈ ದುರ್ಗದಲ್ಲಿ ತನ್ನ ಸೈನಿಕ ರನ್ನು ಕೂಡಿಹಾಕಲು ಪ್ರತಾಪನು ಮನಸು ಮಾಡಲಿಲ್ಲ; ಯಾಕಂದರೆ ಶತ್ರುಗಳು ಕಮಲಮೀರವನ್ನು ಮುತ್ತಿದ್ದಾದರೆ, ಒಳಗಿರುವ ಸೈನಿಕರು ಹೊರಗೆ ಬರುವದು ದುಸ್ತರವಾಗುತ್ತಿತ್ತು. ಅದರಿಂದ ಅವನು ಶತ್ರುಗಳಿಗೆ ತಿಳಿಯಲಾಗದ ಮತ್ತು ಏರಿಬ ರಲು ದುಸ್ಸಾಧ್ಯವಾದ ದಕ್ಷಿಣಭಾಗದಲ್ಲಿದ್ದು, ಮೊಗಲರ ಬರುವಿಕೆಯನ್ನು ನೋಡ ತೊಡಗಿದನು. ತಾನೆಲ್ಲಿರುವೆನು? ಏನುಮಾಡುತ್ತಿರುವೆನು? ಎಂಬದನ್ನು ಶತ್ರುಗ ಳಿಗೆ ಎಷ್ಟುಮಾತ್ರವೂ ತಿಳಿಯಗೊಡಲಿಲ್ಲ.

ಈ ಕಡೆಯಲ್ಲಿ ಮಾನಸಿಂಹನು ತನ್ನ ಸೈನಿಕರನ್ನು ಗೋಗುಂಡಕ್ಕೆ ಕರೆದು ಕೊಂಡು ಹೋಗಿ, ಮಹಾ ಸಂಕಟಕ್ಕೊಳಗಾದನು. ರಜಪೂತರು ಗೋಗುಂಡ ವನ್ನು ಬಿಟ್ಟು ಹೋಗುವ ಮೊದಲೇ, ಇದರ ನಾಲ್ಕೂ ಕಡೆಯಲ್ಲಿರುವ ಸ್ಥಳವನ್ನು ಲೋಕಶೂನ್ಯವನ್ನಾಗಿಯೂ, ಜನಶೂನ್ಯವನ್ನಾಗಿಯೂ ಮಾಡಿದ್ದರು. ಕಾರಣ ಅಸಂಖ್ಯ ಮೊಗಲ ಸೈನಿಕರಿಗೆ ಆಹಾರದ ಪದಾರ್ಥಗಳು ದೊರೆಯದಂತಾದವು. ದೂರದೂರದ ಪ್ರದೇಶಗಳಿಂದ ವರ್ತಕರು ಗುಂಪುಗುಂಪಾಗಿ ಬಂದು, ರಾಜ ಸ್ಥಾನದ ಮೇರೆಯಲ್ಲಿರುವ ಪ್ರದೇಶಗಳಲ್ಲಿ ಧಾನ್ಯವಿಕ್ರಯಮಾಡಿ ಹೋಗುತ್ತಿದ್ದರು; ಆದರೆ ಪ್ರಸ್ತುತದಲ್ಲಿ ನಡೆದ ಯುದ್ಧದಿಂದ ಆ ಮಾರ್ಗವು ಬಂದಾಯಿತು.* ಅದ ರಿಂದ ಮೊಗಲಸೈನಿಕರು ಆಹಾರದ ಪದಾರ್ಥಗಳನ್ನು ಕಾಣದೆ ವಿಷಮ ವಿಪತ್ತಿ ಗೊಳಗಾದರು. ಕೆಲವರು ಬೇಟೆಯಲ್ಲಿ ದೊರೆತ ಮಾಂಸದಿಂದ ತಮ್ಮ ಜೀವನ ರಕ್ಷಣೆಯನ್ನು ಮಾಡಿಕೊಳ್ಳತೊಡಗಿದರು. ಈ ಸಮಯದಲ್ಲಿ ಆ ಪ್ರದೇಶದಲ್ಲಿ ಅಪರಿಮಿತ ಮಾವಿನ ಹಣ್ಣುಗಳಾಗಿರುವದು ಮೊಗಲರಿಗೆ ಅನುಕೂಲವಾಯಿತು. ಸೈನಿಕರು ಇವನ್ನು ಸಾಕಷ್ಟು ತಿಂದು, ಜೀವಿಸತೊಡಗಿದರು; ಆದರೆ ಅಲ್ಪ ಸಮ ಯದಲ್ಲಿ ಸೈನಿಕರು ಬೇನೆಬೀಳತೊಡಗಿದರು.‡ ಇಂತಹ ಸಮಯದಲ್ಲಿ ಸುಲಿಗೆಯ

---

* Elliot, "the Races of the provinces of India" Vol I P. 52, Lowe II P. 250

‡ ಈ ಸಮಯದಲ್ಲಿ ಹೇಳಲಿಕ್ಕೆ ಬರದಷ್ಟು ಮಾವಿನಹಣ್ಣುಗಳಾಗಿದ್ದವೆಂದು ಬದಾವುನಿಯು ಹೇಳಿದ್ದಾನೆ. ಮಾವಿನಹಣ್ಣಿನ ಆಕಾರವಾದರೂ ದೊಡ್ಡದಾಗಿತ್ತು; ಇವುಗಳಲ್ಲಿಯು ಒಂದೊಂದು ಹಣ್ಣಿನ ತೂಕವು, ಅಕಬರೀ ಸೇರಿನ ಒಂದು ಸೇರಿನವರೆಗೆ ಇತ್ತು. Badaoni II. 241.

ಹೊರತು ಬೇರೆ ಉಪಾಯವಿರಲಿಲ್ಲ; ಆದರೆ ಮಾನಸಿಂಹನು ಇದನ್ನು ಸಮ್ಮತಿಸ ಲಿಲ್ಲ. ಏನೇ ಆಗಲಿ, ಮಾನಸಿಂಹನು ರಜಪೂತನಾಗಿದ್ದನು; ಅವನು ಮೊಗಲರ ಸೇವೆಗಾಗಿ ಆತ್ಮವಿಕ್ರಯಮಾಡಿಕೊಂಡಿದ್ದರೂ, ಸ್ವಜಾತೀಯ ರಜಪೂತರ ದರಿದ್ರ ಮನೆಗಳನ್ನು ನಾಶಮಾಡುವದಕ್ಕೆ—ಅವರ ಹೊಟ್ಟೆಯಲ್ಲಿ ಹೋಗತಕ್ಕ ತುತ್ತನ್ನು ಕಸಿದುಕೊಳ್ಳುವದಕ್ಕೆ ಮಾನಸುಮಾಡಲಿಲ್ಲ ಸ್ವದೇಶಪ್ರೇಮಿಯಾದ ಪ್ರತಾಪ ಸಿಂಹನ ವಿಷಯದಲ್ಲಿರುವ ಮಾನಸಿಂಹನ ಆಂತರಿಕಭಕ್ತಿಯು ಇದಕ್ಕೆ ಬೇರೊಂದು ಗುಪ್ತಕಾರಣವಾಗಿದ್ದಿತು. ಸೈನಿಕರು ಮಾನಸಿಂಹನಿಗೆ ತಿಳಿಯದಂತೆ, ದೂರದಲ್ಲಿ ರುವ ಸ್ಥಾನಗಳಿಗೆ ಹೋಗಿ, ಖಾದ್ಯಪದಾರ್ಥಗಳನ್ನು ಸುಲಿಗೆಮಾಡಿ ತರುತ್ತಿದ್ದರು. ಆದರೆ ಮಾನಸಿಂಹನು ಇದನ್ನು ತಿಳಿದರೆ ಬಹಳ ಸಿಟ್ಟಿಗೇಳುತ್ತಿದ್ದನು. ಅವನು ಈ ರೀತಿಯಾಗಿ ಸುಲಿಗೆ ಮಾಡಬಾರದೆಂದು ಸೈನಿಕರೆಲ್ಲರಿಗೆ ಕಟ್ಟಪ್ಪಣೆ ಮಾಡಿದ್ದನು.

ಕಡೆಯಲ್ಲಿ ಈ ಯಾವತ್ತೂ ಸಂಗತಿಗಳು ಬಾದಶಹನಾದ ಅಕಬರನಿಗೆ ಗೊತ್ತಾದವು. ಈ ಸಮಯದಲ್ಲಿ ಬಾದಶಹನು ಅಜಮೀರದಲ್ಲಿದ್ದನು. ಅವನು ಮಾನಸಿಂಹ ಮತ್ತು ಅಸಫಖಾನರನ್ನು ಕರೆಕಳುಹಿಸಿಕೊಂಡನು. ಮಾನಸಿಂಹನು ದರಬಾರದಲ್ಲಿ ಬಾದಶಹನ ದರ್ಶನ ತಕ್ಕೊಂಡನು. ಬಾದಶಹನು ಯುದ್ಧದ ತರು ವಾಯ ಶತ್ರುಗಳ ಬೆನ್ನುಹತ್ತುವ ಕೆಲಸವನ್ನೇಕೆ ಮಾಡಲಿಲ್ಲ? ಶತ್ರುಗಳ ರಾಜ್ಯ ವನ್ನು ಸುಲಿಗೆಮಾಡಲಿಕ್ಕೆ ಸಮ್ಮತಿಯನ್ನೇಕೆ ಕೊಡಲಿಲ್ಲ? ಈ ಮೊದಲಾದ ವಿಷ ಯಗಳ ಸಲುವಾಗಿ ಮಾನಸಿಂಹನನ್ನು ತಿರಸ್ಕರಿಸಿದನು. ಇದಕ್ಕಾಗಿ ಬಾದಶಹನು ಮಾನಸಿಂಹನ ಮೇಲೆ ಬಹಳ ಸಿಟ್ಟಾಗಿದ್ದನು; ಇದರಿಂದ ಕೆಲವು ದಿವಸಗಳವರೆಗೆ ಮಾನಸಿಂಹನು ದರಬಾರದಲ್ಲಿ ಪ್ರವೇಶಿಸದಂತೆ ಅಪ್ಪಣೆಯಾಯಿತು.*

ಈ ಕಡೆಯಲ್ಲಿ ಅರವಲೀ ಪರ್ವತದ ಪ್ರದೇಶದಲ್ಲಿ ಭಯಂಕರವಾದ ಮಳೆ ಯಾಗುತಲಿತ್ತು. ಮಾನಸಿಂಹನು ಹೋದನಂತರ ತುಸು ಸೈನಿಕರು ಬೇರೆ ಬೇರೆ ಕಡೆಯಲ್ಲಿದ್ದರು; ಅವಿಶ್ರಾಂತ ಮಳೆಯಿಂದ ಇವರಿಗೆ ಬಹಳ ತೊಂದರೆಯಾಯಿತು;

* "When the distress of the army was inquired into, it appeared that, although the men were in such great straits, Kunwar Mansingh would not suffer any plundering of Rana Kika's ( Pratap's ) country Tabakat-i-Akbari, Elliot, Vol. V P. 401; Bloch, P. 340. ಕೇವಲ ಮಾನಸಿಂಹನೊಬ್ಬನೆ, ಅಲ್ಲ, ಅಸಫಖಾನನೂ ಈ ಅಪರಾಧದಿಂದ ತಿರಸ್ಕೃತನಾದನೆಂದು ಬದಾವುನಿಯು ಹೇಳುತ್ತಿರುವನು.

ಕಾರಣ ಇವರು ಗುಡ್ಡುಗಾಡು ಪ್ರದೇಶದಲ್ಲಿರಲಾರದೆ, ದೂರದಲ್ಲಿರುವ ಸಮನೆಲದಲ್ಲಿ ಹೋಗಿ ವಾಸಮಾಡತೊಡಗಿದರು. ಈ ಸಮಯದಲ್ಲಿ ಪ್ರತಾಪಸಿಂಹನು ಸಸೈನ್ಯನಾಗಿ ಬಂದು, ಉದಯಪುರದ ಅಂಚಿಗಿರುವ ಪ್ರದೇಶವನ್ನು ಹಸ್ತಗತ ಮಾಡಿಕೊಂಡನು.† ನಾಲ್ಕೂ ಕಡೆಯಲ್ಲಿ ಮತ್ತೆ ರಜಪೂತರ ವಿಜಯ-ಶಂಖವು ಬಾರಿಸತೊಡಗಿತು; ಮೇವಾಡದ ಕ್ರೀಡಾ-ಭೂಮಿಯಲ್ಲಿ ಇವರ ಸಮರಲೀಲೆಯು ನಡೆಯಿತು; ರಜಪೂತರು ಸ್ವಚ್ಛಂದದಿಂದ ಬೇರೆ ಬೇರೆ ಕಡೆಯಲ್ಲಿ ಹೋಗಿ ಧನವನ್ನೂ, ಆಹಾರದ ಪದಾರ್ಥಗಳನ್ನೂ ಕೂಡಿಸತೊಡಗಿದರು. ಮಳೆಗಾಲವು ತೀರಿದ ಕೂಡಲೇ ಪುನಃ ಮೊಗಲರು ಯುದ್ಧಕ್ಕೆ ಬರುವರೆಂಬದನ್ನು ಅವರು ತಿಳಿದಿದ್ದರು; ಕಾರಣ ರಜಪೂತರು ಯುದ್ಧದ ಸಿದ್ಧತೆಯನ್ನು ತೀವ್ರ ಮಾಡತೊಡಗಿದರು. ಮಹಾರಾಣಾನ ಅಪ್ಪಣೆಯಂತೆ ಚಾರಣರು ದೂರದೂರದಲ್ಲಿರುವ ಹಳ್ಳಿಗೆ ಹೋಗಿ, ಜನರನ್ನು ಯುದ್ಧೋತ್ಸಾಹಿಗಳನ್ನು ಮಾಡತೊಡಗಿದರು. ಮೇವಾಡದ ಸೀಮೆಯ ಹೊರಗಿರುವ ಬೇರೆ ರಜಪೂತ ಸಾಮಂತರಿಗೆ ಧರ್ಮಯುದ್ಧದಲ್ಲಿ ಕೂಡುವದಕ್ಕೆ ಆಮಂತ್ರಣವು ಕೊಡಲ್ಪಟ್ಟಿತು ಕೋಟಾ, ಬುಂದಿ, ಡೊಂಗಾರಪುರ, ಈದರ, ಸಿರೋಹಿ, ಝಾಲೋರ ಮೊದಲಾದ ಯಾವತ್ತೂ ಸಂಸ್ಥಾನಗಳ ಅರಸರಿಗೆ ಯುದ್ಧಕ್ಕೆ ಬರಬೇಕೆಂದು ಪ್ರತಾಪನು ಹೇಳಿಕಳುಹಿಸಿದನು. ಆರಂಭವಾದ ಈ ಸಮರಲೀಲೆಯು ಎಲ್ಲಿ ಮತ್ತು ಎಂದು ಮುಗಿಯುವದೆಂಬದನ್ನು ಯಾರೂ ತಿಳಿಯಲಾರದವರಾಗಿದ್ದರು.

---

# ಪಂಚದಶ ಪರಿಚ್ಛೇದ.

## ಮೇವಾಡದ ಮುಕ್ತಿಗೆ.

ಬಾದಶಹ ಪಣವಗೈದಂ । ಪದಕೆರಗುವ ತೆರದಿ ಮಾಡದಲೆ ಬಿಡೆನೆಂದುಂ ॥
ಗೈದಂ ಪ್ರತಾಪ ಪಣವಂ । ಬಾದಶಹಗೆ ಶರಣುಹೋಗೆನೆಂದುಂ ನಿಜದಿಂ ॥ ೧ ॥

ಮಳೆಗಾಲವು ಮುಗಿಯಿತು. ಮೊಗಲರು ಅಶ್ವಿನಮಾಸದ ಪ್ರಾರಂಭದಿಂದ ಯುದ್ಧದ ಸಿದ್ಧತೆಯನ್ನು ಮಾಡತೊಡಗಿದರು. ಈ ಸಮಯದಲ್ಲಿ ಅಜಮೀರದಲ್ಲಿರುವ ಬಾದಶಹನಿಗೆ, ಝಾಲೋರದ ಪಠಾಣ ಸರದಾರನಾದ ತಾಜಖಾನನೂ,

† Badaoni ( Lowe ) II P. 247.

ಶಿರೋಹಿಯ ದೇವರಾ†ಯನೂ ಬಂಡಾಯವನ್ನೆಬ್ಬಿಸಿದ ಸುದ್ದಿಯು ತಿಳಿಯಿತು. ಕೂಡಲೇ ಬಾದಶಹನು ತರ್ಷಣಖಾ, ರಾಯಸಿಂಹ, ಸೈಯದಹಾಸಿಮ ಬಾಹಾರ್* ಮತ್ತು ಬಹು ವೀರರನ್ನೂ ಈ ಬಂಡಾಯವನ್ನು ಮುರಿಯುವದಕ್ಕಾಗಿ ಕಳುಹಿಸಿದನು. ಈ ಸೇನಾಪತಿಗಳಿಗೆ ಅಕಬರನು ಅಪ್ಪಣೆಕೊಟ್ಟದ್ದೇನಂದರೆ—ಪ್ರಾರಂಭದಲ್ಲಿ ಸವಿಮಾತುಗಳಿಂದ ಬಂಡುಗಾರರನ್ನು ವಶಮಾಡಿಕೊಳ್ಳಲು ಯತ್ನಿಸಬೇಕು; ಇದರಿಂದ ಯಾವ ಫಲವೂ ದೊರೆಯದಿದ್ದಲ್ಲಿ ಬಂಡುಗಾರರ ದೇಶವನ್ನು ನಾಶಮಾಡಿ, ಅವರಿಗೆ ಯೋಗ್ಯ ಶಿಕ್ಷೆಯನ್ನು ವಿಧಿಸಬೇಕು. ಮೊಗಲಸೈನ್ಯವು ಝಾಲೋರಕ್ಕೆ ಮುಟ್ಟಿತು; ತಾಜಖಾನನು ಯಾವ ತೊಂದರೆಯನ್ನೂ ಕೊಡದೆ, ಮೊಗಲರ ಅಧೀನತ್ವವನ್ನೊಪ್ಪಿಕೊಂಡನು; ದೇವರಾ ಸರದಾರನೂ ಅವನತನಾದನು. ಈ ಮೇರೆಗೆ ಅನಾಯಾಸವಾಗಿ ಕಾರ್ಯವಾಯಿತು. ತರ್ಷಣಖಾನನು ಗುಜರಾಥದ ರಾಜ್ಯಕಾರಭಾರ ಸಾಗಿಸುವದಕ್ಕೆ ಹೊರಟುಹೋದನು, ರಾಯಸಿಂಹ ಮತ್ತು ಸೈಯದಹಾಸಿಮರು ಶಿರೋಹಿಯ ಉತ್ತರದಲ್ಲಿರುವ ನಾಂದೋಲ‡ವೆಂಬ ಸ್ಥಳದಲ್ಲಿ ವಾಸಮಾಡತೊಡದರು. ಕಮಲಮೀರ ಮೊದಲಾದ ಸ್ಥಳಗಳಿಂದ ದೇಸುರಿಮಾರ್ಗವಾಗಿ ಮಾರವಾಡಕ್ಕೆ ಹೋಗಬೇಕಾದಲ್ಲಿ, ನಾಂದೋಲವು ದಾರಿಯಲ್ಲಿ ಹತ್ತುವದು. ಈ ಸ್ಥಳದಲ್ಲಿ ದಂಡನ್ನಿಟ್ಟಲ್ಲಿ, ಪ್ರತಾಪಸಿಂಹನು ಮಾರವಾಡಕ್ಕೆ ಹೋಗುವ

---

† ಶಿರೋಹಿಸರದಾರನಾದ ದೇವರಾಯನು ಚೌಹಾಣವಂಶದ ರಜಪೂತನು, ಮತ್ತು ಸುವಿಖ್ಯಾತ ದಿಲ್ಲೀಶ್ವರನಾದ ಪೃಥ್ವೀರಾಜನ ವಂಶಧರನು ಈ ವಂಶದ ದೇವರಾಜನೆಂಬ ಮನುಷ್ಯನು ಶಿರೋಹಿಯಲ್ಲಿ ವಾಸಮಾಡತೊಡಗಿದ್ದರಿಂದ, ಇವರಿಗೆ ದೇವರಾರಜಪೂತರೆಂಬ ಹೆಸರು ಬಂದಿತು. ಶಿರೋಹಿಸರದಾರನು ಮೊಗಲು ಪ್ರತಾಪನ ಪಕ್ಷವನ್ನು ವಹಿಸಿದ್ದನು, ಮುಂದೆ ಯವನರನ್ನು ಕೂಡಿದನು Rajputana Gazetteer, Vol III P. 96 Rajasthan Vol. II. Annals of Haravati chap. I.

* ಸೈಯದರು ಹಳದೀಘಟ್ಟದ ಯುದ್ಧದಲ್ಲಿ ಬಹು ಪರಾಕ್ರಮದಿಂದ ಯುದ್ಧಮಾಡಿದರೆಂಬದನ್ನು ಹಿಂದೆ ಹೇಳಿದ್ದೇವೆ ಇವರಿಗೆ ಬಾಹಾರ್ ಎಂಬದಕ್ಕೆ ಅನೇಕ ಕಾರಣಗಳಿವೆ. "Scandalised at tee debaucheries of the Mina–Bazar of Delhi, they obtained leave to reside outside the town (Bahir)" ಬಾರ್ಹಾ ಸೈಯದರು ಅಕಬರನ ಕಾಲದಿಂದ ವಿಖ್ಯಾತರಾದರು. Elphinstone P. 667 note Elliot's "Supplementary Glossary."

‡ ನಾಂದೋಲವು ಜೋಧಪುರದಲ್ಲಿಯ ಒಂದು ಸಂದರ ಪಟ್ಟಣವು

ಮಾರ್ಗವನ್ನು ಬಂದುಮಾಡಿದಂತಾಗುತ್ತಿತ್ತು. ಈ ಕಾರಣದಿಂದಲೇ ಮೊಗಲರು ಈ ಮಾರ್ಗವನ್ನು ಬಂದುಮಾಡಿಕೊಂಡು ಕುಳಿತರು.*

ಈ ಸಮಯದಲ್ಲಿ ದೇವರಾಸರದಾರನು ದಂಡುಕೂಡಿಸಿಕೊಂಡು ಪುನಃ ಬಂಡಾಯಮಾಡಿದನು ರಜಪೂತರ ಆಲೋಚನೆಯು ಇದರ ಮೂಲಕಾರಣವಾಗಿತ್ತೆಂಬದನ್ನು ಹೇಳುವ ಕಾರಣವಿಲ್ಲ, ಅಂದರೆ ಶಿರೋಹಿ ಸರದಾರನು ರಜಪೂತರ ಸೋಳಿಕೆಯಂತೆ ಮೊಗಲರ ವಿರುದ್ಧವಾಗಿ ಬಂಡಾಯವನ್ನೆಬ್ಬಿಸಿದನು. ರಾಯಸಿಂಹ ಮತ್ತು ಹಾಸಿಮರು ಬಂದು ಶಿರೋಹಿಯನ್ನು ಮುತ್ತಿದರು. ದೇವರಾರಾಯನು ಈ ಸಮಯದಲ್ಲಿ ಶಿರೋಹಿಯಲ್ಲಿರಲಿಲ್ಲ; ಇವನು ಪರ್ವತಮಾಲೆಯಲ್ಲಿ ಆಶ್ರಯಹೊಂದಿದ್ದನು. ಶಿರೋಹಿಯನ್ನು ಮುತ್ತಿದ ತರುವಾಯ ಕೆಲವು ದಿವಸಗಳಾದ ಬಳಿಕ ರಾಯಸಿಂಹನು ತನ್ನ ಪರಿವಾರದವರನ್ನು ಶಿಬಿರಕ್ಕೆ ಕರೆಯಿಸುವ ವ್ಯವಸ್ಥೆಮಾಡಿದನು ಈ ವೇಳೆಯಲ್ಲಿ ದೇವರಾರಾಯನು ಹಾದಿಯಲ್ಲಿ ಈ ಪರಿವಾರದವರ ಮೇಲೆ ಅಕಸ್ಮಾತ್ತಾಗಿ ಬಿದ್ದು, ರಾಯಸಿಂಹನ ಕೆಲವು ಆಪ್ತೀಯರನ್ನು ಕೊಂದನು; ತರುವಾಯ ಅಬೂಪರ್ವತದಲ್ಲಿ ಹೋಗಿ ಅಡಗಿಕೊಂಡು ಕುಳಿತನು.§ ಆಗ ರಾಯಸಿಂಹನು ಶಿರೋಹಿಯನ್ನು ಕೈವಶಮಾಡಿಕೊಂಡು, ಅಬೂದುರ್ಗವನ್ನು ಮುತ್ತಿದನು. ಅಬೂದಂತಹ ಅತ್ಯುನ್ನತ ಪರ್ವತಶಿಖರದಲ್ಲಿರುವ ದುರ್ಭೇದ್ಯದುರ್ಗದಲ್ಲಿ ಆಶ್ರಯಹೊಂದಿದರೇನಾಯಿತು? ದೇವರಾರಾಯನಲ್ಲಿ ಈ ಮುತ್ತಿಗೆಯಿಂದ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವ ಸಾಮರ್ಥ್ಯವಿರಲಿಲ್ಲ. ಅದರಿಂದ ಅವನು ಅನನ್ಯೋಪಾಯನಾಗಿ ಶತ್ರುಗಳ ಮರೆಹೊಕ್ಕನು. ರಾಯಸಿಂಹನು ಕಾವಲುಗಾರರೊಡನೆ ದೇವರಾರಾಯನನ್ನು ಬಾದಶಹನ ಹತ್ತರ ಕಳುಹಿಸಿದನು; ಮತ್ತು ತಾನು ಅರವಲೀ ಪರ್ವತದ ಪಶ್ಚಿಮಪಾದ ದೇಶದಲ್ಲಿಯ ಮಹಾರಾಣಾನ ಪಥವನ್ನು ಬಂದುಮಾಡುವದಕ್ಕಾಗಿಯೂ, ರಾಣಾನ ಗತಿವಿಧಿಯನ್ನು ಅವಲೋಕಿ

---

" * The roads of ingress and egress form the Rana's country were closed " A. N. ( Bev. ) III P 267.

§ ಅಬೂ ಅಥವಾ ಅರ್ಬುದಾಚಲವು ರಾಜಸ್ಥಾನದೊಳಗಿನದೊಂದು ಅತಿ ರಮಣೀಯವಾದ ಪಟ್ಟಣವು, ಮತ್ತು ಸ್ವಾಸ್ಥ್ಯನಿವಾಸವು ಇದು ಹಿಂದೂ ಮತ್ತು ಜೈನರ ಮಹಾತೀರ್ಥವು ಇದರ ಮಂದಿರಗಳು ಅತೀವ ರಮಣೀಯವಾದವುಗಳೂ, ಆಶ್ಚರ್ಯವನ್ನುಂಟುಮಾಡತಕ್ಕವುಗಳೂ ಆಗಿವೆ ಟಾಡ್‌ಸಾಹೇಬರು ಇದಕ್ಕೆ Olympus of India ಎಂದು ಹೇಳಿದ್ದಾರೆ ಅಬೂಶಿಖರವು ರಾಜಸ್ಥಾನದಲ್ಲಿಯ ಎಲ್ಲಕ್ಕೂ ಎತ್ತರವಾದ ಶಿಖರವು

ಸುವದಕ್ಕಾಗಿಯೂ ಸಸೈನ್ಯವಾಗಿ ವಾಸಮಾಡತೊಡಗಿದನು.† ಈ ಮೇರೆಗೆ ಮೇವಾಡದ ಪಶ್ಚಿಮದಿಕ್ಕಿನಲ್ಲಿ ಮುತ್ತಿಗೆಯನ್ನು ಹಾಕೋಣವಾಯಿತು.

ಈ ಕಡೆಯಲ್ಲಿ ಅಕಬರನು ಸ್ವತಃ ಮಹಾಡಂಬರದಿಂದ ಮೇವಾಡಕ್ಕೆ ಹೊರಟನು. ಆಶ್ವಿನಮಾಸದ ಕಡೆಯ ಭಾಗದಲ್ಲಿ (೧೧ನೇ ಅಕ್ಟೋಬರ ೧೫೭೬) ಇವನು ಅಜಮೀರವನ್ನು ಬಿಟ್ಟು ನಡೆದನು ಈ ಸಮಯದಲ್ಲಿ ಬಹು ಸಂಖ್ಯಾಕ ರಾದ ಮುಸಲ್ಮಾನರು ಮಕ್ಕಾಯಾತ್ರೆಗೆ ಹೋಗಬೇಕೆಂದು ಇಚ್ಛಿಸಿ, ಅಕಬರನಿಗೆ ವಿನಂತಿಯನ್ನು ಮಾಡಿಕೊಂಡರು ಯಾತ್ರಿಗಳು ರಜಪೂತಸ್ಥಾನದಲ್ಲಿ ಹಾಯ್ದು, ನೆಲಮಾರ್ಗವಾಗಿ ಸುರತಕ್ಕೆ ಹೋಗಿ, ತರುವಾಯ ಹಡಗವನ್ನೇರಬೇಕಾಗುತ್ತಿದ್ದಿತು. ಆದರೆ ರಜಪೂತರ ಯುದ್ಧದ ದೆಶೆಯಿಂದ ಮೇವಾಡದ ಈ ಮಾರ್ಗವು ಬಂದಾಗಿತ್ತು. ಬಾದಶಹನು ಉಪಯುಕ್ತವಾದ ಯಾನವಾಹನಗಳ ವ್ಯವಸ್ಥೆಯನ್ನೂ, ರಕ್ಷಕರ ವ್ಯವಸ್ಥೆಯನ್ನೂ ಮಾಡದಿದ್ದಲ್ಲಿ, ಯಾತ್ರಿಕರು ಗುಜರಾಥವನ್ನು ಮುಟ್ಟುವಂತಿರಲಿಲ್ಲ. ಇದಕ್ಕಾಗಿಯೇ ಅವರು ಅಕಬರನನ್ನು ಪ್ರಾರ್ಥಿಸಿಕೊಂಡಿದ್ದರು. ಬಾದಶಹನು ಈ ವೇಳೆಯಲ್ಲಿ ಮಹಾರಾಣಾನಿಗೆ ತೊಂದರೆಯನ್ನುಂಟು ಮಾಡುವದಕ್ಕಾಗಿ ಗೋಗುಂಡ ಮತ್ತು ಈದರ ಪಟ್ಟಣಗಳಿಗೆ ಎರಡು ದಳ ದಂಡನ್ನು ಕಳಿಸುವ ಸಿದ್ಧತೆಮಾಡಿದ್ದನು. ಯಾತ್ರಿಕರನ್ನು ರಕ್ಷಿಸುವ ಭಾರವು ಇವರ ಮೇಲೆ ಹೊರಿಸಲ್ಪಟ್ಟಿತು. ತಾನು ಧರ್ಮಕಾರ್ಯದ ಸಹಾಯಕನಾಗಿ ವೀರವೇಷದಿಂದ ಈ ಯಾತ್ರಿಗಳನ್ನು ಹಿಂಬಾಲಿಸಿದನು‡

ಈ ಪ್ರಸಂಗದಲ್ಲಿ ಅಕಬರನು ಸ್ವತಃ ಮೇವಾಡಕ್ಕೆ ದಂಡೆತ್ತಿ ಹೋದದ್ದೇಕೆ? ಎಂಬ ಪ್ರಶ್ನೆಯು ಹುಟ್ಟುವದು ಅಕಬರನು ತಾನು ಈದರ ಪ್ರದೇಶದಲ್ಲಿ ಬೇಟೆಯನ್ನಾಡುವದಕ್ಕೆ ಹೋಗುತ್ತೇನೆಂದು ಹೇಳಿ ಹೊರಬಿದ್ದನು; ಆದರೆ ಇದು

† Blochmann, PP 357-8; A N III P 274 ಮೊಗಲರು ಶಿರೋಹಿಯನ್ನು ಸಹಜವಾಗಿ ವಶಮಾಡಿಕೊಳ್ಳಲು ಸಮರ್ಥರಾಗಲಿಲ್ಲ, ದೇವರಾರಾಯನ ಪಕ್ಷದ ರಜಪೂತರು ವೀರನಾದ ರಾಯಮಲ್ಲನ ಆಧೀನತ್ವದಲ್ಲಿದ್ದು, ಭೀಷಣ ಯುದ್ಧಮಾಡಿದರು ಅಬುಲಫಜಲನು ಇವರ ವೀರತ್ವವನ್ನು ಹೊಗಳಿದ್ದಾನೆ

‡ ಅಕಬರನು ಸುಲತಾನಖಾನನ್ನು ಮೀರ ಹಾಜಿ ಅಥವಾ ತೀರ್ಥಯಾತ್ರಿಕರ ದಲಪತಿಯನ್ನಾಗಿ ಮಾಡಿದ್ದನು ಈ ಸಮಯದಲ್ಲಿ ಹಿಂದುಸ್ಥಾನದಲ್ಲಿಯ ಅನೇಕ ಸ್ಥಳಗಳಿಂದ ಬಹು ಜನ ಯಾತ್ರಿಕರು ಮಕ್ಕಾ ಯಾತ್ರೆಗೆ ಹೊರಟಿದ್ದರು ಇವರಲ್ಲಿ ಬಾದಶಹನ ಪರಿವಾರದಲ್ಲಿಯ ಕೆಲವು ಜನ ಹೆಣ್ಣುಮಕ್ಕಳೂ ಇದ್ದರು.

ಅವನ ಮುಖ್ಯ ಉದ್ದೇಶವಾಗಿರಲಿಲ್ಲ. ಮೊಗಲರು ಹಳದೀ ಘಟ್ಟದ ಯುದ್ಧದಲ್ಲಿ ಜಯಶಾಲಿಗಳಾಗಿದ್ದರೂ, ಅದರಿಂದಾವ ಲಾಭವೂ ಆಗಿರಲಿಲ್ಲ. ಮಾನಸಿಂಹ ನಂತಹ ವೀರರಿಂದಲೂ ಕೂಡ ಪ್ರತಾಪನ ದಮನಮಾಡುವದಾಗಲಿಲ್ಲ. ಪ್ರತಾಪ ಸಿಂಹನನ್ನು ಶಿಕ್ಷಿಸುವದು ಇಷ್ಟು ಕಠಿಣ ವ್ಯವಹಾರವಾಗಿರಬಹುದೆ? ಬಾದಶಹನು ಸ್ವತಃ ಇದ್ದು, ಚಿತೋಡದ ಯುದ್ಧದಲ್ಲಿ ಜಯ ಪಡೆದಿದ್ದನು! ಮಹಾರಾಣಾನು ಈಗ ಮುಷ್ಟಿಮಯ ಸೈನ್ಯದ ಅಧಿಪತಿಯು, ವಿಶೇಷವಾಗಿ ಅವನೀಗ ಗೃಹಶೂನ್ಯನೂ, ಧನಶೂನ್ಯನೂ, ಸಹಾಯಶೂನ್ಯನೂ ಆಗಿದ್ದಾನೆ. ಹೀಗಿರುವದರಿಂದ ರಾಣಾನಂತಹ ಕ್ಷುದ್ರಶತ್ರುವನ್ನು ದಂಡಿಸುವದು, ಚಿತೋಡದ ಯುದ್ಧದಂತಹ ಕಠಿಣ ಕಾರ್ಯವಾಗಲಾರದು ಅಕಬರನು ಭಾವಿಸಿದ್ದೇನಂದರೆ—"ಈ ವರೆಗೆ ರಾಣಾನನ್ನು ಶಿಕ್ಷಿಸುವದಕ್ಕೆ—ರಜಪೂತರನ್ನು ಸಂಪೂರ್ಣವಾಗಿ ಪರಾಜಯ ಗೊಳಿಸದಿರುವದಕ್ಕೆ ಸೇನಾಪತಿಗಳ ಶಿಥಿಲತ್ವವೇ ಕಾರಣೀಭೂತವಾಗಿದೆ. ಸ್ವತಃ ನಾನು ಇದ್ದದ್ದಾದರೆ ಈ ರೀತಿಯಾಗುತ್ತಿರಲಿಲ್ಲ. ಈ ಸಾರೆ ಮೇವಾಡಕ್ಕೆ ನಾಲ್ಕೂ ಕಡೆಯಲ್ಲಿ ಮುತ್ತಿಗೆಯನ್ನು ಹಾಕಿದಲ್ಲಿ ಪ್ರತಾಪನು ನಿಶ್ಚಯವಾಗಿ ಸಿಗುವನು." ಮೊಗಲರ ಯಶೋ-ಗೌರವವು ನಾಲ್ಕೂ ಕಡೆಯಲ್ಲಿ ಹಬ್ಬಿತ್ತು; ವಂಗ, ಬಿಹಾರ, ಮಾಳವ, ಗುಜರಾಥ ಮೊದಲಾದ ಎಲ್ಲ ಪ್ರದೇಶಗಳಲ್ಲಿ ಬಾದಶಹನ ವಿಜಯ-ದುಂದುಭಿಯು ಬಾರಿಸುತ್ತಲಿತ್ತು ಪ್ರತಾಪನಂತಹ ಕ್ಷುದ್ರ ವೈರಿಯೋರ್ವನನ್ನು ಅವನತನನ್ನಾಗಿ ಮಾಡಲಿಕ್ಕೆ ಸಮರ್ಥನಾಗದಿದ್ದಲ್ಲಿ, ಬಾದಶಹನ ಈ ಯಶೋ-ರಾಶಿಯಲ್ಲಿ ಕಲಂಕದ ಆರೋಪವಾಗುತ್ತಲಿತ್ತು ಏನೇ ಆಗಲಿ, ಈ ಸಾರೆ ಕಾಲ ವಿಲಂಬವನ್ನು ಮಾಡದೆ, ಯಾವದೇ ರೀತಿಯಿಂದಾಗಲಿ, ಈ ಕಲಂಕಮೋಚನವನ್ನು ಮಾಡಿಕೊಳ್ಳಲೇಬೇಕು. ಇದಕ್ಕಾಗಿಯೇ ಅಕಬರನು ಸ್ವತಃ ದಂಡೆತ್ತಿಹೊರಟನು.

ಅಕಬರನು ಗೋಗುಂಡಕ್ಕೆ ಹೋಗುವ ಮಾರ್ಗದಲ್ಲಿರುವ ಮೋಹಾನೀ ನಗರದಲ್ಲಿ ತನ್ನ ಶಿಬಿರವನ್ನು ಸ್ಥಾಪಿಸಿದನು. ಹಾದಿಯಲ್ಲಿ ಎಷ್ಟೋ ರಜಪೂತರು ಬಂದು, ಅಕಬರನ ಅಧೀನತ್ವವನ್ನೊಪ್ಪಿಕೊಂಡರು; ಆದರೆ ಮಹಾರಾಣಾನ ಸಂಬಂಧವಾದ ಯಾವ ಸುದ್ದಿಯೂ ಗೊತ್ತಾಗಲಿಲ್ಲ. ಬಾದಶಹನು ಬಹು ಸೈನಿಕ ರೊಡನೆ ಯಾತ್ರಿಕರನ್ನು ಅರವಲೀ ಪರ್ವತದ ಮಾರ್ಗವಾಗಿ ಗುಜರಾಥಕ್ಕೆ ಕಳು ಹಿಸಿಕೊಟ್ಟನು. ಇವರು ಹಳದೀಘಟ್ಟದ ಗಿರಿ-ಮಾರ್ಗದಲ್ಲಿ ಹಾಯ್ದು ಗೋಗುಂಡ

ಕ್ಕೆ ಹೋದರು; ತರುವಾಯ ಅಲ್ಲಿಂದ ಅರವಲೀ ಪರ್ವತವನ್ನು ದಾಟಿ, ಪಣ* ವಾರಾ ಎಂಬ ಸ್ಥಳಕ್ಕೆ ಮುಟ್ಟಿದರು. ಈ ಸ್ಥಳದಿಂದ ರಾಜಾಭಗವಾನದಾಸ, ಕುಮಾರ ಮಾನಸಿಂಹ, ಕುತಬಖಾ, ಕಾಶೀಮಖಾ ಮೊದಲಾದ ಸೇನಾಪತಿಗಳು ಬಾದಶಹನ ಅಪ್ಪಣೆಯಂತೆ ಗೋಗುಂಡಕ್ಕೆ ತಿರುಗಿಬಂದರು; ಮತ್ತು ಪರ್ವತದ ಅಂಚಿನಲ್ಲಿ ಅತ್ತಿತ್ತ ತಿರುಗಾಡಿ, ಪ್ರತಾಪಸಿಂಹನನ್ನು ಹುಡುಕಹತ್ತಿದರು. ಕೂಲಿ ಜಖಾ, ಅಸಫಖಾ, ನರೇಬಖಾ ಮೊದಲಾದ ಪ್ರಖ್ಯಾತ ಸೇನಾಪತಿಗಳು ಯಾತ್ರಿಕ ರನ್ನು ಕರೆದುಕೊಂಡು ಪಣವಾರದಿಂದ ಹೊರಟು ಈದರಕ್ಕೆ ಮುಟ್ಟಿದರು.+

ಮೋಹಾನಿಯಲ್ಲಿ ಮೂರು ಸಾವಿರ ಅಶ್ವಾರೋಹೀ ಸೈನಿಕರೊಡನೆ ಬಾಜೀ ಖಾ, ಸೆರಿಫಖಾ, ಮುಜಾಹಿದಖಾ ಮೊದಲಾದ ಸೇನಾಪತಿಗಳನ್ನಿರಿಸಿ, ಅಕಬರನು ಉಳಿದ ಸೈನ್ಯವನ್ನು ತೆಗೆದುಕೊಂಡು, ಉದಯಪುರದ ಕಡೆಗೆ ಹೊರಟನು. ತರುವಾಯ ಬಾದಶಹನು ಮದಾ†ರಿಯಾ ಎಂಬ ಸ್ಥಳದಲ್ಲಿ ಕೆಲವು ಜನ ದಕ್ಷರಾದ ಸೇನಾಪತಿಗಳನ್ನಿರಿಸಿದನು; ಮತ್ತು ಅನೇಕ ಸ್ಥಳಗಳಲ್ಲಿ ಮೊಗಲಸೈನ್ಯವು ವಾಸ ಮಾಡತೊಡಗಿತು. ಇದರಿಂದ ಪ್ರತಾಪನು ಗಿರಿ-ಗುಹೆಯಿಂದ ಹೊರಬಿದ್ದ ಕೂಡಲೇ, ಅವನಿಗೆ ಯೋಗ್ಯ ದಂಡನೆಯನ್ನು ವಿಧಿಸಬಹುದಾಗಿದ್ದಿತು.— ಈ ಮೇರೆಗೆ ಉತ್ತರದಿಕ್ಕಿನಲ್ಲಿ ಮುತ್ತಿಗೆಯು ಹಾಕಲ್ಪಟ್ಟಿತು.

---

* ಈ ಪಣವಾರವು ಶಿರೋಹಿಯಲ್ಲಿರುವದು, ಸದ್ಯಃ ಇದಕ್ಕೆ ಪಿಂಡವಾರವೆಂಬ ಹೆಸರಿದೆ ಯೆಂದು ಹೇಳಬಹುದು ಗೋಗುಂಡದಿಂದ ಹೊರಟು, ಅರವಲಿಯನ್ನು ದಾಟಿ, ಈ ಸ್ಥಳಕ್ಕೆ ಬರುವದಕ್ಕೆರಾಜಮಾರ್ಗವಿದೆ

\+ ರಾಜಸ್ಥಾನದ ದಕ್ಷಿಣದಲ್ಲಿ, ಮತ್ತು ಅಹಮ್ಮದನಗರದ ಉತ್ತರದಲ್ಲಿ ಈದರವೆಂಬ ಸಣ್ಣ ಸಂಸ್ಥಾನವಿದೆ ಈದರವು ಇದರ ರಾಜಧಾನಿಯಾಗಿದೆ ಅಕಬರನ ಕಾಲದಲ್ಲಿ ಒಬ್ಬ ರಜಪೂತ ಸರದಾರನು ಇದರ ಅಧಿಪತಿಯಾಗಿದ್ದನು Bombay Gezetter, Vol. I Part I P. 232.

† ಈ ಸ್ಥಳವು ಚಿತೋಡದ ವಿಭಾಗದಲ್ಲಿರುವದು. Jarrett, Vol. II. P. 274.

– "Similarly, brave man were appointed to other places, in order that whenever that wicked strife-monger (Rana Partap) should come out of the ravines of disgrace, he might suffer retribution." Akbarnama, (Beveridge) III P 274.

ಅಕಬರನು ಉದಯಪುರದ ಮೇಲೆ ಹಾಯ್ದು, ದಕ್ಷಿಣಾಭಿಮುಖನಾಗಿ ವಂಶವಾರದ× ಮೇರೆಯಲ್ಲಿ ನಡೆದಿದ್ದನು. ಕುತುಬಖಾ ಮತ್ತು ಭಗವಾನದಾಸರು ಗುಡ್ಡಗಾಡುಪ್ರದೇಶದ ಬಹು ಸ್ಥಳಗಳಲ್ಲಿ ರಾಣಾನನ್ನು ಹುಡುಕಿದರು; ಇವರಿಗೆ ಅವನ ಸಂಬಂಧದ ಯಾವ ಸುದ್ದಿಯೂ ತಿಳಿಯಲಿಲ್ಲ. ಕಾರಣ ಇವರು ಬಾದಶಹನ ಅಪ್ಪಣೆಯಿಲ್ಲದೆ, ಅವಸರದಿಂದ ಬಂದು ಅಕಬರನ ದರ್ಶನ ತಕ್ಕೊಂಡರು. ಬಾದಶಹನು ಇವರು ಕೃತಕಾರ್ಯರಾಗದೆ ಬಂದಿರುವದನ್ನು ತಿಳಿದು, ಇವರನ್ನು ತಿರಸ್ಕರಿಸಿ, ಸೇನಾಪತಿಗಳಾದ ಫಕರುದ್ದೀನ ಮತ್ತು ಜಗನ್ನಾಥರನ್ನು ಉದಯಪುರದಲ್ಲಿಯೂ, ಸೈಯದ ಅಬ್ದುಲ್ ಮತ್ತು ಭಗವಾನದಾಸರನ್ನು ಉದಯಪುರದ ಪ್ರವೇಶ-ಮಾರ್ಗದಲ್ಲಿಯೂ ಇರಿಸಿ, ತಾನು ವಂಶವಾರದ ಕಡೆಗೆ ಹೊರಟು ಹೋದನು.‡ ಇದರಿಂದ ಮೇವಾಡದ ಪೂರ್ವದಿಕ್ಕಿನಲ್ಲಿ ಮುತ್ತಿಗೆಯನ್ನು ಹಾಕಿದಂತೆ ಆಯಿತು.

ಅಕಬರನು ವಂಶವಾರವನ್ನು ಮುಟ್ಟಿದ ತರುವಾಯ, ಅಲ್ಲಿಯ ರಾವಳನಾದ ಪ್ರತಾಪನೂ, ಡೊಂಗರಪುರದ ರಾವಳನಾದ ಆಸ್ಕರಣನೂ ಬಾದಶಹನ ಅಧೀನತ್ವವನ್ನು ಸ್ವೀಕರಿಸಿದರು. ಇದರಿಂದ ಬಾದಶಹನಿಗೆ ಪರಮಾನಂದವಾಯಿತು; ಯಾಕಂದರೆ ಈ ರಾವಳರು ಪ್ರತಾಪಸಿಂಹನಂತೆ ಶಿಶೋದಿಯಾ ಕುಲದವರಾಗಿದ್ದರು. ಇದರಿಂದ ಮಹಾರಾಣನ ಜಾತೀಯ ಶ್ರೇಷ್ಠತ್ವವು ಉಳಿಯಿತೆಲ್ಲಿ? ಎಲ್ಲರೂ ತಮ್ಮ ಜಾತಿಗೌರವವನ್ನು ಕಳೆದುಕೊಂಡರೂ ಸಹ, ಮಹಾರಾಣಾನು ತನ್ನ ಪ್ರತಿಜ್ಞೆಯಿಂದ ಚ್ಯುತನಾಗುವವನಾಗಿರಲಿಲ್ಲವೆಂಬದನ್ನು ಬಾದಶನು ತಿಳಿದುಕೊಳ್ಳಬೇಕಾಗಿದ್ದಿತು. ಪ್ರತಾಪನು ಆರನ್ನೂ ನಂಬಿರಲಿಲ್ಲ. ಎಲ್ಲರೂ ಆತ್ಮವಿಕ್ರಯ ಮಾಡಿಕೊಂಡರೂ, ಪ್ರತಾಪನು ಹೆದರುವವನಾಗಿರಲಿಲ್ಲ. ತಾನೊಬ್ಬನೆಯಾದರೂ ವಂಶಗೌರವವನ್ನು ಕಾಯ್ದುಕೊಳ್ಳುವೆನೆಂಬ ಆತ್ಮವಿಶ್ವಾಸವು ಅವನಲ್ಲಿದ್ದಿತು. ಡೊಂಗರಪುರದ ರಾವಳನ ಪೂರ್ಣ ಅವನತಿಗೆ ಇನ್ನೊಂದು ಸಂಗತಿಯು ಕಡಿಮೆಯಾಗಿದ್ದಿತು; ಅದೂ ಕೂಡ ಆಗಿಹೋಯಿತು. ಇವನು ಬಾದಶಹನನ್ನು ಸಂತುಷ್ಟಪಡಿಸುವದಕ್ಕಾಗಿ, ತನ್ನ ಪರಮಸುಂದರಿಯಾದ ಕನ್ಯೆಯನ್ನು ಅಕಬರನಿಗೆ ಸಮರ್ಪಣ

× ಇದು ಮೇವಾಡದ ದಕ್ಷಿಣದಲ್ಲಿರುವ ಒಂದು ಸಣ್ಣ ಸಂಸ್ಥಾನವು ಇಲ್ಲಿಯ ರಾವಳರು ಶಿಶೋದಿಯಾ ಕುಲದ ಒಂದು ಶಾಖೆಯವರಾಗಿದ್ದರು.

‡ Badaoni ( Lowe ) II P. 249, A. N III. P. 274.

ಮಾಡಲು ಮನಸು ಮಾಡಿದನು; ಅದರಂತೆ ಬಿನ್ನಹಮಾಡಿಕೊಂಡನು. ಬಾದಶಹನು ಕೃಪೆಯಿಟ್ಟು ತನ್ನ ಸೇವಕರಾದ ರಾಜಾಬೀರಬಲನನ್ನೂ, ರಾಯಲಂಬಕರ್ಣನನ್ನೂ ಕನ್ನೆಯನ್ನು ತರುವದಕ್ಕಾಗಿ ಕಳುಹಿಸಿದನು. ಇವರು ಬಾದಶಹನ ಹೇಳಿಕೆಯಂತೆ, ತಮ್ಮ ಕರ್ತವ್ಯವನ್ನು ಮಾಡಿ, ಸಾಕಷ್ಟು ಬಹುಮಾನವನ್ನು ಹೊಂದಿದರು.§

ಈ ಯಾವತ್ತು ಸೀಮಾಂತದಲ್ಲಿರುವ ರಾವಳರು ಏನೇ ಮಾಡಲಿ, ಮಹಾರಾಣಾನು ಇದರಿಂದ ತುಸು ಮಾತ್ರವೂ ವಿಚಲಿತನಾಗಲಿಲ್ಲ. ದಕ್ಷಿಣ ದಿಕ್ಕಿನಲ್ಲಿರುವ ಈದರ, ವಂಶವಾರ ಮೊದಲಾದ ಸ್ಥಳಗಳಲ್ಲಿಯೂ ಮೊಗಲರ ಸೈನ್ಯವು ಸಮಾವೇಶವಾಗಿತ್ತು; ಬಾದಶಹನು ತಾನೇ ಸಸೈನ್ಯನಾಗಿ ಈ ಸ್ಥಳದಲ್ಲಿದ್ದನು. ಅಕಬರನು ರಾಜಧಾನಿಯ ಯಾವತ್ತು ಸಂಗತಿಗಳನ್ನು ಮರೆತು, ಕೇವಲವಾಗಿ ಕ್ಷುದ್ರ ಪ್ರತಾಪನಿಗೆ ತೊಂದರೆ ಕೊಡುವದರಲ್ಲಿ ವ್ಯಗ್ರನಾಗಿ ಹೋಗಿದ್ದನು. ಮೇವಾಡವು ನಾಲ್ಕೂ ದಿಕ್ಕುಗಳಲ್ಲಿ ಮುತ್ತಲ್ಪಟ್ಟಿತ್ತು; ಸಾಗರ-ತರಂಗಗಳಂತೆ ಗುಂಪು ಗುಂಪಾಗಿ ಮೊಗಲ ಸೈನಿಕರು ಮೇವಾಡವನ್ನು ಪ್ರವೇಶಿಸುತ್ತಿದ್ದರು; ಆದರೆ ಪ್ರತಾಪನು ಎಷ್ಟುಮಾತ್ರವೂ ಹೆದರಲಿಲ್ಲ; ಈ ಕಡೆಗೆ ಅವನ ಲಕ್ಷವೇ ಇರಲಿಲ್ಲ. ಮಾನಸಿಂಹನಂತಹ ತೀಕ್ಷ್ಣದೃಷ್ಟಿಯ ಸೇನಾಪತಿಯ ಕುಟಿಲಕೌಶಲ್ಯವು ಪ್ರತಾಪನ ನಾಶಕ್ಕಾಗಿ ಉಪಯೋಗವಾಗುತಲಿತ್ತು; ಮಾನಸಿಂಹನ ಸೈನಿಕರು ಗುಡ್ಡಗಾಡು ಪ್ರದೇಶದ ಪ್ರತಿಯೊಂದು ಸ್ಥಳದಲ್ಲಿ ಪ್ರತಾಪನನ್ನು ಹುಡುಕುತಲಿದ್ದರು, ಆದರೆ ರಜಪೂತರೊಡನೆ ಇವರ ಸಾಕ್ಷಾದ್ದರ್ಶನವಾಗಲಿಲ್ಲ; ಆದರೂ ಒಮ್ಮೊಮ್ಮೆ ರಜಪೂತ-ಅಶ್ವಾರೋಹಿಗಳು ಅಕಸ್ಮಾತ್ತಾಗಿ ಮೊಗಲ ಸೈನಿಕರ ಮೇಲೆ ಬೀಳುತ್ತಿದ್ದರು, ಮೊಗಲರು ಯುದ್ಧಕ್ಕೆ ಸಿದ್ಧರಾಗಿ ಮುಂದುವರಿಯುವಷ್ಟರಲ್ಲಿಯೇ, ಅವರು ಪುನಃ ಅಡಗಿ ಹೋಗುತ್ತಿದ್ದರು; ಅವರೆಲ್ಲಿ ಹೋದರೆಂಬದನ್ನು ಮೊಗಲರಿಗೆ ಗೊತ್ತು ಹಚ್ಚುವದಕ್ಕಾಗುತ್ತಿರಲಿಲ್ಲ. ಈ ಮೇರೆಗೆ ರಜಪೂತರು ಯಾವಾಗಲಾದರೊಮ್ಮೆ ಅಕಸ್ಮಾತ್ತಾಗಿ ಮೊಗಲರ ಮೇಲೆ ಬಿದ್ದು, ಬಹಳ ಹಾನಿಯನ್ನುಂಟುಮಾಡುತ್ತಿದ್ದರು. ಎರಡು ಮೂರು ದಿವಸವಳವರೆಗೆ ರಜಪೂತರು ಕಾಣಿಸದಂತಾದ ಕೂಡಲೇ, ಮೊಗಲರು ತಮ್ಮ ಹೆದರಿಕೆಯಿಂದ ಅವರು ಓಡಿಹೋದರೆಂದು ಭಾವಿಸುತ್ತಿದ್ದರು;

§ A. N. III P. 278 ಮಹಾರಾವಳನ ಕನ್ಯಾದಾನದ ಸಂಗತಿಯು ಬೇರೆ ಕಡೆಯಲ್ಲಿಲ್ಲ Raj. Gezetteer, Vol I. P. 275. Malleson, "Native states." P. 128.

ಮತ್ತು ಅವರು ರಂಜಿತಭಾಷೆಯಿಂದ ರಜಪೂತರನ್ನು ಓಡಿಸಿದೆವೆಂಬ ಸುದ್ದಿಯನ್ನು ಬಾದಶಹನ ದರಬಾರಕ್ಕೆ ಕಳುಹಿಸುತ್ತಿದ್ದರು; ಆದರೆ ಈ ಸುದ್ದಿಯು ಮುಟ್ಟಿತೋ ಇಲ್ಲವೋ ಎನ್ನುವಷ್ಟರಲ್ಲಿ ರಜಪೂತರು ಪುನಃ ಕಾಣಿಸಿಕೊಳ್ಳುತ್ತಿದ್ದರು; ಇವರ ಭಿಲ್ಲಸೇನೆಯ ಬಾಣಗಳ ಆಘಾತದಿಂದ ಮೊಗಲ ಶಿಬಿರದಲ್ಲಿ ಹಾ ಹಾಕಾರವೇಳು ತ್ತಿದ್ದಿತು. ಮಾನಸಿಂಹನು ರಜಪೂತರನ್ನು ಸೋಲಿಸಿ ಓಡಿಸಿದೆನೆಂದು ಬಾದಶಹನಿಗೆ ತಿಳುಹಿಸಿ, ಶಿಫಾರಸು ಪಡೆಯಬೇಕೆಂದು ಬಹುಸಾರೆ ಪ್ರಯತ್ನಮಾಡಿದನು, ಆದರೆ ಮುಂದೆ ನಡೆಯುತ್ತಿರುವ ಘಟನಾವಳಿಗಳಿಂದ ಇವನ ಈ ವರ್ಣನೆಯು ಪತ್ರಗಳೆಲ್ಲ ಅಸತ್ಯವಾದವುಗಳೆಂದು ಗೊತ್ತಾಗುತ್ತಲಿದ್ದಿತು ಈ ಮೇರೆಗೆ ಚಳಿಗಾಲವು ಸಮಾಪ್ತವಾಯಿತು. ಅರವಲೀ ಪರ್ವತದ ದಾರುಣವಾದ ಶೀತದಲ್ಲಿ, ನಿರಾಶ್ರಯ ಕಂದರಗಳಲ್ಲಿ, ಪ್ರತಾಪನ ಪರಿವಾರ ವರ್ಗವೂ, ಪ್ರಭುಭಕ್ತರಾದ ರಜಪೂತರೂ ಎಂತಹ ಭೀಷಣ ಕಷ್ಟವನ್ನು ಸಹಿಸಿದರೆಂಬದನ್ನು ಭಾಷೆಯಿಂದ ವರ್ಣನೆ ಮಾಡಲಿಕ್ಕೆ ಬರುವಂತಿಲ್ಲ.

ಮಕ್ಕಾ-ಯಾತ್ರಿಕರ ರಕ್ಷಕರಾಗಿ ಹೊರಟ ಬಾದಶಾಹೀ ಸೈನಿಕರು ಈದರದಲ್ಲಿ ತಮ್ಮ ಶಿಬಿರವನ್ನು ಬಿಟ್ಟಿದ್ದರು; ಈ ಸೈನ್ಯಕ್ಕೆ ಕೂಲಿಜಖಾನನು ಮುಖ್ಯ ಸೇನಾಪತಿಯಾಗಿದ್ದನು. ಬಾದಶಹನು ಈದರದಿಂದ ಬೇರೆ ಸೇನಾಪತಿಯನ್ನು ಕಳಿಸಿ, ಯಾತ್ರಿಕರನ್ನು ಸುರತಕ್ಕೆ ಮುಟ್ಟಿಸುವ ಆಲೋಚನೆಯಲ್ಲಿದ್ದನು; ಆದರೆ ಗುಜರಾಥದ ಮೇರೆಯಲ್ಲಿ ಯಾತ್ರಿಕರ ಮೇಲೆ ಬಹಳ ಅತ್ಯಾಚಾರವು ನಡೆಯುವದೆಂಬ ಸುದ್ದಿಯನ್ನು ಕೇಳಿ, ಬಾದಶಹನು ಕೂಲಿಜಖಾನನನ್ನೇ ಯಾತ್ರಿಗಳೊಡನೆ ಕಳುಹಿಸಿದನು; ಮತ್ತು ಅಸಫಖಾನನನ್ನು ಈದರದಲ್ಲಿಯ ಸೈನಿಕರ ಅಧಿನಾಯಕನನ್ನಾಗಿ ಮಾಡಿದನು. ಈ ಸುಸಮಯದಲ್ಲಿ ಈದರದ ರಜಪೂತ ರಾಜನಾದ ನಾರಾಯಣದಾಸನು ಭಯಂಕರವಾದ ಬಂಡಾಯವನ್ನೆಬ್ಬಿಸಿದನು. ಇವನು ವಂಶವಾರ ಮತ್ತು ಡೊಂಗರಪುರಗಳ ರಾವಳರ ಉದಾಹರಣೆಯಂತೆ ನಡೆದುಕೊಂಡಿರಲಿಲ್ಲ; ಇವನು ಮೊದಲಿನಿಂದಲೂ ಮಹಾರಾಣಾನ ಪವಿತ್ರ ಆದರ್ಶದ ಅನುಕರಣಮಾಡಿ, ಛಾಯೆಯಂತೆ ರಾಣಾನ ಪಂಥವನ್ನವಲಂಬಿಸಿದ್ದನು. ಮೊಗಲ ಸೈನಿಕರು ಈದರಕ್ಕೆ ಬಂದೊಡನೆಯೇ ಇವನು ರಾಣಾನಂತೆ ಪರ್ವತವನ್ನಾಶ್ರಯಿಸಿದನು; ಮತ್ತು ಅಡವಿ-ಅಡವಿಯಲ್ಲಿ ಅಲೆದು ಸೈನ್ಯವನ್ನು ಕೂಡಿಸಹೊಡಗಿದನು. ಕೂಲಿಜಖಾನನು ಗುಜರಾಥಕ್ಕೆ ಹೊರಟುಹೋದ ಕೂಡಲೆ,

ಇವನು ಬೇರೆ ಬೇರೆ ಸ್ಥಳಗಳಲ್ಲಿ ಮೊಗಲರ ಮೇಲೆ ಬಿದ್ದು, ಅವರನ್ನು ಗೋಳಾಡಿಸಿಬಿಟ್ಟನು.

ಅಕಬರನು ವಂಶವಾರದ ಮೇರೆಯಲ್ಲಿರುವ ರಾವಳರು ಅಧೀನತ್ವವನ್ನೊಪ್ಪಿಕೊಂಡದ್ದರಿಂದ ಆನಂದಿತನಾದನು. ಇವನು ಇನ್ನು ತನ್ನ ಕರ್ತವ್ಯವು ಮುಗಿಯಿತೆಂದು ಭಾವಿಸಿದನು; ಯಾಕಂದರೆ ಇವನು ನಾಲ್ಕೂ ದಿಕ್ಕಿನಿಂದ ಮೇವಾಡವನ್ನು ಮುತ್ತುವ ವ್ಯವಸ್ಥೆಯನ್ನು ಮಾಡಿಸಿದ್ದನು; ಇದರಿಂದ ಪ್ರತಾಪಸಿಂಹನು ಪಾರಾಗುವಂತಿರಲಿಲ್ಲ; ಕಾರಣ ಪ್ರತಾಪನು ಅನನ್ಯೋಪಾಯನಾಗಿ ತನ್ನ ಕೈಯಲ್ಲಿ ಸಿಗುವನೆಂದು ಬಾದಶಹನ ಮನವರಿಕೆಯಾಯಿತು; ಅದರಿಂದ ಬಾದಶಹನು ಮರಳಿ ರಾಜಧಾನಿಗೆ ಹೋಗುವ ಮನಸುಮಾಡಿದನು. ಇವನು ಮಾಳವದೊಳಗಿರುವ ದೀಪಾಲಪುರದಲ್ಲಿರುವಾಗ, ಈದರದಲ್ಲೆದ್ದ ಬಂಡಾಯದ ಸುದ್ದಿಯನ್ನು ಕೇಳಿದನು. ಈ ಸಮಯದಲ್ಲಿ ಅಕಬರನು ಹೊಸವರ್ಷದ ಆನಂದೋತ್ಸವ*ದ ಸಿದ್ಧತೆಯನ್ನು ಮಾಡುತ್ತಲಿದ್ದನು. ಈ ನೂತನ ಉತ್ಪಾತದ ಸುದ್ದಿಯನ್ನು ಕೇಳಿ, ಶಾಂತಿಶೂನ್ಯನಾಗಿ ಹೋದನು.

ರಾವಳನಾರಾಯಣನು ಪ್ರತಾಪಸಿಂಹ ಮತ್ತು ಅನೇಕ ಜಮೀನದಾರರ ಸಹಾಯದಿಂದ ಅಸಮಸಾಹಸಿಕರಾದ ಸೈನಿಕರನ್ನು ಕೂಡಿಸಿಕೊಂಡು, ಈದರದಿಂದ ಹತ್ತುಕ್ರೋಶ ದೂರದಲ್ಲಿ ಬಂದಿಳಿದನು‡ ರಾತ್ರಿಯ ಸಮಯದಲ್ಲಿ ಶತ್ರು-ಸೇನೆಯ ಮೇಲೆ ಬೀಳುವದು ಇವನ ಉದ್ದೇಶವಾಗಿದ್ದಿತು; ಆದರೆ ಅಸಫಖಾನನು ಮೊದಲೇ ಈ ಸುದ್ದಿಯನ್ನು ತಿಳಿದು, ಬಹು ಎಚ್ಚರಿಕೆಯಿಂದಿದ್ದನು. ಅಸಫಖಾನನು ಈದರದ ರಕ್ಷಣೆಗಾಗಿ ಶೇರಖಾನನ ಅಧೀನದಲ್ಲಿ ಐದುನೂರು ಸೈನಿಕರನ್ನಿರಿಸಿ, ರಾವಳನು ತಮ್ಮನ್ನು ಮುತ್ತುವ ಪೂರ್ವದಲ್ಲಿಯೇ, ರಾತ್ರಿಯ ಕಾಲದಲ್ಲಿ ಅವನ

* ಇದು ಅಕಬರನ ರಾಜತ್ವದ ಇಪ್ಪತ್ತೆರಡನೆಯ ವರ್ಷವು, ದೀಪಾಲಪುರದಲ್ಲಿ ಸನ್ ೧೫೭೭ ರ ಮಾರ್ಚ ೧೧ನೇ ತಾರೀಖಿನ ದಿವಸ ಹೊಸವರ್ಷದ ಉತ್ಸವವಾಯಿತು

‡ " The Raja of Idar had with the assistance of Rana Kika and other Zamindars collected an army and advanced to within 10 cosses of the station of Idar, intending to make a night attack " Badaoni ( Lowe ) II P. 251. ಮುಸಲ್ಮಾನರು ಪ್ರತಾಪನಿಗೇ ರಾಣಾಕೀಕಾ ಅನ್ನುತ್ತಿದ್ದರೆಂದು ಹಿಂದೈ ಹೇಳಿದ್ದೇವೆ

ಮೇಲೆ ಬೀಳುವುದಕ್ಕಾಗಿ ಮುಂದೆ ಸಾಗಿದನು. ಉಭಯಪಕ್ಷಗಳಲ್ಲಿ ಘೋರ ಯುದ್ಧವಾಯಿತು. ಈ ಭೀಷಣಕಾಳಗದಲ್ಲಿ ನಾರಾಯಣದಾಸನ ರಜಪೂತ ಮತ್ತು ಭಿಲ್ಲ ಸೈನಿಕರು ಅದ್ಭುತವಾದ ರಣಕೌಶಲ್ಯವನ್ನು ತೋರಿಸಿದರು. ಇವರು ಹಸ್ತಾಹಸ್ತಿಯುದ್ಧದಲ್ಲಿ ಭೀಷಣವೇಗದಿಂದ ಮೊಗಲ ವ್ಯೂಹದ ಮುಂಭಾಗದ ಮೇಲೆ ಬಿದ್ದರು; ಇದರಿಂದ ಈ ಭಾಗದ ಸೈನ್ಯವು ಛಿನ್ನಭಿನ್ನವಾಗಿ ಹೋಯಿತು. ಮಹಮ್ಮದ ಮುಕಿಮ ಮತ್ತು ಕುತುಬಖಾನನು ಸತ್ತುಹೋದರು, ನೂರಕೂಲಿಜ ಖಾನನು ಗಾಯಾಳುವಾಗಿದ್ದರೂ, ಯುದ್ಧಮಾಡುತ್ತಲಿದ್ದನು. ಈ ಸಾರೆ ಮೊಗಲರು ಸೋಲುವರೆಂದು ಕಂಡುಬಂದಿತು. ಈ ಸಮಯದಲ್ಲಿ ಮೊಗಲರಿಗೆ ಹೊಸ ಸೈನ್ಯದ ಸಹಾಯವು ಬಂದೊದಗಿದ್ದರಿಂದ ರಜಪೂತರು ಪರಾಜಿತರಾದರು. ನಾರಾಯಣದಾಸನು ತನ್ನ ಹತಾವಶಿಷ್ಟವಾದ ಸೈನ್ಯವನ್ನು ತೆಗೆದುಕೊಂಡು ಪರ್ವತವನ್ನಾಶ್ರಯಿಸಿದನು.+

ಮೊಗಲರು ಜಯಶಾಲಿಗಳಾದರು. ಈ ವಿಜಯವಾರ್ತೆಯು ದೀಪಾಲಪುರದಲ್ಲಿರುವ ಬಾದಶಹನಿಗೆ ತಿಳಿಯಿತು. ಅವನು ರಾಜಾ ಭಗವಾನದಾಸನನ್ನು ಹೊಗಳಿದನು; ಮತ್ತು ಇತರ ವೀರಸಮೂಹವನ್ನು ಬಹುಮಾನಗಳಿಂದ ಸಂತೋಷಗೊಳಿಸಿದನು. ಈ ಸಮಯದಲ್ಲಿ ಶಿರೋಹಿಯಿಂದ ದೇವರಾಯನ ಪರಾಜಯದ ಸುದ್ದಿಯೂ ಬಂದಿತು. ಅಕಬರನು ಅತ್ಯಾನಂದದಿಂದ ಹೊಸವರ್ಷದ ಉತ್ಸವವನ್ನು ಬಹು ವಿಜೃಂಭಣೆಯಿಂದ ಜರಗಿಸಿದನು; ಗುಜರಾಥವನ್ನು ಜಯಿಸುವದಕ್ಕಾಗಿ ರಾಜಾ ತೋಡರಮಲ್ಲನನ್ನು ಕಳುಹಿಸಿದನು, ಮತ್ತು ಇತರ ಯಾವತ್ತು ವ್ಯವಸ್ಥೆಗಳನ್ನು ಮಾಡಿ, ದೀಪಾಲಪುರವನ್ನು ಬಿಟ್ಟು, ಮುಂದೆ ಹೊರಟನು. ಇವನು ಕೆಲವು ದಿವಸಗಳಲ್ಲಿ ರಾಜಧಾನಿಯಾದ ಫತ್ತೇಪುರವನ್ನು ಮುಟ್ಟಿದನು. ಇಷ್ಟರಲ್ಲಿ ಇವನ ಅಪ್ಪಣೆಯಂತೆ ಜೈನಖಾನನು ಬುಂದಿಯನ್ನು ಜಯಿಸುವದಕ್ಕಾಗಿ (೧೫೭೭ನೆಯ ಮಾರ್ಚ ೩೦) ಹೋಗಿದ್ದನು. ಬುಂದಿಯ ದುರ್ಗವೂ,

---

+ " In the fight which ensued the van of the imperialists gave way, and Mugim-i-Nagshbandi, the leader, was Killed. The day was almost lost, when Acaf, with the troops of the wings, pressed forward and routed the enemies. " Blockmann, P. 433. See also A. N. ( Beveridge ) III P. 281.

ಪಟ್ಟಣವೂ ಅತಿ ಸುಂದರವಾಗಿವೆ; ಉದಯಪುರವನ್ನುಳಿದು ಇಂತಹ ಸುಂದರ ಪಟ್ಟಣವು ರಾಜಸ್ಥಾನದಲ್ಲಿ ಬೇರೊಂದಿಲ್ಲ. ಬುಂದಿಯ ಅರಸನಾದ ರಾಯ ಸೂರ್ಯನನು ವಂಶಗೌರವವನ್ನೂ, ಸತ್ಯಬಂಧನವನ್ನೂ ಹರಿದೊಗೆದು, ಅಕಬರನಿಗೆ ಅವನತನಾದನು.* ಈ ಸೂರ್ಯನರಾವನು ಏನೇ ಮಾಡಲಿ, ಇವನ ನಡುವಿನ ಮಗನಾದ ದುದಾರಾವನು ಸಹಜವಾಗಿ ಆತ್ಮವಿಕ್ರಯಮಾಡಲು ಮನಸು ಮಾಡಲಿಲ್ಲ. ಇವನು ಈ ಸಮಯದಲ್ಲಿ ಬಂಡಾಯವನ್ನೆಬ್ಬಿಸಿದನು. ಈ ಬಂಡಾಯವನ್ನು ಮುರಿಯುವದಕ್ಕಾಗಿ ಬಾದಶಹನು ಜೈನಖಾನನನ್ನು ಕಳುಹಿಸಿಕೊಟ್ಟನು ಸ್ವತಃ ಸೂರ್ಯನರಾವನು ಇವನೊಡನೆ ಕೂಡಿ, ಮಗನ ವಿರುದ್ಧವಾಗಿ ಶಸ್ತ್ರವೆತ್ತಿದನು. ಈ ರೀತಿಯಿಂದೊದಗಿದ ಆತ್ಮಕಲಹವು ದೇಶಘಾತಕವಾಗಿರುವದೆಂಬದನ್ನು ಹೇಳಲವಶ್ಯವಿಲ್ಲ ದುದಾರಾವನು ಪರಾಜಿತನಾಗಿ, ಪರ್ವತದ ಅಂಬಿನಲ್ಲಿ ಆಶ್ರಯಹೊಂದಿದನು, ಮೊಗಲಸೇನಾಪತಿಯು ಬುಂದಿದುರ್ಗವನ್ನು ಕೈವಶಮಾಡಿಕೊಂಡು ಕುಳಿತನು.‡ ಸೀಮಾಂತಪ್ರದೇಶದಲ್ಲಿರುವ ಬುಂದಿಯು ರಾಜಸ್ಥಾನದ ಒಂದು ಮುಖ್ಯ ದುರ್ಗವಾಗಿತ್ತು. ಇದೂ ಶತ್ರುಗಳ ಹಸ್ತಗತವಾಯಿತು.

ಪ್ರತಾಪನಿಗೆ ಹೊರಗಿನಿಂದ ಸಹಾಯದೊರೆಯುವ ಯಾವ ಆಶೆಯೂ ಇರಲಿಲ್ಲ. ಈದರ ಯುದ್ಧದ ತರುವಾಯ+ ನಾರಾಯಣದಾಸನು ಸಸೈನ್ಯನಾಗಿ ಬಂದು ಪ್ರತಾಪನನ್ನು ಕೂಡಿದನು. ಮುಂದೆ ಮಳೆಗಾಲವು ಪ್ರಾರಂಭವಾಯಿತು, ಮಳೆಗಾಲದಲ್ಲಿ ಮೊಗಲರು ಪರ್ವತಪ್ರದೇಶದಲ್ಲಿ ವಾಸಮಾಡಲು ಸಮರ್ಥರಾಗದೆ, ದೂರದಲ್ಲಿರುವ ಸಮಭೂಮಿಗೆ ಹೊರಟುಹೋದರು ಇದರಿಂದ ಪ್ರತಾಪನು ಕೆಲವು ದಿವಸಗಳ ಮಟ್ಟಿಗಾದರೂ ನಿಶ್ಚಿಂತನಾದನು. ಸಾಮಂತಸರದಾರರ ಆಲೋಚನೆಯಂತೆ ಇವನು ತನ್ನ ಸೈನ್ಯದೊಡನೆ ಕಮಲಮೀರದುರ್ಗಕ್ಕೆ ಹೋಗಿ,

---

* Rajputana Gazetter Vol I P 220 235, Rajasthan Vol. II P 390-1.

‡ A N III P P 284 5.

\+ ಈ ಸಮಯದಲ್ಲಿ (೧೫೭೭ನೇ ಫೆಬ್ರುವರಿ) ಮೊಗಲರೊಡನಾದ ಒಂದು ಯುದ್ಧದಲ್ಲಿ ಪ್ರತಾಪನು ಸೋತನೆಂದು ಟಾಡ್‌ಸಾಹೇಬರ ಇತಿಹಾಸದಲ್ಲಿ ಹೇಳಿದೆ (Raj Vol I P. 277) ಆದರೆ ಈ ಈದರ ಯುದ್ಧದ ಹೊರತು ಬೇರೆ ದೊಡ್ಡ ಯುದ್ಧಗಳ ಉಲ್ಲೇಖವು ಮುಸಲ್ಮಾನರ ಇತಿಹಾಸಗಳಲ್ಲಿಲ್ಲ ಆದರೂ ಮೊಗಲರೊಡನೆ ಮೇಲಿಂದ ಮೇಲೆ ರಜಪೂತರ ಸಣ್ಣ ಸಣ್ಣ ಯುದ್ಧಗಳಾಗುತ್ತಿದ್ದವು ಇವುಗಳ ಗಣನೆಯನ್ನು ಮಾಡಲಿಕ್ಕೆ ಬರುವಂತಿಲ್ಲ .

ಅಲ್ಲಿ ವಾಸಮಾಡತೊಡಗಿದನು; ಮತ್ತು ಆಹಾರದ ಪದಾರ್ಥಗಳನ್ನೂ, ಮತ್ತು ಇತರ ಯುದ್ಧೋಪಕರಣಗಳನ್ನೂ ಕೂಡಿಸತೊಡಗಿದನು. ಯಾಕಂದರೆ ಮಳೆಗಾಲವು ಮುಗಿದ ಕೂಡಲೇ ಪುನಃ ಮೊಗಲರು ದಂಡೆತ್ತಿ ಬರುವವರಾಗಿದ್ದರು. ಆದರಿಂದ ಒಂದು ವರ್ಷದವರೆಗೆ ಮೊಗಲರು ಮುತ್ತಿಗೆಯನ್ನು ಹಾಕಿದರೂ ತಾವು ತಡೆದುಕೊಳ್ಳಲಿಕ್ಕೆ ಸಮರ್ಥರಾಗುವಷ್ಟು ತಯಾರಿಯನ್ನು ರಜಪೂತರು ಮಾಡಿಕೊಳ್ಳಬೇಕಾಗಿದ್ದಿತು. ಕಾರಣ ಇವರು ಈ ಸಿದ್ಧತೆಯನ್ನು ಮಾಡಿಕೊಂಡು, ಯುದ್ಧದ ಮಾರ್ಗವನ್ನು ನಿರೀಕ್ಷಿಸುತ್ತ ಕುಳಿತುಕೊಂಡರು.

---

# ಷೋಡಶ ಪರಿಚ್ಛೇದ.

## ಕಮಲಮೀರದುರ್ಗ.

ಸಮನೆಲದಿಂದತ್ಯುನ್ನತ | ಸುಮನೋಹರ ತಾಣದಲಿರುವ ಕಮಲಮೀರಂ ||
ವಿಮಲಗಿರಿ-ದುರ್ಗಮಿರ್ಪುದ | ಸಮಗೋಡೆಗಳಿಂ ಬಳಿಯಿಸಿ ರಿಪುದುರ್ಭೇದ್ಯಂ ||೧||

ಕಮಲಮೀರವು ಅತಿ ಮನೋಹರವಾದ ಸ್ಥಳವು. ಮೇವಾಡದ ವಾಯುವ್ಯ ಮೇರೆಯಿಂದ ಅರವಲೀ ಪರ್ವತಮಾಲೆಯು ವಿಸ್ತೃತವಾಗುತ್ತ ಪೂರ್ವದ ಕಡೆಗೆ ಬಹು ದೂರದ ವರೆಗೆ ಹೋಗಿದೆ. ಈ ಸೀಮಾಂತರದ ಸಮೀಪದಲ್ಲಿರುವ ಒಂದು ಎತ್ತರವಾದ ಗಿರಿ-ಶಿಖರದಲ್ಲಿ ಕಮಲಮೀರದುರ್ಗವಿದೆ. ಈ ಕೋಟೆಯನ್ನು ಕಟ್ಟಿಸಿದವನ ರಣಕೌಶಲ್ಯವನ್ನೂ, ಸೌಂದರ್ಯಜ್ಞಾನವನ್ನೂ ನಾವು ಹೊಗಳದಿರಲಾರೆವು. ಮೇವಾಡದ ಪೂರ್ವಭಾಗದಲ್ಲಿ ಚಿತೋಡಕ್ಕೆ ಮಹತ್ವವಿರುವಂತೆ, ಪಶ್ಚಿಮ ಭಾಗದಲ್ಲಿ ಕಮಲಮೀರವು ಅತ್ಯಂತ ಮಹತ್ವದ ಸ್ಥಳವು. ಚಿತೋಡವು ಪ್ರಾಂತರ ಮಧ್ಯದಲ್ಲಿ ಒಂದು ಶಿಖರದ ಮೇಲಿರುವದು; ಕಮಲಮೀರವು ಪರ್ವತಮಾಲೆಯ ಮಧ್ಯದಲ್ಲಿ ಗಿರಿ-ಶಿಖರದಲ್ಲಿರುವದು. ಇವೆರಡೂ ಮೇವಾಡದ ರಾಜಧಾನಿಗಳಾಗಿವೆ. ಚಿತೋಡವು ಶತ್ರುಗಳ ಅಧೀನವಾದಾಗೆಲ್ಲ, ಕಮಲಮೀರವು ಮಹಾರಾಣಾರ ಆಶ್ರಯಸ್ಥಾನವಾಗಿದೆ. ಇದು ರಾಜಧಾನಿಯೇಕೆ ಆಯಿತು? ಇದರಲ್ಲಿ ವಿಶೇಷತ್ವವೇನು? ಇದನ್ನು ನಾವು ಇಲ್ಲಿ ಹೇಳುವೆವು.

ಕಮಲಮೀರದ ಉತ್ತರದಿಂದ ಅರವಲೀ ಪರ್ವತವು ಕ್ರಮವಾಗಿ ಎತ್ತರವಾಗುತ್ತ ಬಂದಿದೆ. ಇದರ ಪೂರ್ವದಿಕ್ಕಿನಲ್ಲಿ ಪರ್ವತಮಾಲೆಯು ಸಾಲುಸಾಲಾಗಿ ಕ್ರಮವಾಗಿ ಮುಂದಕ್ಕೆ ಹೋಗಿದೆ. ಪಶ್ಚಿಮ ದಿಕ್ಕಿನಲ್ಲಿಯು ಪರ್ವತವು ಕಡಿಮೆ ಎತ್ತರವಾದದ್ದೂ, ದೂರದ ವರೆಗೆ ವಿಸ್ತಾರವಾಗದ್ದೂ ಅದೆ. ಈ ದಿಕ್ಕಿನಿಂದ ಪರ್ವತವನ್ನು ಹತ್ತುವದು ಬಹು ಕಠಿಣವು; ಯಾಕಂದರೆ ಮಾರ್ಗವು ಸರಿಯಾದದ್ದಿಲ್ಲ. ಎತ್ತರವಾದ ಪರ್ವತವು ಒಮ್ಮೆಲೇ ಇಲ್ಲದಂತಾಗಿದೆ. ಅದರಿಂದ ಶತ್ರುಗಳು ಈ ದಿಕ್ಕಿನಿಂದ ಪರ್ವತವನ್ನೇರಿ ಬರಲಾರರು. ಪೂರ್ವದಿಕ್ಕಿನಿಂದ ಶತ್ರುಗಳು ಏರಿಬರಬಹುದಾಗಿದೆ, ಆದರೆ ಈ ಮಾರ್ಗವೂ ಅತ್ಯಂತ ಬಿಕ್ಕಟ್ಟಿನದಿರುವದು. ಈ ದಿಕ್ಕಿನಿಂದ ಶತ್ರುಗಳು ಬರಬೇಕಾದಲ್ಲಿ ಅನೇಕ ಪರ್ವತದ ಸಾಲುಗಳನ್ನು ದಾಟಿ ಬರಬೇಕಾಗುವದು; ಕೆಲವೆಡೆಯಲ್ಲಿ ಪರ್ವತ, ಬೇರೆ ಕೆಲವೆಡೆಯಲ್ಲಿ ಭಯಂಕರವಾದ ಅರಣ್ಯ; ಈ ಯಾವತ್ತನ್ನೂ ದಾಟಿ ಬರುವದು ಅತೀವ ದುಸ್ತರವಾದುದೆಂಬದನ್ನು ಹೇಳಬೇಕಾಗಿಲ್ಲ, ಕಾರಣ ಕಮಲಮೀರವು ಈ ದಿಕ್ಕಿನಲ್ಲಿ ಒಂದು ತರದಿಂದ ದುರ್ಭೇದ್ಯವಾಗಿದೆಯೆಂದು ಹೇಳಬಹುದು. ದಕ್ಷಿಣದಿಕ್ಕಿನಲ್ಲಿ ಪರ್ವತದ ಸಾಲುಗಳು ಬಹು ದೂರದ ವರೆಗೆ ಹಬ್ಬಿವೆ; ಇದರ ಮಾರ್ಗಗಳು ಬಹು ಭಯಾನಕವಾಗಿವೆ; ಅದರಿಂದ ಈ ದಿಕ್ಕಿನಿಂದ ಶತ್ರುಗಳು ಬರುವಂತಿರಲಿಲ್ಲ. ಶತ್ರುಗಳು ನಾಲ್ಕೂ ದಿಕ್ಕಿನ ಸ್ಥಿತಿಯನ್ನವಲೋಕಿಸಿ, ಕಮಲಮೀರಕ್ಕೆ ಬರಬೇಕಾದಲ್ಲಿ, ಬಹುಶಃ ಪೂರ್ವದಿಕ್ಕಿನಿಂದಲೇ ಬರುವ ಪ್ರಯತ್ನ ಮಾಡುತ್ತಿದ್ದರು.

ಪೂರ್ವಭಾಗದಲ್ಲಿ *ನಾಥದ್ವಾರದಿಂದ ಮಾರ್ಗವು ಬನಾಸ ನದಿಯ ಒಂದು ಸಣ್ಣ ಶಾಖೆಯ ದಂಡೆಗುಂಟ ಸಾಗಿ, ಮುಂದೆ ಪರ್ವತದ ಪ್ರದೇಶವನ್ನು ಪ್ರವೇಶಿಸುವದು. ಈ ಸ್ಥಳದಲ್ಲಿ ಸುತ್ತಲೂ ನೋಡಿದರೆ, ಸಮನೆಲವಿರುವಲ್ಲಿ ಹೊಲಗಳಿದ್ದದ್ದು ಕಂಡುಬರುವದು. ಇಲ್ಲಿ ಸಾಕಷ್ಟು ಧಾನ್ಯವು ಬೆಳೆಯುವದು; ಸುಂದರವಾದ ಕಬ್ಬಿನ ತೋಟಗಳು ಕಂಡುಬರುವವು; ಬೇರೆ ಬೇರೆ ಕಡೆಯಲ್ಲಿ ಅಸಂಖ್ಯ ಮಾವಿನ ಗಿಡಗಳಿರುವದು ಕಾಣಿಸುವದು; ಮತ್ತು ಇವುಗಳಲ್ಲಿ ಸಾಕಷ್ಟು ಹಣ್ಣುಗಳಾಗುವವು. ಈ ಸ್ಥಳದ ನಿರ್ಮಲ ಹವೆಯು ಜೀರ್ಣದೇಹದಲ್ಲಿ ನವೀನ ಶಕ್ತಿಯನ್ನುಂಟುಮಾಡುವದು; ಬೇನೆಯ ಮನುಷ್ಯನಲ್ಲಿ ಆಹಾರದ ರುಚಿಯನ್ನು ಹುಟ್ಟಿಸುವದು.

---

* ಉದಯಪುರದಿಂದ ೨೨ ಮೈಲು ಉತ್ತರದಲ್ಲಿ ಬನಾಸ ನದಿಯ ದಕ್ಷಿಣ ತೀರದಲ್ಲಿರುವ ಪ್ರಾಚೀರವೇಷ್ಟಿತ ಪಟ್ಟಣವು. ಇಲ್ಲಿರುವ ಶ್ರೀನಾಥ ಅಥವಾ ಕೃಷ್ಣನ ಗುಡಿಯು ವಿಖ್ಯಾತವಾಗಿದೆ.

ಈ ಗುಡ್ಡದ ಮಾರ್ಗದಿಂದ ಪಶ್ಚಿಮಕ್ಕೆ ಹಾಗೇ ಮುಂದಕ್ಕೆ ಸಾಗಿದರೆ, ವೃಕ್ಷಶೋಭಾಮಯವಾದುದೊಂದು ವಿಸ್ತೀರ್ಣವಾದ ಎತ್ತರ ಪ್ರದೇಶಕ್ಕೆ ಹೋಗುವೆವು; ಇದರ ನಾಲ್ಕೂ ಕಡೆಯಲ್ಲಿ ಪರ್ವತಮಾಲೆಗಳು ಗೋಡೆಗಳಂತೆ ಸುತ್ತುಗಟ್ಟಿವೆ. ಈ ಎತ್ತರ ಸ್ಥಳವು ಒಂದು ಸುಂದರವಾದ ಪಟ್ಟಣವಾಗಿದ್ದು, ಇದಕ್ಕೆ ಕೈಲಬಾರವೆಂಬ ಹೆಸರಿದೆ. ಮಹಾವೀರ ಹಂಬೀರನು ಒಂದು ಕಾಲದಲ್ಲಿ ಈ ಸ್ಥಳದಲ್ಲಿ ವಾಸಮಾಡುತ್ತಿದ್ದನು.† ಮಹಾಶೂರನಾದ ಪುತ್ತನು ಈ ಕೈಲಬಾರದ ನಿವಾಸಿಯು. ಈ ಉಭಯರ ಸಂಪರ್ಕದಿಂದ ಗೌರವಿತವಾದ ಈ ನಗರವು ಪವಿತ್ರವಾಗಿದೆ. ಇದರಿಂದ ವೀರತ್ವವು ಪರ್ವತಪ್ರದೇಶದಲ್ಲಿ ಪ್ರಕಟವಾಗಲು ಹೆಚ್ಚಾಗಿ ಇಚ್ಛಿಸುವದೆಂದು ತಿಳಿದುಬರುವದು.

ಕೈಲಬಾರದಿಂದ ನಾಥದ್ವಾರದ ಮಾರ್ಗವು ಪಶ್ಚಿಮಕ್ಕೆ ನಡೆದು, ಹಾತಿಗಡಾನಾಲದಲ್ಲಿ ಕೂಡಿ, ಮುಂದೆ ಮರುಭೂಮಿಗೆ ಹೋಗಿದೆ. ಈ ಮಾರ್ಗದ ಈಗಿನ ಹೆಸರು ಗಣೇರುವರ್ತ್ಮ. ಕೈಲಬಾರದಿಂದ ಮತ್ತೊಂದು ಮಾರ್ಗವು ದಕ್ಷಿಣಾಭಿಮುಖವಾಗಿ ಹೊರಟು, ಗಹನವಾದ ಪ್ರದೇಶದಲ್ಲಿ ಹಾಯ್ದುಹೋಗಿದೆ. ಈ ಮಾರ್ಗದ ಒಂದು ಶಾಖೆಯು ಗೋಗುಂಡ ಮತ್ತು ಉದಯಪುರ ಪಟ್ಟಣಗಳಿಗೆ ಹೋಗಿದೆ. ಉದಯಪುರದ ಎತ್ತರವು ಸಮುದ್ರಸಪಾಟಿಯಿಂದ ಸುಮಾರು ೨೦೦೦ ಫೂಟ; ಇದಕ್ಕಿಂತಲೂ ಗೋಗುಂಡವು ಎತ್ತರ ಸ್ಥಳದಲ್ಲಿದೆ; ಇದು ಸುಮಾರು ೨೭೫೦ ಫೂಟು ಎತ್ತರದಲ್ಲಿದೆ. ಕೈಲಬಾರದ ಎತ್ತರವು ಸುಮಾರು ೩ ಸಾವಿರ ಫೂಟ, ಇದಕ್ಕಿಂತ ಎತ್ತರದಲ್ಲಿರುವ ಕಮಲಮೀರವು ಸಮುದ್ರ ಸಪಾಟಿಯಿಂದ ಸುಮಾರು ೩೩೫೩ ಫೂಟ ಎತ್ತರದಲ್ಲಿದೆ. ಕಮಲಮೀರದ ಎಲ್ಲಕ್ಕೂ ಎತ್ತರವಾದ ಸ್ಥಳದಲ್ಲಿ ಮಹಾರಾಣಾನ ಅರಮನೆಯುದೆ; ಇದರ ಹೆಸರು ‘ ಬಾದಲಮಹಲ ’.

ಪ್ರಾಚೀನಕಾಲದಲ್ಲಿ ಕೈಲಬಾರದಿಂದ ಪರ್ವತದ ಝರಿಗಳ ಅಧಿಕಾಂಶ ನೀರು ಪೂರ್ವಾಭಿಮುಖವಾಗಿ ಹೋಗಿ, ಬನಾಸನದಿಗೆ ಕೂಡುತ್ತಿತ್ತು; ಇದರ

† ಹಂಬೀರನು ತನ್ನ ಹೆಸರಿನಿಂದ ‹‹ ಹಂಬೀರ ತಲಾವ ›› ಎಂಬ ಕೆರೆಯನ್ನೂ, ಇದರ ಸಮೀಪದಲ್ಲಿ ದೇವಿಯ ಗುಡಿಯನ್ನೂ ಕಟ್ಟಿಸಿದ್ದಾನೆ. ಇವು ಈಗಲೂ ಅವೆ. Rajasthan, Vol. I P. 224.

ಅತ್ಯಲ್ಪ ಭಾಗವು ಮಾತ್ರ ಪಶ್ಚಿಮ ದಿಕ್ಕಿಗೆ ಹೋಗುತ್ತಲಿತ್ತು.‡ ಮಹಾರಾಣಾ ಕುಂಭನು ಕಮಲಮಿರದಲ್ಲಿ ಈ ಅಪೂರ್ವವಾದ ದುರ್ಗವನ್ನು ಕಟ್ಟಿಸಿದ್ದಾನೆ; ಕಾರಣ ಇದಕ್ಕೆ ರಾಣಾನ ಹೆಸರನ್ನನುಸರಿಸಿ ಕುಂಭಮೇರು ದುರ್ಗವೆಂದೆನ್ನುವರು. ರಾಣಾ ಕುಂಭನು ಹುಟ್ಟುವದಕ್ಕಿಂತ ಬಹು ಕಾಲ ಮೊದಲೇ ಈ ಕಮಲಮಿರವು ಪ್ರಖ್ಯಾತ ಸ್ಥಳವಾಗಿದ್ದಿತು. ಇದು ಜೈನರ ಒಂದು ಮುಖ್ಯ ಯಾತ್ರೆಯ ಸ್ಥಳವು; ಸುಮಾರು ಎರಡು ಸಾವಿರ ವರುಷಗಳ ಹಿಂದೆ ಇಲ್ಲಿ ನಿರ್ಮಿತವಾದ ಜೈನಮಂದಿರಗಳಲ್ಲಿ* ಕೆಲವು ಈಗಲೂ ಅವೆ. ಆದರೆ ಈ ದುರ್ಗ-ನಿರ್ಮಾಣ-ಕೌಶಲ್ಯವೇ ಕಮಲಮಿರದ ಶೋಭೆಯನ್ನೂ ಗೌರವವನ್ನೂ ಬೆಳೆಸಿದೆ. ಈ ಗಿರಿ-ದುರ್ಗವಿರುವದರಿಂದಲೇ ಕಮಲಮಿರವು ಪ್ರತಾಪನ ಆಶ್ರಯಸ್ಥಳವಾಯಿತು. ಮೊಗಲರ ನಿರ್ದಯ ಹಸ್ತದಿಂದ ರಜಪೂತರ ಗೌರವ-ರಕ್ಷಣೆಯನ್ನು ಮಾಡುವದಕ್ಕಾಗಿ ಪ್ರತಾಪನು ತನ್ನ ಪ್ರಜೆಗಳಿಗೆಲ್ಲ ಗುಡ್ಡಗಾಡು ಪ್ರದೇಶದಲ್ಲಿ ಆಶ್ರಯ ಹೊಂದುವಂತೆ ಅಪ್ಪಣೆ ಮಾಡಿದನೆಂದು ಹಿಂದೆ ಹೇಳಿದ್ದೇವೆ. ಈ ಸಮಯದಲ್ಲಿ ಕೈಲಬಾರ ನಗರವೇ ಪ್ರಜೆಗಳ ವಾಸಸ್ಥಳವಾಯಿತು. ಕೈಲಬಾರದ ವಾಸಭೂಮಿಯೂ, ಸುತ್ತಲಿರುವ ಅರಣ್ಯವೂ ಪ್ರಜಾಜನರಿಂದ ತುಂಬಿಹೋಯಿತು. ರಜಪೂತರು ಕೈಲಬಾರದ ಸಮೀಪದಲ್ಲಿರುವ ನಾನಾ ಸ್ಥಳಗಳಲ್ಲಿ ಮೊಗಲರೊಡನೆ ಅನೇಕ ಸಣ್ಣ ದೊಡ್ಡ

---

‡ ಪ್ರತಾಪಸಿಂಹನ ಸಂತತಿಯವನಾದ ಮಹಾರಾಣಾ ರಾಜಸಿಂಹನು ಬನಾಸ ನದಿಗೆ ಕೂಡುತ್ತಿರುವ ಒಂದು ನಿರ್ಝರಣಿಯ ಹಾದಿಯನ್ನು ಕಟ್ಟಿ, ರಾಜಸಮುದ್ರವೆಂಬ ಒಂದು ಅಪೂರ್ವವಾದ ಮಡುವನ್ನು ನಿರ್ಮಿಸಿದ್ದಾನೆ ಈ ಕಾಲದಿಂದ ಪರ್ವತದ ಜಲಪ್ರವಾಹವು ತುಸು ಪಶ್ಚಿಮಕ್ಕೆ ಹೋಗುತ್ತದೆ.

* ಈ ಯಾವತ್ತು ಗುಡಿಗಳು ಜೈನಸಾಮ್ರಾಟನಾದ ಸಂಪ್ರತಿಯ ಕಾಲದಲ್ಲಿ ನಿರ್ಮಿತವಾದವೆಂದು ಜನರು ಹೇಳುತ್ತಿರುವರು. ಸಂಪ್ರತಿಮಹಾರಾಜನು ಅಶೋಕನ ಮೊಮ್ಮಗನು, ಕ್ರಿ ಶ. ಪೂರ್ವದಲ್ಲಿ ೨೩೨ನೇ ವರ್ಷ ಅಶೋಕನು ತೀರಿದ ತರುವಾದ ಅವನ ಮೊಮ್ಮಕ್ಕಳು ಅರಸರಾದರು ದಶರಥನು ಇವನ ರಾಜ್ಯದ ಪೂರ್ವಭಾಗವನ್ನೂ, ಸಂಪ್ರತಿಯು ಪಶ್ಚಿಮಭಾಗವನ್ನೂ ಹೊಂದಿದರು. ಅಶೋಕನು ಅನೇಕ ಸಾವಿರ ಬೌದ್ಧ ಸ್ತೂಪಗಳನ್ನು ನಿರ್ಮಿಸಿದಂತೆ, ಸಂಪ್ರತಿಯು ಜೈನರ ಗುಡಿಗಳನ್ನು ಕಟ್ಟಿಸಿದನೆಂದು ಹೇಳುತ್ತಿರುವರು See Bombay Gazetteer, Vol. I Part I P. 15 Smith's Early History (3rd edition) P 193 Tod's Rajasthan, Vol. I PP. 238, 525.

ಯುದ್ಧಗಳನ್ನು ಮಾಡಿದ್ದಾರೆ. ಅದರಿಂದ ಕೈಲಬಾರವು ಐತಿಹಾಸಿಕ ದೃಷ್ಟಿಯಿಂದ ಒಂದು ಮಹತ್ವದ ಸ್ಥಳವಾಗಿದೆ.×

ಕಮಲಮೀರಕ್ಕೆ ಹೋಗಬೇಕಾದರೆ ಕೈಲಬಾರದಿಂದ ಮೇಲಕ್ಕೆ ಹೋಗಬೇಕೆಂದು ನಾವು ಹಿಂದೆ ಹೇಳಿದ್ದೇವೆ. ಕಮಲಮೀರ ನಗರದಿಂದ ಒಂದು ಮೈಲಿನ ಮೇಲಿರುವ ಆಡಾಯಿಲ ಪೋಲವು, ದುರ್ಗವನ್ನೇರುವದರ ಮೊದಲನೆಯ ತೋರಣವು. ಕ್ರಮವಾಗಿ ಹುಲ್ಲಾಪೋಲವನ್ನು ದಾಟಿ, ಹನುಮಾನ್ ಪೋಲಿಗೆ ಹೋಗಬೇಕಾಗುವದು, ಈ ಸ್ಥಳದಿಂದ ಕೋಟೆಯ ಗೋಡೆಗಳು ಆರಂಭವಾಗಿವೆ. ಕೋಟೆಯೊಳಗೆ ಪ್ರವೇಶಮಾಡಿದ ತರುವಾಯ ಕ್ರಮವಾಗಿ ವಿಜಯ ಪೋಲ, ರಕ್ತಪೋಲ, ರಾಮಪೋಲಗಳೆಂಬ ಮೂರು ಬಾಗಿಲಗಳನ್ನು ದಾಟಿ, ಎಲ್ಲಕ್ಕೂ ಕಡೆಯಲ್ಲಿರುವ ಚೌಗುಣತೋರಣಕ್ಕೆ ಹೋಗಬೇಕಾಗುವದು.

ಈ ಕೋಟೆಗೆ ಕೇವಲ ಒಂದೇ ಗೋಡೆಯಿಲ್ಲ; ಅಂಕುಡೊಂಕಾದ ಅನೇಕ ಗೋಡೆಗಳು ಕೋಟೆಯನ್ನು ನಾಲ್ಕೂ ದಿಕ್ಕುಗಳಿಂದ ಸುತ್ತುವರಿದಿವೆ ಇದರಿಂದ ಕೋಟೆಯಲ್ಲಿ ಪ್ರವೇಶಿಸುವದಕ್ಕೆ ಒಂದೇ ಮಾರ್ಗವಿರುವದು; ಇದನ್ನುಳಿದು ಬೇರೆ ರೀತಿಯಿಂದ ದುರ್ಗದಲ್ಲಿ ಹೋಗಲಿಕ್ಕೆ ಬರುವಂತಿಲ್ಲ. ಕೋಟೆಯಿಂದ ಹೊರಬೀಳುವದಕ್ಕಾಗಿ ಇರುವ ಒಂದೆರಡು ಗುಪ್ತಮಾರ್ಗಗಳನ್ನು ದುರ್ಗವಾಸಿಗಳನ್ನುಳಿದು ಇತರರು ಅರಿತಿರಲಿಲ್ಲ. ದೂರದಿಂದ ನೋಡಲು ದುರ್ಗದ ಸುತ್ತಲೂ ಕೆಲವೆಡೆಯಲ್ಲಿ ಒಂದೇ ಗೋಡೆಯಿದ್ದಂತೆ ಬೋಧೆಯಾಗುತ್ತಿದ್ದಿತು; ಆದರೆ ನಿಜ ಸ್ಥಿತಿಯು ಹೀಗಿರಲಿಲ್ಲ. ಒಂದು ಗೋಡೆಯನ್ನು ದಾಟಿ, ಒಳಗೆ ಹೋದ ತರುವಾಯ ಮತ್ತೊಂದು ಗೋಡೆಯನ್ನು ದಾಟಬೇಕಾಗುತ್ತಿದ್ದಿತು; ಆದರೂ ಕೋಟೆಯೊಳಗೆ ಪ್ರವೇಶವಾಗುತ್ತಿರಲಿಲ್ಲ; ಎದುರಿನಲ್ಲಿ ಮತ್ತೊಂದು ಗೋಡೆಯು ಕಾಣಿಸುತ್ತಿದ್ದಿತು. ಈ ಗೋಡೆಗಳನ್ನು ದಾಟುವ ಸ್ಥಳದಲ್ಲಿರುವ ಪರ್ವತದ ಒಳಭಾಗದಲ್ಲಿ ಸೈನಿಕರು ಯಾವ ರೀತಿಯಿಂದಡಗಿಕೊಂಡಿರುವರು? ಅಥವಾ ಸೈನಿಕರು ಅಡಗಿರುರೋ ಇಲ್ಲವೋ? ಈ ಮೊದಲಾದ ಸಂಗತಿಗಳು ಮುತ್ತಿಗೆಯನ್ನು ಹಾಕಿದ ಶತ್ರುಗಳಿಗೆ ಎಷ್ಟುಮಾತ್ರವೂ ತಿಳಿಯುವಂತಿರಲಿಲ್ಲ. ಇದಕ್ಕಾಗಿಯೇ ಕಮಲಮೀರವು

× There is not a rock or a stream that has not some legend attached to it, connected with these times" Tod, Vol- I P. 523.

ದುರ್ಭೇದ್ಯ ದುರ್ಗವಾಗಿತ್ತು ಅಂತೆಯೇ ಪ್ರತಾಪಸಿಂಹನು ದುರ್ಗಮವಾದ ಮಾರ್ಗದಲ್ಲಿ ನಡೆದು, ತನ್ನ ಸೈನಿಕರನ್ನು ಕರೆದುಕೊಂಡು, ಈ ಚಿರಪರಿಚಿತವಾದ ದುರ್ಗದಲ್ಲಿ ಆಶ್ರಯ ಹೊಂದಿದ್ದನು.

ಪ್ರತಾಪನು ಕಮಲಮೀರಕ್ಕೆ ಬಂದಾಗ್ಗೆ, ಮಳೆಗಾಲವಿದ್ದಿತು; ಆದರಿಂದ ರಜಪೂತ ಸೈನಿಕರು ಕೆಲವು ದಿವಸ ವಿಶ್ರಾಂತಿಯನ್ನು ತೆಗೆದುಕೊಂಡರು. ಮಳೆಗಾಲವು ಹೋಯಿತು; ಮೊಗಲರು ದಂಡೆತ್ತಿ ಬರಲಿಲ್ಲ. ಪ್ರಚಂಡವಾದ ಚಳಿಯು ಬೀಳಹತ್ತಿತು; ಆದರೂ ಪ್ರತಾಪನು ದುರ್ಗವನ್ನು ಬಿಟ್ಟುಹೋಗದೆ, ಸೈನಿಕರನ್ನೂ ಯುದ್ಧಕ್ಕೆ ಬೇಕಾಗುವ ಸಾಮಾನುಗಳನ್ನೂ ಸಂಗ್ರಹಿಸತೊಡಗಿದನು. ಇಂತಹ ಭೀಷಣವಾದ ಚಳಿಗಾಲದಲ್ಲಿ ಮೊಗಲರು ಕೋಟೆಯನ್ನಾಕ್ರಮಿಸುವದಕ್ಕೆ ಬರಲಾರರೆಂದು ಪ್ರತಾಪನು ಭಾವಿಸಿದನು, ಇವನ ತರ್ಕದಂತೆ ಮೊಗಲರು ಬರಲಿಲ್ಲ; ಚಳಿಗಾಲವು ಹೋಗುತ್ತಲೇ ಮೊಗಲರು ಪುನಃ ದಂಡೆತ್ತಿ ಬಂದರು (೧೫೭೮).

ಈ ಸಮಯದಲ್ಲಿ ಬಾದಶಹನು ಕಮಲಮೀರದಲ್ಲಿವ ಪ್ರತಾಪನನ್ನು ಮುತ್ತುವದಕ್ಕೆ ನವೀನ ಸೈನ್ಯವನ್ನು ಕಳುಹಿಸಿಕೊಟ್ಟನು, ಶಹಬಾಜಖಾನನು ಈ ಸೈನ್ಯದ ಅಧಿಪತಿಯಾಗಿದ್ದನು ಮಾನಸಿಂಹನು ಇನ್ನೂ ರಾಜಸ್ಥಾನದ ಆ ಗುಡ್ಡಗಾಡು ಪ್ರದೇಶದಲ್ಲಿದ್ದನು. ಬಾದಶಹನು ಇವನಿಗೂ, ಭಗವಾನದಾಸನಿಗೂ ಶಹಬಾಜ ಖಾನನನ್ನು ಹಿಂಬಾಲಿಸಿ ಹೋಗುವದಕ್ಕೆ ಅಪ್ಪಣೆ ಮಾಡಿದನು. ಇವರೆಲ್ಲರು ತಮ್ಮ ಸೈನ್ಯವನ್ನು ತೆಗೆದುಕೊಂಡು, ನಾಥದ್ವಾರದ ಮಾರ್ಗವಾಗಿ ಕಮಲಮೀರಕ್ಕೆ ಹೊರಟರು.

ಶಹಬಾಜಖಾನನು ಕಮಲಮೀರ ದುರ್ಗವು ನಿಶ್ಚಯವಾಗಿಯೂ ತನ್ನ ಕೈವಶವಾಗುವದೆಂದು ಭಾವಿಸಿದನು. ಕಮಲಮೀರವು ದುರ್ಭೇದ್ಯವಾದ ದುರ್ಗವೆಂದು ಖ್ಯಾತವಾಗಿತ್ತು; ಈ ಕೋಟೆಯನ್ನು ಕೈವಶಮಾಡಿಕೊಂಡಲ್ಲಿ ಬಾದಶಹನ ದರಬಾರದಲ್ಲಿ ವಿಶೇಷ ಮರ್ಯಾದೆಯನ್ನು ಹೊಂದುತ್ತಿದ್ದನು; ಆದರೆ ಮಹಾವೀರನಾದ ಭಗವಾನದಾಸನೂ, ಮಾನಸಿಂಹನೂ ತನ್ನೊಡನೆ ಇರುವಲ್ಲಿ, ಈ ಮರ್ಯಾದೆಯು ತನಗೊಬ್ಬನಿಗೆ ಸಂಪೂರ್ಣವಾಗಿ ದೊರೆಯುವ ಸಂಭವವಿದ್ದಿಲ್ಲ. ಮೇಲಾಗಿ ಈ ಈರ್ವರು ಸಹಾಯಕರು ರಜಪೂತರು; ಮಹಾರಾಣಾನ ವಿಷಯವಾಗಿ ಭಕ್ತಿಯುಳ್ಳವರು; ಕಾರಣ ಕೋಟೆಯನ್ನು ಕೈವಶಮಾಡಿಕೊಳ್ಳುವದಕ್ಕಾಗಿ ಯಾವದಾದರೊಂದು ಕುಟಿಲವಿಚಾರವನ್ನು ಮಾಡಿದಲ್ಲಿ, ಇಲ್ಲವೆ ಏನಾ

ದರೊಂದು ಅತ್ಯಾಚಾರ ಮಾಡಿದಲ್ಲಿ ಇವರು ಇದಕ್ಕೆ ಪ್ರತಿಬಂಧ ಮಾಡತಕ್ಕವರು. ಇಂತಹ ಸ್ಥಿತಿಯಲ್ಲಿ ಇವರು ಇರದಿರುವದು ಯೋಗ್ಯವು. ಕಾರಣ ಇವನು ಈ ಸೇನಾಪತಿಗಳಿಗೆ ಬಾದಶಹನ ದರಬಾರಕ್ಕೆ ತಿರುಗಿ ಹೋಗುವದಕ್ಕೆ ಹೇಳಿದನು. ಭಗವಾನದಾಸ ಮತ್ತು ಮಾನಸಿಂಹರಿಗಾದರೂ ಇದೇ ಬೇಕಾಗಿತ್ತು; ಯಾಕಂದರೆ ಮಹಾರಾಣಾನಿಗೆ ಕಷ್ಟವಾಗುವಂಥ ಇಲ್ಲವೆ ಸ್ವಜಾತಿಯ ಸರ್ವನಾಶವಾಗುವಂಥ ವ್ಯವಹಾರದಲ್ಲಿ ಸೇರುವದು ಇವರಿಗೆ ಇಷ್ಟವಾಗಿರಲಿಲ್ಲ; ಕೇವಲ ಬಾದಶಹನ ಪ್ರೀತಿ-ಸಂಪಾದನೆಗಾಗಿ ಇವರು ಈ ಕೆಲಸಕ್ಕೆ ಬಂದಿದ್ದರು.

ರಾಜಾಭಗವಾನದಾಸನೂ, ಮಾನಸಿಂಹನೂ ತಿರುಗಿ ಹೋದರು. ಶಹಬಾಜಖಾನನು ತೀವ್ರವೇ ಬಂದು, ಕೈಲಬಾರ ಪಟ್ಟಣವನ್ನು ಕೈವಶಮಾಡಿಕೊಂಡು ಕುಳಿತನು. ಮೊಗಲರು ಬರುವದಕ್ಕಿಂತ ಮೊದಲೇ ಕೈಲಬಾರವು ಜನಶೂನ್ಯವಾಗಿದ್ದಿತು. ಅದರಿಂದ ಈ ಪಟ್ಟಣವು ಸಹಜವಾಗಿ ಶತ್ರುಗಳ ವಶವಾಯಿತು.

ಕೈಲಬಾರದ ಪ್ರಜೆಗಳು ಪ್ರತಾಪನ ಸೈನ್ಯದಲ್ಲಿ ಕೂಡಿ, ಕಮಲಮೀರದಲ್ಲಿ ಆಶ್ರಯ ಹೊಂದಿ, ಹನುಮಾನ್ ಪೋಲದ ಬಾಗಿಲವನ್ನು ಬಂದುಮಾಡಿಕೊಂಡು ಕುಳಿತರು. ಶಹಬಾಜಖಾನನು ಇದೇ ಮಾರ್ಗವಾಗಿ ಕೋಟೆಯನ್ನೇರುವ ಪ್ರಯತ್ನವನ್ನು ಮಾಡತೊಡಗಿದನು. ಕೋಟೆಯೊಳಗಿಂದ ಹೊಡೆದ ಗುಂಡುಗಳಿಂಗ ಇವನ ಪ್ರಯತ್ನವು ವ್ಯರ್ಥವಾಗತೊಡಗಿತು; ಆದರೆ ಕೀರ್ತಿಯನ್ನು ಇಚ್ಛಿಸುವ ಮೊಗಲ ಸೇನಾಪತಿಯು ನಿರಾಶನಾಗಲಿಲ್ಲ, ಕೋಟೆಯನ್ನು ಮುತ್ತಿಕೊಂಡು ಕುಳಿತನು.

ಪ್ರತಾಪಸಿಂಹನು ಕೆಲವು ದಿವಸಗಳ ವರೆಗೆ ವೀರವಿಕ್ರಮದಿಂದ ಕಾದಿ, ಆತ್ಮರಕ್ಷಣೆಯನ್ನು ಮಾಡಿಕೊಂಡನು, ಆದರೆ ಭಾಗ್ಯವು ಇವನಿಗೆ ಪ್ರಸನ್ನವಾಗಿರಲಿಲ್ಲ. ಕಾರಣ ಕೋಟೆಯಲ್ಲಿ ಕೆಲವು ದುರ್ಘಟನೆಗಳು ನಡೆದು, ಇವನನ್ನು ವಿಪತ್ತಿಗೀಡುಮಾಡಿದವು. ಒಂದು ದಿನ ಒಂದು ದೊಡ್ಡ ತೋಫು ಒಡೆದು, ಬೆಂಕಿಯು ಎಲ್ಲ ಕಡೆಯಲ್ಲಿಯೂ ಹಬ್ಬಿತು. ಇದರಿಂದ ಮದ್ದೆಲ್ಲವೂ ನಿರರ್ಥಕವಾಗಿ ಸುಟ್ಟುಹೋಯಿತು. ಕೋಟೆಯೊಳಗಿರುವ ಸೈನಿಕರಿಗೆ ನೀರು ದೊರೆಯದಂತಾಯಿತು. ಎತ್ತರವಾದ ಸ್ಥಳದಲ್ಲಿರುವ ಪಟ್ಟಣಗಳಲ್ಲಿ ನೀರಿನ ಕಷ್ಟವಿರು

ವದು ಸಾಹಜಿಕವು. ಈ ನೀರಿನ ತೊಂದರೆಯು ಗ್ರೀಷ್ಮಕಾಲದಲ್ಲಿ ಬಹಳವಾಗಿ ಆಗುತ್ತಿರುವದು. ಕಮಲಮೀರದಲ್ಲಿ 'ನಗುಣ' ವೆಂಬ ಹೆಸರಿನ ಉತ್ಕೃಷ್ಟವಾದ ಬಾವಿಯಿದ್ದಿತು; ಇದೇ ಒಳಗಿರುವ ಯಾವತ್ತು ಜನರಿಗೆ ನೀರಿನ ಪೂರೈಕೆಯನ್ನು ಮಾಡುತ್ತಲಿತ್ತು. ಶಿರೋಹಿಯ ದೇವರಾ ಸರದಾರನು ಕೆಲವು ದಿವಸಗಳ ಹಿಂದೆ ಮೊಗಲರ ವಶನಾಗಿ, ಆತ್ಮಮರ್ಯಾದೆಯನ್ನು ಮರೆತುಹೋದನೆಂಬದನ್ನು ಹಿಂದೆ ಹೇಳಿದ್ದೇವೆ. ಇವನು ಮೇಲಿನ ಬಾವಿಯ ಸಂಬಂಧದ ಸುದ್ದಿಯನ್ನು ಮೊಗಲರಿಗೆ ತಿಳುಹಿಸಿದನೆಂದು ಹೇಳುತ್ತಿರುವರು. ಮೊಗಲರು ಗೌಪ್ಯವಾಗಿ ಕೃತ್ರಿಮ ರೀತಿಯಿಂದ ಇದರ ನೀರನ್ನು ಕೆಡಿಸಿಬಿಟ್ಟರು † ಈ ಕೆಟ್ಟ ನೀರನ್ನು ರಜಪೂತರು ಕುಡಿಯುಹತ್ತಿದ್ದರಿಂದ, ರೋಗಗ್ರಸ್ತರಾಗತೊಡಗಿದರು, ಪ್ರತಾಪನು ಇಂತಹ ಸಮಯದಲ್ಲಿ ಕೋಟೆಯನ್ನು ಬಿಟ್ಟು ಹೋಗುವದೇ ಉತ್ತಮವೆಂದು ಭಾವಿಸಿದನು. ಇವನು ಶೋಣಿಗುರು ಸರದಾರನ ಮೇಲೆ ದುರ್ಗ-ರಕ್ಷಣೆಯ ಭಾರವನ್ನಿರಿಸಿ, ರಾತ್ರಿಯ ಕಾಲದಲ್ಲಿ ಅಧಿಕಾಂಶ ಸೈನಿಕರನ್ನು ಕರೆದುಕೊಂಡು, ಗುಪ್ತಮಾರ್ಗದಿಂದ ಕೋಟೆಯನ್ನು ಬಿಟ್ಟು ನಡೆದನು ‡ ಮೊಗಲರು ಇದನ್ನು ಎಷ್ಟುಮಾತ್ರವೂ ತಿಳಿಯಲಿಲ್ಲ. ಯಾಕಂದರೆ ಕೋಟೆಯಿಂದ ಹೊರಬೀಳಲಿಕ್ಕಿರುವ ಗುಪ್ತಮಾರ್ಗಗಳಿರುವದನ್ನು ಅವರು ತಿಳಿದಿರಲಿಲ್ಲ.

ಮರುದಿವಸ ಪ್ರಾತಃಕಾಲದಲ್ಲಿ, ದುರ್ಗದ ಬಾಗಿಲಲ್ಲಿರುವ ದೇವರ ಗುಡಿಯ ಸಮೀಪದಲ್ಲಿ ಭಯಂಕರವಾದ ಯುದ್ಧವಾಯಿತು. ರಜಪೂತ ಸೈನಿಕರು ಬಹು ಶತ್ರುಗಳನ್ನು ಕೊಂದರು. ಕಡೆಯಲ್ಲಿ ಆತ್ಮಜೀವನಬಲಿಯನ್ನು ಕೊಟ್ಟುಬಿಟ್ಟರು. ಶೋಣಿಗುರು ಸರದಾರನ ವೀರತ್ವವು ಅಮಾನುಷಿಕವಾದುದು;* ಇವನು ಕಡೆತನಕ ಕೋಟೆಯನ್ನು ರಕ್ಷಿಸಿ, ಕಡೆಯಲ್ಲಿ ಯುದ್ಧಭೂಮಿಯಲ್ಲಿ ಮರಣವನ್ನು

---

† Rajasthan, Vol. I P 277.

‡ Ellist Vol. V P- 419- ರಾಣಾನು ಸನ್ಯಾಸಿಯ ವೇಷದಿಂದ ರಾತ್ರಿಯ ಕಾಲದಲ್ಲಿ ಕೋಟೆಯಿಂದ ಪಲಾಯನ ಮಾಡಿದನೆಂದು ಕೆಲವರು ಹೇಳಿದ್ದಾರೆ. Masir-ul-umra, Vol. II P. 593; Blochmann's Ain. P. 500. ಬೆವ್ಹರಿಜ್‌ಸಾಹೇಬರು ರಾಣಾನು ಸನ್ಯಾಸಿಯ ವೇಷದಿಂದ ಹೋದನೆಂಬ ಸಂಗತಿಯನ್ನು ನಂಬುವದಿಲ್ಲ. Vol. III P 340 ಟಾಡ್‌ಸಾಹೇಬರು ಬರೆದದ್ದೇನಂದರೆ— "Partap thence withdrew to chaond."

ಹೊಂದಿದನು. ತನ್ನ ಅಮೃತಮಯುವಾದ ಕವಿತೆಯಿಂದ ಪ್ರತಾಪನ ವೀರತ್ವದ ಕಥೆಯನ್ನು ಪ್ರಸಿದ್ಧಮಾಡಿದ, ಓಜಸ್ವಿನೀ ಭಾಷೆಯಿಂದ ನಿರ್ಜೀವಪ್ರಾಣದಲ್ಲಿಯೂ ಸಂಜೀವಿನೀ ಶಕ್ತಿಯನ್ನುಂಟುಮಾಡಿದ, ಉತ್ಸಾಹಗೀತೆಯಿಂದ ರಜಪೂತ ವೀರ ರರನ್ನು ಕಠೋರವ್ರತವನ್ನಾಚರಿಸುವಂತೆ ಮಾಡಿದ, ಚಾರಣದೇವನು ಈ ಯುದ್ಧ ದಲ್ಲಿ ಮಡಿದನು. ರಜಪೂತರಲ್ಲಿ ಉತ್ಸಾಹವನ್ನುಂಟುಮಾಡುವ ವೀರಗಾಥೆಯನ್ನು ನಿರ್ಮಾಣಮಾಡಿದ ಚ್ಛಾರಣದೇವನಿಲ್ಲದಂತಾದರೂ, ರಜಪೂತರ ಉತ್ಸಾಹವು ಕಡಿಮೆಯಾಗಲಿಲ್ಲ. ರಜಪೂತರ ಮುಖ್ಯ ಆಶ್ರಯಸ್ಥಾನವಾದ ಕಮಲಮೀರವು ಶತ್ರುಗಳ ವಶವಾದರೂ, ಆಶ್ರಯಹೀನನಾದ ಪ್ರತಾಪನು ವ್ರತಹೀನನಾಗಲಿಲ್ಲ.

ಯಾವನ ಸಲುವಾಗಿ ಇಷ್ಟು ಪ್ರಯತ್ನ ಮಾಡಬೇಕಾಯಿತೋ ಆ ಮಹಾ ರಾಣಾನು ತನ್ನ ಕೈಯಿಂದ ತಪ್ಪಿಸಿಕೊಂಡು ಹೋದ ಸಂಗತಿಯನ್ನು, ಶಹಬಾಜ ಖಾನನು ಕಮಲಮೀರ ದುರ್ಗವು ಕೈವಶವಾದನಂತರ ತಿಳಿದನು.§ ಕಾರಣ ಇವನು ಇನ್ನು ಇಲ್ಲಿ ವ್ಯರ್ಥವಾಗಿ ಕಾಲಹರಣ ಮಾಡುತ್ತ ಕುಳಿತುಕೊಳ್ಳುವದು ಸರಿಯಲ್ಲವೆಂದು ಭಾವಿಸಿದನು. ಆದರಿಂದಿವನು ಗಾಜೀಖಾನನೆಂಬ ಸೇನಾಪತಿಗೆ ಕೋಟೆಯ ಅಧಿಕಾರವನ್ನು ಒಪ್ಪಿಸಿ, ತಾನು ಪ್ರತಾಪನನ್ನು ಹುಡುಕುವದಕ್ಕಾಗಿ ದಕ್ಷಿಣಾಭಿಮುಖನಾಗಿ ನಡಿದನು.

---

* "They ( Moghuls ) encountered a large body of Rajputs posted at a gate near the temple, who made a firm stand, but were cut to pieces and fort was secured " Akbarnama (Elliot ) Vol VI PP 58-9

§ ಸನ್ ೧೫೭೮ನೇ ಎಪ್ರಿಲ ೪ನೇ ತಾರೀಖಿನ ದಿವಸ ( ಚೈತ್ರಮಾಸದ ಮಧ್ಯಭಾಗದಲ್ಲಿ ) ಶಹಬಾಜಖಾನನು ಕಮುಲಮೀರದುರ್ಗವನ್ನು ಕೈವಶಮಾಡಿಕೊಂಡನು.

# ಸಪ್ತದಶ ಪರಿಚ್ಛೇದ.

## ಕಠೋರ ಪರೀಕ್ಷೆ.

ಕೌಶಿಕನು ಹರಿಶ್ಚಂದ್ರನ । ಮಾಸತ್ವವನು ಪರಿಕಿಸಲು ಕಾಡಿದ ತೆರದಿಂ ॥
ದೀ ಸುಪ್ರತಾಪವೀರನ । ಸಾಸವ ನೋಡಲಕಬರನು ಮನದಂದಿರ್ದಂ ॥ ೧ ॥

ಪ್ರತಾಪಸಿಂಹನು ಕಮಲಮಿೂರದಿಂದ ಹೊರಟು, ಗೋಗುಂಡ ಇಲ್ಲವೆ ಉದಯಪುರಕ್ಕೆ ಹೋಗಿರಬಹುದೆಂದು, ಶಹಬಾಜಖಾನನು ಭಾವಿಸಿದನು. ಅದರಂತೆ ಇವನು ಮರದಿವಸವೇ ಗೋಗುಂಡಕ್ಕೆ ಬಂದು ಮುಟ್ಟಿದನು; ಈ ಪರಿತ್ಯಕ್ತ ನಗರವು ಸಹಜವಾಗಿ ಇವನ ಕೈವಶವಾಯಿತು. ತರುವಾಯ ಇವನು ಅದೇ ರಾತ್ರಿ ಹೊರಟು, ಉದಯಪುರಕ್ಕೆ ಮುಟ್ಟಿದನು; ಉದಯಪುರವು ಹೆಸರಿಗೆ ಮಾತ್ರ ರಜಧಾನಿಯಾಗಿದ್ದು, ಅಲ್ಲಿ ಕೋಟೆ ಮೊದಲಾದವುಗಳ ರಚನೆಯಾಗಿರಲಿಲ್ಲ. ಹೀಗಿದ್ದರೂ ಶಹಬಾಜಖಾನನು ಅಲ್ಲಿರುವ ತುಸು ಜನರ ಧಾನ್ಯಾದಿಗಳನ್ನು ಸುಲಿಗೆ ಮಾಡಿದನು. ಇಲ್ಲಿಯೂ ಶಹಬಾಜಖಾನನಿಗೆ ಪ್ರತಾಪನು ಸಿಗಲಿಲ್ಲ. ಈ ಸ್ಥಳದಿಂದ ಶಹಬಾಜಖಾನನು ಕಮಲಮಿೂರ ಕೋಟೆಯನ್ನು ಗೆದ್ದುಕೊಂಡ ಸಂತೋಷದ ಸುದ್ದಿಯನ್ನು ಬಾದಶಹನಿಗೆ ತಿಳುಹಿಸಿದನು. ಈ ಸಮಯದಲ್ಲಿ ಅಕಬರನು ಲಾಹೋರದಲ್ಲಿದ್ದನು; ಅವನು ಈ ವೀರಸೇನಾಪತಿಗಳಿಗೆ ಸಾಕಷ್ಟು ಬಹುಮಾನ ಕೊಡುವ ಅಪ್ಪಣೆಯನ್ನು ಮಾಡಿದನು.*

ಶಹಬಾಜಖಾನನು ಉದಯಪುರದಿಂದ ಪುರ-ಮಂಡಲಗಳ ವರೆಗಿರುವ ಗುಡ್ಡಗಾಡು ಪ್ರದೇಶದಲ್ಲಿ ೫೦, ಮತ್ತು ಪ್ರಾಂತರಪ್ರದೇಶದಲ್ಲಿ ೩೫ ಬೇರೆ ಬೇರೆ ಸ್ಥಳಗಳನ್ನು ಗೊತ್ತುಮಾಡಿ, ಅಲ್ಲಿ ಸೈನಿಕರನ್ನಿರಿಸಿದನು. ತರುವಾಯ ಇವನು ಹರವತಿಯ ಬಂಡಾಯವನ್ನು ಮುರಿದು, ರಾಜಧಾನಿಗೆ ತಿರುಗಿ ಹೋದನು.† ಕಮಲಮಿೂರವನ್ನು ಗೆದ್ದುಕೊಳ್ಳುವ ಮೊದಲೇ ರಾಜಾಭಗವಾನದಾಸ ಮತ್ತು

* Akbarnama ( Beveridge ) Vol. III PP. 340–41 note-

† Blochmann P- 400 ಪುರ ಮತ್ತು ಮಂಡಲಗಳು ಬೇರೆ ಬೇರೆಯಾದ ಅತಿ ಪ್ರಾಚೀನ ಪಟ್ಟಣಗಳು ಇವು ಉದಯಪುರದ ಆಗ್ನೇಯ ಮೂಲೆಯಲ್ಲಿ ೬೦-೭೦ ಮೈಲುಗಳ ಮೇಲಿವೆ Raj- Gaz- Vol- III P- 50-

ಮಾನಸಿಂಹರು ತಿರುಗಿ ಹೋದರೆಂದು ಹೇಳಿದ್ದೇವೆ. ಇವರಲ್ಲಿ ಭಗವಾನದಾಸನು ರಾಜಧಾನಿಗೆ ಹೋದನು. ಮುಂದೆ ಕೆಲವು ದಿವಸಗಳಾದ ಮೇಲೆ, ಪಂಜಾಬದ ಸುಭೇದಾರನಾದನು. ಮಾನಸಿಂಹನು ಕೆಲವು ದಿವಸಗಳ ವರೆಗೆ ಪರ್ವತದ ಅಂಚಿನಲ್ಲಿದ್ದನು. ಇವನು ಧರಮೇತಿ* ಮತ್ತು ಗೋಗುಂಡ ಪಟ್ಟಣಗಳನ್ನು ಕೈವಶ ಮಾಡಿಕೊಂಡಿದ್ದನು. ಶಹಬಾಜಖಾನನು ಹೋದತರುವಾಯ ಮಹಬತ್‌ಖಾನನು ಉದಯಪುರದಲ್ಲಿರತೊಡಗಿದನು. ಆದರೆ ಪ್ರತಾಪಸಿಂಹನೆಲ್ಲಿ ಹೋದನೆಂಬದನ್ನು ಯಾರೂ ತಿಳಿಯಲು ಸಮರ್ಥರಾಗಲಿಲ್ಲ.

ಮೇವಾಡದ ನೈರುತ್ಯಭಾಗದಲ್ಲಿ ಚಪ್ಪನವೆಂಬ ಒಂದು ಪ್ರದೇಶವಿದೆ. ಇದು ಗುಡ್ಡಗಳಿಂದ ತುಂಬಿದ್ದು, ಇದರಲ್ಲಿ ಸುಮಾರು ಮೂರುವರೆ ನೂರು ಸಣ್ಣ ಹಳ್ಳಿಗಳಿವೆ. ಈ ಯಾವತ್ತು ಹಳ್ಳಿಗಳಲ್ಲಿ ಭಿಲ್ಲರು ವಾಸಿಸುವರು. ಈ ಪ್ರದೇಶದ ಮುಖ್ಯ ಪಟ್ಟಣವು ಚಾಂದಾ ಎಂಬದಿದ್ದು, ಇದು ಬಹು ಎತ್ತರದ ಮೇಲಿರುವದು. ಕಾರಣ ಶತ್ರುಗಳು ಇದನ್ನು ಸುಲಭವಾಗಿ ಆಕ್ರಮಿಸುವಂತಿದ್ದಿಲ್ಲ. ಆದರಿಂದ ಪ್ರತಾಪನು ಕಮಲಮೀರವನ್ನು ಬಿಟ್ಟು ಬಂದು, ಈ ಚಾಂದಾ ನಗರದಲ್ಲಿ ವಾಸ ಮಾಡತೊಡಗಿದನು.

ಎಲ್ಲವೂ ಹೋಗಲಿ, ಆದರೆ ಯವನನಿಗೆ ಅವನತನಾಗಲಿಕ್ಕಿಲ್ಲವೆಂಬದು ಪ್ರತಾಪನ ಪ್ರತಿಜ್ಞೆಯು. ಯಾವದೇ ರೀತಿಯಿಂದಾಗಲಿ, ಪ್ರತಾಪನನ್ನು ಅವನತನನ್ನಾಗಿ ಮಾಡಿಯೇ ತೀರುವೆನೆಂಬದು ಅಕಬರನ ಪ್ರತಿಜ್ಞೆಯು. ಅಕಬರನು ಬೇರೆ ಬೇರೆ ಸೇನಾಪತಿಗಳ ಕೈಯಲ್ಲಿ ಸೈನಿಕರನ್ನು ಕೊಟ್ಟು ಮೇವಾಡವನ್ನು ಜಯಿಸುವದಕ್ಕಾಗಿ ಕಳುಹಿಸಹತ್ತಿದನು. ಈ ಸೇನಾಪತಿಗಳು ಮೇವಾಡದ ಅನೇಕ ಸ್ಥಳಗಳನ್ನು ವ್ಯಾಪಿಸಿದರು, ಪ್ರತಾಪನನ್ನು ಹುಡುಕಹತ್ತಿದರು ಪ್ರತಾಪನು ತನ್ನ ಮುಷ್ಟಿಮಿಯ ಸೈನಿಕರನ್ನು ಕಟ್ಟಿಕೊಂಡು ಓರ್ವ ಸೇನಾಪತಿಯು ಕೈಯಿಂದ ಪಾರಾಗುವದಕ್ಕಾಗಿ ಬೇರೊಂದು ಕಡೆಗೆ ಹೋಗುವನು. ಅಲ್ಲಿ ಬೇರೊಬ್ಬ ಸೇನಾಪತಿಯು ಅವನನ್ನು ಮುತ್ತುವನು; ಮತ್ತೆ ಪ್ರತಾಪನು ಬೇರೊಂದು ಕಡೆಗೆ ಹೋಗುವನು. ಕೆಲವು ರಜಪೂತರು ಪ್ರತಾಪನ ಶತ್ರುಗಳಾಗಿದ್ದರು.

---

* ಇದು ಉದಯಪುರದ ಉತ್ತರ ದಿಕ್ಕಿನಲ್ಲಿರುವ ರಾಜಸಮುದ್ರದ ಹತ್ತಿರದಲ್ಲಿರುವ ಒಂದು ಸಣ್ಣ ಪಟ್ಟಣವು.

ಅವರು ಪ್ರತಾಪನು ಎಲ್ಲಿರುವನೆಂದದನ್ನು ಗೊತ್ತುಹಚ್ಚಿ ಮೊಗಲರಿಗೆ ತಿಳಿಸುತ್ತಿದ್ದರು. ಬೇರೆ ಕೆಲವರು ಪ್ರತಾಪನ ಸಲುವಾಗಿ ಹೋಗುತ್ತಿರುವ ಆಹಾರದ ಪದಾರ್ಥಗಳಿಗೆ ತಡೆಯುನ್ನುಂಟುಮಾಡುತ್ತಿದ್ದರು. ಅಗುಣಾ-ಪನೇರಾ ಮೊದಲಾದ ಸ್ಥಳಗಳ ಜನರು ಪ್ರತಾಪನಿಗೆ ಬೇಕಾಗುವ ಸಾಮಾನುಗಳನ್ನು ಪೂರೈಸಿಕೊಡುತ್ತಿದ್ದರು. ಅಮಿಶಹನೆಂಬೋರ್ವ ರಜಪೂತ ಕುಲಾಂಗಾರನು ಈ ಮಾರ್ಗವನ್ನು ತಡೆದು, ಪ್ರತಾಪನಿಗೆ ಸಾಮಾನುಗಳು ಮುಟ್ಟದಂತೆ ಮಾಡಿದನು.* ಈ ಸಮಯದಲ್ಲಿ ಫರೀದಖಾನನೆಂಬ ಮೊಗಲರ ಸೇನಾಪತಿಯು ಚಪ್ಪನಪ್ರದೇಶವನ್ನಾಕ್ರಮಿಸಿದನು; ಮತ್ತು ದಕ್ಷಿಣ ದಿಕ್ಕಿನಿಂದ ಚಾಂದಾನಗರದ ಅಭಿಮುಖವಾಗಿ ಮುಂದೆ ಸಾಗಿದನು ಈಗ ಪ್ರತಾಪನು ನಾಲ್ಕೂ ದಿಕ್ಕಿನಲ್ಲಿ ಶತ್ರುಗಳಿಂದ ಪರಿವೇಷ್ಟಿತನಾದನು; ಇವನಿಗಾಗಿ ಬರುತ್ತಿರುವ ಸಾಮಾನುಗಳು ಬರದಂತಾದವು, ಹೊರಬಿದ್ದು ಹೋಗುವ ಮಾರ್ಗವು ಬಂದಾಯಿತು, ಕಡೆಯಲ್ಲಿ ಪ್ರತಾಪನು ಬಹು ಶ್ರಮಬಟ್ಟು ಚಾತುರ್ಯದಿಂದ ಚಾಂದಾನಗರವನ್ನು ಬಿಟ್ಟು ನಡೆದನು. ಮಾನಸಿಂಹ, ಶಹಬಾಜಖಾँ, ಮೊಹಬತಖಾँ ಫರಿದಖಾँ, ಮೊದಲಾದ ಪ್ರಮುಖ ಮೊಗಲ ಸೇನಾಪತಿಗಳು ಪ್ರತಾಪನ ವಿರುದ್ಧವಾಗಿ ಶಸ್ತ್ರಹಿಡಿದು ನಿಂತುಕೊಂಡಿದ್ದರು; ಮೊಗಲರ ಅಪರಿಮಿತವಾದಅರ್ಥಬಲವೂ, ಅಗಣಿತ ಸೈನ್ಯಬಲವೂ ಪ್ರತಾಪನ ವಿರುದ್ಧವಾಗಿ, ಉಪಯೋಗಿಸಲ್ಪಡುತ್ತಿತ್ತು. ಇಂತಹ ಭೀಷಣ ಪ್ರಸಂಗದಲ್ಲಿಯೂ ಕೂಡ ಪ್ರತಾಪನು ಅಚಲನಾಗಿದ್ದನು. ಅವನ ಪ್ರತಿಜ್ಞೆಯು ಸ್ಥಿರವಾಗಿದ್ದಿತು; ವ್ರತಭಂಗಮಾಡಲು ಎಷ್ಟು ಮಾತ್ರವೂ ಇಚ್ಛಿಸಲಿಲ್ಲ.

ಪ್ರತಾಪನು ಚಾಂದಾಪಟ್ಟಣವನ್ನು ಬಿಟ್ಟ ತರುವಾಯ ಅವನಿಗೆ ನಿರ್ದುಷ್ಟವಾದ ಯಾವ ಆಶ್ರಯಸ್ಥಾನವೂ ಉಳಿಯಲಿಲ್ಲ. ಇವನು ತನ್ನ ಅನುಚರರೊಡನೆ ಆ ಭಿಲ್ಲ-ಪ್ರದೇಶದ ಕಂದರ-ಕಂದರಗಳಲ್ಲಿ ಅಲೆಯುತೊಡಗಿದನು. ಭಿಲ್ಲರು ಅನಾರ್ಯರು—ಕಾಡುಜನರು ಆಗಿದ್ದರೂ, ಪರಮ ವಿಶ್ವಾಸಿಕರಾಗಿದ್ದರು; ಮತ್ತು ಮಹಾರಾಣಾನ ಪರಿವಾರವರ್ಗದ ರಕ್ಷಣೆಯ ಭಾರವನ್ನು ಭಿಲ್ಲರೇ ವಹಿಸಿದ್ದರು. ಪ್ರತಾಪನ ಹೆಂಡತಿಯೂ, ಶಿಶುವೂ, ಇತರರೂ ಭಿಲ್ಲರಿಂದ ಪ್ರತಿಪಾಲಿತರಾಗತೊಡಗಿದರು. ಭಿಲ್ಲರೇ ಇವರಿಗೆ ಆಹಾರದ ಪದಾರ್ಥಗಳನ್ನೊದಗಿಸಿಕೊಡುತ್ತಿದ್ದರು.

* Rajasthan, Vol- I P- 277 note- ಅಗುಣಾ ಮತ್ತು ಪನೇರಾ ಇವು ಗುಡ್ಡಗಾಡು ಪ್ರದೇಶದಲ್ಲಿರುವ ಹಳ್ಳಿಗಳು.

ಹಗಲು-ರಾತ್ರಿ ಇವರನ್ನು ಕಾಯುತ್ತಿದ್ದರು; ಶತ್ರುಗಳು ಸಮೀಪದಲ್ಲಿ ಬಂದದ್ದಾದರೆ ಇವರನ್ನು ಪೆಟ್ಟಿಗೆಯಲ್ಲಿ ಕುಳ್ಳಿರಿಸಿಕೊಂಡು, ಗುಪ್ತಮಾರ್ಗದಿಂದ ಪಲಾಯನ ಮಾಡುತ್ತಿದ್ದರು. ಕೆಲಕೆಲವು ಪ್ರಸಂಗದಲ್ಲಿ ಪ್ರತಾಪನಿಗೂ ಅವನ ಪರಿವಾರ ವರ್ಗದವರಿಗೂ ಒಂದು ವಾರದವರೆಗೂ ದರ್ಶನವಾಗುತ್ತಿದ್ದಿಲ್ಲ ಪ್ರತಾಪನು ತನ್ನ ರಾಜನಿಷ್ಠ ಸೈನಿಕರನ್ನು ಕರೆದುಕೊಂಡು, ಪರ್ವತ-ಪರ್ವತದಲ್ಲಿ ಅಡವಿ-ಅಡವಿಯಲ್ಲಿ ಅಡ್ಡಾಡುತ್ತಲಿದ್ದನು. ಇವನು ಸಾಂಕೇತಿಕ ಭಾಷಣದಿಂದ ಸೈನಿಕರನ್ನು ಒತ್ತಟ್ಟಿಗೆ ಕೂಡಿಸುತ್ತಿದ್ದನು, ಶತ್ರುಗಳಿಗಪರಿಚಿತವಾದ ಸ್ಥಳದಲ್ಲಿ ಅಡಗುತ್ತಿದ್ದರು, ಅಕಸ್ಮಾತ್ತಾಗಿ ಕೌಶಲ್ಯದಿಂದ ಶತ್ರುಗಳನ್ನು ಆಕ್ರಮಿಸುತ್ತಿದ್ದರು ಕೂಡಲೇ ರಜಪೂತರು ಪರ್ವತವನ್ನೇರಿ, ಶಿಖರದಲ್ಲಿದ್ದು, ಮೊಗಲರ ಕಣ್ಣಿಗೆ ಬೀಳುತ್ತಿದ್ದರು, ಮೊಗಲರು ಇವರನ್ನು ಹಿಡಿಯುವದಕ್ಕಾಗಿ ಹಿಂಬಾಲಿಸುತ್ತಿದ್ದರು; ಈ ಸಮಯದಲ್ಲಿ ಭಿಲ್ಲರು ಬಾಣಗಳಿಂದಲೂ, ಕಲ್ಲನ್ನೆಸೆಯುವದರಿಂದಲೂ ಶತ್ರುಗಳನ್ನು ಗೋಳಾಡಿಸಿ ಬಿಡುತ್ತಿದ್ದರು; ಇಷ್ಟರಲ್ಲಿ ಪ್ರತಾಪನು ಅಂತರ್ಹಿತನಾಗಿ ಹೋಗುತ್ತಿದ್ದನು ಮೊಗಲರು ಪ್ರತಾಪನು ಜೀವವುಳಿಸಿಕೊಂಡು, ದೂರ ಓಡಿಹೋದನೆಂದು ಭಾವಿಸುತ್ತಿದ್ದರು; ಆದರಿಂದವರು ಚಿಂತೆಯಿಲ್ಲದವರಾಗಿ ಜಯೋಲ್ಲಾಸದಿಂದ ಕಾಲಕಳೆಯುತ್ತಿದ್ದರು, ಮತ್ತು ಇದೊಂದು ಸಾರೆ ರಜಪೂತರನ್ನು ಪರಾಜಿತರನ್ನಾಗಿ ಮಾಡಿದೆವೆಂದು ಮೊಗಲರ ದರಬಾರಕ್ಕೆ ಸುದ್ದಿಯನ್ನು ತಿಳಿಸುತ್ತಿದ್ದರು. ಈ ಸಮಯದಲ್ಲಿ ಪರ್ವತವು ಕಂಪಿತವಾಗುತ್ತಿದ್ದಿತು, ಗಿರಿಕಂದರಗಳಲ್ಲಿ ಭೇರಿಯ ನಿನಾದವುಂಟಾಗುತ್ತಲಿದ್ದಿತು, ಸಹಸಾ ರಜಪೂತವೀರರು ಶತ್ರುಸೈನ್ಯವನ್ನಾಕ್ರಮಿಸುತ್ತಿದ್ದರು ಮೊಗಲ ಸೈನ್ಯವನ್ನು ಛಿನ್ನಭಿನ್ನವಾಗಿ ಮಾಡಿ, ಅವರ ರಕ್ತದಿಂದ ಪರ್ವತವನ್ನು ರಂಜಿತಮಾಡಿ, ರಜಪೂತರು ಪುನಃ ತಮ್ಮ ಚಿರಪರಿಚಿತವಾದ ಆ ಪರ್ವತಮಾರ್ಗದಲ್ಲಿ ವಿಲೀನರಾಗಿಹೋಗುತ್ತಿದ್ದರು. ಒಂದು ಸಾರೆ ಫರೀದಖಾನನು ಒಂದು ಸ್ಥಳದಲ್ಲಿ ರಜಪೂತರನ್ನು ಸೋಲಿಸಿದನು; ಆಗ ಅವನು ಪ್ರತಾಪನನ್ನು ಹಿಡಿಯುವ ಭರಕ್ಕೆ ಬಿದ್ದು, ಇಕ್ಕಟ್ಟಿನಲ್ಲಿ ಸಿಕ್ಕನು; ಈ ಸಮಯದಲ್ಲಿ ಪ್ರತಾಪನು ಅಕಸ್ಮಾತ್ತಾಗಿ ಇವನ ಮೇಲೆ ಬಿದ್ದು, ಕೌಶಲ್ಯದಿಂದ ಮೊಗಲರನ್ನು ಘಟ್ಟದ ಮಾರ್ಗದ ಇಕ್ಕಟ್ಟಿನಲ್ಲಿ ಹಿಡಿದಿರಿಸಿದನು; ಇದರಿಂದ ಒಬ್ಬ ಮನುಷ್ಯನೂ ಕೂಡ ಪ್ರಾಣವನ್ನುಳಿಸಿಕೊಂಡು, ತಿರುಗಿ ಹೋಗಲು ಸಮರ್ಥನಾಗಲಿಲ್ಲ. ಈ ತರದ ಉಚ್ಛೃಂಖಲಯುದ್ಧವ್ಯಾಪಾರದಲ್ಲಿ ಮೊಗಲರು ಅನಭ್ಯಾಸಿಗಳಾಗಿ

ದ್ದರು; ಅದರಿಂದ ಅವರು ಪ್ರತಾಪನನ್ನು ಶಿಕ್ಷಿಸಲು ಎಷ್ಟುಮಾತ್ರವೂ ಸಮರ್ಥ ರಾಗಲಿಲ್ಲ. ಈ ಮೇರೆಗೆ ಪ್ರಖ್ಯಾತರಾದ ಮೊಗಲ ಸೇನಾಪತಿಗಳ ಆಲೋಚನೆಗ ಳೆಲ್ಲವೂ ವ್ಯರ್ಥವಾಗಿ ಹೋದವು ಪುನಃ ವರ್ಷಾಕಾಲವು ಬಂದಿತು. ಗಿರಿನದಿಗ ಳೆಲ್ಲ ತುಂಬಿ ಹರಿಯತೊಡಗಿದವು; ಮತ್ತು ದಾಟಿಹೋಗಲಿಕ್ಕೆ ಬರದಂತಾದವು. ಮೊಗಲರು ಮತ್ತೆ ಮೇವಾಡವನ್ನು ಬಿಟ್ಟು ಹೋದರು; ಅದರಿಂದ ಪ್ರತಾಪನಿಗೆ ಪುನಃ ವಿಶ್ರಾಂತಿಯು ದೊರೆಯಿತು

ಈ ಮೇರೆಗೆ ವರ್ಷದ ಮೇಲೆ ವರ್ಷವು ಕಳೆದು ಹೋಗಹತ್ತಿತು. ಪ್ರತಿ ವರ್ಷ ವರ್ಷಾಗಮನಕಾಲದಲ್ಲಿ ಮೊಗಲಸೇನೆಯು ತಿರುಗಿ ಹೋಗುತ್ತಿದ್ದಿತು; ಪುನಃ ಮೊಗಲರು ವಸಂತಾಗಮನ ಕಾಲದಲ್ಲಿ ದಂಡೆತ್ತಿ ಬರುತ್ತಿದ್ದರು. ಪ್ರತಾ ಪನು ಆ ಪರ್ವತದ ಪ್ರದೇಶದಲ್ಲಿ, ಆ ಕೂಟಯುದ್ಧನೀತಿಯನ್ನವಲಂಬಿಸಿ, ಒದ ಗಿದ ಯಾವತ್ತು ಕಷ್ಟಗಳನ್ನು ಸಹಿಸಿಕೊಂಡು, ಆತ್ಮರಕ್ಷಣೆ ಮಾಡಿಕೊಳ್ಳಹತ್ತಿ ದನು. ಇವನ ಕಠೋರ ವ್ರತದ ಭಂಗವಾಗಲಿಲ್ಲ; ಪ್ರತಿಜ್ಞೆಯು ಹೊಯ್ದಾಡ ಹತ್ತಲಿಲ್ಲ ರಜಪೂತ ಸರದಾರರು ಸ್ವಾಮಿಭಕ್ತಿಯನ್ನು ಬಿಡಲಿಲ್ಲ, ಇವನ ಅನುಚ ರರ ಬುದ್ಧಿಯು ಸ್ವಲ್ಪ ಮಾತ್ರವೂ ವಿಚಲಿತವಾಗಲಿಲ್ಲ ವೀರಭೂಮಿಯು ಸುಸಂತಾನ ಸಮೂಹವು, ಫಲಮೂಲಗಳನ್ನು ಭುಂಜಿಸಿ,, ವೃಕ್ಷತಲದಲ್ಲಿ ಶಯನಮಾಡಿ, ಹೀನ ಸ್ಥಿತಿಯಿಂದ ಕಾಲಕಳೆಯತೊಡಗಿದರು. ಸಾಮಂತ ಸರದಾರರು ರಾಣಾನ ವಿಷ ಯದಲ್ಲಿ ಸನ್ಮಾನವನ್ನು ತೋರಿಸುವದದ್ಕಾಗಿ, ರಾಜಧಾನಿಯಲ್ಲಿ ಮಹಾಡಂಬರ ದಿಂದ ಮಾಡುತ್ತಿದ್ದ ಉತ್ಸವಗಳನ್ನು, ಇಂದು ಈ ಪ್ರವಾಸದಲ್ಲಿ ಪರ್ವತಗುಹೆಯಲ್ಲಿ ದೀನಭಾವದಿಂದ ಯಥಾವಿಧಿಯಾಗಿ ಮಾಡತೊಗಿದರು

ಪ್ರತಾಪನು ಎಲ್ಲಿರುವನು? ಹೇಗಿರುವನು? ಯಾವ ರೀತಿಯಿಂದ ಕಾಲಕಳೆ ಯುತ್ತಿರುವನು? ಈ ಮೊದಲಾದ ಸಂಗತಿಗಳನ್ನು ತಿಳಿದುಕೊಳ್ಳುವದಕ್ಕೆ ಅಕಬ ರನು ಸದಾ ಉತ್ಕಂಠಿತನಾಗಿರುತ್ತಿದ್ದನು. ಇದಕ್ಕಾಗಿ ಇವನು ಅನೇಕ ಗುಪ್ತಚಾ ರರನ್ನು ನಿಯಮಿಸಿದ್ದನು. ಇವರಲ್ಲಿ ಕೆಲವರು ಸ್ವತಃ ನೋಡಿಯಾಗಲಿ, ಪರರ ಮುಖದಿಂದ ಕೇಳಿಯಾಗಲಿ, ಮಹಾರಾಣಾನ ಸಂಗತಿಗಳನ್ನರಿತುಕೊಂಡು, ಬಾದ ಶಹನಿಗೆ ಹೇಳುತ್ತಿದ್ದರು. ಪ್ರತಾಪನ ಅಪ್ರತಿಮವಾದ ವೀರಧರ್ಮದ ವಿಷಯ ವನ್ನು ಕೇಳಿ, ಶತ್ರುಗಳೂ ಕೂಡ, ವಿಸ್ಮಿತರೂ, ಸ್ತಂಭಿತರೂ ಆಗುತ್ತಿದ್ದರು. ಶತ್ರುಗ

ಕಲ್ಲಿಯೂ ಸಹ, ಪ್ರತಾಪನ ವಿಷಯವಾಗಿ ಭಕ್ತಿಯುಂಟಾಗುತ್ತಿದ್ದಿತು; ಆದರಿಂದ ಅವರು ಪ್ರತಾಪನನ್ನು ಹೊಗಳದಿರುತ್ತಿರಲಿಲ್ಲ ಒಂದು ದಿವಸ ಮೊಗಲ ದರಬಾರದ ಪ್ರಮುಖ ಸೇನಾಪತಿಯು§ ಪ್ರತಾಪನ ವೀರತ್ವವನ್ನೂ, ಮಹತ್ವವನ್ನೂ ವರ್ಣಿಸಿದ ಕವಿತೆಯನ್ನು ಇವನ ಬಳಿಗೆ ಕಳುಹಿಸಿಕೊಟ್ಟನು. ಇದರ ಸಾರವೇನಂದರೆ —

ಜಗವುಂ ಕ್ಷಣಿಕಂ ಜಗದೊಳ | ಗೊನೆದುದು ಕ್ಷಣಿಕಂ ತನೂಧನಂ ಕ್ಷಣಿಕಂ ಶಾಂ ॥
ಬಗೆವೊಡೆ ಮಹಿಮರ ನಾಮಂ | ಝುಗಝುಗಿಸುತ್ತಿಹುದಜಸ್ರಮುದಕಳಿವಿಲ್ಲಂ ॥ ೧ ॥
ಧನರಾಜ್ಯಂಗಳು ಜಾರ್ದೊಡೇಂ ಗಡಣದಿಂ ತದ್ಬಧುಗಳ್ ಸಾರ್ದೊಡೇ |
ಸನಿತಸರ್ವಶ್ರಯರ್ಗೈದಿ ಸೇರಲರಿಯಃ ತಾನೇ ಪ್ರತಾಪಾಖ್ಯನೂ ॥
ವಿನುತಾತ್ಮಂ ವರವೀರ ಕೇಸರಿಯುಣಂ ಬಿರ್ಚುತ್ತಲಾ ವೈರಿಯಂ |
ನ್ನನವಿಂ ಪೊರ್ದಿದನೇ ? ರಸಾತಳವೊಳಿತ್ತಲ್ ಕೀರ್ತಿಯಂ ಬಿತ್ತಿದಂ ॥ ೨ ॥
ಧನ್ಯಂ ಭಾರತಚಕ್ರವರ್ತಿ ಜಯದೊಳ್, ಪುಣ್ಯಂ ಧರಾವರ್ತದೊಳ್, |
ಮಾನ್ಯಂ ಮಾನಿತರಲ್ಲತುಲ್ಯನಮಮಾ ಭೂಪಾ ಹಮೀರಾನ್ವಯೋ ॥
ತ್ಪನ್ನಾನೀಂ ಪರಮಪ್ರತಾಪ ನರಪಾಲಾ ರಾಜಸ್ರತಾನ್ಸಯೋ |
ತ್ಪನ್ನಾಂಕಂ ಸತಿ ನೀಗಿತ್ತೈ ಜಯಯುತಾ ಸಾನಂದ ನಿನ್ನಿಂದಿದಲ್ ॥ ೩ ॥

---

§ ಇವನು ಪ್ರಖ್ಯಾತ ಬಯರಾಮಖಾನನ ಮಗನು ತಂದೆಯ ಮರಣಸಮಯದಲ್ಲಿವನು ಬಾಲಕನಾಗಿದ್ದನು ತರುವಾಯ ಅಕಬರನು ಇವನನ್ನು ಪ್ರೀತಿಯಿಂದ ಸಲಹಿದನು ಅಕಬರನ ಆಳಿಕೆಯಲ್ಲಿ ಇವನು ವಿಶೇಷ ಗೌರವವನ್ನು ಹೊಂದಿದನು ಇವನ ಹೆಸರು ಮೀರ್ಜಾ ಅಬದರ ರಹಿಮನು ಇವನು ಐದುಸಾವಿರ ಸೈನಿಕರ ಮೇಲಾಧಿಕಾರಿಯಾಗಿದ್ದನು ಇವನು ಗುಜರಾಥ ಸಿಂಧ ಮೊದಲಾದ ಅನೇಕ ದೇಶಗಳಲ್ಲಿ ಜಯಪಡೆದನು, ಆದರೆ ಇವನ ವೀರತ್ವಕ್ಕಿಂತಲೂ ಕವಿತ್ವವು ಹೆಚ್ಚು ಪ್ರಶಂಸನೀಯವಾಗಿದ್ದಿತು ಇವನು ವಿದ್ಯೆಯ ಚರ್ಚೆಗಾಗಿ ಯಾವ ರೀತಿಯಿಂದ ದಾನಮಾಡಿದನೆಂಬದನ್ನು ಮಾಜಿರ ಇ ರಹಿಮೀಯೆಂಬ ಗ್ರಂಥದಿಂದ ತಿಳಿದುಬರುವದು ಬ್ಲಾಕಮನ್ನನು ಹೇಳಿದ್ದೇನಂದರೆ—" "He was the Mecoenas of Akbar's age " ಇವನು ಪಾರ್ಶಿ, ಅರಬೀ, ತುರ್ಕೀ, ಹಿಂದೀ ಭಾಷೆಗಳನ್ನು ಚನ್ನಾಗಿ ಅರಿತಿದ್ದನು, ರಹಿಮನೆಂಬ ಹೆಸರಿನಿಂದ ಪರಿಚಿತನಾಗಿ ಅನೇಕ ಕವಿತೆಗಳನ್ನು ರಚಿಸಿದ್ದಾನೆ See Blochmann PP. 284-9 Elliot's Index ( Ist edition ) P. 377.

# ಅಷ್ಟದಶ ಪರಿಚ್ಛೇದ.

## ಪೃಥ್ವೀರಾಜನ ಪತ್ರ.

ಆಸಾರವೀರಯೋಗಿಯು | ಸಂಸಾರದ ಸಣ್ಣ ಘಟನೆಯೊಂದರ ಕತದಿಂ |
ಸಂಸಾರಕ್ಕೊಳಗಾದೊಡೆ | ಸಾಂಸಾರಿಕಮೋಹವತಿ ವಿಚಿತ್ರಮಿದಲ್ತೇ? || ೧ ||

ಈ ಜಗತ್ತಿನಲ್ಲಿ ಪ್ರೇಮಕ್ಕೆ ಸಮಾನವಾದ ಶಕ್ತಿಯು ಬೇರೊಂದಿಲ್ಲ. ಕಠೋರ ರಾಜದಂಡವನ್ನು ಕೈಯಲ್ಲಿ ಹಿಡಿದು, ರುದ್ರಮೂರ್ತಿಯನ್ನು ಧರಿಸಿ ರಾಜ್ಯಕಾರಭಾರವನ್ನು ಸಾಗಿಸುತ್ತಿರುವ ಮನುಷ್ಯನು ಅಂತಃಪುರದಲ್ಲಿ ಪ್ರವೇಶಿಸಿದನೆಂದರೆ— ಸ್ತ್ರೀಪುತ್ರಾದಿ ಪರಿವಾರದ ಮಧ್ಯವರ್ತಿಯಾದನೆಂದರೆ ಸಹಾಸ್ಯವದನನಾಗಿ, ಸರಸವಾದ ಮಾತುಗಳನ್ನಾಡತೊಡಗುವನು ರಣಕ್ಷೇತ್ರದಲ್ಲಿ, ಶತ್ರುಗಳ ಮಧ್ಯದಲ್ಲಿ, ಶಸ್ತ್ರ-ಕ್ರೀಡೆಯ ಮಧ್ಯದಲ್ಲಿ ಪ್ರತಿಯಮನ ಮೂರ್ತಿಯನ್ನು ಧರಿಸಿದ ಮನುಜನು, ತನ್ನ ಸ್ನೇಹಪುತ್ಥಳಿಯ—ಪ್ರೇಮಪಾತ್ರಳಾದ ರಮಣಿಯ ಕೋಮಲ ಪಾದದಲ್ಲಿ ಮುಳ್ಳು ನಟ್ಟರೂ ಕಣ್ಣೀರು ಸುರಿಸತೊಡಗುವನು ಅಂತೆಯೇ, ತನ್ನ ಕಠೋರ ಪ್ರತಿಜ್ಞೆಯಿಂದಲೂ, ಅಸಮ ಸಾಹಸದಿಂದಲೂ, ಅಪ್ರತಿಮ ಕಷ್ಟಸಹಿಷ್ಣುತೆಯಿಂದಲೂ ಶತ್ರುಗಳ ಭಕ್ತಿ-ಪ್ರೀತಿಯನ್ನು ಆಕರ್ಷಣಮಾಡಿಕೊಂಡಿದ್ದ ಪ್ರತಾಪನು, ಹೆಂಡತಿ-ಮಕ್ಕಳ ದಾರುಣವಾದ ದುರ್ದೆಶೆಯನ್ನು ನೋಡಿ, ಒಮ್ಮೊಮ್ಮೆ ಆತ್ಮಹಾರನಾಗಿ ಹೋಗುತ್ತಿದ್ದನು—ಸಾಂಸಾರಿಕ ಮೋಹಕ್ಕೊಳಗಾಗುತ್ತಿದ್ದನು. ಪ್ರತಾಪನ ಪರಿವಾರದ ಜನರು ಭಿಲ್ಲರಿಂದ ರಕ್ಷಿತರೂ, ಪಾಲಿತರೂ ಆಗಿ, ಹೇಗೆ ಕಾಲಕಳೆಯುತ್ತಿದ್ದರೆಂಬದನ್ನು ಹಿಂದೆ ಸೂಚಿಸಿದ್ದೇವೆ. ಭಿಲ್ಲರು ಕ್ರೂರಪ್ರಾಣಿಗಗಳಿಂದ ರಕ್ಷಿಸುವದಕ್ಕಾಗಿ, ಇವರನ್ನೊಂದು ಪೆಟ್ಟಿಗೆಯಲ್ಲಿ ಕುಳ್ಳಿರಿಸಿ, ದೊಡ್ಡ ಗಿಡಗಳಿಗೆ ತೂಗುಬಿಡುತ್ತಿದ್ದರು; ಮತ್ತು ಅಡವಿಯಲ್ಲಿ ತಿರುಗಾಡಿ, ಕಂದಮೂಲಾದಿಗಳನ್ನು ತಂದು, ಇವರ ಸೇವೆಯನ್ನು ವಮಡುತ್ತಿದ್ದರು. ಶತ್ರುಗಳು ಚಾಂದಾನಗರವನ್ನು ಕೈವಶಮಾಡಿಕೊಂಡ ಸಮಯದಲ್ಲಿ ಭಿಲ್ಲರು ಇವರನ್ನು ಜಹುರಾದ ಸತುವಿನ ಕಣಿಯಲ್ಲಡಗಿಸಿಟ್ಟಿದ್ದರು. ಈ ಕಣಿಯು ಬಹು ಅಂಧಕಾರಮಯವಾಗಿದ್ದಿತು. ರಾಜಮಹಿಷಿಯೂ, ರಾಜಕುಮಾರ-ಕುಮಾರಿಯರೂ ಪೆಟ್ಟಿಗೆಯಲ್ಲಿ ಕುಳಿತು

ತೂಗಾಡುತ್ತ ವಾಸಮಾಡಿದ ಜಹುರಾ ಮತ್ತು ಚಾಂದಾ ನಗರಗಳ ಸಮೀಪದಲ್ಲಿರುವ ದೊಡ್ಡ ವೃಕ್ಷಗಳನ್ನು ಪ್ರವಾಸಿಗರು ಈಗಲೂ ನೋಡಬಹುದಾಗಿದೆ. ಟಾಡ್‌ಸಾಹೇಬರು ಇವನ್ನು ಪ್ರತ್ಯಕ್ಷವಾಗಿ ನೋಡಿದ್ದಾರೆ. ಈ ಸ್ಥಳದಲ್ಲಿಯ ಗಿಡಗಳಲ್ಲಿ ಈಗಲೂ ಕಬ್ಬಿಣದ ಬಳೆ, ಸರಪಳಿ ಮೊದಲಾದವುಗಳಿವೆ.

ಮನುಷ್ಯನು ಎಲ್ಲವನ್ನೂ ಸಹಿಸಬಹುದಾಗಿದೆ; ಆದರೆ ಹಸಿವೆಯಿಂದ ಬಳಳುತ್ತಿರುವ ಮುದ್ದುಮಕ್ಕಳಿಗೆ ಆಹಾರವಿಲ್ಲದಿರುವದನ್ನು ನೋಡಿ, ಎಷ್ಟುಮಾತ್ರವೂ ಸಹಿಸಲಾರನು. ಅದರಲ್ಲಿಯೂ ರಾಜೋಪಭೋಗವನ್ನು ಹೊಂದಲು ಯೋಗ್ಯರಾದವರು, ಒಂದು ತುತ್ತು ಅನ್ನಕ್ಕಾಗಿ ಕಷ್ಟಬಡುತ್ತಿರುವದು ಅತಿ ಕಠೋರವೂ, ಹೃದಯದ್ರಾವಕವೂ ಆದ ಸಂಗತಿಯಾಗಿದೆ ಪ್ರತಾಪನ ಕುಮಾರ-ಕುಮಾರಿಯರು ಎಷ್ಟೋ ಸಮಯದಲ್ಲಿ ಕೇವಲ ಅಡವಿಯಲ್ಲಿರುವ ಹಣ್ಣುಹಂಪಲಗಳನ್ನು ತಿಂದು, ತಮ್ಮ ಹಸಿವೆಯ ಶಾಂತಿಯನ್ನು ಮಾಡಿಕೊಳ್ಳಬೇಕಾಗುತ್ತಿದ್ದಿತು. ಪ್ರತಾಪನ ಪ್ರಿಯತಮಳಾದ ಭಾರ್ಯೆಯು ಎಷ್ಟೋ ಸಮಯದಲ್ಲಿ ಬೈಲುಪ್ರದೇಶದಲ್ಲಿ ಅರಕ್ಷಿತಳಾಗಿರಬೇಕಾಗುತ್ತಿದ್ದಿತು, ಮತ್ತು ಯವನರ ಕೈಯಿಂದ ಹೇಗೆ ಪಾರಾದೇನೆಂಬ ಚಿಂತೆಯನ್ನು ವಹಿಸಬೇಕಾಗುತ್ತಿದ್ದಿತು. ಕೆಲವು ಪ್ರಸಂಗಗಳಲ್ಲಿ ಅಡಿಗೆಯು ಸಿದ್ಧವಾಗಿರುತ್ತಿತ್ತು; ಅಷ್ಟರಲ್ಲಿ ಯವನರು ಬಂದ ಸುದ್ದಿಯು ತಿಳಿಯುತ್ತಿತ್ತು; ಆಗ ಇವರು ಮಾಡಿದ ಅಡಗಿಯನ್ನೊತ್ತಟ್ಟಿಗೆ ಚಲ್ಲಿ ಪಲಾಯನ ಮಾಡಬೇಕಾಗುತ್ತಿದ್ದಿತು. ಶತ್ರುಗಳಾದ ಮೊಗಲರು ಒಂದೇ ಸವನೆ ಇವರ ಬೆನ್ನು ಹತ್ತಿದ್ದರು; ಅದರಿಂದ ಒಂದು ದಿನ ಮಹಾರಾಣಾನ ಪರಿವಾರದವರು ಐದುಸಾರೆ ಅಡಿಗೆ ಮಾಡಬೇಕಾಯಿತು; ಆದರೆ ಐದುಸಾರೆ ಇವರು ತಮ್ಮ ಅಡಿಗೆಯನ್ನು ಚಲ್ಲಿ ಓಡಿಹೋಗಬೇಕಾಯಿತು; ಕಡೆಯಲ್ಲಿ ಒಂದುಸಾರೆ ಊಟಮಾಡುವ ಸುಯೋಗವನ್ನು ಸಹ ಇವರು ಹೊಂದಲಿಲ್ಲ.

ಒಂದೊಂದು ಪ್ರಸಂಗದಲ್ಲಿ ಒದಗಿದ ಕ್ಷುಲ್ಲಕ ಸಂಗತಿಗಳಿಂದ ಸಹ, ಮನುಷ್ಯನ ಜೀವಿತದ ಗತಿಯು ಭಿನ್ನವಾಗಿ ಹೋದದ್ದು ಕಂಡುಬರುವದು. ಒಂದು ಸಮಯದಲ್ಲಿ ಐಝೂಕನ್ಯೂಟನನು ಕುಸ್ತಿಯಲ್ಲೊಬ್ಬ ದೊಡ್ಡ ಹುಡುಗನನ್ನು ಒಗೆದದ್ದು, ಅವನು ಮುಂದೆ ಬಹು ಬುದ್ಧಿವಂತನಾಗುವದಕ್ಕೆ ಕಾರಣೀಭೂತವಾಯಿತು. ಕ್ಲೈವನು ಮುಂದೆ ಬರುವದಕ್ಕೆ—ಹಿಂದುಸ್ತಾನದ ಗವರ್ನರನಾಗುವ

ದಕ್ಕೆ ಇಂತಹ ಒಂದು ಕ್ಷುಲ್ಲಕ ಸಂಗತಿಯೇ ಕಾರಣೀಭೂತವಾಯಿತೆಂದು ಇತಿಹಾಸದಿಂದ ತಿಳಿದುಬರುವದು. ಪ್ರತಾಪನ ಜೀವಿತದಲ್ಲೂ ಇಂತಹದೊಂದು ಪ್ರಸಂಗವೊದಗಿತು. ಒಂದುದಿವಸ ಪ್ರತಾಪನ ಹೆಂಡತಿಯೂ, ಮಗಳೂ ಕೂಡಿ, “ ಮಲ ” ವೆಂಬ ಹೆಸರಿನ ಒಂದು ತರದ ಬೀಜದ ಹಿಟ್ಟಿನಿಂದ ರಾಜಪರಿವಾರಕ್ಕಾಗಿ ಕೆಲವು ರೊಟ್ಟಿಗಳನ್ನು ಸಿದ್ಧಮಾಡಿದರು. ಇವು ಎಲ್ಲರಿಗೂ ಸಂಪೂರ್ಣವಾಗಿ ಸಾಲುವಂತಿರಲಿಲ್ಲ, ಎಲ್ಲರಿಗೂ ಒಂದೊಂದು ರೊಟ್ಟಿಯಂತೆ ಮಾತ್ರ ಕೊಡಬಹುದಾಗಿದ್ದಿತು; ಅದರಂತೆ ಎಲ್ಲರಿಗೂ ಒಂದೊಂದು ರೊಟ್ಟಿಯು ಕೊಡಲ್ಪಟ್ಟಿತು. ಈ ದಿವಸ ಬೇರೆ ಆಹಾರದ ಪದಾರ್ಥಗಳಿರಲಿಲ್ಲ ಕೇವಲ ಒಂದೊಂದು ರೊಟ್ಟಿಯಿಂದ ತೃಪ್ತರಾಗಬೇಕಾಗಿದ್ದಿತು. ಕಾರಣ ಎಲ್ಲರೂ ಅರ್ಧ ರೊಟ್ಟಿಯನ್ನು ತಿನ್ನಬೇಕೆಂದೂ, ಉಳಿದರ್ಧವನ್ನು ಎರಡನೆಯ ಸಾರೆಗೆ ತೆಗೆದಿಡಬೇಕೆಂದೂ ಗೊತ್ತುಮಾಡಿಕೊಂಡರು. ಅದರಂತೆ ಪ್ರತಾಪನ ಮಗಳು ಅರ್ಧ ರೊಟ್ಟಿಯನ್ನು ಹತ್ತರದಲ್ಲಿಟ್ಟುಕೊಂಟು, ಉಳಿದರ್ಧವನ್ನು ತಿನ್ನತೊಡಗಿದ್ದಳು. ಈ ಸಮಯದಲ್ಲಿ ಒಂದು ಅಡವಿಯ ಬೆಕ್ಕು ಅಕಸ್ಮಾತ್ತಾಗಿ ಬಂದು, ರಾಜಕುಮಾರಿಯು ತೆಗೆದಿಟ್ಟ ರೊಟ್ಟಿಯನ್ನು ತೆಗೆದುಕೊಂಡು ಓಡಿಹೋಯಿತು. ಬಾಲಿಕೆಯು ಚಿತ್ಕಾರಮಾಡುತ್ತ ಅಳತೊಡಗಿದಳು ಈ ವೇಳೆಯಲ್ಲಿ ಪ್ರತಾಪನು ಸಮೀಪದಲ್ಲಿಯೇ ಹುಲ್ಲಿನ ಹಾಸುಗೆಯ ಮೇಲೆ ಅರ್ಧ ಮಲಗಿದ್ದನು, ಅವನು ತನ್ನ ಮತ್ತು ಸ್ವರಾಜ್ಯದ ವಿಷಯವಾಗಿ ಚಿಂತೆಮಾಡುತ್ತ, ಬಹು ವಿಷಾದದಲ್ಲಿದ್ದನು ಮಗಳ ಕರುಣಾಜನಕವಾದ ಅಳುವನ್ನು ಕೇಳಿ ಒಮ್ಮೆಲೆ ಎಚ್ಚತ್ತನು, ಸುತ್ತಲೂ ನೋಡಿದನು; ನಡೆದ ಸಂಗತಿಯು ಗೊತ್ತಾಯಿತು. ಅವನ ಹೃದಯವು ಒಡೆದುಹೋಯಿತು. ಯುದ್ಧಭೂಮಿಯಲ್ಲಿ ಅಸಂಖ್ಯ ಜಾತಿಬಾಂಧವರ ಹತ್ಯೆಯನ್ನು ನೋಡಿಯೂ ಕೂಡ, ತುಸುಮಾತ್ರವೂ ವಿಚಲಿತನಾಗದ ಅವನು ಇಂದು, ಆವುದೋ ಅಜ್ಞಾತ ಕಾರಣದಿಂದ, ಈ ಸಾಮಾನ್ಯ ಘಟನೆಯನ್ನು ನೋಡಿ ಎಚ್ಚರದಪ್ಪಿಹೋದನು; ಈ ಸಮಯದಲ್ಲಿವನನ್ನು ಸಂಸಾರದ ಮೋಹವು ಆವರಿಸಿತು. ರಾಜ್ಯಧನ, ವಿಲಾಸವೈಭವಗಳೆಲ್ಲವನ್ನು ಕಳೆದುಕೊಂಡು ಸ್ಥಿರನಾಗಿದ್ದ ಅವನು, ಇಂದು ಕನ್ಯೆಯ ಕಾತರಧ್ವನಿಯನ್ನು ಕೇಳಿ, ಎಲ್ಲವನ್ನೂ ಮರೆತನು. ಕ್ಷಣಕಾಲದ ವರೆಗೆ ತನ್ನಾ ಕಠೋರವ್ರತವನ್ನು ಮರೆದುಬಿಟ್ಟನು; ಅದರೊಡನೆ ಭೂತಕಾಲದ ಅನೇಕ ಕಷ್ಟದ ಮತ್ತು ಶೋಕದ ಸಂಗತಿಗಳನ್ನು ಸ್ಮರಿಸಿದನು; ಆಗವನ ಕಣ್ಣಿನಿಂದ ಅಶ್ರುಧಾರೆಯು ಹರಿಯತೊಡಗಿತು.

ಪ್ರತಾಪನು ಹತಾಶಭಾವದಿಂದ—" ಇನ್ನು ಮೇಲೆ ಸಹಿಸಲಾರೆನು; ಈಗ ಯಥೇಷ್ಟವಾಗಿ ಕಷ್ಟಗಳನ್ನು ಸಹಿಸಿದ್ದಾಯಿತು." ರಾಜಮಹಿಷಿಯು ಅನೇಕ ರೀತಿಯಿಂದ ಸಂತಯಿಸಿದಳು; ಸರದಾರರು ಅನೇಕ ರೀತಿಯಿಂದ ಬೋಧಿಸಿದರು; ಆದರೆ ಪ್ರತಾಪನು ಯಾರ ಮಾತನ್ನೂ ಕೇಳಲಿಲ್ಲ. ಭರದಿಂದ ಹರಿದು ಬರುತ್ತಿರುವ ಜಲಪ್ರವಾಹವನ್ನು ತಡೆಯುವದಾಗದಂತೆ, ಪ್ರತಾಪನ ಮನಸು ತಿರುಗಲಿಲ್ಲ. ಪ್ರತಾಪನು ಅಕಬರನ ಆಧೀನತ್ವವನ್ನೊಪ್ಪಿಕೊಳ್ಳುವ ಮನಸು ಮಾಡಿ, ಒಂದು ಪತ್ರವನ್ನು ಬರೆದನು.

ಇದು ಪ್ರತಾಪನ ಚರಿತ್ರೆಯ ದುರ್ಬಲತೆಯು ಅಹುದೋ ಅಲ್ಲವೋ ಎಂಬದನ್ನು ನಾವು ಹೇಳಲಾರೆವು; ಹೀಗಿದ್ದರೂ ಇದು ಪ್ರತಾಪಚರಿತ್ರೆಯ ಕಲಂಕವಲ್ಲವೆಂಬದನ್ನು ನಿಶ್ಚಯವಾಗಿ ಹೇಳಬಲ್ಲೆವು; ಯಾಕಂದರೆ ಇದರಲ್ಲಿ ಅಸ್ವಾಭಾವಿಕತೆಯು ಎಷ್ಟುಮಾತ್ರವೂ ಇಲ್ಲ. ಪ್ರತಾಪನ ಚರಿತ್ರೆಯಲ್ಲಿ ದೇವತ್ವವಿದ್ದರೂ, ಅವನು ಮನುಷ್ಯನಾಗಿದ್ದನು, ಕಾರಣ ಅವನು ಮನುಷ್ಯರ ದುರ್ಬಲತೆ, ಮನುಜರ ಮಾಯೆ, ಮಾನವವ ಭ್ರಾಂತಿಗಳಿಂದ ಬಿಡುಗಡೆ ಹೊಂದುವ ಸಂಭವವಿರಲಿಲ್ಲ. ತನ್ನ ಅಂತಃಕರಣವು ಕಲ್ಲಿನಂತೆ ಅತೀವ ಕಠೋರವಾಗಿದ್ದರೂ, ಕುಸುಮದಂತೆ ಕೋಮಲವಾಗಿದೆಯೆಂಬದನ್ನು ಪ್ರಕಾರಾಂತರದಿಂದ ಪ್ರತಾಪನು ತೋರಿಸಿಕೊಟ್ಟಿದ್ದಾನೆ. ಮನುಷ್ಯನು ಕೋಮಲತ್ವ ಮತ್ತು ಕಠೋರತೆಗಳಿಂದ ಕೂಡಿರದ ಹೊರತು ಮಹತ್ವವನ್ನು ಪಡೆಯುವಂತಿಲ್ಲ, ಅಂದರೆ ಇವುಗಳಲ್ಲಿ ಕೇವಲ ಒಂದನ್ನೇ ಅವಲಂಬಿಸುವದು ಕೇವಲ ಕಠೋರನಾಗಿರುವದು, ಇಲ್ಲವೆ ಕೋಮಲನಾಗಿರುವದು ಸರಿಯಾದುದಲ್ಲ; ಯಾಕಂದರೆ ಹೀಗಾದಲ್ಲಿ ಆ ಮನುಷ್ಯನು ಜಗತ್ತಿನ ವ್ಯವಹಾರಗಳನ್ನು ತಕ್ಕರೀತಿಯಿಂದ ಸಾಗಿಸಿಕೊಂಡು ಹೋಗಲಾರನು. ಪ್ರತಾಪನು ಈ ಎರಡೂ ಗುಣಗಳಿಂದ ಕೂಡಿದವನಾದುದರಿಂದಲೇ ಹೆಚ್ಚು ಮಹತ್ವವನ್ನು ಪಡೆದಿರುವನೆಂದು ಹೇಳಬಹುದು.

ಪ್ರತಾಪನ ಪತ್ರವು ಅಕಬರನಿಗೆ ಮುಟ್ಟಿತು; ಬಾದಶಹನು ಉತ್ಕಟವಾದ ಆನಂದದಿಂದ ಪರಿಪೂರ್ಣನಾದನು. ಅಕಬರನು ಮೇವಾಡದ ರಾಜ್ಯವನ್ನಾಗಲಿ, ರಾಜತ್ವವನ್ನಾಗಲಿ ಇಚ್ಛಿಸಿರಲಿಲ್ಲ; ಕೇವಲ ಪ್ರತಾಪನು ಒಮ್ಮೆ ಅವನತನಾದರೆ ಸಾಕಾಗಿತ್ತು. ರಾಜಧಾನಿಯಾದ ದಿಲ್ಲಿಯು ಆನಂದದಿಂದ ತುಂಬಿಹೋಯಿತು;

ಎಲ್ಲ ಕಡೆಯಲ್ಲಿಯೂ ಈ ಆನಂದಪ್ರದರ್ಶಕ ಉತ್ಸವಗಳು ನಡೆದವು. ಅಕಬರನು ಈ ಪತ್ರವನ್ನು ಪೃಥ್ವೀರಾಜನಿಗೆ ತೋರಿಸಿದನು. ಪೃಥ್ವೀರಾಜನು ಇದನ್ನು ನೋಡಿ, ಅತಿಶಯ ಮರ್ಮಾಹತನಾದನು ಯಾಕಂದರೆ ಮೊಗಲರನ್ನಾಶ್ರಯಿಸಿದ ರಜಪೂತರಲ್ಲಿ ಇವನಂತಹ ಸ್ವಜಾತಿಭಕ್ತರಾದ ಮಹಾನುಭಾವರು ಬೇರೆ ಯಾರೂ ಇರಲಿಲ್ಲ. ಮೊದಲು ಇವನ ಈ ಪತ್ರದ ಅಭಿಪ್ರಾಯವನ್ನು ನಂಬಲೇ ಇಲ್ಲ. ಮುಂದೆ ವಿಶ್ವಾಸವುಂಟಾದ ತರುವಾಯ ಇದೊಂದು ಕೆಟ್ಟ ಕೆಲಸವಾಯಿತೆಂದು ಭಾವಿಸಿದನು, ಯಾಕಂದರೆ ಅವನು ಪ್ರತಾಪನ ಈ ಕೆಲಸವು ಅತೀವ ಹೀನವಾದುದೆಂದು ತಿಳಿದನು. ಅದರಿಂದವನು ಪ್ರಕಾಶವಾಗಿ ಬಾದಶಹನಿಗೆ ಹೇಳಿದನು—“ ಜಹಾಂಪನಾ! ಈ ಪತ್ರದಲ್ಲಿ ಮೋಸವಿರುವದು, ಯಾಕಂದರೆ ಪ್ರತಾಪನು ಎಂದೂ ತಮ್ಮ ಆಧೀನತ್ವವನ್ನೊಪ್ಪಿಕೊಳ್ಳಲಾರನು ನಾನು ಪ್ರತಾಪನನ್ನು ಪೂರ್ಣವಾಗಿ ಬಲ್ಲೆನು. ಅವನು ತಮ್ಮ ರಾಜಮುಕುಟವು ದೊರೆಯುವಂತಿದ್ದರೂ ಕೂಡ, ತಮ್ಮ ಇಚ್ಛೆಯಂತೆ ಸಂಧಿಯನ್ನು ಮಾಡಿಕೊಳ್ಳಲು ಒಡಂಬಡಲಾರನು; ಅದರಿಂದ ಈ ಪತ್ರವು ಪ್ರತಾಪನ ಯಾವನೋ ಒಬ್ಬ ಶತ್ರುವಿನಿಂದ ಕಳಿಸಲ್ಪಟ್ಟಿರಬಹುದು. ನಾನು ಈ ಸಂಗತಿಯು ನಿಜತ್ವವನ್ನು ತಿಳಿದು ಹೇಳುವೆನು ” ಇದಕ್ಕಾಗಿ ಪೃಥ್ವೀರಾಜನು ಪ್ರತಾಪನಿಗೆ ಪತ್ರಬರೆಯುವ ಅನುಮತಿಯನ್ನು ಹೊಂದಿದನು. ಇವನು ಈ ಸಂಗತಿಯು ಸತ್ಯವೋ, ಅಸತ್ಯವೋ ಎಂಬದನ್ನು ತಿಳಿದುಕೊಳ್ಳುವದಕ್ಕಾಗಿ ಪತ್ರಬರೆಯುವೆನೆಂದು ಅಕಬರನಿಗೆ ತಿಳುಹಿಸಿದ್ದನು, ಆದರೆ ಇವನ ಪ್ರಕೃತ ಉದ್ದೇಶವು ಇದಾಗಿರಲಿಲ್ಲ ಪ್ರತಾಪನನ್ನು ಇದರಿಂದ ತಿರುಗಿಸಿ—ಅವನು ಶರಣುಬರುವದನ್ನು ಬಿಡಿಸಿ, ಶಿಶೋದಿಯಾ ಕುಲದ ಗೌರವವನ್ನು ಕಾಯ್ದುಕೊಳ್ಳುವದು ಇವನ ಮುಖ್ಯ ಉದ್ದೇಶವಾಗಿದ್ದಿತು. ಇವನು ಉತ್ತಮ ಕವಿಯು; ಇವನ ಕವಿತ್ವಖ್ಯಾತಿಯು ಬಹು ಜನ ಪರಿಚಿತವಾಗಿದ್ದಿತು. ಇವನು ಪ್ರತಾಪನಿಗೆ ಮಾತೃಭಾಷೆಯಲ್ಲಿ ರಚಿಸಿದ ಸಂಕ್ಷಿಪ್ತವೂ, ಸಾರಗರ್ಭವೂ, ತೇಜಮಯವೂ ಆದ ಕವಿತೆಗಳುಳ್ಳ ಒಂದು ಪತ್ರವನ್ನು ಕಳುಹಿಸಿಕೊಟ್ಟನು. ರಜಪೂತರ ಜಾತಿಯು ಇರುವವರೆಗೆ, ಹಿಂದುಸ್ಥಾನದ ಇತಿಹಾಸದಲ್ಲಿ ರಜಪೂತರ ಹೆಸರು ಅಕ್ಷಯ ಅಕ್ಷರಗಳಿಂದ ಬರೆದಿರುವವರೆಗೆ, ಪೃಥ್ವೀರಾಜನ ಮಹತ್ವವೂ, ಇವನ ಕವಿತೆಯ ಗೌರವವೂ ಅಕ್ಷುಣ್ಣವಾಗಿ ಉಳಿಯುವದರಲ್ಲಿ ಸಂದೇಹವಿಲ್ಲ. ನಾವು ಈ ಸ್ಥಳದಲ್ಲಿ ಇವನ ಪತ್ರದ ಸಾರವನ್ನು ಕೊಡುತ್ತೇವೆ.

“ ಹಿಂದುಗಳ ಆಶೆ-ವಿಶ್ವಾಸಗಳೆಲ್ಲವೂ, ಹಿಂದೂ-ಕುಲತಿಲಕನಾದ ಪ್ರತಾಪನನ್ನವಲಂಬಿಸಿವೆ, ಹಿಂದುಗಳ ಆಶ್ರಯನಾದ ಮಹಾರಾಣಾನು ಇಂದು ಯಾತರ ಸಲುವಾಗಿ ತನ್ನಾ ಧರ್ಮವನ್ನು ಬಿಡಲು ಮನಸು ಮಾಡಿದನು ?

ರಜಪೂತರ ಜಾತಿಯು ರಸಾತಳಕ್ಕೆ ಹೋಗಿದೆ, ಕ್ಷತ್ರಿಯರ ವೀರತ್ವದ ಗರ್ವವು ನಾಶವಾಗಿಹೋಗಿದೆ; ರಜಪೂತರಿಗೆ ಲಕ್ಷ್ಮೀಸ್ವರೂಪರಾದ ವೀರಾಂಗನೆಯರು ಪವಿತ್ರವಾದ ಸನ್ಮಾನದಿಂದ ವರ್ಜಿತರಾಗಿದ್ದಾರೆ.

ಪ್ರತಾಪನಂತಹ ವೀರ-ಸುಪುತ್ರರು ಇಂದು ಮೇವಾಡದಲ್ಲಿಲ್ಲದಿದ್ದರೆ, ಮೊಗಲರ ಕೂಟನೀತಿಯ ಬಲದಿಂದ, ರಜಪೂತರೆಲ್ಲರೂ ಏಕಾಕಾರರಾಗಿ ಹೋಗುತ್ತಿದ್ದರು.

ನಮ್ಮ ಜಾತಿ-ಧರ್ಮವನ್ನು ಏಕಮಾತ್ರನಾದ ಅಕಬರನು ಕೊಂಡಿದ್ದಾನೆ; ನಾವೆಲ್ಲರೂ ಅವನ ಕ್ರೀತದಾಸರಾಗಿದ್ದೇವೆ. ರಾಜಸ್ಥಾನಕ್ಕೆ ರತ್ನಸ್ವರೂಪದಂತಿರುವ ಉದಯಕುಮಾರನೊಬ್ಬನು ಮಾತ್ರ ಉಳಿದಿದ್ದಾನೆ.

ಯಾರ ಹೃದಯದಲ್ಲಿ ರಜಪೂತರ ರಕ್ತವು ಹರಿದಾಡುತ್ತಿರುವದೋ, ಅವರು ಮೋಸಹೋಗಿ, ತಮ್ಮ ಜಾತಿ-ಧರ್ಮವನ್ನೆಂದಾದರೂ ಮರೆಯಬಹುದೋ? ರೋಜಾಬಾಜಾರದಲ್ಲಿ ಚಿರಂತನವಾದ ಜಾತಿವಂಶಮರ್ಯಾದೆಗೆ ಜಲಾಂಜಲಿಯನ್ನು ಕೊಡಬಹುದೇ?

ಹೀಗಿದ್ದರೂ ಅನೇಕರು ಕ್ಷತ್ರಿಯರ ಗೌರವಕ್ಕೂ, ಜಾತಿಯ ಸನ್ಮಾನಕ್ಕೂ ಜಲಾಂಜಲಿಯನ್ನು ಕೊಟ್ಟಿದ್ದಾರೆ. ಚಿತೋಡಕ್ಕೆ ಪ್ರಾಣಸ್ವರೂಪದಂತಿರುವ ಪ್ರತಾಪನು ಈ ಬಾಜಾರಕ್ಕೆ ಬರಲು ಮನಸು ಮಾಡಬಹುದೇ?

ಮಹಾರಾಣಾನ ರಾಜ್ಯ-ರಾಜಧಾನಿಗಳು ಹೋಗಿವೆ, ವಿಪುಲವಾದ ಯಾವತ್ತೂ ಸಂಪತ್ತು ಹೋಗಿದೆ, ಆದರೆ ಜಾತಿಧರ್ಮವೂ, ಮಾನವೂ ಮಾತ್ರ ಹೋಗಿಲ್ಲ. ಈ ಅಮೌಲ್ಯ ನಿಧಿಯು ಅವನೊಬ್ಬನಲ್ಲಿ ಮಾತ್ರ ಉಳಿದಿದೆ.

ರಜಪೂತರು ಈ ರೋಜಾಬಾಜಾರಕ್ಕೆ ಹೋಗಿ, ಎಷ್ಟೋ ಸಾರೆ ಅಪಮಾನವನ್ನು ಸಹಿಸಿಕೊಂಡಿದ್ದಾರೆ; ಎಷ್ಟೋ ಸಾರೆ ನಿರಾಶೆಯನ್ನು ಹೊಂದಿದ್ದಾರೆ; ಆದರೆ ಹಮ್ಮೀರಕುಲದಲ್ಲಿ ಜನ್ಮಹೊಂದಿದವರು ಈ ತರದ ಕಲಂಕವನ್ನೆಂದೂ ಹೊಂದಿಲ್ಲ.

ಜಗತ್ತಿನಲ್ಲಿ ಪ್ರತಾಪನಿಗೆ ಧರ್ಮರಕ್ಷಣೆಯ ವಿಷಯದಲ್ಲಿ ಯಾರ ನಿಭೃತ ಸಹಾಯವೂ ಇಲ್ಲವೇನು? ಅಮಿತ ವೀರತ್ವವೂ, ಒರೆಯಿಂದ ಹಿರಿದ ಆಯುಧವೂ ಕ್ಷಾತ್ರಧರ್ಮದ ರಕ್ಷಣೆಯನ್ನು ಮಾಡುವವು.

ನಮ್ಮ ಈ ಜಾತಿಧರ್ಮಗಳನ್ನು ಕೊಂಡ ಅಕಬರನಿಗೆ ಒಂದಿಲ್ಲೊಂದು ಕೆಟ್ಟ ಸಮಯವೊದಗುವದು. ಸಂದೇಹಪೂರ್ಣವಾದ ಮಾನವಜೀವನದ ಆ ದಿವಸದಲ್ಲಿ ಅವನು ನಾಶವಾಗಿ ಹೋಗುವನು.

ಅಯ್ಯೋ! ರಾಜಪುತ್ರಕ್ಷೇತ್ರವೇ! ಈಗ ನೀನು ವೃಕ್ಷಲತಾಶೂನ್ಯವಾಗಿ ಶೋಕಿಸುವೆ, ಆದರೆ ಅಂದು ಸುಬೀಜವನ್ನು ಹೊಂದಿ, ಪುನಃ ಶೋಭಾಯಮಾನ ವಾಗುವೆ. ಈ ಸುಸಮಯದಲ್ಲಿ ಯಾವತ್ತು ರಜಪೂತರು ಪ್ರತಾಪನ ಹತ್ತರ ಓಡಿ ಬರುವರು.

ಪ್ರತಾಪನು ರಜಪೂತರ ಬೀಜವನ್ನು ಕಾಯ್ದುಕೊಳ್ಳುವನು; ಅವನ ಪವಿತ್ರತೆಯು ಉಜ್ವಲವಾಗುವದು; ಅವನು ರಜಪೂತ-ಧರ್ಮವನ್ನು ಪಾಲಿಸುವನು; ಈ ಆಶೆಯನ್ನು ನಾವೆಲ್ಲರೂ ಹೊಂದಿದ್ದೇವೆ. ”

ಪ್ರತಾಪನಿಗೆ ವೀರಕವಿಯ ಈ ಉತ್ತೇಜನಾಪೂರ್ಣವಾದ ಪತ್ರವು ಮುಟ್ಟಿತು, ಅವನಿದನ್ನು ಅನೇಕ ಸಾರೆ ಓದಿದನು. ಬಾದಶಹನಿಗೆ ಪತ್ರಬರೆದ ಸಮಯದಿಂದ ಅವನ ಮನಸು ಸ್ವಸ್ಥವಾಗಿರಲಿಲ್ಲ. ತಾನಿದೊಂದು ಅಕೃತ್ಯ ಮಾಡಿದೆನೆಂಬ ದಾರುಣವ್ಯಥೆಯು ಅವನಲ್ಲುಂಟಾಗಿತ್ತು.' ಈ ಪತ್ರವನ್ನು ನೋಡಿದ ಕೂಡಲೇ ಆ ದಾರುಣ-ದುಃಖವು ಇಲ್ಲದಂತಾಯಿತು; ಪುನಃ ಧೈರ್ಯವು ಬಂದಿತು. ಪುನಃ ಗೌರವಾಭಿಲಾಷೆಯ ಸಂಚಾರವಾಯಿತು. ಕಾರಣ ಅವನು ತನ್ನ ಹಿಂದಿನ ಮನಸ್ಥಿತಿಯನ್ನು ಪೂರ್ಣವಾಗಿ ತಿರುಗಿಸಿ, ಸ್ವದೇಶದ ಉದ್ಧಾರಕ್ಕಾಗಿ ಪುನಃ ಪ್ರಯತ್ನಮಾಡುವದನ್ನು ಗೊತ್ತುಮಾಡಿಕೊಂಡನು. ಇದರಿಂದ ರಜಪೂತರ ಗೌರವವು ರಕ್ಷಿತವಾಯಿತು. ಮೇವಾಡದ ಭಾಗ್ಯಾಕಾಶದಲ್ಲಿ ಕಾಣಿಸಿಕೊಂಡ ನಿಬಿಡತರವಾದ ಮೇಘವು, ಪೃಥ್ವೀರಾಜನ ಉತ್ತೇಜನಾಪೂರ್ಣ ಕವಿತೆಯ ಬಿರುಗಾಳಿಯಿಂದ ಛಿನ್ನವಿಚ್ಛಿನ್ನವಾಗಿ, ಅದೃಶ್ಯವಾಗಿ ಹೋಯಿತು.

# ಊನವಿಂಶ ಪರಿಚ್ಛೇದ.

## ಭಾಗ್ಯ-ಪರಿವರ್ತನ.

ಅಂಭೋಧಿಃ ಸ್ಥಲತಾಂ ಸ್ಥಲಂ ಜಲಧಿತಾಂ ಧೂಲೀಲವಃ ಶೈಲತಾಂ |
ಮೇರುರ್ಮೃತ್ಕಣತಾಂ ತೃಣಂ ಕುಲಿಶತಾಂ ವಜ್ರಂ ತೃಣಪ್ರಾಯತಾಮ್ ||
ವಹ್ನಿಃ ಶೀತಲತಾಂ ಹಿಮಂ ದಹನತಾಮಾಯಾತಿ ಯಸ್ಯೇಚ್ಛಯಾ |
ಲೀಲಾ ದುರ್ಲಲಿತಾದ್ಭುತವ್ಯಸನಿನೇ ದೇವಾಯ ತಸ್ಮೈ ನಮಃ || ೧ ||

ಭೋಜಪ್ರಬಂಧ

ಗಿರಿನದಿಯ ಪ್ರಬಲ ಪ್ರವಾಹವು ಕಲ್ಲಿನ ತಡೆಯುವಿಕೆಯಾದ ಮಾತ್ರದಿಂದ, ತನ್ನ ಗತಿ-ಪರಿವರ್ತನವನ್ನು ಮಾಡುವಂತೆ, ಪೃಥ್ವೀರಾಜನ ಪತ್ರದಿಂದ ಪ್ರತಾಪನ ಜೀವನಪ್ರವಾಹವು ಬೇರೆ ದಿಕ್ಕಿಗೆ ಒಲೆಯಿತು. ಪ್ರತಾಪನು ಅಕಬರನ ಅಧೀನತ್ವವನೊಪ್ಪಿಕೊಳ್ಳಬಾರದೆಂಬದನ್ನು ಸ್ಥಿರಪಡಿಸಿಕೊಂಡನು; ಆದರೆ ಮುಂದೇನು ಮಾಡಬೇಕೆಂಬದು ಇವನಿಗೆ ತಿಳಿಯಲಿಲ್ಲ. ಮೊಗಲರ ಅಸಂಖ್ಯ ಸೈನಿಕರೊಡನೆ, ಮೇಲಿಂದ ಮೇಲೆ ಯುದ್ಧಮಾಡಿದುದರಿಂದ ಪ್ರತಾಪನ ಸೈನ್ಯಬಲವು ಕಡಿಮೆಯಾಗಿದ್ದಿತು. ಮೊಗಲರು ತಮಗೊದಗಿದ ಹಾನಿಯನ್ನು ರಾಜಧಾನಿಯಿಂದ ಹೊಸ ಸೈನ್ಯವನ್ನು ತರಿಸಿ, ತುಂಬಿಕೊಳ್ಳುತ್ತಿದ್ದರು; ಆದರೆ ಪ್ರತಾಪನು ಕಳೆದುಹೋದ ಬಲವನ್ನು ಪುನಃ ತಂದುಕೊಳ್ಳಲು ಸಮರ್ಥನಾಗಿರಲಿಲ್ಲ; ಯಾಕಂದರೆ ಬೇರೆ ಕಡೆಯಿಂದ ಇವನಿಗೆ ಸಹಾಯವು ದೊರೆಯುವಂತಿರಲಿಲ್ಲ. ಮೇಲಾಗಿ ಇವನ ಭಾಂಡಾರವು ಬರಿದಾಗಿತ್ತು; ಅದರಿಂದ ಇದ್ದ ಸೈನಿಕರ ಉಪಜೀವನವನ್ನು ಸಾಗಿಸುವದು ಅತಿಶಯ ಕಷ್ಟಕರವಾಗಿದ್ದಿತು ಕಾರಣ ಪ್ರತಾಪನು ತನ್ನಾಶ್ರಿತ ಜನರ ಅವಸ್ಥೆಯೇನಾಗುವದೋ ಎಂಬದನ್ನು ಭಾವಿಸಿ, ಅತಿಶಯ ವ್ಯಾಕುಲನಾಗಿ ಹೋದನು.

ಕಡೆಯಲ್ಲಿ ಪ್ರತಾಪನು, ಇಷ್ಟು ದಿವಸಗಳವರೆಗೆ ರಾಜಧಾನಿಯಾದ ಚಿತೋಡವನ್ನು ಬಿಟ್ಟಿದ್ದಂತೆ, ಇನ್ನು ಮುಂದೆ ವೀರಭೂಮಿಯಾದ ಮೇವಾಡವನ್ನು ಬಿಟ್ಟು ಹೋಗಬೇಕೆಂಬದನ್ನು ಗೊತ್ತುಮಾಡಿಕೊಂಡನು. ಪೂರ್ವಜರ ಸ್ವತ್ತಾದ ಚಿತೋಡಕ್ಕೊದಗಿದ ಅವಸ್ಥೆಯು, ಪ್ರತಾಪನ ಮೇವಾಡಕ್ಕೂ ಉಂಟಾಗಲಿ

ಯೆಂದು ಅತೀವ ನಿರಾಶೆಯಿಂದ ಪ್ರತಾಪನು ಭಾವಿಸಿ, ಬೇರೆ ಕಡೆಯಲ್ಲಿ ಹೋಗಿ, ವಾಸಮಾಡುವ ಮನಸು ಮಾಡಿದನು. ಇದಕ್ಕಾಗಿ ಅವನು ತನ್ನ ಜನರನ್ನು ಕರೆದುಕೊಂಡು, ಅರವಲೀ ಪರ್ವತವನ್ನು ದಾಟಿ, ಮುಂದಿರುವ ವಿಸ್ತೀರ್ಣವಾದ ಮರುಭೂಮಿಯನ್ನು ದಾಟಿ, ದೂರದಲ್ಲಿರುವ ಸಿಂಧೂನದದ ದಂಡೆಯ ಪ್ರದೇಶದಲ್ಲಿ ಹೋಗಿ, ವಾಸವಾಗಿರಬೇಕೆಂಬದನ್ನು ಸ್ಥಿರಪಡಿಸಿಕೊಂಡನು. ನಾಲ್ಕೂ ಕಡೆಯಲ್ಲಿರುವ ತನ್ನ ಅನುಚರರಿಗೆ ಗುಪ್ತರೀತಿಯಿಂದ ಈ ಸುದ್ದಿಯನ್ನು ತಿಳುಹಿಸಿದನು, ಅತ್ಯವಶ್ಯವಾಗಿ ಬೇಕಾಗುವ ವಸ್ತುಗಳನ್ನು ಸಂಗ್ರಹಿಸಿದನು, ಅತ್ತಿತ್ತ ಹೊಸ ರಜಪೂತ ಸೈನಿಕರು ಮಹಾರಾಣಾನ ಹತ್ತರ ಬಂದರು; ಹೀಗೆ ಹೊರಡುವ ಯಾವತ್ತು ಸಿದ್ಧತೆಯಾಯಿತು ಕಡೆಯಲ್ಲಿ ಪ್ರತಾಪನು ಪರಿವಾರವರ್ಗವನ್ನೂ, ಆತ್ಮೀಯಸ್ವಜನರನ್ನೂ, ಸೇವಕರನ್ನೂ ಕರೆದುಕೊಂಡು, ಅಶ್ರುಪೂರ್ಣನೇತ್ರನಾಗಿ ಸ್ವದೇಶದ ಕಡೆಯ ಅಪ್ಪಣೆಯನ್ನು ತೆಗೆದುಕೊಂಡನು; ಮತ್ತು ಅರವಲೀ ಪರ್ವತದಿಂದ ಪಶ್ಚಿಮದ ಕಡೆಗೆ ಇಳಿಯಹತ್ತಿದನು. ಪರ್ವತದ ಕೆಳಭಾಗದಲ್ಲಿ--ಮರುಭೂಮಿಯ ಪೂರ್ವದ ಮೇರೆಯಲ್ಲಿ ಮಹಾರಾಣಾನು ಇಳಿದುಕೊಂಡನು. ರಾಜಸ್ಥಾನದ ಬೇರೆ ಭಾಗಗಳಿಂದ ಬಹುಜಾತಿಯ ಸ್ವಜನರು, ಮೇವಾಡೇಶ್ವರನ ಕಡೆಯ ಅಪ್ಪಣೆಯನ್ನು ಹೊಂದಲು ಬಂದರು. ಅವರಲ್ಲಿ ಮೇವಾಡದ ಮೊದಲಿನ ಮಂತ್ರಿಯಾದ ಭೀಮಸಿಂಹನೊಬ್ಬನು.‡

ಮೇವಾಡದ ಇತಿಹಾಸದಲ್ಲಿ ಅನೇಕ ನಿರ್ದಯತರವಾದ ಸಂಗತಿಗಳಿವೆ, ಇದರೆ ಇವುಗಳೊಡನೆ ಕರುಣಾಹೃದಯರ ಅತುಲನೀಯ ಉತ್ತಮ ಕಾರ್ಯಗಳಿಗೆ ಅಭಾವವಿಲ್ಲ. ಕ್ಷುದ್ರ ಬನಾಸನದಿಯು ನಾಚುತ್ತ-ನಾಚುತ್ತ ಪ್ರವಾಹಿತವಾಗಿ, ಅರವಲಿಯ ಗುಡ್ಡಗಾಡು ಪ್ರದೇಶವನ್ನು ಸುಂದರವೂ ಸುಶಾಂತವೂ ಆಗುವಂತೆ ಮಾಡಿದೆ, ಇದರಂತೆ ಆತ್ಮತ್ಯಾಗದ ಕ್ಷೀರ-ಧಾರೆಯು ರಜಪೂತರ ಕಠೋರ ಜೀವನವನ್ನು ಅಮೃತಮಯವಾಗಿ ಮಾಡಿದೆ ಮನುಷ್ಯನು ಯಾವದೇ ಉದ್ದೇಶವನ್ನು

---

‡ ಟಾಡ್ ಸಾಹೇಬರ ರಾಜಸ್ಥಾನವೆಂಬ ಗ್ರಂಥದಲ್ಲಿ ಈ ಮಂತ್ರಿಯ ಹೆಸರು ಭಾಮಾಶಹ ( Bhama Sah ) ಎಂದೂ, ರಾಜಸ್ತಾನದ ವಿವರಣೆಯಲ್ಲಿ ಭೀಮಶಹ ( Bhima Sah ) ಎಂದೂ ಬರೆದಿದೆ. See Rajasthan, Vol I P. 281; Raj. Gazetteer Vol. III P 19 ಮೂಲತಃ ಇವನ ಹೆಸರು ಭೀಮಸಿಂಹನೆಂಬದಾಗಿರಬಹುದು, ಮತ್ತು ಇವನು, ಪ್ರತಾಪನನ್ನು ಪಟ್ಟಕ್ಕೆ ಕುಳ್ಳಿರಿಸಿದ ಚಂದಾಯುತ್ ಸರದಾರನಾದ ಕೃಷ್ಣಸಿಂಹನ ವಂಶಜನು.

ಸ್ಥಿರಪಡಿಸಿಕೊಳ್ಳಲಿ, ಆದರೆ ಅದನ್ನು ಸಿದ್ಧಿಗೆ ಒಯ್ಯುವದು ದೇವರ ಇಚ್ಛೆಯನ್ನವಲಂಬಿರುವದು; ಅಂದರೆ ಮನುಷ್ಯನು ಯಾವದೊಂದು ಕಾರ್ಯವನ್ನು ಕಡೆಗಾಣಿಸಬೇಕಾದರೆ ಅದಕ್ಕೆ ದೈವೀ ಸಹಾಯವು ಬೇಕು. ಪ್ರತಾಪನು ಒಂದು ಕಾರ್ಯ ಮಾಡುವದನ್ನು ಸ್ಥಿರಪಡಿಸಿಕೊಂಡಿದ್ದನು, ಆದರೆ ಪೃಥ್ವೀರಾಜನ ಪತ್ರವು ಪ್ರತಾಪನನ್ನು ಈ ಕಾರ್ಯದಿಂದ ತಿರುಗಿಸಿತು. ಮತ್ತೆ ಪ್ರತಾಪನು ಬೇರೊಂದು ಕಾರ್ಯ ಮಾಡಲುದ್ಯುಕ್ತನಾಗಿದ್ದನು, ಆದರೆ ಈ ಸಾರೆಯೂ ವಿಧಿಯ ಕೃಪೆಯು ಅವನಿಗೆ ಈ ಕೆಲಸವನ್ನು ಮಾಡಗೊಡಲಿಲ್ಲ, ಬೇರೊಂದು ಉತ್ತಮವಾದ ಕಾರ್ಯವನ್ನು ತೋರಿಸಿಕೊಟ್ಟಿತು. ಪ್ರತಾಪನು ದೇಶಾಂತರಕ್ಕೆ ಹೋಗುವದನ್ನು ನಿಶ್ಚಯಿಸಿ ಹೊರಟಿದ್ದನು, ಆದರೆ ಮಂತ್ರಿಶ್ರೇಷ್ಠನಾದ ಭೀಮಸಿಂಹನು ತನ್ನ ಅಲೌಕಿಕ ಆತ್ಮತ್ಯಾಗದಿಂದ, ಇವನು ಪುನಃ ಮೇವಾಡದ ಸಿಂಹಾಸನದ ಮೇಲೆ ಕೂಡುವಂತೆ ಮಾಡಿದನು.

ಯಾವದೊಂದು ಕಾರ್ಯದಲ್ಲಿ ಮನಃಪೂರ್ವಕವಾದ ಇಚ್ಛೆಯು ಇರದಿದ್ದರೆ, ಮನುಷ್ಯನ ಮನಸಿನಲ್ಲಿ ಆ ಕಾರ್ಯದ ವಿಷಯವಾಗಿ ನಾನಾತರದ ಸಂದೇಹಗಳುಂಟಾಗುವವು; ಇದರಿಂದ ಆ ಕಾರ್ಯವನ್ನು ಮಾಡುವದಕ್ಕೆ ಕಾಲವಿಲಂಬವಾಗುವದು. ಸ್ವಭಾವ-ಸುಂದರವಾದ ಸ್ವದೇಶವನ್ನು ಬಿಟ್ಟು, ಮರುಪ್ರದೇಶದಲ್ಲಿ ಹೋಗಿ ಇರತೊಡಗುವದು ಪ್ರತಾಪನ ಮನಸಿನಲ್ಲಿರಲಿಲ್ಲ. ಕೇವಲ ನಿರುಪಾಯದಿಂದ ಅವನು ಈ ಕಾರ್ಯ ಮಾಡಲುದ್ಯುಕ್ತನಾಗಿದ್ದನು 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂದಿರುವದರಿಂದ ಜನ್ಮಭೂಮಿಯು ಸಕಲರಿಗೂ ಪ್ರಿಯಕರವು. ಆದರಿಂದ ಸಾಹಜಿಕವಾಗಿ ಸ್ವದೇಶವನ್ನು ಬಿಟ್ಟುಹೋಗಲು ಯಾರೂ ಇಚ್ಛಿಸಲಾರರು. ತನ್ನ ಮರ್ಯಾದೆಯನ್ನು ಕಾಯ್ದುಕೊಂಡು, ಸ್ವದೇಶದಲ್ಲಿರಲಿಕ್ಕೆ ಬರುವಂತಿದೆಯೇ ಹೇಗೆಂಬದನ್ನು ಪ್ರತಾಪನು ಕುಲಗುರುಗಳ ಬಳಿಯಲ್ಲಿ ಯಾವಾಗಲೂ ಕೇಳುತಲಿದ್ದನು. ಇಂತಹ ಸಮಯದಲ್ಲಿ ಜ್ಞಾನವೃದ್ಧನೂ, ವಯೋವೃದ್ಧನೂ, ಆದ ಭೀಮಸಿಂಹನು, ಒಂದು ಉತ್ತಮ ಮಾರ್ಗವನ್ನು ತೋರಿಸಿಕೊಟ್ಟು, ಪ್ರತಾಪನ ಯಾವತ್ತೂ ಸಂದೇಹಗಳನ್ನು ದೂರಮಾಡಿದನು. ಭೀಮಸಿಂಹನೂ, ಇವನ ಪೂರ್ವಜರೂ ಬಹುಕಾಲದವರೆಗೆ ಮೇವಾಡ-ರಾಜ್ಯದ ಮಂತ್ರಿಗಳಾಗಿದ್ದು, ಬಹು ಧನವನ್ನು ಸಂಗ್ರಹಿಸಿದ್ದರು. ಭೀಮಸಿಂಹನು ಸ್ವೇಚ್ಛೆಯಿಂದ ಈ ಯಾವತ್ತು ಧನವನ್ನು ಪ್ರತಾಪನಿಗೆ ಕಾಣಿಕೆಯಾಗಿ ಕೊಟ್ಟನು. ಈ ಧನದಿಂದ

೨೫ ಸಾವಿರ ಜನರ ೧೨ ವರ್ಷದ ಯಾವತ್ತು ವೆಚ್ಚವನ್ನು ಸಾಗಿಸಬಹುದಾಗಿದ್ದಿತು. ಪ್ರತಾಪನೂ ಅವನ ಅನುಜರರೂ ಈ ಅತ್ಯದ್ಭುತವಾದ ದಾನ್ಯತೆಯನ್ನು ನೋಡಿ ಸ್ತಂಭಿತರಾದರು; ತರುವಾಯ ಆ ಸಾವಿರಾರು ಜನರ ವಿಷಣ್ಣ ಮುಖದಲ್ಲಿ ನಗೆಯ ಚಿನ್ಹವು ಕಾಣಿಸತೊಡಗಿತು; ಮಹಾರಾಣಾನ ಶಿಬಿರದಲ್ಲಿ ಮಹೋಲ್ಲಾಸದ ಧ್ವನಿಯಾಯಿತು. ಭೀಮಸಿಂಹನ ಜಯಜಯಕಾರದ ಧ್ವನಿಯು ಎಲ್ಲ ದಿಕ್ಕುಗಳನ್ನು ವ್ಯಾಪಿಸಿತು. ಈ ದಿವಸದಿಂದ ಭೀಮಸಿಂಹನು ಮೇವಾಡದ ಉದ್ಧಾರ ಕರ್ತನೆಂಬ ಹೆಸರಿನಿಂದ ಪ್ರಸಿದ್ಧನಾದನು

ಪೃಥ್ವೀರಾಜನ ಪತ್ರ ಮತ್ತು ಭೀಮಸಿಂಹನ ಧನ ಈ ಎರಡರ ಸಹಾಯದಿಂದ ಪ್ರತಾಪನ ಸಾಹಸವೂ, ವಿಶ್ವಾಸವೂ ನೂರು ಪಟ್ಟಿನಿಂದ ಬೆಳೆದವು. ರಜಪೂತರ ನರಗಳಲ್ಲಿ ಪುನಃ ಉಷ್ಣರಕ್ತವು ಹರಿಯುತೊಡಗಿತು; ಸ್ವದೇಶದ ಶತ್ರುಗಳಾದ ಯವನರ ಸೇಡು ತೀರಿಸಿಕೊಳ್ಳುವ ಪ್ರಬಲವಾದ ಇಚ್ಛೆಯುಂಟಾಯಿತು. ಮೇವಾಡವನ್ನು ಬಿಟ್ಟುಹೋಗುವ ಆಲೋಚನೆಯು ಎತ್ತೋ ಹೋಗಿಬಿಟ್ಟಿತು. ಪ್ರತಾಪಸಿಂಹನು ಧೀರಭಾವದಿಂದ ಕರ್ತವ್ಯ ಮಾಡುವದನ್ನು ನಿಶ್ಚಯಿಸಿಕೊಂಡನು; ತೀವ್ರವೇ ಹೊಸದಾಗಿ ದಂಡೆತ್ತಿ ಹೋಗುವ ಸಿದ್ಧತೆಯು ನಡೆಯತೊಡಗಿತು.

ಸೈನಿಕರಿಗಾಗಿ ಸಾಕಷ್ಟು ಆಹಾರದ ಪದಾರ್ಥಗಳ ಸಂಗ್ರಹವಾಯಿತು; ಇವರಿಗೆ ಸಾಕಷ್ಟು ವಸ್ತ್ರಗಳು ದೊರೆಯುವ ವ್ಯವಸ್ಥೆಯಾಯಿತು. ಧನವಿಲ್ಲದ್ದರಿಂದ ಅಪ್ಪಣೆ ಕೊಟ್ಟು ಕಳುಹಿಸಿದ ಸೈನಿಕರಿಗೆ ತೀವ್ರವೇ ಬರಬೇಕೆಂದು ಅಪ್ಪಣೆಯು ಕಳಿಸಲ್ಪಟ್ಟಿತು. ಯುದ್ಧಕ್ಕಾಗಿ ಬೇಕಾಗುವ ಶಸ್ತ್ರಾದಿಗಳು ಸಾಕಷ್ಟು ಸಂಗ್ರಹವಾದವು. ಹೊಸ ಕುದರೆಗಳನ್ನು ಕೊಂಡು, ರಜಪೂತ-ಸೈನ್ಯದ ಬಲವನ್ನು ಬೆಳೆಸೋಣವಾಯಿತು. ಈ ಯಾವತ್ತು ಸಂಗತಿಗಳು ಅತ್ಯಲ್ಪಕಾಲದಲ್ಲಿ ಆದವು; ಮತ್ತು ಬಹಳ ವ್ಯವಸ್ಥಿತ ರೀತಿಯಿಂದಾದವು. ಮೊಗಲರು ಇದನ್ನು ತಿಳಿಯಲು ಸಮರ್ಥರಾಗಲಿಲ್ಲ.

# ವಿಂಶಪರಿಚ್ಛೇದ.

## ಮೇವಾಡ-ವಿಜಯ.

ರಥಸ್ಯೈಕಂ ಚಕ್ರಂ ಭುಜಗಯಮಿತಾಃ ಸಪ್ತತುರಗಾ |
ನಿರಾಲಂಬೋ ಮಾರ್ಗಶ್ಚರಣವಿಕಲಃ ಸಾರಥಿರಪಿ ||
ರವಿರ್ಯಾತ್ಯೇವಾಂತರಂ ಪ್ರತಿದಿನಮಪಾರಸ್ಯ ನಭಸಃ |
ಕ್ರಿಯಾಸಿದ್ಧಿಃ ಸತ್ವೇ ಭವತಿ ಮಹತಾಂ ನೋಪಕರಣೇ || ೧ ||
—ಭೋಜಪ್ರಬಂಧ

ಸೈನ್ಯವೂ, ಯುದ್ಧೋಪಕರಣಗಳೂ ಸಿದ್ಧವಾದ ತರುವಾಯ, ಪ್ರತಾಪನು ಸ್ವದೇಶದ ಪುನರುದ್ಧಾರಕ್ಕಾಗಿ, ಮರುಪ್ರಾಂತರವನ್ನು ಬಿಟ್ಟು, ತಿರುಗಿ ಬಂದನು. ಅವನು ಈ ಸಮಯದಲ್ಲಿ ಸ್ಥಿರಪಡಿಸಿಕೊಂಡದ್ದೇನಂದರೆ—"ಈ ವರೆಗೆ ಸಾಗಿಸುತ್ತ ಬಂದಿರುವ ಕಾರ್ಯವನ್ನು ಕಡೆಗಾಣಿಸುವದಕ್ಕೆ ಇದೊಂದು ಸಾರೆ ಕಡೆಯ ಪ್ರಯತ್ನವನ್ನು ಮಾಡುವೆನು—ಸ್ವದೇಶದ ಸ್ವಾತಂತ್ರ್ಯಕ್ಕಾಗಿಯೂ, ಸ್ವಜನಾಂಗದ ಗೌರವರಕ್ಷಣೆಗಾಗಿಯೂ ವಿಶ್ವಪ್ರಯತ್ನ ಮಾಡುವೆನು. ಒಂದುವೇಳೆ ನಾನು ಈ ಕೃತಕಾರ್ಯವನ್ನು ಮಾಡಲಾರದವನಾದರೆ—ನನ್ನಿಂದ ಈ ಕೆಲಸ ವಾಗದಲ್ಲಿ, ಪ್ರಾಣತ್ಯಾಗ ಮಾಡಿ, ಸಕಲ ದುಃಖಗಳಿಂದ ಬಿಡುಗಡೆಯಾಗುವೆನು." ಪ್ರತಾಪನ ಈ ಸಿದ್ಧತೆಯು ಅತ್ಯಲ್ಪ ಕಾಲದಲ್ಲಾಗಿದ್ದಿತು, ಆದರಿಂದ ಮೊಗಲರು ಸಂದೇಹ ತೆಗೆದುಕೊಳ್ಳುವ ಅವಕಾಶವನ್ನು ಹೊಂದಲಿಲ್ಲ. ಪ್ರತಾಪನು ಸ್ವದೇಶ ವನ್ನು ಬಿಟ್ಟುಹೋಗಿ, ದೂರದೇಶದಲ್ಲಿ ವಾಸಿಸುವ ಉದ್ಯೋಗಕ್ಕೆ ತೊಡಗಿರುವ ನೆಂಬದು ಮೊಗಲರಿಗೆ ಗೊತ್ತಿತ್ತು; ಹೀಗಾದಲ್ಲಿ ಸಮಗ್ರ ಮೇವಾಡವು ರಕ್ತಪಾತ ವಿಲ್ಲದೆ, ಯವನರ ಹಸ್ತಗತವಾಗುತ್ತಲಿದ್ದಿತು. ಕಾರಣ ಮೊಗಲರಿಗೆ ಪ್ರತಾಪನ ವಿಷಯದಲ್ಲಿ—ಅವನ ಈ ಯುದ್ಧದ ಸಿದ್ಧತೆಯ ಬಗ್ಗೆ ತುಸುಮಟ್ಟಿಗೆ ಸಂದೇಹ ವುಂಟಾದರೂ, ಅದನ್ನವರು ಲಕ್ಷಕ್ಕೆ ತೆಗೆದುಕೊಳ್ಳಲಿಲ್ಲ. ಯಾಕಂದರೆ ಪ್ರತಾಪನ ಈ ಕಾರ್ಯಕ್ಕೆ ವಿಘ್ನಮಾಡಿ, ಅನರ್ಥಕವಾದ ಲೋಕಹಾನಿಯನ್ನು ಮಾಡಿಕೊ ಳ್ಳುವದು ಅವರ ಇಷ್ಟವಾಗಿರಲಿಲ್ಲ.

ಸೇನಾಪತಿಯಾದ ಶಹಬಾಜಖಾನನು ಅರವಲಿಯ ಆಗ್ನೇಯ ಭಾಗದಲ್ಲಿ ರುವ ಸಮನೆಲವುಳ್ಳ ಸ್ಥಳವೆಲ್ಲವನ್ನು ಕ್ರಮವಾಗಿ ಆಕ್ರಮಿಸಿಕೊಂಡಿದ್ದನು; ಮತ್ತು

ಈ ಪ್ರದೇಶದ ಬೇರೆ ಬೇರೆ ಸ್ಥಳಗಳಲ್ಲಿ ಸ್ಥಳವೆಲ್ಲವನ್ನು ಕ್ರಮವಾಗಿ ಆಕ್ರಮಿಸಿ ಕೊಂಡಿದ್ದನು, ಮತ್ತು ಈ ಪ್ರದೇಶದ ಬೇರೆ ಬೇರೆ ಸ್ಥಳಗಳಲ್ಲಿ ಸೈನಿಕರನ್ನಿರಿಸಿ, ಗೆದ್ದುಕೊಂಡ ಪ್ರದೇಶವನ್ನು ಸುವ್ಯವಸ್ಥಿತವಾಗಿ ಮಾಡಿದನು. ಇವನು ತನ್ನ ಸೈನಿಕರೊಡನೆ ಮೇವಾಡದ ಉತ್ತರಭಾಗದಲ್ಲಿರುವ ದೇವೀರ (Dewari) ವೆಂಬ ಸ್ಥಳದಲ್ಲಿ ಶಿಬಿರ ಬಿಟ್ಟುಕೊಂಡು ವಾಸಮಾಡುತ್ತಿದ್ದನು. ದೇವೀರವು ಒಂದು ಸಂಕೀರ್ಣವಾದ ಘಟ್ಟದ ಮಾರ್ಗದ ಮುಖದಲ್ಲಿರುವದೆಂದು ಹಿಂದೆ ಹೇಳಿದ್ದೇವೆ. ಈ ಸ್ಥಳದಲ್ಲಿ ವಾಸಮಾಡಿದ್ದಾದರೆ, ಮೇವಾಡ, ಮಾರವಾಡ ಮತ್ತು ಅರವಲೀ ಮೊದಲಾದ ಯಾವತ್ತು ಸ್ಥಳಗಳ ಕಡೆಗೆ ದೃಷ್ಟಿಯನ್ನಿರಿಸಲು ಅನುಕೂಲವಾಗುತ್ತಿತ್ತು, ಈ ಕಾರಣದಿಂದ ಶಹಬಾಜಖಾನನು ಈ ಸ್ಥಾನದಲ್ಲಿ ಇರತೊಡಗಿದ್ದನು. ಇವನು ಸಮೀಪದಲ್ಲಿಯ ಪ್ರದೇಶಗಳಲ್ಲಿ ಶತ್ರು-ಸೈನ್ಯವಿಲ್ಲವೆಂದು ಭಾವಿಸಿ, ನಿಶ್ಚಿಂತನಾಗಿದ್ದನು; ಮತ್ತು ದಂಡೆತ್ತಿ ಹೋಗಿ, ಮೇವಾಡದ ಇತರ ಪ್ರದೇಶಗಳನ್ನು ಜಯಿಸಿಕೊಳ್ಳುವ ಎಣಿಕೆಯನ್ನು ಹಾಕುತ್ತಿದ್ದನು ಪ್ರತಾಪನು ತನ್ನ ಸೈನಿಕರೊಡನೆ ಅರವಲೀ ಪರ್ವತದ ಕೆಳಗಿನ ಪ್ರದೇಶದಿಂದ, ತೀರ ವೇಗದಿಂದ ತನ್ನ ಸಮೀಪಕ್ಕೆ ಬಂದಿರುವದನ್ನು ಶಹಬಾಜಖಾನನು ತಿಳಿದಿರಲಿಲ್ಲ. ಈ ಸಮಯದಲ್ಲೊಂದು ದಿವಸ, ರಜಪೂತರು ಅಕಸ್ಮಾತ್ತಾಗಿ ಇವನನ್ನಾಕ್ರಮಿಸಿದರು ಮೊಗಲ ಸೈನಿಕರು ಯುದ್ಧಕ್ಕಾಗಿ ಸಿದ್ಧರಾಗಿರಲಿಲ್ಲ, ಯಾಕಂದರೆ ಇಷ್ಟು ತೀವ್ರವಾಗಿ ರಜಪೂತರು ತಮ್ಮ ಮೇಲೆ ಸಾಗಿಬರಬಹುದೆಂಬ ಕಲ್ಪನೆಯು ಯಾರ ಕನಸಿನಲ್ಲಿಯೂ ಕೂಡ ಬಂದಿರಲಿಲ್ಲ; ಆದರಿಂದ ಇವರು ಬಹು ಅವ್ಯವಸ್ಥೆಯಿಂದಿದ್ದರು. ಈ ಸ್ಥಿತಿಯಲ್ಲಿರುವ ಇವರ ಮೇಲೆ, ಅಮಿತಬಲಶಾಲಿಗಳೂ, ಅತ್ಯುತ್ಸಾಹಿಗಳೂ ಆದ ರಜಪೂತರು ಅಶಾನ್ವಿತರಾಗಿ ಸಾಗಿಬಂದಿದ್ದರು. ಎರಡೂ ಬಣಗಳ ನಡುವೆ ಭಯಂಕರ ಯುದ್ಧವಾಯಿತು; ಮೊಗಲರು ಸೋತರು; ಶಹಬಾಜಖಾನನ ಅಧಿಕಾಂಶ ಸೈನಿಕರು ರಜಪೂತರ ಖಡ್ಗಕ್ಕೆ ಆಹುತಿಗಳಾದರು. ರಜಪೂತರು ಓಡಿಹೋಗುತ್ತಿರುವ ಮೊಗಲ ಸೈನಿಕರನ್ನು ಅಮಾಯಿ† ತದವರೆಗೆ ಬೆನ್ನುಹತ್ತಿದರು. ಈ ಸ್ಥಳದಲ್ಲಿ

† ಅಮಾಯಿತ ಅಥವಾ ಅಮೇತ (Amet)ವು ದೇವೀರದ ಈಶಾನ್ಯಮೂಲಿಯಲ್ಲಿ ಐದು ಮೈಲುಗಳ ಮೇಲಿದೆ ಈ ಸ್ಥಳದಿಂದ ಭಿಲ್ಲಬಾರದ ಮೇಲೆ ಹಾಯ್ದು, ನಸಿರಾಬಾದಕ್ಕೆ ಹೋಗುವದಕ್ಕೆ ರಾಜಮಾರ್ಗವಿದ್ದಿತು

ಮೊಗಲ ಸೈನಿಕರ ಬೇರೊಂದು ಗುಂಪು ಇದ್ದಿತು. ಇವರೂ ಶಹಬಾಜಖಾನನ ಸೈನಿಕರಂತೆ ಯಮನ-ಮನೆಗೆ ಹೋಗಬೇಕಾಯಿತು.

ರಜಪೂತರಿಗೆ ದೇವೀರದ ಯುದ್ಧದಲ್ಲಿ ದೊರೆತ ಜಯವು ಅತಿಶಯ ಮಹತ್ವದ್ದಾಗಿದೆ, ಇದರಿಂದ ಮುಂದೆ ರಜಪೂತರು ಕ್ರಮವಾಗಿ ಉನ್ನತಿಯನ್ನು ಪಡೆದಿದ್ದಾರೆ. ಕಾರಣ ದೇವಿರದಲ್ಲಿ ರಜಪೂತರ ಭಾಗ್ಯ-ಪ್ರವಾಹದ ಗತಿಯು ಬೇರೆಕಡೆಗೆ ಒಲಿಯಿತೆಂದು ಹೇಳಬಹುದು ದೈವವಶದಿಂದ ತಡೆಯನ್ನುಂಟುಮಾಡಿದ ಬಂಡೆಗಲ್ಲು, ಬೇರೊಂದು ಕಡೆಗೆ ಹೋದದ್ದಾದರೆ—ಇಲ್ಲದಂತಾದರೆ ತಡೆದ ಗತಿಯುಳ್ಳ ನದಿಯ ವಾರಿ-ಪ್ರವಾಹವು ತೀರವೇಗದಿಂದ ತೀರಭೂಮಿಯನ್ನು ತೋಯಿಸುತ್ತ ಓಡುವಂತೆ, ದೇವೀರದ ಪವಿತ್ರ-ಭೂಮಿಯಲ್ಲಿ ಚಿರಶತ್ರುಗಳಾದ ಮೊಗಲರನ್ನು ಸೋಲಿಸಿದ ರಜಪೂತರ ವಿಜಯ-ವಾಹಿನಿಯು ಮಹಾವೇಗದಿಂದ ಮುಂದೆ ಸಾಗಿತು. ಯವನರ ಬಲವಾಗಲಿ, ಕೌಶಲ್ಯವಾಗಲಿ ಈ ಪ್ರಬಲತರವಾದ ವೇಗವನ್ನು ತಡೆಯಲು ಎಷ್ಟುಮಾತ್ರವೂ ಸಮರ್ಥವಾಗಲಿಲ್ಲ. ಹಳದೀಘಟ್ಟದ ಯುದ್ಧದ ತರುವಾಯ ರಜಪೂತ ಸೈನಿಕರು ಮೇಲಿಂದ ಮೇಲೆ ಅಪಜಯ ಪಡೆಯುತ್ತ ನಡೆದಂತೆ, ದೇವೀರದ ವಿಜಯದ ನಂತರ ಎಲ್ಲ ಕಡೆಯಲ್ಲಿಯೂ ಜಯಶಾಲಿಗಳಾಗುತ್ತ ನಡೆದರು, ಅಂದರೆ ಹಳದೀಘಟ್ಟದಲ್ಲುಂಟಾದ ತಡೆಯು, ದೇವೀರದಲ್ಲಿ ಇಲ್ಲದಂತಾಗಿಹೋಯಿತು. ಹಳದೀಘಟ್ಟದ ಸಂಧ್ಯೆಯು, ದೇವೀರದಲ್ಲಿ ಪ್ರಭಾತವಾಗಿ ಪರಿಣಮಿಸಿತು. ತೀವ್ರವೇ ರವಿಕುಲದ ರಜಪೂತರ ಗೌರವ-ಸೂರ್ಯನು ಭಾಗ್ಯಾಕಾಶದಲ್ಲಿ ಸಮುದಿತನಾದನು.

ಮೊಗಲರು ಬಹು ತೊಂದರೆಯಲ್ಲಿ ಬಿದ್ದರು; ಇವರು ಪುನಃ ತಮ್ಮಲ್ಲಿ ವ್ಯವಸ್ಥೆಯನ್ನುಂಟುಮಾಡಿಕೊಂಡು, ಯುದ್ಧಕ್ಕೆ ಸಿದ್ಧರಾಗುವ ಪೂರ್ವದಲ್ಲಿಯೇ, ರಜಪೂತರು ಕಮಲಮೀರ ದುರ್ಗವನ್ನಾಕ್ರಮಿಸಿದರು; ಈ ಸ್ಥಳದಲ್ಲಿ ಸೇನಾಪತಿಯಾದ ಅಬ್ದುಲನು ತನ್ನ ಸೈನಿಕರೊಡನೆ ರಜಪೂತರ ಕ್ರೋಧಕ್ಕೆ ಆಹುತಿಯಾದನು. ವಿಜಯಿಗಳಾದ ರಜಪೂತರು ಸ್ವದೇಶದ ಮತ್ತು ಸ್ವಜಾತಿಯ ಶತ್ರುಗಳ ಪ್ರತಿಹಿಂಸೆಯನ್ನು ಭಯಂಕರ ರೀತಿಯಿಂದ ಮಾಡಹತ್ತಿದರು. ಇವರ ಒರೆಯಿಂದ ಹಿರಿದ ಖಡ್ಗಗಳಿಂದ ಯಾರೂ ಪಾರಾಗಲಿಲ್ಲ; ಶತ್ರುಗಳ ದರ್ಶನಮಾತ್ರದಿಂದ ರಜಪೂತರು ಅವರನ್ನು ಗೊತ್ತಿಗೆ ಹಚ್ಚತೊಡಗಿದರು. ಹೀಗಾಗಿ ಮೊಗಲರ ರಕ್ತ

ದಿಂದ ಮೇವಾಡದ ಭೂಮಿಯು ಶೋಭಿಸಹತ್ತಿತು. ಒಂದು ಸಮಯದಲ್ಲಿ ಪ್ರತಾಪನು ಸ್ವಜಾತಿಯ ಜನರೆಲ್ಲರನ್ನು ಬೇರೆ ಕಡೆಗೆ ಕರೆದುಕೊಂಡು ಹೋಗಿ, ಜನರ ಮನೆಗಳನ್ನು ಸ್ಮಶಾನದಂತೆ ಮಾಡಿದ್ದನು, ಈ ಸಮಯದಲ್ಲಿ ಅವನು ವಿಜಾತಿಯ ಶತ್ರುಗಳನ್ನು ಚೂರು ಚೂರಾಗಿ ಮಾಡಿ, ಮೇವಾಡದ ಘಟ್ಟದ ಮಾರ್ಗಗಳನ್ನೂ ಯುದ್ಧಭೂಮಿಗಳನ್ನೂ ಮಸಣದಂತೆ ಮಾಡಿದನು. ಕೇವಲ ಕಮಲಮೀರ ವೊಂದೇ ಅಲ್ಲ; ತುಸು ದಿವಸಗಳಲ್ಲವನು ಒಂದೊಂದಾಗಿ ಇಪ್ಪತ್ತೆರಡು ಕೋಟೆಗಳನ್ನು ತನ್ನ ಅಧೀನಪಡಿಸಿಕೊಂಡನು.†

ಈ ಸಮಯದಲ್ಲಿ ಪ್ರತಾಪನು ವೈರಿಗಳ ಸೇಡನ್ನು ಭಯಂಕರ ರೀತಿಯಿಂದ ತೀರಿಸಿಕೊಳ್ಳತೊಡಗಿದನು. ಇದೊಂದು ರಜಪೂತರ ಭೀಷಣ ಅತ್ಯಾಚಾರವೆಂದು ತೋರುವಂತಿದ್ದರೂ, ಅಸ್ವಾಭಾವಿಕವಾದುದಲ್ಲವೆಂದು ಹೇಳಬಹುದಾಗಿದೆ, ಯಾಕಂದರೆ ಮೊಗಲರು ರಜಪೂತರನ್ನು ಬಹಳವಾಗಿ ದುಃಖಪಡಿಸಿದ್ದರು. ಅವರ ಅತ್ಯಾಚಾರಕ್ಕೆ ಮೇರೆಯಿರಲಿಲ್ಲ. ಈ ಮೊಗಲರು ಒಂದೇಸವನೆ ಇಪ್ಪತ್ತೈದು ವರುಷಗಳ ವರೆಗೆ ರಜಪೂತರ ಬೆನ್ನುಹತ್ತಿ, ನಾನಾ ಸ್ಥಳಗಳಲ್ಲಿ ಅವರ ಮೇಲೆ ಬಿದ್ದು, ಅನೇಕಪ್ರದೇಶಗಳನ್ನು ತಮ್ಮ ಅಧೀನಪಡಿಸಿಕೊಂಡಿದ್ದರು, ಉಳಿದವರನ್ನು ಗೃಹತ್ಯಾಗಿಗಳನ್ನಾಗಿ ಮಾಡಿ, ಸನ್ಯಾಸಿಗಳಾಗುವಂತೆ ಮಾಡಿದ್ದರು, ಅಸಂಖ್ಯ ರಾಜಪುತ್ರರಮಣಿಯರು ಮೊಗಲರ ಕೈಯಿಂದ ಪಾರಾಗುವದಕ್ಕಾಗಿ ಜೋಹಾರ ವ್ರತದಲ್ಲಿ ಅಗ್ನಿನಾರಾಯಣನಿಗೆ ಆಹುತಿಯಾಗಬೇಕಾಯಿತು. ಹೀಗಾಗಿ ಮೊಗಲರು ರಜಪೂತರನ್ನು ನಿರ್ಮೂಲ ಮಾಡುವದಕ್ಕೆ ತಮ್ಮ ಯಾವಚ್ಛಕ್ತಿಯನ್ನುಪಯೋಗಿಸುವದಕ್ಕೂ ಹಿಂದುಮುಂದೆ ನೋಡಿರಲಿಲ್ಲ. ಇಂತಹ ಕ್ರೂರರಾದ ಶತ್ರುಗಳು ಇಂದು ಕೈಯಲ್ಲಿ ಸಿಕ್ಕುಬಿದ್ದಿರುವಾಗ, ಸಾಧುಭಾವದಿಂದ ಇವರನ್ನು ಸುಮ್ಮನೆ ಬಿಟ್ಟುಬಿಡುವದು ರಜಪೂತ ಸೈನಿಕರಿಗೆ ಅಸಂಭವವಾಯಿತು. ಮೊಗಲರು ಕೆಲವು ರಜಪೂತರ ಗಾಯದಲ್ಲಿ ಉಪ್ಪು ತುಂಬಿ, ಅವರಿಗೆ ಮರ್ಮಾಂತಿಕವಾದ ವೇದನೆಯನ್ನುಂಟುಮಾಡಿದ್ದರು; ಇದನ್ನು ಆ ರಜಪೂತರು ಮರೆಯುವದು ಹೇಗೆ? ಕಾರಣ ರಜಪೂತರು ಶತ್ರುಗಳಿಂದೊದಗಿದ ಹಿಂದಿನ ಯಾವತ್ತೂ ಅತ್ಯಾಚಾರಗಳ ಸೇಡನ್ನು ತೀರಿಸತೊಡಗಿದರು. ಈ ತರದ ಸ್ಥಿತಿಯಲ್ಲಿ ಕ್ಷಮೆಯನ್ನು ತೋರಿಸುವದು ಮಹತ್ವವಾದದ್ದು; ಇಂತಹ ಮನುಷ್ಯರ ಕೀರ್ತಿಯು ಜಗತ್ತಿನಲ್ಲಿ ಬೆಳೆಯು-

† Rajasthan Vol I P. 281

ವದು. ಹೀಗಾದಲ್ಲಿ ಮನುಷ್ಯ-ದೇವರಲ್ಲಿ ಪ್ರಭೇದವೇ ಉಳಿಯುವಂತಿಲ್ಲ; ಯಾಕಂದರೆ ದೇವರು ದಯಾಸಾಗರನಾಗಿದ್ದು, ಯಾವತ್ತರಲ್ಲಿಯೂ ದಯೆಯನ್ನು ತೋರಿಸುತ್ತಿರುವನು. ಅಂತೆಯೇ ಮನುಷ್ಯನೂ ಶತ್ರು-ಮಿತ್ರರಲ್ಲಿ ಸಮಭಾವವನ್ನಿಟ್ಟದ್ದಾದರೆ—ಎಲ್ಲರನ್ನೂ ಪ್ರೇಮದಿಂದ ನಡೆಯಿಸಿಕೊಂಡದ್ದಾದರೆ, ಅವನೂ ದೇವತ್ವವನ್ನು ಹೊಂದುವನು. ಈ ಮೇರೆಗೆ ಎಷ್ಟೋ ಸಾಧುಗಳು ಆಚರಿಸಿ, ದೇವತ್ವವನ್ನು ಪಡೆದವರು ಭಾರತಭೂಮಿಯಲ್ಲಿ ಅನೇಕರಾಗಿ ಹೋಗಿದ್ದಾರೆ. ಆದರೆ ಸಾಂಸಾರಿಕ ಮನುಷ್ಯರಿಗೆ ಇದು ಸಾಧ್ಯವಾಗುವದೆಂಬದನ್ನು ಹೇಳಲಿಕ್ಕೆ ಬರುವಂತಿಲ್ಲ. ಆದುದರಿಂದ ರಜಪೂತರು ಈ ಪ್ರಸಂಗದಲ್ಲಿ ದಯದೋರಿಸುವದು ಸಂಭವಪರವಾಗಿತ್ತೇ, ಹೇಗೆಂಬದು ವಿವೇಚ್ಯವಿಷಯವಾಗಿದೆ. ರಜಪೂತರ ಪ್ರತಿಜ್ಞೆಯೂ, ಸಾಹಸವೂ ಭೀಷಣವಾಗಿರುವಂತೆ, ಅವರ ಪ್ರತಿಹಿಂಸೆಯೂ ಭಯಂಕರ ಸ್ವರೂಪವನ್ನು ಹೊಂದಿತು, ತುಸು ದಿವಸಗಳಲ್ಲಿಯೇ ಪ್ರತಾಪನು ಚಿತೋಡ ಮತ್ತು ಮಂಡಲಗಡಗಳನ್ನು ಬಿಟ್ಟು, ಮೇವಾಡದ ಯಾವತ್ತೂ ಪ್ರದೇಶಗಳನ್ನು ಕೈವಶಮಾಡಿಕೊಂಡನು.

ಹಿಂದೆ ಮಾನಸಿಂಹನು ಪ್ರತಾಪನ ದರ್ಶನಕ್ಕೆ ಬಂದ ವೇಳೆಯಲ್ಲಿ ಅವಮಾನಿತನಾಗಿ, ರಾಣಾನ ಗರ್ವವನ್ನಿಳಿಸುವ ಪ್ರತಿಜ್ಞೆಮಾಡಿ ಹೋಗಿದ್ದನೆಂಬದನ್ನು ಹೇಳಿದ್ದೇವೆ. ಹಳದೀಘಟ್ಟದ ಯುದ್ಧದ ತರುವಾಯ ಪ್ರತಾಪನಿಗೊದಗಿದ ಅನೇಕ ದುಃಖಗಳನ್ನು ನೋಡಿ, ಮಾನಸಿಂಹನಿಗೆ ಪರಮಾನಂದವಾಗಿದ್ದಿತು. ಮತ್ತು ಅವನು ತನ್ನ ಪ್ರತಿಜ್ಞೆಯಂತೆ ಪ್ರತಾಪನ ಗರ್ವವನ್ನಿಳಿಸಿದೆನೆಂದು ಭಾವಿಸಿ, ಗರ್ವಿತನಾಗಿ ಕಾಲಹರಣ ಮಾಡುತ್ತಿದ್ದನು. ಪ್ರತಾಪನು ತನಗೊದಗಿದ ಈ ಸುಯೋಗದಲ್ಲಿ ಮಾನಸಿಂಹನಿಗೆ ತಕ್ಕ ಶಾಂತಿಯನ್ನು ವಿಧಿಸುವ ಮನಸು ಮಾಡಿದನು. ಅದರಂತೆ ಅವನು ಅಂಬರವನ್ನು ಮುತ್ತಿ, ಅದರ ಮುಖ್ಯ ವ್ಯಾಪಾರದ ಸ್ಥಳವಾದ ಮಾಲಪುರವನ್ನು* ಸುಲಿಗೆಮಾಡಿದನು.

ಮುಸಲ್ಮಾನರು ಅನೇಕ ಸ್ಥಳಗಳಲ್ಲಿ ಪರಾಜಿತರಾಗಿ ಓಡಿಹೋದರು; ಉದಯಪುರದಲ್ಲಿದ್ದ ಅಕಬರನ ಸೈನಿಕರು, ಆ ಸ್ಥಳವನ್ನು ರಕ್ಷಿಸಿಕೊಳ್ಳಲು ಸಮರ್ಥರಾಗಲಿಲ್ಲ; ಅದರಿಂದವರು ರಜಪೂತರ ಪೀಡೆಯನ್ನು ತಪ್ಪಿಸಿಕೊಳ್ಳುವದಕ್ಕಾಗಿ,

* ಇದು ಅಜಮೀರದಿಂದ ಸುಮಾರು ೪೫ ಮೈಲಿನ ಮೇಲೆ ಪೂರ್ವಕ್ಕಿರುವದು, ಮತ್ತು ಜಯಪುರದಿಂದ ದಕ್ಷಿಣಕ್ಕೆ ಸುಮಾರು ಇಷ್ಟೇ ದೂರದಲ್ಲಿದೆ. ಇದೊಂದು ಉತ್ತಮವಾದ ಬಂದರವು.

ಸ್ವೇಚ್ಛೆಯಿಂದ ಆ ಸ್ಥಳವನ್ನು ಬಿಟ್ಟುಹೋದರು. ಕಾರಣ ಪ್ರತಾಪಸಿಂಹನಿಗೆ ತನ್ನ ರಾಜಧಾನಿಯು ಅನಾಯಾಸವಾಗಿ ದೊರೆಯಿತು. ಬಹು ದಿವಸಗಳಾದ ಮೇಲೆ, ಅತೀವ ಕಷ್ಟವನ್ನು ಸಹಿಸಿದ ತರುವಾಯ, ಭೀಷಣ ಸಾಹಸಕೃತ್ಯಗಳನ್ನು ಕೈಕೊಂಡಬಳಿಕ ಚಿತೋಡದ ಗೌರವವು ಪುನಃ ಉದಿತವಾಯಿತು. ಇದರ ಸಲು-ವಾಗಿ ರಜಪೂತರು ತೋರಿಸಿದ ಅಮಾನುಷಿಕ ಆತ್ಮಯಜ್ಞ, ಸಹಿಷ್ಣುತೆ, ಪರಾಕ್ರಮಗಳು ಜಗತ್ತಿನ ಯಾವ ದೇಶದ ಇತಿಹಾಸದಲ್ಲಿಯೂ ಕಾಣಬರುವದಿಲ್ಲೆಂದು ಹೇಳಬಹುದಾಗಿದೆ.

ಪರಾಕ್ರಮಿಯಾದ ಇರಾಣದ ಅರಸನು ತನ್ನ ದೊಡ್ಡ ಸೈನ್ಯದೊಡನೆ ಗ್ರೀಸವನ್ನಾಕ್ರಮಿಸಿದನು, ಇವರಿಂದ ಗ್ರೀಕರ ಸ್ವತಂತ್ರತೆಯು ನಾಶವಾಗುವ ಸಮಯದಲ್ಲಿ, ಮುಷ್ಟಿಮಯ ಗ್ರೀಕವೀರರು ಧರ್ಮಪಲಿಯ ಘಟ್ಟದ ಮಾರ್ಗದಲ್ಲಿ ಸ್ವದೇಶಕ್ಕಾಗಿ ಆತ್ಮಯಜ್ಞವನ್ನು ಮಾಡಿದ್ದಾರೆ; ಅದರಂತೆಯೇ ಪ್ರತಾಪನ ಸೈನಿಕರೂ ಹಳದೀಘಟ್ಟದ ಯುದ್ಧದಲ್ಲಿ ಅಮಾನುಷಿಕ ಆತ್ಮಯಜ್ಞವನ್ನು ಮಾಡಿದ್ದಾರೆ. ಗ್ರೀಕರು ಮಾರಥನದ ಪ್ರಖ್ಯಾತವಾದ ರಣಭೂಮಿಯಲ್ಲಿ ಇರಾಣಿಯರನ್ನು ಸೋಲಿಸಿಲಿ, ಸ್ವದೇಶದ ಉದ್ಧಾರ ಮಾಡಿದ್ದಾರೆ; ಅದರಂತೆ ಪ್ರತಾಪಸಿಂಹನೂ ದೇವೀರದ ಯುದ್ಧಭೂಮಿಯಲ್ಲಿ ಮೊಗಲರ ಬಲವನ್ನು ನಿರ್ಮೂಲ ಮಾಡಿ, ಶತ್ರುಗಳಿಂದ ತನ್ನ ದೇಶವನ್ನು ಕಾಪಾಡಿಕೊಂಡಿದ್ದಾನೆ. ಮಾರಥನದ‡ ಯುದ್ಧಫಲವು ಬೇರೆಯಾಗಿದ್ದಲ್ಲಿ, ಯುರೋಪದ ಇತಿಹಾಸವು ಬೇರೆ ರೀತಿಯಿಂದ ಪರಿವರ್ತಿತವಾಗುತ್ತಲಿತ್ತು; ಅದರಂತೆ ದೇವೀರದ ಕಾಳಗದಲ್ಲಿ ಪ್ರತಾಪನು ಜಯಶಾಲಿಯಾಗದಿದ್ದಲ್ಲಿ, ರಜಪೂತರ ವಂಶಗೌರವದ ಮತ್ತು ಜಾತಿಯ ಅಸ್ತಿತ್ವದ ಅವಸ್ಥೆಯು ಏನಾಗುತ್ತಿತ್ತೆಂಬದನ್ನು ಯಾರು ಬಲ್ಲರು? ಆದರೆ ಗ್ರೀಸ ದೇಶದ ಅನೇಕ ಇತಿಹಾಸಕಾರರು ಈ ಐತಿಹ್ಯವನ್ನು ಬರೆದಿಟ್ಟಿರುವಂತೆ, ನಮ್ಮ

‡ ಇರಾಣದ ಅರಸನಾದ ದರಾಯುಸನು ಕ್ರಿ ಶ. ಪೂ ದಲ್ಲಿ ೪೯೦ ನೇ ವರ್ಷ ಮಾರಥನದಲ್ಲಿ ಪರಾಜಿತನಾದನು ಇವನ ಮಗನಾದ ಜರಕ್ಸಿಸನು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಗ್ರೀಸವನ್ನಾಕ್ರಮಿಸಿದನು ಈ ಸಮಯದಲ್ಲಿ ಮಹಾವೀರನಾದ ಲಿಯೊನಿಡಸನು ತನ್ನ ತುಸು ಸೈನಿಕರೊಡನೆ ಥರ್ಮಪಲಿಯ ಘಟ್ಟದ ಮಾರ್ಗದಲ್ಲಿವನನ್ನು ಎದುರಿಸಿದನು, (ಕ್ರಿ. ಶ ಪೂ ೪೮೦) ಮತ್ತು ಕಡೆತನಕ ಯುದ್ಧಮಾಡಿ, ಸಸೈನ್ಯ ಮರಣಹೊಂದಿದನು

ದೇಶದ ಯಾವ ಸತ್ಯನಿಷ್ಠ ಐತಿಹಾಸಿಕನೂ ರಜಪೂತರ ವೀರತ್ವದ ಕಥೆಯನ್ನು ಜೀವಂತಭಾಷೆಯಿಂದ ಬರೆಯದಿರುವದು ಅತೀವ ದುಃಖದ ಸಂಗತಿಯಾಗಿದೆ.

ದೇವೀರದ ಯುದ್ಧದ ತರುವಾಯದಲ್ಲಾದ ಅನೇಕ ಕಾಳಗಗಳಲ್ಲಿ ಪ್ರತಾಪನು ಜಯವನ್ನು ಪಡೆದಿದ್ದಾನೆ; ಆದರೆ ಈ ವಿಷಯಕವಾಗಿರುವ ಸರಿಯಾದ ಇತಿಹಾಸವು ದೊರೆಯುವದಿಲ್ಲ. ಮುಸಲ್ಮಾನ ಇತಿಹಾಸಕಾರರು ಈ ವಿಷಯದಲ್ಲಿ ಒಂದುರೀತಿಯಿಂದ ಮೌನವನ್ನು ಧರಿಸಿದ್ದಾರೆ. ಆಗಿನ ಕಾಲದ ಯಾವ ಲೇಖಕನೂ ಮೊಗಲಸೈನಿಕರ ಪರಾಜಯದ ಸಂಗತಿಯನ್ನು ಬರೆದಿಡುವ ಪ್ರಯಾಸವನ್ನು ತೆಗೆದುಕೊಂಡಿಲ್ಲ. ಮೇವಾಡ ದೇಶದ ಪರ್ವತಮಾಲೆಯ ದುರ್ಗಮಪಥದಲ್ಲಿಯ ನಾನಾ ಸ್ಥಳಗಳಲ್ಲಿ ಅಡ್ಡಾಡಿ ನೋಡಿರಿ, ನೂರಾರು ಸ್ಥಳಗಳು ಪ್ರತಾಪಸಿಂಹನ ವೀರ್ಯಪ್ರತಿಭೆಯಿಂದ ಉಜ್ವಲವಾಗಿವೆ, ಎಷ್ಟೋ ಸ್ಥಳಗಳು ಕೀರ್ತಿಚಿನ್ಹಗಳಿಂದ ಚಿರಸ್ಮರಣೀಯವಾಗಿವೆ. ಕೆಲವೆಡೆಯಲ್ಲಿ ಇವನ ಸೈನಿಕರು ಜಯಶಾಲಿಗಳಾಗಿ ಹೆಸರುಪಡೆದಿದ್ದಾರೆ, ಬೇರೆ ಕೆಲವೆಡೆಯಲ್ಲಿ ಪರಾಜಿತರಾಗಿಯೂ ಕೂಡ, ಹೆಚ್ಚಾದ ಗೌರವವನ್ನು ಹೊಂದಿದ್ದಾರೆ. ಮಾನವೀಹೃದಯದ ಪ್ರಕೃತ ಮಹತ್ವವು ಪ್ರಕಟವಾದರೆ ಸಾಕು; ಜಯಾಪಜಯಗಳ ತಾರತಮ್ಯವೇ ಉಳಿಯುವಂತಿಲ್ಲ.‡

‡ ಟಾಡ್‌ಸಾಹೇಬರು ರಜಪೂತರ ವಿಷಯದಲ್ಲಿ ಸಹಾನುಭೂತಿಯುಳ್ಳವರಾಗಿ ಜ್ವಲಂತ ಭಾಷೆಯಿಂದ ಬರೆದಿದ್ದಾರೆ:—“There is not a pass in the alpine Aravalli that is not sanctified by some deed of Pertap, — brilliant victory, or oftener, more glorious defeat. Haldighat is the Thermopyloe of Mewar; the field of Deweir her Marathon” Rajasthan Vol. I, P. 283.

# ಏಕವಿಂಶ ಪರಿಚ್ಛೇದ.

## ಜೀವನ-ಸಂಧ್ಯಾ.

ಅದುಕಾರಣದಿಂ ಮಾನವ, | ಮುದದಲಿ ಕೈಕೊಂಡಬಳಿಕ ಕಾರ್ಯವನೊಂದಂ ||
ಒದಗಿದ ದುಃಖಕೆ ಹೆದರಲ್ । ಸದಯಾಘನಶಂಕರನೊಲಿಯುನು ನಿಮಗೆಂದುಂ || ೧ ||

ಉದಯಪುರವು ಹಸ್ತಗತವಾದ ತರುವಾಯ, ಪ್ರತಾಪನು ಇದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಮೇವಾಡದ ಬಹುಭಾಗವು ರಜಪೂತರ ವಶವಾಗಿದ್ದರೂ, ಶಿಶೋದಿಯಾ ರಜಪೂತರ ಪ್ರಾಚೀನ ರಾಜಧಾನಿಯಾದ ಚಿತೋಡವು ಪ್ರತಾಪನ ಕೈಸೇರಿರಲಿಲ್ಲ. ಪ್ರತಾಪನು ಭೀಮಸಿಂಹನ ಧನದಿಂದ ಸೈನ್ಯಸಂಚಯ ಮಾಡಿದನೆಂದು ಹಿಂದೆ ಹೇಳಿದ್ದೇವೆ. ಈ ಸೈನಿಕರಲ್ಲಿಯ ಬಹು ಜನರು ಈವರೆಗಾದ ಅನೇಕ ಯುದ್ಧಗಳಲ್ಲಿ ಮರಣಹೊಂದಿದ್ದರು. ಉಳಿದ ಸೈನಿಕರು ಆತ್ಮರಕ್ಷಣೆಗಾಗಿ ಅವಶ್ಯವಾಗಿ ಬೇಕಾಗಿದ್ದರು. ಮುಸಲ್ಮಾನರು ಚಿತೋಡದ ರಕ್ಷಣೆಗಾಗಿ ದೊಡ್ಡ ಸೈನ್ಯವನ್ನಿರಿಸಿದ್ದರು. ಪ್ರತಾಪನು ತನ್ನಲ್ಲಿರುವ ಅಲ್ಪಸಂಖ್ಯಾಕರಾದ ಸೈನಿಕರನ್ನು ಕರೆದುಕೊಂಡುಹೋಗಿ, ಚಿತೋಡದಲ್ಲಿರುವ ಮೊಗಲ ಸೈನಿಕರನ್ನು ಸೋಲಿಸುವದು ಆಗದ ಕಾರ್ಯವಾಗಿತ್ತು. ಕಾರಣ ಹೀಗೆ ಮಾಡುವದರಿಂದ ರಜಪೂತರಿಗೆ ಯಾವ ಲಾಭವೂ ಆಗುತ್ತಿರಲಿಲ್ಲ; ಮೇಲಾಗಿ ಹಾನಿಯನ್ನು ಹೊಂದುವ ಸಂಭವವಿದ್ದಿತು. ಪ್ರತಾಪನ ಬಳಿಯಲ್ಲಿ ಈಗಿರುವ ರಜಪೂತಸೈನಿಕರು ಅನೇಕ ಯುದ್ಧಮಾಡಿ ದಣಿದವರಾಗಿದ್ದರು; ಅದರಿಂದ ಇವರು ಈವರೆಗೆ ಗೆದ್ದುಕೊಂಡ ಸೀಮೆಗಳ ರಕ್ಷಣೆಮಾಡಿಕೊಳ್ಳಲಿಕ್ಕೆ ಸಹ ಅಸಮರ್ಥರಾಗಿದ್ದರು. ಇಂತಹ ಪ್ರಸಂಗದಲ್ಲಿ ಚಿತೋಡದ ಮೇಲೆ ದಂಡೆತ್ತಿ ಹೋಗುವದು ಹೇಗೆ? ಕಾರಣ ಪ್ರತಾಪನು ತಿರುಗಿ ಚಿತೋಡವನ್ನು ಹಸ್ತಗತಮಾಡಿಕೊಳ್ಳಲು ಸಮರ್ಥನಾಗಲಿಲ್ಲ.

ಚಿತೋಡವು ಪ್ರತಾಪನ ಪೂರ್ವಜರ ಲೀಲಾಕ್ಷೇತ್ರವಾಗಿದ್ದಿತು. ರಜಪೂತರು ಚಿತೋಡದಿಂದ ವಿತಾಡಿತರಾಗಿ ನಾನಾ ಕಷ್ಟಗಳನ್ನೂ, ಅಗೌರವವನ್ನೂ ಹೊಂದಿದ್ದರು. ಚಿತೋಡದ ಉದ್ಧಾರಕ್ಕಾಗಿಯೇ ಪ್ರತಾಪನು ಕಠೋರಪ್ರತಿಜ್ಞೆಯನ್ನು ಮಾಡಿದ್ದನು. ಆದರೆ ಆ ಚಿತೋಡವು ಈ ವರೆಗೆ ಕೈವಶವಾಗದಿದ್ದುದರಿಂದ

ಪ್ರತಾಪನ ವ್ರತದ ಪರಿಸಮಾಪ್ತಿಯಾಗಲಿಲ್ಲ. ಪ್ರತಾಪನು ಗಡ್ಡ ಬೋಳಿಸಲಿಲ್ಲ; ಬೆಳ್ಳಿಬಂಗಾರಗಳ ಪಾತ್ರೆಗಳಲ್ಲಿ ಊಟಮಾಡಲಿಲ್ಲ; ರಾಜ-ಪ್ರಾಸಾದದಲ್ಲಿ ವಾಸ ಮಾಡಲು ಇಚ್ಛಿಸಲಿಲ್ಲ. ಉದಯಪುರವು ರಾಜಧಾನಿಯಾಗಿದ್ದರೂ, ಇಲ್ಲಿ ಅರ ಮನೆಯು ನಿರ್ಮಾಣವಾಗಲಿಲ್ಲ.

ಉದಯಸಿಂಹನ ಕಾಲದಲ್ಲಿ ಉದಯಸಾಗರದ ಸಮೀಪದಲ್ಲಿಯೇ ರಾಜಧಾನಿಯಿದ್ದಿತು. ಪ್ರತಾಪಸಿಂಹನು ಈ ಸ್ಥಳದಿಂದ ಐದು ಮೈಲುಗಳ ಮೇಲೆ, ಪಶ್ಚಿಮಕ್ಕಿರುವ *ಪಿಶೊಲಾ ಸರೋವರದ ತಟದಲ್ಲಿ ರಾಜಧಾನಿಯನ್ನು ನಿರ್ಮಾಣ ಮಾಡಿದನು. ಉದಯಪುರದಲ್ಲಿ ನೋಡತಕ್ಕ ಅನೇಕ ಸಂಗತಿಗಳಿವೆ; ಆದರೆ ಇದು ಪಿಶೊಲಾ ಸರೋವರದಷ್ಟು ಸುಂದರವಾದುದಲ್ಲ ಈ ಸರೋವರದ ತೀರದಲ್ಲಿ ಪ್ರತಾಪನಿಗಾಗಿ ಅನೇಕ ಗುಡಿಸಲಗಳ ನಿರ್ಮಾಣವಾಯಿತು. ಸುಮಾರು ಮೂವತ್ತು ವರುಷಗಳಾದ ಮೇಲೆ ಈ ಯಾವತ್ತು ಗುಡಿಸಲಗಳನ್ನು ತೆಗೆಯಿಸಿ, ಆ ಸ್ಥಳದಲ್ಲಿ ಮಹಾರಾಣಾನಿಗಾಗಿ, ಸಂಗಮರವರಿಕಲ್ಲಿನ ಅರಮನೆಗಳ ನಿರ್ಮಾಣವಾಯಿತು.† ಈಗಲೂ ಈ ಸ್ಥಳದಲ್ಲಿ ಅನೇಕ ಸಂಗಮರವರಿಕಲ್ಲಿನ ಮನೆಗಳಿವೆ; ಇವುಗಳ ರಜತಸೌಂದರ್ಯವು ಸಮೀಪದಲ್ಲಿರುವ ಸರೋವರದಲ್ಲಿ ಪ್ರತಿಬಿಂಬಿತವಾಗುತ್ತಿರುವದು. ಆಗ ದರ್ಶಕಮಾತ್ರರ ಮನಸಿಗೆ, ಜಗತ್ತಿನಲ್ಲಿ ಈ ತರದ ದೃಶ್ಯವು ಬೇರೊಂದಿಲ್ಲವೆಂದು ಬೋಧೆಯಾಗುವದು. ಈ ನೋಟದ ವರ್ಣನೆಯನ್ನು

---

*ಕಲ್ಲುಗಳಿಂದ ಕಟ್ಟಿದ ಗಟ್ಟಿಯಾದ ಗೋಡೆಗಳಿಂದ ಪರ್ವತದ ನೀರನ್ನು ತಡೆದು, ರಾಜಸ್ಥಾನದಲ್ಲಿ ಅನೇಕ ಸರೋವರಗಳನ್ನುಂಟುಮಾಡಿದ್ದಾರೆ. ಉದಯಸಾಗರ ಮತ್ತು ಪಿಶೊಲಾ ಇವೆರಡು ಇದೇ ರೀತಿಯಿಂದಾದ ಸರೋವರಗಳು ಉದಯಸಾಗರವು ೨|| ಮೈಲು ಉದ್ದ, ೧|| ಮೈಲು ಅಗಲವಿದೆ, ಮತ್ತು ಪಿಶೊಲಾ ಸರೋವರವು ೨| ಮೈಲು ಉದ್ದ, ೧| ಮೈಲ ಅಗಲವಿದೆ.

† ಪ್ರತಾಪಸಿಂಹನ ಆಳಿಕೆಯ ಕಾಲವು ೧೫೭೨–೧೫೯೭, ಅಮರಸಿಂಹನ ಆಳಿಕೆಯ ಕಾಲವು ೧೫೯೭–೧೬೨೦, ಕರ್ಣಸಿಂಹನ ಆಳಿಕೆಯ ಸಮಯವು ೧೬೨೦–೧೬೨೮, ಜಗತ್‌ಸಿಂಹನ ರಾಜತ್ವದ ಅವಧಿಯು ೧೬೨೮–೧೬೫೨ ಜಗತ್‌ಸಿಂಹನು ಪ್ರತಾಪನ ಮೊಮ್ಮಗನು ಇವನ ಕಾಲದಲ್ಲಿ ಅರಮನೆಯು ನಿರ್ಮಿತವಾಯಿತು ಇದರ ಹೆಸರು ‘ಜಗನಿವಾಸ’ ಪಿಶೊಲಾ ಸರೋವರದ ಮಧ್ಯದಲ್ಲೊಂದು ದ್ವೀಪವಿದೆ ಈ ದ್ವೀಪದಲ್ಲಿ ಜಗಮಂದಿರವೆಂಬ ಬೇರೊಂದು ಅರಮನೆಯು ನಿರ್ಮಾಣವಾಯಿತು ಶಹಾಜಹಾನನು ತಾಜಮಹಾಲ ಮೊದಲಾದವುಗಳಿಂದ ತನ್ನ ರಾಜಧಾನಿಯ ಶೋಭೆಯನ್ನು ಬೆಳಸಿದ ಕಾಲದಲ್ಲಿಯೇ, ಉದಯಪುರದ ಅರಮನೆಗಳು ನಿರ್ಮಿತವಾದವು

ಮಾಡಲಿಕ್ಕೆ ಪ್ರಯತ್ನಿಸಿದಲ್ಲಿ ಭಾಷೆಯ ದೈನ್ಯತ್ವವು ಪ್ರಕಟವಾಗುವದು.× ಆದರೆ ನಮ್ಮ ಕಥಾನಕಕಾಲದಲ್ಲಿ, ಈ ಸ್ಥಳದಲ್ಲಿ ಈ ಅರಮನೆಗಳಿರಲಿಲ್ಲ. ಆ ಕಾಲದಲ್ಲಿ ಈ ಸರೋವರದ ತಟದಲ್ಲಿ, ಪರ್ವತದ ಕೆಳಭಾಗದಲ್ಲಿ ಕ್ಷುದ್ರ-ಕುಟಿರಗಳಿದ್ದವು; ಇಲ್ಲಿರುವ ಜೀರ್ಣ-ಮಂಟಪದ ಮೇಲ್ಭಾಗದಲ್ಲಿ ಮಹಾರಾಣಾನ ರಕ್ತಪತಾಕೆಯು ಹಾರಾಡುತ್ತಲಿದ್ದಿತು. ಪ್ರಕೃತಿಯ ಚಿತ್ರಪಟದಲ್ಲಿ ಇಂತಹ ದೃಶ್ಯವು ಹುಡುಕಿದರೂ ದೊರೆಯುವಂತಿಲ್ಲ ಈ ಯಾವತ್ತು ಪರ್ಣಕುಟೀರಗಳಲ್ಲಿ ದರಬಾರವು ನೆರೆಯುತ್ತಿದ್ದಿತು, ಸರದಾರರು ಒಟ್ಟುಗೂಡುತ್ತಿದ್ದರು; ರಾಜ್ಯಕಾರ್ಯವು ನಡೆಯುತ್ತಿದ್ದಿತು. ಶಿಶೋದಿಯಾಕುಲದ ರಾಣಾನ ರಾಜೋಚಿತ ಉತ್ಸವಾದಿಗಳು ಜರಗುತಲಿದ್ದವು. ಈ ಸಾಮಾನ್ಯ ಗುಡಿಸಲುಗಳ ಸಮೂಹವು ಅತ್ಯುಚ್ಚ ಹೃದಯಗಳ ಮತ್ತು ಶ್ರೇಷ್ಠ ಕಲ್ಪನೆಗಳ ಆವಾಸಸ್ಥಾನವಾಗಿದ್ದಿತು; ಆಗ್ರಾದ ಸ್ವರ್ಣಖಚಿತವಾದ ಅರಮನೆಯಲ್ಲಿಯೂ ಕೂಡ ಇವುಗಳನ್ನು ನೋಡುವಂತಿರಲಿಲ್ಲ ಮಹಾರಾಣಾನ ಜೀವನ ಸಂಧ್ಯೆಯು ಈ ಕುಟಿರಗಳಲ್ಲಿಯೇ ಕಳೆದುಹೋಯಿತು.

ಬೇರೆ ಬೇರೆ ಸ್ಥಳಗಳಲ್ಲಿ ಮೇಲಿಂದಮೇಲೆ ಪರಾಜಿತರಾಗಿ ಮೊಗಲರು ಕಡೆಯಲ್ಲಿ ಉದಯಪುರವನ್ನು ಬಿಟ್ಟುಹೋದರು, ಅವರು ಈ ಸ್ಥಳವನ್ನು ಪುನಃ ತಮ್ಮ ಕೈವಶಮಾಡಿಕೊಳ್ಳಲಿಕ್ಕೆ ಯತ್ನಮಾಡಲಿಲ್ಲ. ಸುಮಾರು ಮೂವತ್ತು ವರುಷಗಳವರೆಗೆ ಮೊಗಲರು ರಜಪೂತರೊಡನೆ ಯುದ್ಧಮಾಡಿದರು; ಈ ಅವಧಿಯಲ್ಲಿ ಜಯಪರಾಜಯಗಳೆಷ್ಟು ಸಾರೆ ದೊರೆತವೆಂಬದರ ಲೆಕ್ಕವಿಲ್ಲ. ರಜಪೂತರು ಸ್ವಜಾತಿಗಾಗಿಯೂ ಸ್ವದೇಶಕ್ಕಾಗಿಯೂ ಯುದ್ಧಮಾಡುತ್ತಿದ್ದರು, ಮೊಗಲರು ಶ್ರೇಷ್ಠತ್ವದ ಸಲುವಾಗಿಯೂ, ಧನಸಂಪಾದನೆಗಾಗಿಯೂ ಯುದ್ಧಮಾಡುತ್ತಿದ್ದರು. ರಜಪೂತರಲ್ಲಿರುವ ಅಪ್ರತಿಮ ಉತ್ಸಾಹವೂ, ಅಲೌಕಿಕ ಆತ್ಮತ್ಯಾಗವೂ ಮೊಗಲರಲ್ಲಿರಲಿಲ್ಲ; ಇರಲು ಸಾಧ್ಯವೂ ಇರಲಿಲ್ಲ. ಸತ್ತುಸತ್ತುಳಿದರೂ ರಜಪೂತರ ಉತ್ಸಾಹವು ಇಲ್ಲದಾಗಲಿಲ್ಲ; ಎಷ್ಟೋ ಕಾಲದ ವರೆಗೆ ಜಯದಿಂದ ಮೆರೆದರೂ ಮೊಗಲರ ಉದ್ಯಮವು ಇಲ್ಲದಾಯಿತು; ಅಂದರೆ ರಜಪೂತರ ಉತ್ಸಾಹವು ದಿನಾಲು ಬೆಳೆಯುತ್ತಲೂ,

---

× " It is easy to waste adjectives on such a sight, but in sober truth, there cannot be, there can never have been elsewhere in the world, such a spectacle as the Pichola lake presents &c " Under the sun P. 33.

ಮೊಗಲರ ಉತ್ಸಾಹವು ಕಡಿಮೆಯಾಗುತ್ತಲೂ ನಡೆಯಿತು ಪ್ರತಾಪನು ಉದಯ ಪುರಕ್ಕೆ ತಿರುಗಿ ಬಂದ ತರುವಾಯ, ಮುಸಲ್ಮಾನರು ರಾಜಸ್ಥಾನವನ್ನು ಬಿಟ್ಟು ಹೋಗುವದಕ್ಕೆ ಇದು ಮೊದಲನೆಯ ಕಾರಣವು.

ಪ್ರತಾಪಸಿಂಹನ ಕಠೋರವ್ರತ, ದೀರ್ಘೋದ್ಯೋಗ, ಆತ್ಮತ್ಯಾಗಗಳನ್ನು ನೋಡಿ, ಶತ್ರುಮಿತ್ರರೆಲ್ಲರೂ ವಿಮುಗ್ಧರಾಗಿಹೋಗಿದ್ದರು. ಪ್ರತಾಪನ ಸೈನಿಕರಾದ ರಜಪೂತರು, ಇವನನ್ನು ದೇವರಂತೆ ತಿಳಿದು, ಭಕ್ತಿಯಿಂದ ಆಚರಿಸುತ್ತಿದ್ದರು. ಮೊಗಲಪಕ್ಷದಲ್ಲಿ ಸೇರಿದ ರಜಪೂತರಲ್ಲನೇಕರು ಪ್ರತಾಪನ ವಿಷಯದಲ್ಲಿ ಮನಃ ಪೂರ್ವಕವಾದ ಭಕ್ತಿಯನ್ನಿರಿಸಿದ್ದರು. ಇವರು ಪ್ರತಾಪನ ವಿರುದ್ಧವಾದ ಕಾರ್ಯ ಗಳನ್ನು ಮಾಡುವದಕ್ಕೆ ಎಂದೂ ಮುಂದುವರಿಯುತ್ತಿದ್ದಿಲ್ಲ. ಪೃಥ್ವೀರಾಜನು ಪ್ರತಾಪನಲ್ಲಿ ಪ್ರೀತಿಯನ್ನಿರಿಸಿದ್ದನೆಂಬದು ಅವನ ಪತ್ರದಿಂದ ಗೊತ್ತಾಗುವಂತಿದೆ. ಪ್ರತಾಪನ ವಿರೋಧಿಗಳಾದ ರಜಪೂತರಲ್ಲಿ ಮಾನಸಿಂಹನು ಮುಖ್ಯನು. ಇವನು ಪ್ರತಾಪನಿಂದ ಅವಮಾನಿತನಾಗಿ, ಅದರ ಸೇಡನ್ನು ತೀರಿಸಿಕೊಳ್ಳುವದಕ್ಕೆ ಪ್ರತಾ ಪನ ವಿರೋಧಿಯಾಗಿದ್ದನು. ಆದರೆ ಇವನು ಹಳದೀಘಟ್ಟದ ಯುದ್ಧದ ತರು ವಾಯ ಪ್ರತಾಪನನ್ನು ಪ್ರೀತಿಸತೊಡಗಿದನು. ಇವನು ಪ್ರತಾಪನ ವಿಷಯದಲ್ಲಿ ಭಕ್ತಿವಂತನಾಗಿ, ರಜಪೂತರ ರಾಜ್ಯದಲ್ಲಿ ಸುಲಿಗೆಯನ್ನು ಮಾಡುವದಕ್ಕೆ ಸಮ್ಮತಿ ಸದಿರುವದರಿಂದ, ಅಕಬರನಿಂದ ತಿರಸ್ಕೃತನಾದ ಸಂಗತಿಯನ್ನು ಹಿಂದೆ ಹೇಳಿ ದ್ದೇವೆ. ಕೇವಲ ಮಾನಸಿಂಹನೊಬ್ಬನೇ ಅಲ್ಲ; ಸೇನಾಪತಿ ಅಸಫಖಾನನೂ ಇದೇ ಅಪರಾಧದಿಂದ ಬಾದಶಹನ ಅವಕೃಪೆಗೆ ಪಾತ್ರನಾದನು. ಒಂದು ಸಮಯ ದಲ್ಲಿ ಮೊಗಲಸಾಮ್ರಾಜ್ಯದ ಮುಖ್ಯ ಸೇನಾಪತಿಯು ಪ್ರತಾಪನನ್ನು ಅತ್ಯಂತ ವಾಗಿ ಸ್ತುತಿಸಿ, ಪತ್ರ ಕಳಿಸಿಕೊಟ್ಟದ್ದನ್ನು ಹಿಂದೆ ಉಲ್ಲೇಖಿಸಿದ್ದೇವೆ. ಬೇರೆಯವರ ಮಾತೊತ್ತಟ್ಟಿಗಿರಲಿ; ಸ್ವತಃ ಅಕಬರನು ಕೂಡ ಪ್ರತಾಪನನ್ನು ಪ್ರೀತಿಸಿದನು. ಮೊದಲು ಇವನಲ್ಲಿ ಎಷ್ಟೇ ಪ್ರತಿಹಿಂಸೆಯ ಇಚ್ಛೆಯಿರಲೊಲ್ಲದೇಕೆ, ಕಡೆಯಲ್ಲಿ ಪ್ರತಾಪನ ಅಪ್ರತಿಮ ಗುಣಗಳನ್ನು ನೋಡಿ, ಮುಗ್ಧನಾಗದಿರಲು ಸಮರ್ಥನಾಗ ಲಿಲ್ಲ. ಕಾರಣ ಅಕಬರನು ಪ್ರತಾಪನಿಗೆ ಹೆಚ್ಚು ಕಷ್ಟವನ್ನುಂಟುಮಾಡಲಿಕ್ಕೆ ಇಚ್ಛಿಸಲಿಲ್ಲ. ಮೊಗಲರು ಮೇವಾಡದ ಮೇಲೆ ದಂಡೆತ್ತಿ ಬರದಿರುವದಕ್ಕೆ ಇದು ಎರಡನೆಯ ಕಾರಣವು.

ಮೇವಾಡವು ಗುಡ್ಡಗಾಡು ಪ್ರದೇಶವಾಗಿದ್ದಿತು; ಇಂಥ ಪ್ರದೇಶದಲ್ಲಿ ಯುದ್ಧಮಾಡುವದರಿಂದ ಬಾದಶಹನಿಗೆ ವಿಶೇಷ ಲಾಭವಾಗುವಂತಿರಲಿಲ್ಲ. ಕಾರಣ ಜಯಾಪಜಯಗಳ ಭೇದವು ಅತ್ಯಲ್ಪವಾಗಿದ್ದಿತು. ಇನ್ನು ಅತ್ಯಲ್ಪ ಫಲದಾಯಕವಾದ ಜಯವಾದರೂ ಸುಲಭವಾಗಿ ದೊರೆಯುವಂತಿರಲಿಲ್ಲ; ಯಾಕಂದರೆ ವೀರರಾದ ರಜಪೂತರು ಸುಲಭವಾಗಿ ಸೋಲತಕ್ಕವರಾಗಿರಲಿಲ್ಲ. ಅದರಿಂದ ಮೇವಾಡದ ವಿಜಯಕ್ಕಾಗಿ ನಿರರ್ಥಕ ರೀತಿಯಿಂದ ಸೈನ್ಯಹಾನಿ ಮಾಡಿಕೊಳ್ಳುವದು ಬಾದಶಹನ ಮನಸಿಗೆ ಬರಲಿಲ್ಲ. ಮೊಗಲರು ಪುನಃ ಮೇವಾಡದ ಮೇಲೆ ದಂಡೆತ್ತಿ ಬರದಿರುವದಕ್ಕೆ ಇದು ಮೂರನೆಯ ಕಾರಣವಾಯಿತೆಂದು ಹೇಳಬಹುದು.

ಈ ಸಮಯದಲ್ಲಿ ಅಕಬರನು ಬಂಗಾಲ, ಕಾಶ್ಮೀರ, ದಕ್ಷಿಣಹಿಂದುಸ್ತಾನಗಳಲ್ಲಿ ಜಯಪಡೆಯುವ ಗೊಂದಲದಲ್ಲಿ ಬಿದ್ದನು. ಸನ್ ೧೫೭೬ ರಲ್ಲಿ ಮೊಗಲರು ಬಂಗಾಲದಲ್ಲಿ ಜಯಪಡೆದಿದ್ದರು. ಆದರೆ ಇದು ಕೇವಲ ಜಯವಾಗಿದ್ದಿತಲ್ಲದೆ ಇದರಿಂದಾವ ಲಾಭವೂ ಆಗಿರಲಿಲ್ಲ. ಯಾಕಂದರೆ ಮೊಗಲರು ಈ ದೇಶವನ್ನು ಗೆದ್ದುಕೊಂಡಬಳಿಕ ಇದನ್ನು ತಮ್ಮ ಅಧೀನದಲ್ಲಿಟ್ಟುಕೊಂಡು, ಮೊಗಲ ಅಧಿಕಾರಿಗಳನ್ನು ನಿಯಮಿಸಿ, ರಾಜ್ಯಕಾರಭಾರವು ಸುಸೂತ್ರವಾಗಿ ಸಾಗುವಂತೆ ಮಾಡಿರಲಿಲ್ಲ. ಸರೋವರದಲ್ಲಿ ಕಲ್ಲನ್ನೆಸೆದ ಕೂಡಲೇ ನೀರು ಒತ್ತಟ್ಟಿಗೆ ಸರಿದು, ಆ ಕಲ್ಲಿಗೆ ಸ್ಥಳವನ್ನು ಕೊಡುವದು; ಮತ್ತು ಪರಮುಹೂರ್ತದಲ್ಲಿ ಪುನಃ ಆ ಸ್ಥಳವನ್ನು ವ್ಯಾಪಿಸಿಕೊಳ್ಳುವದು. ಅದರಂತೆ ಮೊಗಲರು ವಂಗದೇಶವನ್ನು ಆಕ್ರಮಿಸಿದ ತರುವಾಯ, ಅಲ್ಲಿಯ ಪಠಾಣರು ಅಥವಾ ದೇಶೀಯ ಅರಸರು ಯುದ್ಧದಲ್ಲಿ ಪರಾಜಿತರಾಗಿ ಓಡಿಹೋಗುತ್ತಿದ್ದರು. ಪುನಃ ಸಮಯ ದೊರೆತ ಕೂಡಲೆ ಮೊದಲಿನಂತೆ ರಾಜ್ಯವನ್ನು ಕೈಯಲ್ಲಿ ತೆಗೆದುಕೊಳ್ಳುವದಕ್ಕೆ ಕುಂಠಿತರಾಗುತ್ತಿರಲಿಲ್ಲ. ಇದೇ ಬಂಗಾಲವನ್ನು ಗೆದ್ದುಕೊಂಡು, ಅಲ್ಲಿ ಸಂಪೂರ್ಣವಾದ ಅಧಿಕಾರವನ್ನು ನಡೆಸಬೇಕೆಂಬ ಇಚ್ಛೆಯು ಮೊಗಲರಲ್ಲಿ ಸಂಪೂರ್ಣವಾಗಿ ಇದ್ದಿತು; ಮತ್ತು ಬಾದಶಹನು ಇದಕ್ಕಾಗಿ ಮೇಲಿಂದ ಮೇಲೆ ಬಂಗಾಲಕ್ಕೆ ಸೈನ್ಯ ಕಳುಹಿಸಿದ್ದನು. ಕಾಶ್ಮೀರ ಮತ್ತು ಕಾಬೂಲಗಳನ್ನು ಜಯಿಸುವದಕ್ಕಾಗಿಯೂ ಮೊಗಲರ ಅನೇಕ ಸೈನ್ಯದ ಹಾನಿಯಾಗಿದ್ದಿತು. ಈ ಸಮಯದಲ್ಲಿ ದಕ್ಷಿಣಹಿಂದುಸ್ತಾನದಲ್ಲಿರುವ ಅಹಮ್ಮದನಗರವನ್ನು ಜಯಿಸುವದಕ್ಕೆ ಬಾದಶಹನು ಹೋಗಿ, ದೊಡ್ಡ ಯುದ್ಧಕಾರ್ಯದಲ್ಲಿ ವ್ಯಗ್ರನಾದನು. ದಕ್ಷಿಣದಲ್ಲಿ ನಡೆದ ಯುದ್ಧವು ಕ್ರಮವಾಗಿ ಘೋರ

ತರವಾಗುತ್ತ ನಡೆಯಿತು, ಅದರಿಂದ ಮೊಗಲ ಸರಕಾರದ ಅಧಿಕಾಂಶ ಸೈನಿಕರು ಈ ಕಡೆಗೆ ಹೋಗಬೇಕಾಯಿತು. ಇದು ಅಕಬರನು ಪುನಃ ಮೇವಾಡವನ್ನಾಕ್ರಮಿಸದಿರುವದಕ್ಕೆ ನಾಲ್ಕನೆಯ ಕಾರಣವು.

ಈ ಯಾವತ್ತು ಕಾರಣಗಳಿಂದ ಮೊಗಲರು ರಾಜಸ್ಥಾನವನ್ನು ಬಿಟ್ಟು ಹೋದರು. ದೂರದ ದಾರಿಯನ್ನು ನಡೆದುಬಂದ ಪಥಿಕನು, ವಿಶ್ರಾಂತಿಯನ್ನು ತೆಗೆದುಕೊಳ್ಳುವಂತೆ, ರಣಶ್ರಾಂತನಾದ ಮಹಾರಾಣಾನು ಉದಯಪುರದ ಕುಟೀರದಲ್ಲಿ ತನ್ನ ಆಯುಷ್ಯದ ಕಡೆಯ ಭಾಗವನ್ನು ಶಾಂತಿಯಿಂದ ಕಳೆಯುವ ಅವಸರವನ್ನು ಹೊಂದಿದನು.

ಹೀಗೆ ಸಮಯದೊರೆತರೂ, ಪ್ರತಾಪನಿಗೆ ಶಾಂತಿಯು ದೊರೆಯಲಿಲ್ಲ; ಯಾಕಂದರೆ ಮನುಷ್ಯನು ಶಾಂತಿಯಲ್ಲಿ ಕಾಲಕಳೆಯಬೇಕಾದಲ್ಲಿ, ಮನಸನ್ನು ಸುಪ್ರಸನ್ನವಾಗಿಟ್ಟುಕೊಳ್ಳುವದು ಅವಶ್ಯವಿರುವದು; ಆದರೆ ರಾಣಾನ ಮನಸ್ಸು ಪ್ರಸನ್ನವಾಗಿರಲಿಲ್ಲ; ಯಾಕಂದರೆ ಅವನು ಕೈಕೊಂಡ ಕಾರ್ಯವು ಸಂಪೂರ್ಣವಾಗಿ ಕೊನೆಗಂಡಿರಲಿಲ್ಲ. ರಾಣಾನು ಬಹುಕಾಲವನ್ನು ಯುದ್ಧದಲ್ಲಿ ಕಳೆದನು. ಆದರೆ ಚಿತೋಡವು ಅವನ ಹಸ್ತಗತವಾಗಲಿಲ್ಲ. ಆದರಿಂದ ರಾಣಾನು ಸದಾ ಇದೇ ವಿಚಾರದಲ್ಲಿರುತ್ತಿದ್ದನು. ಆದರೆ ಇವನ ವಿಚಾರಕ್ಕೆ ಫಲವಾಗುವಂತಿರಲಿಲ್ಲ, ಚಿತೋಡವು ಹಸ್ತಗತವಾಗುವ ಆಶೆಯು ಉಳಿದಿರಲಿಲ್ಲ; ಕಾರಣ ಪ್ರತಾಪನ ಕಣ್ಣಿಗೆ ಸದಾ ನಿರಾಶೆಯ ಅಂಧಕಾರವು ಕಾಣಿಸುತಲಿತ್ತು. ಇವನು ಪರ್ವತದ ಎತ್ತರವಾದ ಶಿಖರದಲ್ಲಿ ನಿಂತು, ದೂರದಲ್ಲಿರುವ ಚಿತೋಡವನ್ನು ನೋಡಿದಾಗೆಲ್ಲ, ಕ್ರೋಧದಿಂದಲೂ, ವಿಷಾದದಿಂದಲೂ, ನಿರಾಶೆಯಿಂದಲೂ, ಎಚ್ಚರದಪ್ಪುತ್ತಿದ್ದನು. ಪಿತೃಪುರುಷರ ಲೀಲಾಸ್ಥಳವಾದ ಚಿತೋಡವು ಮೊಗಲರ ಹಸ್ತಗತವಾಗುವದೆಂಬ ಚಿಂತೆಯನ್ನು ಪ್ರತಾಪನು ಸಹಿಸಲಾರದವನಾಗಿದ್ದನು. ಬಾಪ್ಪಾರಾವಳನ ವೀರಕೀರ್ತಿ, ಸಮರಸಿಂಹನ ಜೀವನಾಹುತಿ, ಲಕ್ಷ್ಮಣಸಿಂಹನ ಆತ್ಮಯಜ್ಞ, ಬಾದಲ-ಹಮೀರ-ಪುತ್ತ-ಜಯಮಲ್ಲರ ಅಸಾಮಾನ್ಯ ಶೂರತನ ಈ ಮೊದಲಾದ ಸಂಗತಿಗಳು ಒಂದೊಂದಾಗಿ ಬಂದು ಪ್ರತಾಪನ ಮನಶ್ಚಕ್ಷುವಿನ ಮುಂದೆ ನಿಲ್ಲುತ್ತಿದ್ದವು; ಆಗ ಅವನು ಕಲ್ಲಿನಂತೆ ನಿಶ್ಚಲಭಾವದಿಂದ ಕುಳಿತುಬಿಡುತ್ತಿದ್ದನು. ಉದ್ವೇಗ ಮತ್ತು ಅಸಮಾಧಾನಗಳು ನೂರಾರು ಚೇಳು ಕಡಿದ ವೇದನೆಯು

ನ್ನುಂಟುಮಾಡುತ್ತ, ಅವನ ವ್ರತಕ್ಲಿಷ್ಟವಾದ ದೇಹವನ್ನು ಜರ್ಜರವಾಗಿ ಮಾಡಿ ಬಿಡುತ್ತಿದ್ದವು.

ವಾಚಕಮಹಾಶಯ, ಈ ಸ್ಥಿತಿಯಲ್ಲಿ ಮನುಷ್ಯನು ಸಮಾಧಾನಪಡೆಯು ವದು ಹೇಗೆ? ಮಾನವನು ಶಾಂತಿಯನ್ನು ಹೊಂದಬೇಕಾದಲ್ಲಿ, ಚಿಂತೆಯಿಲ್ಲದವ ನಾಗಿರುವದು ಅವಶ್ಯವಾದದ್ದು. ಹೀಗಿರುವಲ್ಲಿ ಮನುಜನಿಗೆ ಶಾಂತಿಯು ಎಷ್ಟು ಮಾತ್ರವೂ ದೊರೆಯುವಂತಿಲ್ಲ. ಮಹಾರಾಣಾನ ಚಿಂತೆಗೆ ಮೇರೆಯಿರಲಿಲ್ಲ. ಅದ ರಿಂದವನು ಚಿಂತೆಯಿಂದ ಬಿಡುಗಡೆಹೊಂದುವ ಸಂಭವವಿರಲಿಲ್ಲ. ಈ ತರದ ಸ್ಥಿತಿಯಲ್ಲಿ ಮನುಷ್ಯನಿಗೆ ಮಾನಸಿಕ ವ್ಯಾಧಿಯುಂಟಾಗಿ, ಶರೀರದ ಮೇಲೆ ಇದರ ಪರಿಣಾಮವಾಗದೆ ಇರದು. ಪ್ರತಾಪನ ಅಗ್ನಿಯಂತೆ ಪ್ರಕಾಶಿಸುವ ದೇಹವು ಪಾಂಡುವರ್ಣವನ್ನು ಧರಿಸಿತು; ಅಕಾಲದಲ್ಲಿ ಮುಪ್ಪು ಅವನನ್ನಾವರಿಸಿತು. ರಾಣಾನ ಜೀವನದ ಚಿರಸಹಚರರಾದ ಸರದಾರರು, ಅನೇಕ ರೀತಿಯಿಂದ ಸಮಾ ಧಾನಪಡಿಸತೊಡಗಿದರು; ಆದರೆ ಇದರಿಂದೇನೂ ಉಪಯೋಗವಾಗಲಿಲ್ಲ; ಯಾಕಂದರೆ ಪ್ರತಾಪನ ಮನಸಿಗೆ ಸಮಾನವಾದ ಮನಸು ಜಗತ್ತಿನಲ್ಲಿ ದುರ್ಲ ಭವು; ಈ ಸ್ಥಿತಿಯಲ್ಲಿ ಅವನ ಮನಸಿನ ಮೇಲೆ ಇತರರ ಅಧಿಕಾರವೆಷ್ಟುಮಾತ್ರ ವೂ ನಡೆಯುವ ಸಂಭವವಿರಲಿಲ್ಲ. ಪ್ರತಾಪಸಿಂಹನು ತನ್ನ ಪರ್ಣಕುಟೀರದಲ್ಲಿಯ ಹುಲ್ಲುಹಾಸಿಗೆಯ ಮೇಲೆ ಮಲಗಿ, ಮರಣದ ಮಾರ್ಗವನ್ನು ನೋಡಹತ್ತಿದನು.

ಪ್ರತಾಪನಿಗೆ ಹದಿನೇಳು ಮಂದಿ ಗಂಡುಮಕ್ಕಳಿದ್ದರು. ಇವರಲ್ಲಿ ಅಮರ ಸಿಂಹನು ಎಲ್ಲಕ್ಕೂ ಹಿರಿಯನು. ಪ್ರತಾಪನು ಅಮರಸಿಂಹನನ್ನೇ ತನ್ನ ಉತ್ತರಾಧಿ ಕಾರಿಯೆಂದು ಆರಿಸಿದನು. ಯುವರಾಜನಾದ ಅಮರಸಿಂಹನು ಪೂರ್ವಜರ ಗೌರವ ರಕ್ಷಣೆಯನ್ನು ಮಾಡಲು ಸಮರ್ಥನಿರುವನೋ, ಇಲ್ಲವೋ ಎಂಬದನ್ನು ಪ್ರತಾಪನು ಸರ್ವಥಾ ಭಾವಿಸುತ್ತಿದ್ದನು. ಅಮರಸಿಂಹನು ತುಸು ಎತ್ತರನಾಗಿದ್ದನು. ಇವ ನೊಮ್ಮೆ ತಂದೆಯ ಮನೆಯಿಂದ ಅನ್ಯಮನಸ್ಕನಾಗಿ ಹೊರಗೆ ಹೋಗುತ್ತಿರುವ ಸಮಯದಲ್ಲಿ, ಒಂದು ಬಿದರು ಕೋಲು ತಾಕಿ, ಇವನ ಉಷ್ಣೀಯವು ಕೆಳಗೆ ಬಿದ್ದಿತು. ಸಂದೇಹಾಕುಲಿತನಾದ ಪ್ರತಾಪನು ಇದೊಂದು ಅಶುಭ ಚಿನ್ಹವೆಂದು ಭಾವಿಸಿ, ಅಸ್ಥಿರನಾದನು. ಇವನು ಭಾವಿಸಿದ್ದೇನಂದರೆ:— " ಅಮರಸಿಂಹನು ಕಠೋರವ್ರತಗಳನ್ನಾಚರಿಸಲು ಸಮರ್ಥನಾಗುವದಿಲ್ಲ—ಆದುದರಿಂದ ಪೂರ್ವಜರ

ಗೌರವವನ್ನು ರಕ್ಷಿಸಲು ಸಮರ್ಥನಾಗುವದಿಲ್ಲ." ಈ ಚಿಂತೆಯು ಪ್ರತಾಪನನ್ನಾವರಿಸಿ, ಬಹಳ ದುಃಖವನ್ನುಂಟುಮಾಡಿತು.

ಕ್ರಮವಾಗಿ ದಿವಸಗಳು ಕಳೆದುಹೋದವು, ಕಡೆಯಲ್ಲಿ ಪ್ರತಾಪನ ಅಂತಿಮಕಾಲವು ಸಮೀಪಿಸಿತು. ಪ್ರತಾಪನು ಗುಡಿಸಲಿನೊಳಗಿನ ಕ್ಷುದ್ರ ಹಾಸುಗೆಯಲ್ಲಿ ಮಲಗಿದ್ದಾನೆ; ನಾಲ್ಕೂ ಕಡೆಯಲ್ಲಿ ಮುಖ್ಯ ಮುಖ್ಯ ಸರದಾರರು ಕುಳಿತಿದ್ದಾರೆ; ಯಾರ ಮುಖದಲ್ಲಿಯೂ ಮಾತಿಲ್ಲ; ಎಲ್ಲರೂ ಮನೋವ್ಯಥೆಯಿಂದ ಕೂಡಿ, ಮಹಾವೀರನಾದ ರಾಣಾನ ಅಂತಿಮಕಾಲವನ್ನು ನಿರೀಕ್ಷಿಸಿಕೊಂಡಿದ್ದರು. ಈ ಸಮಯದಲ್ಲಿ ಪ್ರತಾಪನ ಮುಖದಿಂದ ದುಃಖಸೂಚಕ ಕಾತರಧ್ವನಿಯೊಂದು ಹೊರಟಿತು. ಚಂದಾಯತ್ ಸರದಾರನು ಮೃದುಸ್ವರದಿಂದ ಕೇಳಿದನು —"ಮಹಾರಾಣಾನು ಸಮಾಧಾನದಿಂದ ಮರಣಹೊಂದಲಿಕ್ಕೆ ವಿಘ್ನವನ್ನುಂಟುಮಾಡಿದ ಸಂಗತಿಯು ಯಾವದು? ರಾಣಾನ ಮನಸ್ಸನ್ನಾವರಿಸಿದ ಅಂತಹ ದುಃಖವಾದರೂ ಯಾವದು?" ಮಹಾರಾಣಾನು ಉತ್ತರಕೊಟ್ಟನು—"ಯವನರಿಂದ ಮೇವಾಡವನ್ನು ರಕ್ಷಿಸಿಕೊಳ್ಳುವೆವೆಂದು ನೀವೆಲ್ಲರೂ ವಚನಕೊಟ್ಟದ್ದಾದರೆ, ಮಹಾರಾಣಾನು ಸಮಾಧಾನದಿಂದ ಮರಣವನ್ನೈದುವನು."

ಮುಂದೆ ತುಸು ಹೊತ್ತಾದ ಮೇಲೆ, ಪ್ರತಾಪನು ಮೆಲ್ಲನೆ ಅಮರಸಿಂಹನ ವಿಷಯಕವಾದ ಮಾತನ್ನೆತ್ತಿದನು; ತನಗೊದಗಿದ ಸಂದೇಹವನ್ನು ಹೇಳಿದನು. ಮತ್ತೆ ಮುಂದೆ ಹೇಳತೊಡಗಿದನು—"ಸಾಲುಂಬ್ರದ ಅರಸನೆ, ನನ್ನಿಂದ ಚಿತೋಡದ ರಕ್ಷಣೆಯಾಗಲಿಲ್ಲ; ನನ್ನ ಮಗನಿಂದಲೂ ಈ ಕಾರ್ಯವಾಗುವಂತಿಲ್ಲ. ಈ ರಾಜ್ಯದ ಸಂರಕ್ಷಣೆಯನ್ನು ಮಾಡಿಕೊಳ್ಳಬೇಕಾದಲ್ಲಿ, ಒದಗುತ್ತಿರುವ ದುಃಖ-ಕಠೋರತೆಗಳನ್ನು ಅಮರಸಿಂಹನು ಸಹಿಸಿಕೊಳ್ಳಲಾರನು. ಈ ಸ್ಥಳದಲ್ಲಿ ಈ ಪರ್ಣಕುಟೀರಗಳ ಬದಲು, ಉತ್ತಮ ಅರಮನೆಗಳುಂಟಾಗುವವೆಂಬದನ್ನು ನಾನು ದಿವ್ಯ-ಚಕ್ಷುವಿನಿಂದ ನೋಡುತ್ತಿರುವೆನು. ಹೀಗಾದಲ್ಲಿ ರಜಪೂತರಲ್ಲಿ ಸುಖಲಾಲಸೆಯು ಬೆಳೆಯುವದು. ಇದರಿಂದುಂಟಾಗತಕ್ಕ ವಿಲಾಸವು ಈ ಸ್ಥಳದಲ್ಲಿ ತಲೆಯೆತ್ತುವದು; ಮತ್ತು ಈ ವಿಲಾಸದ ಆನುಷಂಗಿಕ ಸಂಗತಿಗಳು ರಜಪೂತರನ್ನಾವರಿಸುವವು. ಜನ್ಮಭೂಮಿಯ ರಕ್ಷಣೆಗಾಗಿ ನಾವೆಲ್ಲರೂ ನಮ್ಮ ರಕ್ತವನ್ನು ನೀರಿನಂತೆ ವೆಚ್ಚಮಾಡಿದ್ದೇವೆ. ಆದರೆ ವಿಲಾಸದಲ್ಲಿ ಮಗ್ನರಾಗುತ್ತಿರುವ ಮುಂದಿನ ರಾಣಾರು

ಇದೆಲ್ಲವನ್ನು ಮರೆತುಬಿಡುವರು. ಅಕಟ! ಅಕಾಲದಲ್ಲಿ ನೀವೂ ಕೂಡ, ಈ ಸರಿಯಲ್ಲದ ಪಂಥವನ್ನನುಸರಿಸುವಿರಿ. "§

ರೋಷದಿಂದಲೂ, ವಿಷಾದದಿಂದಲೂ ಮುಮೂರ್ಷುವೀರನಾದ ಪ್ರತಾಪನು ಹಾಸುಗೆಯಿಂದ ಏಳುವದಕ್ಕೆ ಪ್ರಯತ್ನ ಮಾಡತೊಡಗಿದನು; ಸರದಾರರು ಸಮಾಧಾನಪಡಿಸಿದರು. ಕೂಡಿದ ಸರದಾರರೆಲ್ಲರೂ ಪ್ರತಿಜ್ಞಾಪೂರ್ವಕವಾಗಿ ಹೇಳಿದ್ದೇನಂದರೆ—" ಮೇವಾಡವು ಸಂಪೂರ್ಣವಾಗಿ ಸ್ವಾತಂತ್ರ್ಯವನ್ನನುಭವಿಸುವವರೆಗೆ ಈ ಸ್ಥಳದಲ್ಲಿ ಅರಮನೆಯನ್ನು ಕಟ್ಟಿಸುವದಿಲ್ಲ. ನಾವು ನಿಮ್ಮ ಮಗನ ಸಂರಕ್ಷಕರಾಗಿರುವೆವು. " ಸರದಾರರ ಈ ಪ್ರತಿಜ್ಞೆಯನ್ನು ಕೇಳಿ, ಪ್ರತಾಪನು

---

§ ಮಹಾರಾಣಾನ ಈ ಅಂತಿಮ ವಾಕ್ಯಗಳು ಮುಂದೆ ಅಕ್ಷರಶಃ ನಿಜವಾಗಿ ನಡೆದುಹೋಗಿವೆ ಆಲಸ್ಯ, ವಿಲಾಸ, ಪರರನ್ನವಲಂಬಿಸುವದು, ದುರ್ಬಲತೆ ಮೊದಲಾದವುಗಳನ್ನು ಅತ್ಯಂತವಾಗಿ ತಿರಸ್ಕರಿಸುತ್ತಿರುವ ರಾಣಾನ ವಂಶೀಯರು ಮುಂದೆ ಇವುಗಳ ಅಂಕಿತರಾದರು ರಾಜಸಿಂಹನೊಬ್ಬನು ಮಾತ್ರ ಕುಲಪ್ರದೀಪನಾಗಿ ರಜಪೂತರ ಗೌರವವನ್ನು ಕಾಯ್ದುಕೊಂಡನು (೧೬೫೪—೧೬೮೧) ರಾಜಸಿಂಹನ ಮರಣರದ ತರುವಾಯ ನೂರಾರು ವರುಷಗಳ ಮೇಲೆ ಉದಯಪುರದ ರಾಣಾರ ಅವಸ್ಥೆಯು ಅತೀವ ಶೋಚನೀಯವಾಗುತ್ತ ನಡೆದಿತ್ತು. ಸನ್ ೧೮೧೮ ರಲ್ಲಿ ರಾಣಾನೊಡನೆ ಬ್ರಿಟಿಶರ ಒಪ್ಪಂದವಾಯಿತು. ಈ ಸಮಯದಲ್ಲಿ ರಾಣಾನು ಅನರ್ಥಕರವಾದ ಪ್ರಮೋದ-ವಿಲಾಸಗಳಲ್ಲಿ ಮಗ್ನನಾಗಿದ್ದನು. ಟಾಡ್‌ಸಾಹೇಬರು ಇದನ್ನು ಪ್ರತ್ಯಕ್ಷ ನೋಡಿ ಬರೆದಿದ್ದಾರೆ-" Vaın shows, frivolous amusement and an ill-regulated liberality alone occupied him " ಬೇರೆ ಕಡೆಯಲ್ಲಿ ಬರೆದದ್ದೇನಂದರೆ—" All were in ruins, and the Rama, the descendant of those patriot Rajpoots who opposed Babar, Akbar and Aurangzeb in the days of Moghul splendour, had not fifty horse to attend him and was indebted for all the comforts to the liberality of Kotah " Rajasthan Vol I PP 381,383 ಈಗಿರುವ ಮಹಾರಾಣಾರಾದ ಫತ್ತೇಸಿಂಹರು ಈ ರೀತಿಯಿಂದಿಲ್ಲವೆಂಬದು ಆನಂದದ ಸಂಗತಿಯಾಗಿದೆ ಇವರು ಉತ್ತಮ ಅರಸರಾಗಿರುವರೆಂಬ ಖ್ಯಾತಿಯದೆ ಒಬ್ಬ ಲೇಖಕನು ಬರೆದದ್ದೇನಂದರೆ—" He knows every inch of his territory and is familiar with every detail of his administration. No issue is too petty for him to consider. No problem is too tedious for him to solve " St. Nehal Singh's " The king's Indian Allies " P 39.

ಸಂತುಷ್ಟನಾದನು; ಮತ್ತು ಭಗವಂತನ ನಾಮಸ್ಮರಣೆ ಮಾಡುತ್ತ, ಆನಂದದಿಂದ ಪ್ರಾಣಬಿಟ್ಟನು.

ವೀರತ್ವ ಮತ್ತು ಸ್ವದೇಶ-ಪ್ರೇಮದ ಪವಿತ್ರ ಮೂರ್ತಿಯಾದ ಪ್ರತಾಪಸಿಂಹನು ದೇಹತ್ಯಾಗಮಾಡಿದನು. ರಜಪೂತರ ಆಶೆ ಮತ್ತು ವಿಶ್ವಾಸ, ಹಿಂದೂರಾಜರ ಸಹಾಯ ಮತ್ತು ಆಧಾರ, ಹಿಂದುಸ್ತಾನದ ಗೌರವ ಮತ್ತು ಅಲಂಕಾರನಾದ ಮಹಾವೀರ ಪ್ರತಾಪನು ತನ್ನ ವಯಸ್ಸಿನ **೫೫**ನೇ ವರ್ಷ ಭೂಮಿಯ ಕಡೆಯ ಅಪ್ಪಣೆಯನ್ನು ಹೊಂದಿದನು. ಸಮರ ಮತ್ತು ಸಂಗ್ರಾಮಸಿಂಹರ ವಂಶಜರಲ್ಲಿ ಯೋಗ್ಯನೂ, ತನ್ನ ಯಾವತ್ತು ಆಯುಷ್ಯವನ್ನು ಯುದ್ಧಗಳಲ್ಲಿ ಕಠೋರತೆಯಿಂದ ಕಳೆದವನೂ ಆದ ಪ್ರತಾಪನು, ಕಡೆಯಲ್ಲಿ ಚಿರನಿದ್ರೆಯನ್ನೈದಿದನು. ಭಾರತದ ಭಾಗ್ಯಾಕಾಶದಿಂದ ಒಂದು ಉಜ್ವಲವಾದ ನಕ್ಷತ್ರವು ಪತನವಾಯಿತು. ಭಾರತ ಮಾತೆಯ ರತ್ನಹಾರದಿಂದ ಒಂದು ತೇಜೋಮಯವಾದ ರತ್ನವು ಹರಿದುಬಿದ್ದಿತು. ಯಾವತ್ತು ದೇಶವು ಶೋಕಾವೃತವಾಯಿತು, ಆಬಾಲ-ವೃದ್ಧ-ವನಿತೆಯರೆಲ್ಲರೂ ಹಾಹಾಕಾರ ಮಾಡತೊಡಗಿದರು. ರಜಪೂತ ಮತ್ತು ಭಿಲ್ಲ, ಹಿಂದೂ ಮತ್ತು ಮುಸಲ್ಮಾನ, ಶತ್ರು ಮತ್ತು ಮಿತ್ರ, ಶ್ರೀಮಂತ ಮತ್ತು ಬಡವ ಅಮೀರ ಮತ್ತು ಫಕೀರ ಇವರೆಲ್ಲರೂ ಸಮಭಾವದಿಂದ ಪ್ರತಾಪನ ಮರಣದಿಂದ ದುಃಖಿತರಾದರು. ಪ್ರತಾಪನ ಮರಣದ ದಿವಸವು ಭಾರತದ ಇತಿಹಾಸದಲ್ಲೊಂದು ಮಹಾ ಶೋಕದ ದಿವಸವಾಗಿದೆ.

---

# ದ್ವಾವಿಂಶ ಪರಿಚ್ಛೇದ.

## ಉಪಸಂಹಾರ.

ಭಾರತಮಾತೆ, ನೀಂ ಪಡೆದೆ ಭೀಷ್ಮ, ಯುಧಿಷ್ಠರರಾಮಚಂದ್ರರಂ ।
ಸಾರಗುಣಾಢ್ಯವಿಶ್ರುತಮಹಾತ್ಮರ ಮುನ್ನ ಪುರಾಣಕಾಲದೊಳ್ ॥
ಸಾರ ಹಮೀರ-ಕುಂಭ-ಸಮರ-ಪ್ರತಪರಂ ಸಲೆ ಮಧ್ಯಕಾಲದೊಳ್ ।
ಕೋರುತಲಾತೆರಂ ಬಹು ಸುಪುತ್ರರ ನಿರ್ಮಿಸು ದೇವರೊಲ್ಮೆಯಿಂ ॥ ೧ ॥

ಭಾರತಭೂಮಾತೆಯು ವೀರಪ್ರಸವಿನಿಯು. ಆದರಿಂದ ಅತಿ ಪ್ರಾಚೀನಕಾಲದಿಂದ ಭಾರತೀಯರು ವೀರರೆಂದು ಖ್ಯಾತಿಯನ್ನು ಪಡೆದಿದ್ದಾರೆ. ಸಿಂಧುದೇಶವೂ,

12

ಪಂಚನದ ಪ್ರದೇಶವೂ ವೇದ-ನಾದದಿಂದ ಕೂಡಿದ ಸಮಯದಲ್ಲಿಯೂ, ಮುನಿ ಪ್ರತರಾದ ಆರ್ಯರಲ್ಲಿ ವೀರರ ಅಭಾವವಿರಲಿಲ್ಲ ವೇದಕಾಲದ ತರುವಾಯದ ಲ್ಲಿಯ ಸಂಸ್ಕೃತ ಸಾಹಿತ್ಯದ ಬಹುಭಾಗವು ಹಿಂದೂ ಜನರ ವೀರತ್ವಕ್ಕೆ ಸಂಬಂಧಿ ಸಿದ್ದು, ಮುಂದಿನ ಕಾಲದಲ್ಲಿ ಅಂದರೆ ಹಿಂದೂಜನರು ಧರ್ಮ, ದರ್ಶನ ಮೊದಲಾ ದವುಗಳ ವಿಷಯದ ವಿಚಾರಗಳಲ್ಲಿ ಪೂರ್ಣನಿರತರಾದ ಸಮಯದಲ್ಲಿಯೂ ನಮ್ಮ ಸಮಾಜದಲ್ಲಿ ವೀರರಿಗೆ ಕೊರತೆಯಿರಲಿಲ್ಲ, ಬೌದ್ಧಧರ್ಮದ ಬೆಳವಣಿಗೆಯ ವೇಳೆ ಯಲ್ಲಿಯೂ ವೀರಧರ್ಮವು ಚನ್ನಾಗಿ ಪಾಲಿಸಲ್ಪಡುತಲಿತ್ತು; ಆದರೆ ಈ ಪ್ರಾಚೀನ ಕಾಲದ ವೀರತ್ವ-ಖ್ಯಾತಿಯ ಗೌರವವನ್ನು ಬಿಟ್ಟರೂ ನಡೆಯಬಹುದು.

ಆಧುನಿಕ ಐತಿಹಾಸಿಕಯುಗದಲ್ಲಿ—ಮುಸಲ್ಮಾನರ ಆಳಿಕೆಯ ಸಮಯ ದಲ್ಲಿ ಹಿಂದೂ ಧರ್ಮದಲ್ಲಿಯ ಮೂರು ಜಾತಿಯ ಜನರು ವೀರತ್ವಕ್ಕಾಗಿ ಪ್ರಖ್ಯಾತ ರಾಗಿದ್ದಾರೆ; ಇವರು ಯಾರೆಂದರೆ—ರಜಪೂತ, ಮಹಾರಾಷ್ಟ್ರ, ಶೀಕ ಇವರೇ ಕ್ರಮವಾಗಿ ಹಿಂದುಸ್ತಾನದಲ್ಲೆಲ್ಲ ವ್ಯಾಪಿಸಿದ ಮುಸಲ್ಮಾನರ ಬಲವನ್ನು ನಾಶಮಾ ಡಿದರು. ಇದರಿಂದಲೇ ಮುಸಲ್ಮಾನರಿಂದ ಗೆಲ್ಲಲ್ಪಟ್ಟ ಭಾರತಭೂಮಿಯು ಕಡೆಯ ಲ್ಲೊಂದು ವಿದೇಶೀಯ ಮಹಾಜನಾಂಗದವರಿಗೆ ಅನಾಯಾಸವಾಗಿ ದೊರೆಯು ವಂತಾಯಿತು. ಈ ಮೂರು ಜಾತಿಗಳಲ್ಲಿ ಬಹುಸಂಖ್ಯಾಕರಾದ ವೀರರುದಯಿಸಿ ದ್ದಾರೆ, ಇವರಲ್ಲಿ ಯಾವತ್ತು ಸಂಗತಿಗಳಿಂದ ಮೂವರು ಶ್ರೇಷ್ಠತಮರಾಗಿದ್ದಾರೆ, ಇವರು ಯಾರೆಂದರೆ—ಮಹಾರಾಣಾ ಪ್ರತಾಪಸಿಂಹ, ಛತ್ರಪತಿ ಶಿವಾಜಿ, ಶೀಕ ಗುರು ಗೋವಿಂದಸಿಂಹ. ಈ ಮೂವರು ಮಹಾಪುರುಷರ ಮಹಾಮಂತ್ರದಿಂದ ದೀಕ್ಷಿತರಾಗಿ, ಮೂರು ಜಾತಿಯ ಜನರು ವೀರತ್ವದ ವಿಷಯವಾಗಿಯೂ, ಮಹ ತ್ವದ ವಿಷಯವಾಗಿಯೂ ವಿಶ್ವವಿಶ್ರುತರಾದರು.

ಈ ಮೂವರು ಮಹಾತ್ಮರಲ್ಲಿ ಪ್ರತಾಪಸಿಂಹನು ಶ್ರೇಷ್ಠತಮನೆಂದು ಹೇಳ ಲಿಕ್ಕೆ ಬರುವಂತಿದೆ. ಶಾಂತವಾದ ಜಲಪ್ರವಾಹದಲ್ಲಿ ನಾವಿಕನ ನೌವಿದ್ಯೆಯನ್ನು ಗೊತ್ತುಹಿಡಿಯಲಾಗುವದಿಲ್ಲ; ಅದರಂತೆ ಪ್ರಬಲವಾದ ಶತ್ರುಗಳೊಡನೆ ಯುದ್ಧ ಮಾಡದಿರುವಲ್ಲಿ, ಜನರ ವೀರ್ಯಪ್ರತಿಭೆಯನ್ನು ಕಾಣಲಿಕ್ಕೆ ಬರುವಂತಿಲ್ಲ. ಕೆಲ ವೆಡೆಯಲ್ಲಿ ಎದುರಾಳಿಯ ಬಲಪರೀಕ್ಷೆಯಿಂದ ಮತ್ತೋರ್ವನ ಶಕ್ತಿಯನ್ನು ಗೊತ್ತುಪಡಿಸುವದುಂಟು. ಮುಸಲ್ಮಾನ ಸಾಮ್ರಾಟರಲ್ಲಿ ಸರ್ವಶ್ರೇಷ್ಠನೂ, ತನ್ನ ರಾಜನೀತಿಯ ಮೋಹಿನೀ ಶಕ್ತಿಯಿಂದ ಹಿಂದೂ-ಮುಸಲ್ಮಾನರೆಲ್ಲರನ್ನು ಒಲಿಸಿ

ಕೊಂಡವನೂ ಆದ ವಿಶ್ವವಿಖ್ಯಾತ ಅಕಬರ ಬಾದಶಹನು ಪ್ರತಾಪನ ಎದುರಾಳಿಯು, ಶಿವಾಜಿಯ ಪರಮ ಶತ್ರುವಾದ ಔರಂಗಜೇಬನು ಕುಟಿಲನೀತಿಯಿಂದಲೂ ಪರಧರ್ಮಪೀಡೆಯಿಂದಲೂ, ಬಹು ಜನರಿಗೆ ಬೇಡಾಗಿದ್ದನು; ಇದರಿಂದ ಇವನ ಎಷ್ಟೋ ಬಲವು ಕಡಿಮೆಯಾಗಿದ್ದಿತು. ಗೋವಿಂದಸಿಂಹನು ಪ್ರಬಲನಾದ ವೇಳೆಯಲ್ಲಿ ಮೊಗಲರ ವೀರ್ಯ-ವಹ್ನಿಯು ನಿರ್ವಾಣೋನ್ಮುಖವಾಗಿದ್ದಿತು. ಪ್ರತಾಪನು ಮೊಗಲ-ಗೌರವದ ಮಧ್ಯಾಹ್ನಕಾಲದಲ್ಲಿ ತನ್ನ ಸ್ವಲ್ಪ ಜನ ಸಹಚರರೊಡನೆ ಬಹು ವರ್ಷಗಳ ವರಗೆ ಪ್ರಬಲಶತ್ರುವಿನೊಡನೆ ಯುದ್ಧಮಾಡಿ, ವೀರತ್ವದ ಪರಸೀಮೆಯನ್ನು ತೋರ್ಪಡಿಸಿದ್ದಾನೆ. ಪ್ರತಾಪನು ಈ ಮೂವರಲ್ಲಿ ಸರ್ವಶ್ರೇಷ್ಠನು. ಯಾಕಂದರೆ ಇವನ ಶತ್ರುವಿನ ಬಲವೂ, ಸಿದ್ಧತೆಯೂ, ಅನುಕೂಲತೆಯೂ ಹೆಚ್ಚಾಗಿದ್ದಿತು, ಕಾರಣ ಪ್ರತಾಪನು ವೀರಕುಲಚೂಡಾಮಣಿಯು.

ಪ್ರತಾಪನ ಈ ವೀರತ್ವದಲ್ಲಿ ನೀಚತೆಯು ತೀರಮಾತ್ರವೂ ಇಲ್ಲ, ಪ್ರತಾಪನ ಇತಿಹಾಸದಲ್ಲಿ ದುರ್ಬಲ ಶತ್ರುಗಳೊಡನೆ ಕೆಟ್ಟ ವ್ಯವಹಾರ ನಡೆಸಿದ ಸಂಗತಿಯಿಲ್ಲ, ಶತ್ರುನಾಶಕ್ಕಾಗಿ ಕಪಟತ್ವದ ಅಥವಾ ವಿಶ್ವಾಸಘಾತಕದ ಉದಾಹರಣೆಗಳಿಲ್ಲ; ಸತ್ಯಭಂಗಮಾಡಿದ ಒಂದೂ ಪ್ರಸಂಗವಿಲ್ಲ. ಪ್ರತಾಪನ ಕಠೋರವಾದ ಆಳಿಕೆಯಿಂದ ರಾಜಸ್ಥಾನವು ಸ್ಮಶಾನವಾಗಿ ಪರಿಣಮಿಸಿತ್ತು. ಆದರೆ ಈ ಸ್ಮಶಾನದಲ್ಲಿ ಅಪದೃಶ್ಯವಿಲ್ಲ; ಅಪವಿತ್ರತೆಯಿಲ್ಲ; ದುರ್ಗಂಧವಿಲ್ಲ ಪ್ರತಾಪನು ತನ್ನ ಜೀವನದಲ್ಲಿ ನೀತಿಯ ಮತ್ತು ಧರ್ಮದ ಅಪಮಾನವನ್ನೆಂದೂ ಮಾಡಿಲ್ಲ. ಆದುದರಿಂದ ಪ್ರತಾಪನ ಚರಿತೆಯು ನಿರ್ಮಲವೂ, ಶುದ್ಧವೂ ಆಗಿದೆ. ಈ ಪವಿತ್ರ ಚರಿತ್ರೆಯ ಪ್ರದೀಪ್ತ ಪ್ರಕಾಶವು ರಜಪೂತಸ್ಥಾನದ ಎಲ್ಲೆಡೆಯಲ್ಲಿ ಬೆಳಗುತಲಿದ್ದಿತು.

ಪ್ರತಾಪನಲ್ಲಿರುವ ವೀರತ್ವಕ್ಕಿಂತಲೂ, ಉಳಿದ ಉತ್ತಮ ಗುಣಗಳು ಹೆಚ್ಚು ಮಹತ್ವವಾದವುಗಳಾಗಿವೆ. ಇವನ ಜೀವನವು ಕೇವಲ ಯುದ್ಧಮಾಡುವದರಲ್ಲಿಯೇ ಕಳೆದುಹೋಗಿದ್ದರೂ, ಇವನು ಸಾಧಾರಣ ಯೋಧ್ಧೃಗಳಂತೆ ಪರರಾಜ್ಯಗಳಿಸುವ ಆಶೆಯುಳ್ಳವನಾಗಿರಲಿಲ್ಲ, ಎರಡನೆಯವರ ಧನವನ್ನಪಹರಿಸುವ ಇಚ್ಛೆಯಿರಲಿಲ್ಲ; ಅನ್ಯಾಯದ ಅಥವಾ ಅನರ್ಥಕರವಾದ ಕೊಲೆಯನ್ನು ಮಾಡಿ, ಇವನು ತನ್ನ ಆಯುಧವನ್ನು ಕಲಂಕಿತವನ್ನಾಗಿ ಮಾಡಿಕೊಂಡಿಲ್ಲ. ಸ್ವರಾಜ್ಯದ ಉದ್ಧಾರವೇ ಇವನ ಉದ್ದೇಶವಾಗಿದ್ದಿತು, ಆದರಿಂದ ಎರಡನೆಯವರ ರಾಜ್ಯವನ್ನು ಕಸಿದುಕೊಳ್ಳುವ ಇಚ್ಛೆಯು ಇವನಲ್ಲಿ ಉಂಟಾಗಲಿಲ್ಲ. ಕರ್ಮವೀರ ಪ್ರತಾಪನು

ಮಾನವಚರಿತೆಯ ಉಚ್ಚತಮ ಶಿಖರದಲ್ಲಿ ಕುಳಿತಿದ್ದಾನೆ. ಇವನ ದೇವಮೂರ್ತಿಯಂತೆ, ಇವನ ಚರಿತ್ರೆಯೂ ದೇವತ್ವಪೂರ್ಣವಾಗಿದೆ; ಆದುದರಿಂದ ಈ ಮೂರ್ತಿಯೂ, ಚರಿತೆಯೂ ಹಿಂದುಸ್ಥಾನದ ಪ್ರತಿಮನೆಗಳಲ್ಲಿ ಪೂಜೆಯನ್ನು ಹೊಂದಲು ಯೋಗ್ಯವಾಗಿವೆ.

ಯಾವದೊಂದು ಕಾರ್ಯವನ್ನು ಕೈಕೊಳ್ಳಬೇಕಾದಲ್ಲಿ ಅದರ ವಿಷಯವಾಗಿ ಸಂಪೂರ್ಣ ವಿಚಾರಮಾಡಿ, ನಿರ್ಧರಿಸಿಕೊಳ್ಳುವದು ಮಹಾತ್ಮರ ಲಕ್ಷಣವಾಗಿದೆ. ಇವರು ಒಮ್ಮೆ ಸ್ಥಿರಮಾಡಿಕೊಂಡರೆಂದರೆ, ಆ ಕೆಲಸವನ್ನು ಕಡೆಹಾಯಿಸದೆ ಎಂದೂ ಬಿಡುವದಿಲ್ಲ; ಯಾಕಂದರೆ ಜಗತ್ತಿನಲ್ಲಿರುವ ಯಾವತರದ ವಿಘ್ನಗಳೂ ಇವರನ್ನು ಕರ್ತವ್ಯಪಂಥದಿಂದ ದೂರ ಸರಿಸಲು ಸಮರ್ಥವಾಗಲಾರವು. ಮಹಾವೀರ ನೆಪೋಲಿಯನನು ಇತಾಲಿಯನ್ನು ಜಯಿಸಿಕೊಳ್ಳಬೇಕೆಂದು ನಿರ್ಧರಿಸಿಕೊಂಡಿದ್ದನು, ಆದರೆ ಇವನ ವಿಜಯಯಾತ್ರೆಗೆ ಅಲ್ಪ್ಸ ಪರ್ವತವು ವಿಘ್ನವಾಗಿದ್ದಿತು; ಆಗ ಅವನು ಹೇಳಿದ್ದೇನಂದರೆ—“ಅಲ್ಪ್ಸ ಪರ್ವತವನ್ನು ಹಾರಿಸಿಬಿಡಿರಿ.” ಇದರಿಂದ ನೋಡಲು ಆಕಾಶವನ್ನು ಮುಟ್ಟುವ ಅಲ್ಪ್ಸ ಪರ್ವತವು ಇವನ ಮಾರ್ಗವನ್ನು ಕಟ್ಟುಮಾಡಲು ಸಮರ್ಥವಾಗಲಿಲ್ಲ; ಯಾಕಂದರೆ ಇವನು ದೃಢವ್ರತನೂ, ಅದ್ಭುತಕಾರ್ಯನೂ ಆಗಿದ್ದನು. ಇದರಂತೆಯೇ ಮಹಾವೀರ ಪ್ರತಾಪನು, ದೇಶದ ಶತ್ರುಗಳಾದ ಯವನರಿಗೆ ಸ್ವದೇಶವನ್ನು ಮಾರಲಿಕ್ಕಿಲ್ಲೆಂದು ಸ್ಥಿರಪಡಿಸಿಕೊಂಡಬಳಿಕ, ಮಹಾ ಪರಾಕ್ರಮಿಯೂ, ಪ್ರಜಾಪ್ರಿಯನೂ ಆದ ಅಕಬರನ ಸೈನ್ಯಬಲವೂ, ಧನಬಲವೂ, ಆಲೋಚನೆಯ ಬಲವೂ ಅತೀವ ಕ್ಷುದ್ರವಾದವುಗಳೆಂದೆಣಿಸಿದನು; ಮತ್ತು ಇವೆಲ್ಲಕ್ಕೂ ಎದುರಾಗಿ ನಿಂತು, ಸಹಜವಾಗಿ ನಾಶಮಾಡಿಬಿಡುವೆನೆಂದು ಗೊತ್ತುಮಾಡಿಕೊಂಡನು. ನೂರಾರು ಸ್ವಜಾತಿಯ ವೀರರು ಶತ್ರುಪಕ್ಷವನ್ನವಲಂಬಿಸಿದರು; ಪ್ರತಾಪನು ಇದಕ್ಕೆ ಹೆದರಲಿಲ್ಲ. ಅಸಂಖ್ಯ ಮೊಗಲಸೇನೆಯು ಅರವಲಿಯ ಮಾರ್ಗದಲ್ಲಿ ಬಂದು ಕೂಡಹತ್ತಿತು; ಪ್ರತಾಪನು ಇದಕ್ಕೂ ಅಂಜಲಿಲ್ಲ. ಇಷ್ಟೆಲ್ಲ ತೊಂದರೆಗಳುಂಟಾದರೂ ಪ್ರತಾಪನು ಸ್ಥಿರನಾಗಿದ್ದನು. ಆತ್ಮವಿಕ್ರಯವನ್ನಾಗಲಿ, ಸ್ವದೇಶದ ಸ್ವಾತಂತ್ರ್ಯವಿಕ್ರಯವನ್ನಾಗಲಿ ಮಾಡಲಿಕ್ಕಿಲ್ಲೆಂದು ಮಾಡಿದ ಅವನ ಪ್ರತಿಜ್ಞೆಯು ಎಂದೂ ಚಲಿಸಲಿಲ್ಲ. ಕೇವಲ ಮೊಗಲರ ಶ್ರೇಷ್ಠತ್ವವನ್ನೊಪ್ಪಿಕೊಂಡರೆ ಸಾಕು; ಪ್ರತಾಪನಿಗೆ ಸ್ವದೇಶವು ತಿರುಗಿ ಸಿಗುತ್ತಿದ್ದಿತು; ಪೂರ್ವಜರ ರಾಜಧಾನಿಯಾದ ಚಿತೋಡವನ್ನು ಪ್ರವೇಶಿಸಿ, ಸಂಭ್ರ

ಮದಿಂದ ರಾಜ್ಯವಾಳಬಹುದಾಗಿದ್ದಿತು; ಆದರೆ ಪ್ರತಾಪನು ಇದನ್ನು ಇಚ್ಛಿಸಲಿಲ್ಲ. ಇವನು ಮೊಗಲರ ಅಧೀನತ್ವವನ್ನು ಸ್ವೀಕರಿಸಿದಲ್ಲಿ, ದಿಲ್ಲಿಯ ದರಬಾರದಲ್ಲಿ ಶ್ರೇಷ್ಠ ಪದವಿಯನ್ನೂ ಸ್ವರಾಜ್ಯದಲ್ಲಿ ಅತುಲೈಶ್ವರ್ಯವನ್ನೂ ಪಡೆದು ವಿಲಾಸ ದಿಂದ ಕಾಲಕಳೆಯಬಹುದಾಗಿದ್ದಿತು; ಆದರೆ ಪ್ರತಾಪನು ಇದಕ್ಕೆಷ್ಟುಮಾತ್ರವೂ ಮನಸು ಮಾಡಲಿಲ್ಲ. ಶತ್ರುಗಳ ಬಳಿಯಲ್ಲಿ ಅನುಗ್ರಹಪ್ರಾರ್ಥನೆ ಮಾಡಿಕೊಳ್ಳು ವದು ಅತೀವ ಹೀನಕಾರ್ಯವೆಂದು ಪ್ರತಾಪನು ಗೊತ್ತುಮಾಡಿಕೊಂಡಿದ್ದನು. ಆತ್ಮವಿಕ್ರಯವನ್ನಾಗಲಿ, ಸ್ವದೇಶವಿಕ್ರಯವನ್ನಾಗಲಿ ಮಾಡಿಸಲಿಕ್ಕೆ ಸಮರ್ಥವಾದ ಯಾವ ವಸ್ತುಗಳೂ ಈ ಜಗತ್ತಿನಲ್ಲಿಲ್ಲ. ಆದುದರಿಂದ ಪ್ರತಾಪನು ಆತ್ಮಸನ್ಮಾನ ಕ್ಕಾಗಲಿ, ಸ್ವದೇಶದ ಗೌರವಕ್ಕಾಗಲಿ ಜಲಾಂಜಲಿಯನ್ನು ಕೊಡಲಿಲ್ಲ. ದೋರ್ದಂಡ ಪರಾಕ್ರಮಿಕಳಾದ ಮೊಗಲರೊಡನೆ ಶತ್ರುತ್ವವನ್ನು ಬೆಳೆಸಿದಲ್ಲಿ, ರಾಜ್ಯರಾಜಧಾನಿಗಳು ನಾಶವಾಗುವವು; ಧನ-ಸಂಪತ್ತುಗಳು ಹೋಗುವವು; ಆತ್ಮೀಯ್ಸ್ವಜನರು ಮೃತ್ಯುಮುಖದಲ್ಲಿ ಬೀಳುವರು; ಜ್ಞಾತಿಜನರ ರಕ್ತದಿಂದ ಪರ್ವ ತವು ರಂಜಿತವಾಗುವದು; ಈ ಮೊದಲಾದ ಸಂಗತಿಗಳನ್ನು ಪ್ರತಾಪನು ಬಲ್ಲವ ನಾಗಿದ್ದನು; ಆದರೂ ಇವುಗಳಿಗಾಗಿ ಪ್ರತಾಪನು ವಿಚಲಿತನಾಗಲಿಲ್ಲ; ಸ್ವದೇಶದ ಸ್ವಾತಂತ್ರ್ಯಕ್ಕಿಂತ ಸಾವಿರಾರು ಸ್ವದೇಶಬಾಂಧವರ ಜೀವನವು ಅತ್ಯಲ್ಪ ಬೆಲೆಯು ಳ್ಳದ್ದೆಂದು ಭಾವಿಸಿದನು. ಪ್ರತಿಜ್ಞೆಯ ರಕ್ಷಣೆಗಾಗಿ ಸರ್ವಸ್ವವೂ ಹೋಗುವದಾದರೆ ಹೋಗಲಿ; ಪ್ರತಾಪನು ಇದನ್ನು ಎಣಿಸುವವನಾಗಿರಲಿಲ್ಲ. ಒಂದು ವೇಳೆ ಪ್ರತಿ ಜ್ಞೆಯು ರಕ್ಷಿತವಾಗದಿದ್ದಲ್ಲಿ ಎಷ್ಟೇ ಉಳಿದರೂ, ಅದರಿಂದ ಪ್ರತಾಪನಿಗೆ ಉಪ ಯೋಗವಿರಲಿಲ್ಲ. ಪ್ರತಾಪನು ಭಗವಂತನ 'ಹತೋವಾ ಪ್ರಾಪ್ಸ್ಯಸಿ ಸ್ವರ್ಗಂ, ಜಿತ್ವಾ ವಾ ಭೋಕ್ಷ್ಯಸೇ ಮಹೀಮ್' ಎಂಬ ಉಕ್ತಿಯನ್ನು ಮರೆತಿರಲಿಲ್ಲ. ಯುದ್ಧ ದಲ್ಲಿ ಜಯಪಡೆದು ರಾಜ್ಯವಾಳಬೇಕು; ಇಲ್ಲವೆ ರಣಭೂಮಿಯಲ್ಲಿ ಮಡಿದು, ಸ್ವರ್ಗವನ್ನು ಹೊಂದಬೇಕು; ಇವೆರಡರಲ್ಲಿ ಆವುದಾದರೊಂದನ್ನು ಹೊಂದುವದು ಪ್ರತಾಪನ ಉದ್ದೇಶವಾಗಿದ್ದಿತು. ಸಾರಾಂಶ ಪ್ರತಾಪನು ಜನ್ಮಭೂಮಿಯ ಸಲು ವಾಗಿ ಮಾಡಿದ ಆತ್ಮತ್ಯಾಗವು ಈ ಜಗತ್ತಿನಲ್ಲಿ ಅತುಲನೀಯವಾದದ್ದು.

'ಕಾರ್ಯಸಾಧನ ಇಲ್ಲವೆ ದೇಹಪತನ' ವೆಂಬದು ಪ್ರತಾಪನ ಜೀವನದ ಮೂಲಮಂತ್ರವು. ಈ ಮೂಲಮಂತ್ರವನ್ನು ಬಿಟ್ಟು, ಮನುಷ್ಯತ್ವವನ್ನು ರಕ್ಷಿಸಿ ಕೊಂಡು, ಉನ್ನತಿಯನ್ನು ಪಡೆದ ಜನರು ಹಿಂದೆ ಯಾರೂ ಆಗಿಲ್ಲ; ಮುಂದೆಯೂ

ಆಗುವಂತಿಲ್ಲ ಪ್ರತಾಪನು ಈ ಮೂಲಮಂತ್ರದ ಸಾಧಾನೆಗಾಗಿ ಒಂದು ಅದ್ಭುತ ವಾದ ಕಠೋರ ವ್ರತವನ್ನವಲಂಬಿಸಿದ್ದನು. ಯಾವಜ್ಜೀವವೂ ಸುಖವಿಲಾಸಕ್ಕೆ ಜಲಾಂಜಲಿಯನ್ನಿತ್ತು, ಮುಂದೆ ಆಗತಕ್ಕ ರಾಣಾರನ್ನು ಸುಖ-ಸೇವೆಯಿಂದ ವಂಚಿಸಿ, ಯಾವತ್ತು ದೇಶವನ್ನು ಹಾಳುಮಾಡಿ, ಸಮಗ್ರ ದೇಶವಾಸಿಗಳನ್ನು ಗೃಹ ತ್ಯಾಗಿಗಳಾದ ಸನ್ಯಾಸಿಗಳನ್ನಾಗಿ ಮಾಡಿ, ಪ್ರತಾಪನು ಸ್ವದೇಶದ ಉದ್ಧಾರದ ಒಂದು ನೂತನವೂ, ಆದರ್ಶಸ್ವರೂಪವೂ ಆದ ಪಂಥವನ್ನು ಹುಡುಕಿ ತೆಗೆದನು. ಇವನ ಪ್ರತಿಜ್ಞೆಯು ಕಠೋರವಿರುವಂತೆ, ಪ್ರತಿಜ್ಞಾಪಾಲನ ಮಾಡುವ ಇವನ ಅಪ್ಪಣೆಯಂತೆ ವರ್ತಿಸುವ ಪ್ರಜೆಗಳಾದರೂ ಕಠೋರರಾದರು. ಜನರು ಧರ್ಮ ಸಂಪಾದನೆಗಾಗಿ ಅಥವಾ ಮೋಕ್ಷಕ್ಕಾಗಿ ತಪಸ್ಸನ್ನಾಚರಿಸುತ್ತಿರುವರು; ಆದರೆ ಪ್ರತಾಪನು ರಾಜ್ಯಕ್ಕಾಗಿ, ರಾಷ್ಟ್ರೀಯ ಸ್ವಾತಂತ್ರ್ಯತೆಗಾಗಿ, ರಜಪೂತರ ಜಾತಿಧರ್ಮ ರಕ್ಷಣೆಗಾಗಿ ತಪಸ್ಸನ್ನು ಮಾಡಿದನು. ಪ್ರತಾಪನ ಈ ರಾಜನೈತಿಕ ತಪಸ್ಸು, ಇವ ನನ್ನು ವೀರೇಂದ್ರ ಸಮಾಜದಲ್ಲಿ ಶ್ರೇಷ್ಠನನ್ನಾಗಿ ಮಾಡಿತು.

ಪ್ರತಾಪನ ಸ್ವದೇಶಭಕ್ತಿಯು–ಮಾತೃಪೂಜೆಯು ಇವನ ಚರಿತ್ರೆಯ ಮುಖ್ಯ ಮಹತ್ವದ ಸಂಗತಿಯಾಗಿದೆ. ಇವನು ಜನ್ಮಭೂಮಿಯನ್ನು 'ಸ್ವರ್ಗಾದಪಿ ಗರೀಯಸೀ' ಯೆಂದು ಭಾವಿಸಿದ್ದನು, ಇದನ್ನಿವನು ಪ್ರತಿಯೊಂದು ಮಾತಿನಿಂದಲೂ, ಕಾರ್ಯದಿಂದಲೂ ಮನಗಾಣಬಹುದಾಗಿದೆ. ಜನನಿಯ ಮರಣದಿಂದ ಮಕ್ಕಳು ದುಃಖಿಸುತ್ತಿರುವದನ್ನು ನಾವು ನೋಡುತ್ತೇವೆ; ಅನೇಕರು ಇದರ ಅನುಭವವನ್ನು ತೆಗೆದುಕೊಂಡಿರಬಹುದು, ಆದರೆ ಪ್ರತಾಪನು ಚಿತೋಡದ ನಾಶದಿಂದ ಹೊಂದಿದ ದಾರುಣವ್ಯಥೆಯನ್ನೂ, ಜನ್ಮಭೂಮಿಯ ಪುನರುದ್ಧಾರಕ್ಕಾಗಿ ಅವನು ಆಮರಣದ ವರೆಗೆ ತೋರಿಸಿದ ವ್ಯಾಕುಲತೆಯನ್ನೂ ನಾವು ಕಲ್ಪಿಸಲು ಸಹ ಅಸಮರ್ಥರಾಗಿ ರುವೆವು. ಸ್ವದೇಶವನ್ನು ಮಾತೆಯಂತೆ ಭಾವಿಸಿ, ಹೇಗೆ ಭಕ್ತಿಯನ್ನು ತೋರ್ಪ ಡಿಸಬೇಕು? ಸ್ವರಾಷ್ಟ್ರವನ್ನು ದೇವರಂತೆ ಭಾವಿಸಿ, ಹೇಗೆ ಪೂಜೆಮಾಡಬೇಕು? ಲೋಕಾಚಾರ, ಧರ್ಮಾಚಾರಗಳೆಲ್ಲವನ್ನು ಹೇಗೆ ಮಾತೃಪೂಜೆಯಲ್ಲಿ ಏಕರೂಪ ಮಾಡಬೇಕು? ಇದೆಲ್ಲವನ್ನು ಪ್ರತಾಪನು ತನ್ನ ಚರಿತ್ರೆಯಲ್ಲಿ ತೋರಿಸಿಕೊಟ್ಟಿ ದ್ದಾನೆ. ಪ್ರತಾಪನ ಇತಿಹಾಸವು ಆದ್ಯೋಪಾಂತ ಮಾತೃಪೂಜೆಯ ಐತಿಹ್ಯವು— ಅಸಾಧಾರಣ ಆತ್ಮತ್ಯಾಗದ ಉತ್ತಮ ಐತಿಹಾಸವು. ಆದುದರಿಂದ ಪ್ರತಾಪನು ಸ್ವದೇಶಭಕ್ತ ಮಹಾಪುರುಷರಲ್ಲಿ ಅಗ್ರಗಣ್ಯನು.

ಇಂದು ಉದಯಪುರದ ರಾಜವಂಶವು ಭಾರತೀಯ ಕ್ಷತ್ರಿಯರಲ್ಲಿ ಶ್ರೆಷ್ಠತೆಯನ್ನು ಪಡೆಯುವದಕ್ಕೂ, ಹಿಂದೂ-ನೃಪತಿಗಳಲ್ಲಿ ಉದಯಪುರದ ಮಹಾರಾಣಾನು ಅಗ್ರಗಣ್ಯನಾಗುವದಕ್ಕೂ, ಪೂರ್ವಜರ ವಂಶಮರ್ಯಾದೆಯೂ, ವೀರತ್ವ-ಪ್ರತಿಭೆಯೂ ಮುಖ್ಯ ಕಾರಣಗಳಾಗಿವೆ,* ಮತ್ತು ಈ ಪೂರ್ವಪುರುಷರಲ್ಲಿ ಪ್ರತಾಪನು ಶ್ರೇಷ್ಠತಮನು. ಈ ಪ್ರತಾಪನೊಡನೆ ಸಮರ, ಸಂಗ್ರಾಮಸಿಂಹ, ಹಂಬೀರ, ಕುಂಭ, ರಾಜಸಿಂಹ ಮೊದಲಾದ ವೀರನೃಪತಿಗಳು ಉದಯಪುರದ ವಂಶಾವಳಿಯನ್ನು ಸಮುಜ್ವಲವಾಗಿ ಮಾಡಿದ್ದಾರೆಂಬದನ್ನು ಇಲ್ಲಿ ಬೇರೆ ಹೇಳುವ ಕಾರಣವಿಲ್ಲ. ಕೇವಲ ಮೇವಾಡವೊಂದೇಯೇಕೆ? ಸಮಗ್ರ ಭಾರತೀಯರು ಇವರ ಗೌರವದಿಂದ ಗೌರವಾನ್ವಿತರಾಗುತ್ತಿದ್ದಾರೆ. ಯಾವದೇ ಯುಗದೊಳಗಾಗಲಿ, ಯಾವ ದೇಶದವರೇ ಆಗಲಿ, ಯಾವ ಜಾತಿಯವರೇ ಆಗಲಿ, ತಮ್ಮಲ್ಲಿ ಈ ತರದ ಜನರ ಜನ್ಮಗ್ರಹಣದಿಂದ ಸ್ವ-ಗೌರವದ ವಿಷಯದಲ್ಲಿ ಅಭಿಮಾನವನ್ನು ಹೊಂದುತ್ತಿದ್ದಾರೆ.†

---

* ಒಬ್ಬ ಇಂಗ್ಲೀಷ ಲೇಖಕನು ಉದಯಪುರದ ದರ್ಶನಕಾಲದಲ್ಲಿ ಬರೆದಿದ್ದಾನೆ — "Udaipur stands alone and unrivalled in India by virtue of India's most characteristic and ironbound law. Were free election to be made tomorrow among the native competitors for the Kingship of India, no one would dare to stawd against the Maharana of Udaipur." Perceval Landon's "under the sun PP." 27-28

† ಹಿಂದುಸ್ಥಾನದ ಈಗಿನ ಸರ್ವಾಧಿಪತಿಗಳಾದ ಲಾರ್ಡ ಚೇಮ್ಸ್ಫರ್ಡರವರು ಉದಯಪುರದ ದರ್ಶನಕಾಲದಲ್ಲಿ ಹೇಳಿದ್ದಾರೆ—"Ever since my arrival in India, it has been my eager desire to visit Udaipur the Rome of the premier chief of Rajputana, the land of beautiful lakes and places, the scene of so many glorious days of chivalry in the past, the birth place of many heroes-khoman, Hamir, chonda, khumbo, Partap Rajsingh, to mentain only a few. These are names of which any nation and any age might be proud."

Lord Chelmsford's Banquet speech at Udaipur on the 14 th November 1916

# ಕೃತಜ್ಞತಾ-ದರ್ಶನ.

ಈ ಮೊದಲೇ ತಿಳುಹಿಸಿದಂತೆ, ಭಾರತಬಂಧು ಗ್ರಂಥಮಾಲೆಯ ಪ್ರಥಮ ಪುಷ್ಪವಾದ "ಮಹಾರಾಣಾ ಪ್ರತಾಪಸಿಂಹ" ಎಂಬ ಗ್ರಂಥವು ಸಂಪೂರ್ಣ ತಯಾರಾಗಿ, ವಾಚಕರ ಕೈಸೇರುತ್ತಿರುವದನ್ನು ನೋಡಿ, ನಮಗೆ ಸಂತೋಷ ವಾಗುತ್ತದೆ. ಈ ಕಾಲದಲ್ಲಿ ಗ್ರಂಥಮಾಲೆಯ ಪ್ರಕಟನೆಯ ಕಾರ್ಯವು ಬಹಳ ಜಡವಾದದ್ದೆಂಬದನ್ನು ಸೂಜ್ಞರಿಗೆ ಸೂಚಿಸಲವಶ್ಯವಿಲ್ಲ. ಅದರಿಂದ ಈ ಕೆಲಸದಲ್ಲಿ ನಮಗೂ ಅನೇಕ ತೊಂದರೆಗಳು ಬಂದವು. ಆದರೂ ದೇವರ ದಯೆಯಿಂದಲೂ, ಉದಾರಹೃದಯರಾದ ಎಚ್. ವ್ಹಿ. ಸವಣೂರ ಎಲ್. ಮ್. ಎಂಡ ಎಸ್. ಇವರ ಸಂಪೂರ್ಣವಾದ ಸಹಾನುಭೂತಿಯಿಂದಲೂ ನಾವು ಕೃತಕಾರ್ಯರಾದವೆಂದು ಇಲ್ಲಿ ಹೇಳದಿರಲಾರೆವು.

ಮುದ್ರಣಕೆಲಸವನ್ನು ಅಂದವಾಗಿಯೂ, ಇತರ ಕೆಲಸಗಳನ್ನು ಬದಿಗೊತ್ತಿ ಆದಷ್ಟು ತೀವ್ರವಾಗಿಯೂ ಮಾಡಿಕೊಟ್ಟ ಬಗ್ಗೆ ಮಹಾವೀರ ಪ್ರೆಸ್ಸಿನ ಚಾಲಕ ರಾದ ಶ್ರೀ. ದೇವೇಂದ್ರ ಫಡೆಪ್ಪಾ ಚೌಗುಲೆ ಇವರ ಉಪಕಾರವನ್ನು ಈ ಪ್ರಸಂಗ ದಲ್ಲಿ ಸ್ಮರಿಸದಿರಲಾರೆವು; ಮತ್ತು ಅನೇಕ ಭಾಷಾಬಂಧುಗಳು ನಮಗೆ ಆಶ್ರಯ ವಿತ್ತು, ಸಹಾಯಮಾಡಿದ ಬಗ್ಗೆ ಅವರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ.

## ಪುಸ್ತಕಮಾಲೆಯ ನಿಯಮಗಳು.

(೧) ಪ್ರತಿ ಮೂರು ತಿಂಗಳಿಗೊಂದರಂತೆ ವರ್ಷದಲ್ಲಿ ನಾಲ್ಕು ಪುಸ್ತಕಗಳು ನಿಯಮಿತವಾಗಿ ಪ್ರಸಿದ್ಧವಾಗುತ್ತವೆ.

(೨) ಪುಸ್ತಕಗಳಲ್ಲಿ ಚಿತ್ರದ ವ್ಯವಸ್ಥೆಮಾಡಿದರೆ ಒಂದೆರಡು ಆಣೆ ಹೆಚ್ಚಿಗೆ ಆಕಾರವಾಗುವದು.

(೩) ಪ್ರತಿಯೊಂದುಸಾರೆ ೧೫೦ರಿಂದ ೨೦೦ರ ವರೆಗೆ ಪುಟಗಳುಳ್ಳಂಥ ಪುಸ್ತಕವು ತಯಾರಾಗುವದು. ಬೆಲೆಯು ೧ರಿಂದ ೧॥ ರೂಪಾಯಿಗಿಂತ ಬಹುಶಃ ಹೆಚ್ಚು ಇರಲಿಕ್ಕಿಲ್ಲ

(೪) ಶಕ್ಯವಿದ್ದಷ್ಟು ಚಲೋ ಬಾಯಿಂಡಿಂಗ ಮತ್ತು ಸುಂದರ ಚಿತ್ರಗಳು ಕೊಡಲ್ಪಡುತ್ತವೆ.

---

## ಕಾಯಂ ವರ್ಗಣಿದಾರರ ನಿಯಮಗಳು.

(೧) ಸದ್ಯಕ್ಕೆ ೮ಲ ಆಣೆ ಪ್ರವೇಶಫೀ ಕೊಟ್ಟವರಿಗೆ ಕಾಯಂ ವರ್ಗಣೀದಾರರೆಂದು ತಿಳಿದು ಅವರಿಗೆ ಮಾಲೆಯಿಂದ ಹೊರಡತಕ್ಕ ಎಲ್ಲ ಪುಸ್ತಕಗಳು ೫ೆ ಕಿಮ್ಮತ್ತಿಗೆ ಕೊಡಲ್ಪಡುವವು.

(೨) ವರ್ಗಣಿದಾರರು ಮಾಲೆಯ ಎಲ್ಲ ಪುಸ್ತಕಗಳನ್ನು ತಕ್ಕೊಳ್ಳಲೇಬೇಕು.

(೩) ವರ್ಗಣಿದಾರರು ವ್ಹಿ. ಪಿ. ಪರತ ಬಿಟ್ಟರೆ ಲಿಸ್ಟಿನೊಳಗಿಂದ ಅವರ ಹೆಸರು ಕಡಿಮೆ ಮಾಡಲ್ಪಡುವದು. ವ್ಹಿ. ಪಿ. ಪರತಮಾಡಿದ ಬಗ್ಗೆ ಯೋಗ್ಯ ಕಾರಣ ತೋರಿಸಿ ಪುಸ್ತಕದ ಕಿಮ್ಮತು ಕಳಿಸಿ ಪುಸ್ತಕದ ಮಾಗಣಿ ಮಾಡಿದರೆ ೫ೆ ಕಿಮ್ಮತ್ತಿಗೆ ಪುಸ್ತಕ ಕಳಿಸಲ್ಪಡುವದು, ಇಲ್ಲದಿದ್ದರೆ ಮತ್ತೆ ಪ್ರವೇಶಫೀ ಕೊಡಬೇಕಾಗುವದು.

(೪) ಹೊಸಪುಸ್ತಕ ಹೊರಡುವ ಮೊದಲು (೧೫ ದಿವಸ ಇರುವಾಗ) ಅದರ ಸ್ವರೂಪ, ಬೆಲೆ ಮೊದಲಾದವುಗಳನ್ನು "ಶುಭೋದಯ" "ವಿಭಾಕರ" ವರ್ತಮಾನಪತ್ರಗಳಲ್ಲಿ ಜಾಹೀರಮಾಡುವೆವು.

(೫) ಪತ್ರವ್ಯವಹಾರ ಮಾಡುವಾಗ್ಗೆ ವರ್ಗಣಿದಾರರು ತಮ್ಮ ಹೆಸರಿನ ರಜಿಸ್ಟರ ನಂಬರು ತಪ್ಪದೇ ತಿಳಿಸಬೇಕು.

---

# ಭಾರತಬಂಧು ಪುಸ್ತಕಮಾಲೆಯ ಆಶ್ರಯದಾತೃಗಳು.

ರಾ. ಸಾ. ವಿನಾಯಕ ಬಾಬಾಜಿ ಜೋಶಿ ಬಿ. ಎ. ಧಾರವಾಡ.
ಶ್ರೀಯುತ ವೆಂಕಟರಾವ ಆಲೂರ ಬಿ. ಎ. ಎಲ್. ಎಲ್. ಬಿ.
,, ಗೋಪಾಳರಾವ ಭೀಮರಾವ ಜಮಖಂಡಿ ಬಿ. ಎ.
ಶ್ರೀಮಂತ ದೌಲತರಾವ ಭುಜಂಗರಾವ ಘೋರ್ಪಡೆ.
,, ಅಪ್ಪಾಸಾಹೇಬ ಭುಜಂಗರಾವ ಘೋರ್ಪಡೆ.
,, ದೌಲತರಾವ ಮಾಲೋಜಿರಾವ ಘೋರ್ಪಡೆ.
ಶ್ರೀಯುತ ಮಿಸ್ಕಿ ಬಿ. ಎ. ಗಜೇಂದ್ರಗಡ.
,, ರಂಗರೇಜ ಡಿ. ಟಿ ಗಜೇಂದ್ರಗಡ.
,, ತಿಪ್ಪಣಸಾ ಮಿಸ್ಕಿ ಗಜೇಂದ್ರಗಡ.
,, ಭೀಮಾಜಿ ರಂಗೋ ಕುಲಕರ್ಣಿ.
,, ಈರಪ್ಪಾ ಸಿದ್ದಪ್ಪಾ ಬಳಿಗೇರ.
,, ಶಂಕರ ಮೈಲಾರ ಕುಲಕರ್ಣಿ.
,, ಭುಜಂಗ ಬಾಳಾಜಿ ಕುಲಕರ್ಣಿ.
,, ಲಕ್ಷ್ಮಣ ರಾಮಚಂದ್ರ ಖರಣಿ ಪ್ರಾ. ಶಿ. ಸಂಪಾದಕ.
,, ವಿರೂಪಾಕ್ಷಪ್ಪಾ ಕುಲಕರ್ಣಿ ರೋಣ.
,, ಭೀಮಾಜಿ ವಿರೂಪಾಕ್ಷ ಚನಪನಹಳ್ಳಿ ಮಾಸ್ತರ ಗಜೇಂದ್ರಗಡ.
,, ಭೀಮಾಜಿ ಕೃಷ್ಣ ಕುಲಕರ್ಣಿ.
,, ಭೀಮಾಜಿ ನಾರಾಯಣ ಕುಲಕರ್ಣಿ.
,, ಗಿರಿಧರ ರಾಘವೇಂದ್ರ ಖಾಸನೀಸ.
,, ಜಿ. ಜಿ. ಮುತ್ತಗಿ ಗಜೇಂದ್ರಗಡ.
,, ಮಹಮ್ಮದ ಹಯಾತಸಾಬ ಬಿಲ್ಲಿವಾಲೆ.
,, ಚಿಂತಾಮಣ ಭಾಲಚಂದ್ರ ಪಂಚನದೀಕರ.
,, ತ್ರಿಯಂಬಕರಾವ ಕುಲಕರ್ಣಿ.
,, ಹನಮಂತರಾವ ರೇವಣಕಿ.
,, ಆರ್. ಡಿ. ಕೊಲ್ಹಾಪುರ.

ಶ್ರೀಯುತ ಭೀಮರಾವ ಗುಡಿ.
,, ಕೆ ಬಿ. ಪದಕಿ.
,, ಹನಮಂತರಾವ ಮುಧೋಳ.
,, ನಿಂಗನಗೌಡಾ ಪೊಲೀಸಪಾಟೀಲ.
,, ಕೃಷ್ಣರಾವ ಕುಲಕರ್ಣಿ.
,, ಅಪ್ಪನಗೌಡಾ ಪಾಟೀಲ.
,, ಭವಾನಸಿಂಗ ಮುದಗಲ್ಲ.
,, ರಾಘವೇಂದ್ರರಾವ ವಕೀಲ.
,, ಗುರುನಾಥ ಗೋಪಾಳ ಕುಲಕರ್ಣಿ.
,, ದತ್ತಪ್ಪಾ ಕುಲಕರ್ಣಿ.
,, ಬಾಳಕೃಷ್ಣರಾವ ಕುಲಕರ್ಣಿ.
,, ವೆಂಕಟರಾವ ಕುಲಕರ್ಣಿ.
,, ಭೀಮಾಜಿ ಗುರನಾಥ ಕುಲಕರ್ಣಿ.
,, ಭೀಮಾಜಿ ಹನಮಂತ ಘಳಿಗಿ.
,, ವೆಂಕಟೇಶ ಶ್ರೀನಿವಾಸ ಡಂಬಳಕರ.
,, ಕಳಕಾಪುರ ಮಾಸ್ತರ ನರೇಗಲ್ಲ.
,, ಗಂಗಾಸಾ ರಾಯಬಾಗಿ.
,, ಕೊಂಡಪ್ಪಾ ಹೊಸ ಅಂಗಡಿ.
,, ಎಸ್. ಬಿ. ಮುತ್ತಗಿ.
,, ಲಿಂಗಪ್ಪಾ ಪಟ್ಟೇದ.
,, ಗೋವಿಂದರಾವ ಕುಲಕರ್ಣಿ.
,, ಗುರುರಾವ ವಕೀಲ.
,, ಗುಂಡದೀಕ್ಷಿತ ಸೋಮಯಾಜಿ.
,, ಹನಮಂತ ವೆಂಕಟೇಶ ಸಂಗನಾಳ.
,, ಜ್ಞಾನಪ್ಪಾ ಲಿಂಗಪ್ಪಾ ಮೇಟಿ.
,, ಶಿವಲಿಂಗಪ್ಪಾ ಮೇಟಿ.
ಲಿಂಗಪ್ಪಾ ಅಯ್ಯಪ್ಪಾ ಮೇಟಿ.

ಶ್ರೀಯುತ ಲಕ್ಷ್ಮಣ ರಂಗೋ ಕುಲಕರ್ಣಿ.
,, ತೋಟಪ್ಪಾ ಕಡಗದ.
,, ದೊಡ್ಡಬಸಪ್ಪಾ ಸಂಗಪ್ಪಾ ಆದಿ.
,, ಎಲ್. ಎ. ಹೊಂಬಳ.
ಶ್ರೀಮತಿ ನೀಲಗಂಗವ್ವ ರಾಚಯ್ಯನವರು ಧಾರವಾಡ.
ಶ್ರೀಯುತ ಕೃಷ್ಣಾಜಿ ಶಂಕರ ಮುಳಗುಂದ.
,, ರಂಗೋ ವೆಂಕಟೇಶ ಕುಸನೂರ.
,, ದ. ವೆ. ಕುಲಕರ್ಣಿ.
,, ನಾರಾಯಣ ಗೋಪಾಲಕೃಷ್ಣ ಮುಳಗುಂದ.
,, ಗಣೇಶ ವಿಠ್ಠಲ ಕುಲಕರ್ಣಿ.
,, ಹನಮಂತರಾವ ಕುಲಕರ್ಣಿ.
,, ಬಸನಗೌಡಾ ರಾಯನಗೌಡಾ ಪಾಟೀಲ.
,, ಬಸನಗೌಡರು ಹಿರೇಗೌಡರ.
,, ಕೃಷ್ಣಾಜಿ ಶ್ರೀನಿವಾಸ ವೈದ್ಯ.
,, ಬಹದ್ದೂರಖಾನ ಇಮಾಮಖಾನ ಲಕ್ಕುಂಡಿ.
,, ಫಕೀರಯ್ಯಾ ಹಂಪಯ್ಯಾ ಸಾಂಸಿಮಠ.
,, ಹನಮಂತ ನರಹರ ಕೊಲ್ಹಾಪುರ.
,, ರಾಘವೇಂದ್ರರಾವ ಕಾತಗಡೆ.
,, ಶಂಕರರಾವ ಕಾಲವಾಡ.
,, ಆರ್. ಡಿ. ಪಂಚಾಲ.
ಶ್ರೀಮಂತ ಶಂಕಪ್ಪಾ ದೇಸಾಯಿ ಅಣ್ಣಿಗೇರಿ.
,, ಬಾಬಾರಾವ ದೇಸಾಯಿ ತಲ್ಲೂರ.
,, ಮಲ್ಲಪ್ಪಾ ದೇಸಾಯಿ ಕ್ವಾಟಕಲ್ಲ.
ಶ್ರೀಯುತ ಜರಾರ ಡಾಕ್ಟರ ಬಾಗಲಕೋಟ.
,, ವಾಸನಗೌಡಾ ಪಾಟೀಲ ಅಗಸನಕೊಪ್ಪ.
,, ಜಹಗೀರದಾರ ಡಾಕ್ಟರ ಬಾಗಲಕೋಟ.
,, ರಾಮಣ್ಣಾ ಭೋಮಶೆಟ್ಟಿ ಗೋಕಾಕ.

ಶ್ರೀಯುತ ಹಣಮಂತರಾವ ಕಟಗೇರಿ.
,, ಬಿ. ಡಿ. ಕಬ್ಬಿಣ ಡಾಕ್ಟರ ರೋಣ.
,, ಗುರು ಭೀಮರಾವ ಸಾವಕಾರ ಸೂಡಿ.
,, ಭೀಮರಾವ ಕುಲಕರ್ಣಿ ಹುಲಗೇರಿ.
,, ಹಣಮಂತ ನಾಯಕ ಜೋಡಬಾಗಿಲ ಇಳಕಲ್ಲ.
,, ಶಂಕರಪ್ಪಾ ಸಕ್ಕರಿ ಇಳಕಲ್ಲ.
,, ಜಿ. ಜಿ. ಗುಗವಾಡ ಬ್ರಾಂಚಮ್ಯಾಜಿಸ್ಟ್ರೇಟ ವಿಜಾಪುರ.
,, ವೀರಪ್ಪಾ ಅರಿಕೇರಿ ಬಾಗಲಕೋಟ.
,, ಮುರಗ್ಯೆಯ್ಯಾಸ್ವಾಮಿ ಜಂಗಿನ.
,, ಭೀಮರಾವ ಆದವಾನಿ ಪ್ಲೀಡರ.
,, ಶ್ರೀ. ಶಿವಯೋಗಮಂದಿರ ಸೆಕ್ರೆಟರಿ.
,, ಸಿಂಧಗಿ ಸಿದ್ದಪ್ಪನವರು ಬಳ್ಳಾರಿ.
,, ಎನ್. ರುದ್ರಪ್ಪಾ ಪ್ಲೀಡರ ಗುಲ್‌ಬುರ್ಗ.
,, ಗುಡುಮುಟಕಲ್ಲ ವೆಂಕಣ್ಣನವರು ಮರ್ಚಂಟ ರಾಯಚೂ
,, ವಾಸು ದೇವರಾವ ಹಚ್ಚೊಳ್ಳಿ ಕ್ಲಾರ್ಕ ಕೊಪ್ಪಳ.
,, ಮಲ್ಲಪ್ಪಾ ಕಮಲಾಪುರ ತಂಗಡಗಿ.
,, ಸಂಗನಗೌಡಾ ಪಾಟೀಲ ಸಂಗಮ.
,, ತಮ್ಮಣರಾವ ಬೆಂಗಳೂರ.
,, ಹಾಲಪ್ಪಾ ಯರೇಶೀಮಿ ಹೊನ್ನತ್ತಿ.
,, ಆರ್. ಜಿ. ಇಂಗಳೇಕರ ಡಾಕ್ಟರ
,, ಸಂಗನಬಸಪ್ಪಾ ಮೋಟಗಿ.
,, ಎಸ್. ಎಸ್. ಸುಭೇದಾರ ನವಲಗುಂದ.
,, ರಾಮರಾವ ದಾತಾರ ಎಲ್. ಎಲ್. ಬಿ.
,, ಗೋವಿಂದರಾವ ಭಬ್ಬಿ ಪ್ಲೀಡರ.
,, ಹಣಮಂತರಾವ ಭಬ್ಬಿ ಪ್ಲೀಡರ.
,, ಎಚ್. ವ್ಹಿ. ಸವಣೂರ ಡಾಕ್ಟರ.
,, ಜಯರಾವ ದೇಶಪಾಂಡೆ ಎಲ್. ಎಲ್. ಬಿ.

ಶ್ರೀಯುತ ಮಲ್ಲಪ್ಪಾ ಸಿಂತ್ರೆ ಸಾವಕಾರ [illegible].

,, ರಾಮಪ್ಪಾ ಪೂರ್ಮೆಸಾವಕಾರ ಗೊಂಡಬಾಳ.

,, ಜಿ. ಬಿ. ಕೊವಳ್ಳಿ ಕರ್ನಾಟಕ ಕಾಲೇಜ ಧಾರವಾಡ.

,, ಜಿ. ಕೆ. ಹುನಗುಂದ ಕರ್ನಾಟಕ ಕಾಲೇಜ ಧಾರವಾಡ.

,, ಪಿ. ಕೃಷ್ಣರಾವ ಪ್ಲೀಡರ ರಾಯಚೂರ.

,, ಜಿ. ಕೃಷ್ಣರಾವ ಪ್ಲೀಡರ ರಾಯಚೂರ.

,, ಭೀಮರಾವ ದೇಶಪಾಂಡೆ ಆಲಗುಂಡಿ.

,, ಭೀಮರಾವ ಕೊಣ್ಣೂರ ಗದಗ.

,, ವೆಂಕಟರಾವ ಕೊಡಗಲಿ ಇಳಕಲ್ಲ.

,, ತುಕ್ಕಪ್ಪಾ ಒಂದಕುದರಿ ಬಾಗಲಕೋಟ.

,, ಅನಂತರಾವ ಕಲಮದಾನಿ ಬೈಲಹೊಂಗಲ.

,, ವೀರಣ್ಣ ಕೋರಾ ಮರ್ಚಂಟ ರಾಯಚೂರ.

,, ಫಕೀರಪ್ಪಾ ಸುಭೇದಾರ.

,, ರುದ್ರಪ್ಪಾ ಬಾಗಲಕೋಟ ನವಲಗುಂದ.

,, ಜೀವಪ್ಪಾ ಆನೆಗುಂದಿ ನವಲಗುಂದ.

,, ನರಸಿಂಹ ಸುಬ್ಬರಾವ ದೇಶಪಾಂಡೆ ಬೇನಾಳ.

,, ರಂಗಪ್ಪಾ ನಾಯಕ ಮುಳಗುಂದ.

,, ಶಂಕರಪ್ಪಾ ಕುಲಕರ್ಣಿ ಆಲೂರ.

,, ಪ್ರಲ್ಹಾದರಾವ ಪೋಸ್ಟಮಾಸ್ತರ ಕೊಪ್ಪಳ.

,, ಶೇಷಪ್ಪಾ ಕುಲಕರ್ಣಿ ರೊಳ್ಳಿ.

,, ಭೀಮರಾವ ಬೆಟಗೇರಿ ಶಿರಸ್ತೆದಾರ.

,, ಎಲೆ ಮಲ್ಲೇಶಪ್ಪಾ ವ್ಯಾಪಾರಿ ಆದವಾನಿ.

,, ಗೋಪಾಳ ಸಂಬಾಜಿ ರೆಟ್ರೆಕರ ಬೆಳಗಾಂವ.

,, ವೆಂಕಣ್ಣಾ ವಜ್ರಮಟ್ಟಿ ಮರ್ಚಂಟ ಕಲಾದಗಿ.